The next point I want to say is about the annexure in the memorandum in respect of the Demand, Collection and Balance of the Revenue Assessment of the State. In 1946-47 and prior to that, the Revenue Department used to record 86 per cent collections. But according to this annexure, we see that the precentage of revenue collection is reduced to 57 per cent and one crore of rupees of land revenue assessment will be due to us at the end of the year. I believe there must be a mistake. I may tell you the financial year so far as accounts are concerned, is to the end of March, that is, 1st of April and the Revenue collection year extends to June. Why should not the Govenment then recognise that thing and then give us a figure to correspond to the revenue year? Why should not the Government at least look to it? There may be a mistake. Apart from that, as it reads, the percentage has fallen. That is my complaint and it is for the Treasury Bench to give the reason. The point is it must be corrected. As regards contribution and water rate as pointed out in the annexure, I believe that those figures may not be absolutely correct. I do not know. But in an answer to a question, the Hon'ble the Revenue Minister said last year that contibution arrears in Mandya District amount to Rs. 90 lakhs but in the annexure it is shown as Rs. 24 lakhs. It may be that he may have collected all that. Then, certainly, I will congratulate him. More than anything else, about water rate, it is an annual feature and every person gives it for the water used. Why should not the Government collect it? Why should there be overdue to the extent of Rs. 40 lakhs? Contribution is a different thing. Water rate is certainly different from contribution. The Government should therefore see that such arrears are not allowed to accrue.

Sri A. BHEEMAPPA NAIK.—Even that water rate balance is very old arrears.

MR. SPEAKER.—The Government will reply.

Sri S. SRINIVASA IYENGAR.—Sir, I have noticed in the Budget new provisons, and perhaps several Hon'ble Members of this Hon'ble House have also noticed them. Two lakhs of rupees have been provided for the construction of two quarters for the Hon'ble Ministers in Kumara Krupa when we have a deficit budget. Then, for Vidhan Soudha, a separate head has been created and Rs. 55 lakhs have been provided. But I have one objection. Last year, when I raised this issue, the Hon'ble the Finance Minister said that the estimate would not go beyond Rs. 50 lakhs. From the figures that the Hon'ble the Finance Minister has given us, there has been an outlay of nearly Rs. 41 lakhs and further allotment of Rs. 55 lakhs has been made in 1955-56. When I said it would cost a crore of rupees, the Hon'ble the Finance Minister said that it is an exaggeration. Now it is a fact. The estimate might even go up to Rs. 2 crores; but I don't estimate in that way; it may go up to more than Rs. 1 crore or Rs. 1·25 crores.

Sri K. HANUMANTHAIYA.—But you are prepared to give Rs. 2 crores.

Sri S. SRINIVASA IYENGAR.—Anyway, you have started it. We don't want to lose money. There is already an outlay of Rs. 41 lakhs; at least I want to get the benefit out of that. Rs. 55 lakhs will be given to you, certainly, but why don't you say that this building will cost so much? Is there a sanctioned estimate till today? Last year, I raised this issue; you were pleased to say that administrative sanction or technical sanction has been given. I want to know how much does it cost. Why should not the Government be definite?

Sri B. NARAYANASWAMY (Mysore City South).—Rs. 1½ crores.

Sri S. SRINIVASA IYENGAR.—I will be too glad to take that when you will be the Minister.

Sri K. HANUMANTHAIYA.—I will tell you.

Sri S. SRINIVASA IYENGAR.—Why did you not say that? I only drew your attention to the answers given last year. For Samskrithi Prachar you have provided Rs. 4 lakhs, and in addition you have provided for some thing more elsewhere. But instead of that if you had made allotment under one head, it would have come to Rs. 7 lakhs. You have cleverly manoeuvred it: for publication of Kannada literature, special books and Kannada Encyclopaedea you have allotted Rs. 3 lakhs under another heading; but that forms part of Samskriti Prachar. Publication of special literature comes under Samskrithi Prachar and so he could have as well provided for that under that head of 'Samskrithi Prachara'. So, I just drew the attention of the House to what has been provided in the Budget. There is another new Head, namely, 'Social Welfare Board', under which Rs. 1,40,000 have been provided. No provision has been made in previous years and a new provision has been made this year. I want to know the activities of the Social Welfare Board. The provision for that is contained on page 97, Volume I.

Sri K. HANUMANTHAIYA.—That is an all-India organisation.

Sri S. SRINIVASA IYENGAR.—I see a Committee has been constituted for that. With these remarks, I come to a close, in view of the very little time. I submit, Sir, that budgeting must be confined to the revenues of the State, deficit budgeting is never helpful and it lands us in trouble, perpetual trouble and no Government can ever carry on the administration of Mysore State if such deficit budgeting is resorted to so far as revenue budget is concerned; in capital budget, you can borrow any amount and spend any amount, but while spending it, do it on productive schemes and when you do it, plan them efficiently so that they may give opportunities to the people and the pasterity to live well.

ಶ್ರೀ ಎ. ಭೀಮಪ್ಪನಾಯಕ್.—ಸ್ವಾಮಿ, ಈ ಆಯವ್ಯಯದ ತಃಖ್ತೆಯ ಪರಿಶೀಲನೆ ಮೊದಲು ಎದರು ಪಾರ್ಟಿ ಮುಖಂಡರಿಂದ ನಡೆದು ಅವರ ಮಿತ್ರರಾದ ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರ್‌ರಿಂದ ಪರಿಪೋಷಿತವಾಗಿ ನಮ್ಮ ಮುಂದೆ ಈಗ ನಿಂತಿದೆ. ಆಯವ್ಯಯದ ತಃಖ್ತೆಯನ್ನು ತೆಗೆದುಕೊಂಡ ಕೂಡಲೆ ದೇಶದಲ್ಲಿ ಗಾಬರಿಯನ್ನು ಎಬ್ಬಿಸುವ ರೀತಿಯಲ್ಲಿ ಶ್ರೀಮಾನ್ ಇಮಾಂ ಸಾಹೇಬರವರು ಹೇಳಿದರು. ಆಯವ್ಯಯವನ್ನು ಯಾವುದಕ್ಕೆ ಹೋಲಿಸಿದ್ದಾರೆ ಅಂದರೆ: ಒಬ್ಬ

ಮನುಷ್ಯನಿಗೆ 30 ರೂಪಾಯಿ ಸಂಬಳ ಬರುತ್ತದೆ, 32 ರೂಪಾಯಿ ಖರ್ಚು ಮಾಡಿದರೆ ತಿಂಗಳಿಗೆ 2 ರೂಪಾಯಿ ಸಾಲ ಮಾಡಬೇಕಾಗುತ್ತದೆ, ಆಗ ಆತನ ಸಂಬಳಕ್ಕೆ ಯಾರಾದರೂ decree ಮಾಡಿಸಿ attach ಮಾಡಿದರೆ ಅವನ ಗತಿ ಏನು ಎಂಬುದಾಗಿ ಹಿರಿಯರು ಹೇಳಿದಹಾಗೆ ದೇಶದ ಆಯವ್ಯಯವನ್ನು ಶ್ರೀಮಾನ್ ಇಮಾಂ ಸಾಹೇಬರವರು ಅದಕ್ಕೆ ಹೋಲಿಸಿದ್ದಾರೆಂದು ಕಾಣುತ್ತದೆ. ಅವರ ಕಾಲದಲ್ಲಿ ಅದು ಪೋಲೀಸ್ ಸ್ಟೇಟ್ ಆಗಿತ್ತು. ಬಂದ ಆದಾಯವನ್ನು ಆಡಳಿತಗಾರರಿಗೆ ಹಂಚಬೇಕಾಗಿತ್ತು. ಆಗ ಬಂದ ಆದಾಯ ಹೀಗೆ ವ್ಯಯವಾಗುತ್ತಿತ್ತು. ಆಗ ಬಹಳ ಗಾಬರಿ ಇತ್ತು. ಈಗ ಇರುವುದು ಪೋಲೀಸ್ ಸ್ಟೇಟ್ ಅಲ್ಲ. ಸುಖೀರಾಜ್ಯ. ಒಂದು ರಾಜ್ಯ ಸುಖೀರಾಜ್ಯವಾಗಬೇಕಾದರೆ ಹಾಗೆಯೇ ಆದಾಯವನ್ನು ಖರ್ಚು ಮಾಡುತ್ತಾ ಹೋದರೆ ಮೊದಲನೆ ಪಾಂಚವಾರ್ಷಿಕ ಯೋಜನೆ ಮತ್ತು ದ್ವಿತೀಯ ಪಾಂಚವಾರ್ಷಿಕ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದು ಜನತೆಯ ಆರ್ಥಿಕ ಸ್ಥಿತಿ ಮತ್ತು ಅವರ ಸುಖಸಾಧನೆ ಯಾವುದನ್ನೂ ಉತ್ತಮಪಡಿಸುವುದಕ್ಕೆ ಸಾಧ್ಯವಿಲ್ಲ. ದೇಶದ ಆಯವ್ಯಯವನ್ನು ನೋಡುವಾಗ ಸರ್ಕಾರದ ಆಯವ್ಯಯದ ತಃಖ್ತೆಯಿಂದ ಆದಾಯವನ್ನೇ ನೋಡಬಾರದು. ಹಿಂದೆ food shortage ಆದಾಗ ಪಹಣಿ ಲೆಖ್ಖ ನೋಡಿದ ಹಾಗಾಗುತ್ತದೆ. ಒಂದು ದೇಶದ ಆಯವ್ಯಯವನ್ನು ನೋಡುವಾಗ, ದೇಶದ ಜನತೆಯ ಆದಾಯ ಎಷ್ಟರಮಟ್ಟಿಗೆ ಹೆಚ್ಚುತ್ತಿದೆ, ಈಗ ನಾವು ಮಾಡತಕ್ಕಂಥ ಕಾರ್ಯಗಳಿಂದ ಜನತೆಯ ಸಂಪಾದನಾಶಕ್ತಿ, ಎಷ್ಟರಮಟ್ಟಿಗೆ ಉತ್ತಮಗೊಳ್ಳುತ್ತದೆ ಎಂಬ ದೃಷ್ಟಿಯಿಂದ ನೋಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಈ ಸುಖೀ ರಾಜ್ಯದಲ್ಲಿ ಮೊದಲನೆ ಪಾಂಚವಾರ್ಷಿಕ ಯೋಜನೆ ಮತ್ತು ದ್ವಿತೀಯ ಪಾಂಚವಾರ್ಷಿಕ ಯೋಜನೆಗಳು ಈ ದೃಷ್ಟಿಯಿಂದ ಮಾಡಲ್ಪಡುತ್ತವೆ ಎಂಬುದನ್ನು ಅವರು ಮರೆಯಬಾರದು. ಸಾಧಾರಣವಾದ ಆದಾಯದಿಂದ ಅಸಾಧಾರಣವಾದ ಕಾರ್ಯಗಳನ್ನು ಮಾಡುವುದಕ್ಕಾಗುವುದಿಲ್ಲ. ಈಗ ಮಾಡುತ್ತಿರುವ ಕಾರ್ಯಗಳು ಅಂದರೆ ಅನೇಕ ದೊಡ್ಡ ದೊಡ್ಡ ಕೆರೆ ಕುಂಟೆಗಳು, ಕಾಲುವೆಗಳು, ವಿದ್ಯಾಭ್ಯಾಸದ ಇಲಾಖೆಗೆ ಸಂಬಂಧಪಟ್ಟ ಮತ್ತು ಇತರ ಜನಾದರಣೀಯವಾದ ಕಾರ್ಯಗಳು ಇವೆಲ್ಲಕ್ಕೂ ಕೂಡ ಜಾಸ್ತಿ ಖರ್ಚಾದರೆ ಅದನ್ನು ಖೋತಾ ಎಂದು ಹೇಳಬಾರದು. ಮನುಷ್ಯನ ಸಂಪತ್ತೂ ಶಕ್ತಿಯೂ ಹೆಚ್ಚಿದಹಾಗೆ ದೇಶದ ಒಟ್ಟು ಐಶ್ವರ್ಯವೂ ಹೆಚ್ಚಾಗುತ್ತದೆ. ಮನುಷ್ಯನ ಸಂಪತ್ತನ್ನೂ, ಶಕ್ತಿಯನ್ನೂ ಹೆಚ್ಚಿಸಿ ಆತನಿಂದ ಪುನಃ ಆದಾಯವನ್ನು ಪಡೆಯಬಹುದು. ಈ ದೃಷ್ಟಿಯಿಂದ ದೇಶದ ಏಕಮುಖ ಆದಾಯವನ್ನು ಒಟ್ಟಿನಲ್ಲಿ ಹೇಗೆ ಹೆಚ್ಚಿಸಬೇಕು ಎಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು ಅದನ್ನು ಮಾಡುತ್ತಿದ್ದಾರೆ. ಮೊದಲು ದೇಶದಲ್ಲಿ ಅನ್ನ, ಬಟ್ಟೆ, ನೆರಳು ಹೀಗೆ ಎರಡು ಮೂರು ಅತಿಮುಖ್ಯವಾದ ಕಾರ್ಯಗಳನ್ನು ಮಾಡಬೇಕಾಗುತ್ತದೆ. ಮೊದಲು ಹೆಚ್ಚಿಗೆ ಅನ್ನ ಸಿಕ್ಕುವಂತೆ ಮಾಡುವುದಾದರೆ ಆಗ ದೇಶದ ಸುಭದ್ರತೆಯನ್ನು ಹೆಚಿಸಿದಂತಾಗುತ್ತದೆ ಎಂಬುದನ್ನು ತಿಳಿಯೋಣ. ಮತ್ತು ನಿನ್ನೆ ದಿವಸ ಶ್ರೀಮಾನ್ ಕೆ. ಪಟ್ಟಾಭಿರಾಮ್‌ರವರು ಹೇಳಿದಹಾಗೆ ಒಂದು ದೇಶದ ಪ್ರಗತಿಯನ್ನು ಬರಿ ಅದರ ಆಯವ್ಯಯದ ತಃಖ್ತೆಯಿಂದ ನೋಡುವುದಕ್ಕಾಗುವುದಿಲ್ಲ. ಮೇಲಿನಿಂದ ಧರ್ಮ ತೆಗೆದುಕೊಳ್ಳುವ ಹೊತ್ತು ಬಂದಿದೆ ಎಂದು ಹೇಳಿದರು. ಕೇಂದ್ರದಿಂದ ತೆಗೆದುಕೊಳ್ಳುವುದನ್ನು ಧರ್ಮವೆಂದು ತಿಳಿದುಕೊಳ್ಳಬಾರದು. ಭಾರತ ಎನ್ನುವುದು ಒಂದು ಸಂಘಟಿತ ಸರ್ಕಾರವಾಗುತ್ತಿದೆ ಎನ್ನುವುದನ್ನು ಶ್ರೀಮಾನ್ ಇಮಾಂ ಸಾಹೇಬರು ಕನಸಿನಲ್ಲೂ ಕೂಡ ಆಗ ಕಂಡಿರಲಿಲ್ಲ. ಮೈಸೂರಿನವರು ಮೈಸೂರಾಗಿಯೇ ಉಳಿಯುತ್ತಾರೆ. ನಮ್ಮ ಕೊಳದಲ್ಲಿ ನಮ್ಮ ಕಪ್ಪೆ ಈಜಾಡುತ್ತದೆ ಎಂದು ತಿಳಿದುಕೊಂಡಿದ್ದರು. ಈಗ ಅದು ಒಂದು ಕೊಳವಾಗಿಲ್ಲ; ದೊಡ್ಡ ಸಮುದ್ರವಾಗಿದೆ. ಮೈಸೂರು ದೇಶದಲ್ಲಿ ಆದಾಯ ಕಡಿಮೆ ಬಿದ್ದರೆ ಇನ್ನೊಂದು ಕಡೆಯಿಂದ ತೆಗೆದುಕೊಂಡು ಕೊಡುವುದಕ್ಕೆ ಒಂದು ದೊಡ್ಡ ಕೇಂದ್ರವಿದೆ. ಮೈಸೂರು ಸರ್ಕಾರದ ಜನತೆಯ ಅಭಿಪ್ರಾಯವನ್ನು ಎಷ್ಟರಮಟ್ಟಿಗೆ ಮೈಸೂರು ಸರ್ಕಾರ ದೃಷ್ಟಿಯಲ್ಲಿಟ್ಟುಕೊಂಡಿದೆಯೋ ಹಾಗೆಯೇ ಕೇಂದ್ರ ಸರ್ಕಾರದಿಂದ ಬರತಕ್ಕಂಥ ಆದಾಯ ಕೇಂದ್ರ ಸರ್ಕಾರದಿಂದ ಬರತಕ್ಕಂಥ ಕಾರ್ಯಕ್ರಮ ವಿಷಯಗಳು, ಮೈಸೂರು ದೇಶಕ್ಕೆ ಆದಾಯದಾಯಕವಾದುವು, ಮತ್ತು ಆ ದೃಷ್ಟಿಯಿಂದ ಅವರು ಗ್ರಾಂಟು ಕೊಡುತ್ತಾರೆ ಎಂಬುದಾಗಿ ತಿಳಿದುಕೊಳ್ಳಬೇಕೇ ವಿನಾ, ಅವರು ಎತ್ತಿಕೊಡತಕ್ಕಂಥ ಧರ್ಮವೆಂದು ಭಾವಿಸಬಾರದು. ಗ್ರಾಂಟುಗಳು ಬರತಕ್ಕದ್ದು ಕೇಂದ್ರದ ಅರ್ಥಿಕ ಸ್ಥಿತಿಯಿಂದ ಅವು ಎಲ್ಲಾ ಬರುತ್ತಿವೆ ಎಂದು ತಿಳಿದುಕೊಳ್ಳಬೇಕು. ಹಿಂದೆ ಭಾಷಣ ಮಾಡುವಾಗ ಲಕ್ಕುವಳ್ಳಿ ಭದ್ರಾ reservoir ಕಟ್ಟಬೇಕಾಗಿದ್ದರೆ ಶ್ರೀ ಸಿದ್ದಪ್ಪನವರ ಮಕ್ಕಳೋ ಮರಿಮಕ್ಕಳೋ ನೋಡುತ್ತಾರೆಂದು ಹೇಳುತ್ತಿದ್ದರು. ಆದರೆ ಇವೊತ್ತು ಇದನ್ನು ನಮ್ಮ ಕಾಲದಲ್ಲೇ ನೋಡುತ್ತಿದ್ದೇವೆ. ನಮ್ಮ ಆದಾಯದಿಂದಲೇ ಇದನ್ನು ಮಾಡಿಸಬೇಕು, ಅಥವಾ savings ನಿಂದಲೇ ಇದು ನಿರ್ಮಾಣವಾಗಬೇಕು ಎಂದರೆ ಸ್ಕೂಲು ಕಾಲೇಜುಗಳನ್ನು ಮುಚ್ಚಿ ಆಸ್ಪತ್ರೆಗಳನ್ನು ತೆಗೆದುಹಾಕಿ ಯಾವವಿಧವಾದ ಅಭಿವೃದ್ಧಿ ಕಾರ್ಯಗಳನ್ನೂ ಮಾಡದೆ ಅವರ ಕಾಲದಲ್ಲಿ ಆದಾಯ ಏನು ಇತ್ತು ಅದರಿಂದ ಕಟ್ಟುತ್ತಾ ಹೋಗಿದ್ದರೆ ಲಕ್ಕುವಳ್ಳಿ ನಮ್ಮ ಮರಿಮಕ್ಕಳಕಾಲದಲ್ಲಿ ಆಗುತ್ತಿತ್ತು. ಕೇಂದ್ರ ಸರ್ಕಾರದವರು ಇವತ್ತು ನಮಗೆ ಸಹಾಯ ಮಾಡಿದ್ದರಿಂದ 7 ಕೋಟಿ ರೂಪಾಯಿಗಳ ಯೋಜನೆಯಾದರೂ ಅದನ್ನು ಅತಿ ಜಾಗ್ರತೆ ಕಾರ್ಯಗತ ಮಾಡುವಂತಾಯಿತು, ಅದರ ಉಪಯೋಗವನ್ನು ಉಳುಮೆ ಮಾಡತಕ್ಕ ಲಕ್ಷಾಂತರ ಜನರು ಹೊಂದುತ್ತಾರೆಂದು ಅವರು ತಿಳಿದುಕೊಳ್ಳಬೇಕು. ಹಾಗೆಯೇ ಇವೊತ್ತು ಹಳ್ಳಿಗಳಿಗೆ electricity ಕೊಡುವುದಕ್ಕೆ ಶಿವನಸಮುದ್ರ, ಬೆಂಗಳೂರು, ಮೈಸೂರು ಮತ್ತು ಕೋಲಾರ ಗೋಲ್ಡ್ ಫೀಲ್ಡ್, ಈ ಜಾಗಗಳನ್ನು ಬಿಟ್ಟರೆ ವಿದ್ಯುಚ್ಛಕ್ತಿ ದೀಪವನ್ನು ಎಲ್ಲಿಯೂ ಕಾಣದೇ ಇರುವ ಸಮಯದಲ್ಲಿ, ಈ ಹೊಸ ಆಡಳಿತ ಬಂದಮೇಲೆ ಹೊಸ ರೀತಿನೀತಿಗಳನ್ನು ಹಾಕಿಕೊಂಡು, ಜೋಗ್‌ನಲ್ಲಿ hydro-electric schemeನ್ನು ಪ್ರಾರಂಭವಾದ ಮೇಲೆ, ಪ್ರತಿಯೊಂದು ಹಳ್ಳಿಯಲ್ಲೂ ಅದರ ಉಪಯೋಗ ಪಡೆಯುವಂತೆ ಮಾಡಿರುವುದರಿಂದ ರೈತನ ಆರ್ಥಿಕಸ್ಥಿತಿ ಹೇಗೆ ಉತ್ತಮವಾಗುತ್ತಿದೆ ಎಂಬುದು ಅವನಿಗೆ ಗೊತ್ತಿದೆ.

ಆದರಿಂದಲೇ ಎಷ್ಟೋ ಪ್ರಶ್ನೆಗಳು ಈ ಸಾರಿ ಬಂದಿವೆ. ಎಷ್ಟೋ ಜನರು ವಿದ್ಯುಚ್ಛಕ್ತಿ ಕೊಡಬೇಕೆಂದು ಕೇಳುತ್ತಿದ್ದಾರೆ; ಎಷ್ಟೋ ಹಳ್ಳಿಗಳಿಗೆ ಈ ಅನುಕೂಲ ಈಗಾಗಲೇ ದೊರೆತಿವೆ. ಇದನ್ನು ನೋಡಿದರೆ, ಹಳ್ಳಿಗಳಲ್ಲಿ ರೈತನ ಆರ್ಥಿಕ ಸುವ್ಯವಸ್ಥೆ ಸಾಧನೆಯಾಗಿರುವುದು ಗೊತ್ತಾಗುವುದಿಲ್ಲವೇ! ಇದನ್ನೆಲ್ಲಾ ಅವರು ಯೋಚನೆಮಾಡಬೇಕು. ಒಂದು ಕಡೆ ವಿದ್ಯು

(ಶ್ರೀ ಎ. ಭೀಮಪ್ಪನಾಯಕ್.)

ಚ್ಛಕ್ತಿ ಸರಬರಾಜು ಸಾಲದು, ಸಾಲದು ಎಂಬ ಕೂಗು ಕೇಳಬರುತ್ತಿದೆ. ಅಂದಮೇಲೆ, ಹೆಚ್ಚಿಗೆ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡುವುದಕ್ಕೆ ಹೊಸ ಯೋಜನೆಗಳನ್ನು ಕೈಕೊಂಡಾಗ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಲೇ ಬೇಕಾಗುತ್ತದೆ. ಈ ರೀತಿ ಖರ್ಚು ಮಾಡಿದಮೇಲೆ, ಉತ್ಪತ್ತಿಯಾದ ವಿದ್ಯುಚ್ಛಕ್ತಿಯು ಸಂಪೂರ್ಣವಾಗಿ ವಿನಿಮಯವಾಗುವವರೆಗೂ ಅದರ ಸಂಪೂರ್ಣ ಪ್ರತಿಫಲ ದೊರೆತಂತಾಗುವುದಿಲ್ಲ. ಹೀಗಿರುವಲ್ಲಿ, ಶ್ರೀ ಇಮಾಂರವರು ಹೇಳಿದರು, ಎಲೆಕ್ಟ್ರಿಸಿಟಿ ಇಲಾಖೆಯಿಂದ ಕೇವಲ 70 ಲಕ್ಷ ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದೀರಲ್ಲಾ, 90 ಲಕ್ಷ ರೂಪಾಯಿಗಳನ್ನು ಬಡ್ಡಿಯ ರೂಪವಾಗಿಯೇ ಕೊಡುತ್ತಿದ್ದೇವಲ್ಲಾ ಎಂದು ಆಶ್ಚರ್ಯವನ್ನು ಸೂಚಿಸಿದರು. ಅವರು ಬಹುಶಃ 24 ಲಕ್ಷ ರೂಪಾಯಿಗಳು ಸರ್‌ಚಾರ್ಜ್ ರೂಪದಲ್ಲಿ ಎಲೆಕ್ಟ್ರಿಸಿಟಿಯಿಂದ ಬರುತ್ತಿರುವುದನ್ನು ಗಮನಿಸಲಿಲ್ಲವೆಂದು ಕಾಣುತ್ತದೆ. ಬಜೆಟ್ಟಿನ 25ನೆಯ ಪುಟವನ್ನು ಅವರು ದಯವಿಟ್ಟು ನೋಡಬೇಕು. ಅದನ್ನು ಸೇರಿಸಿಕೊಂಡರೆ 95 ಲಕ್ಷ ರೂಪಾಯಿಗಳಾಯಿತು.

ಒಬ್ಬ ಸದಸ್ಯರು.—ಮ್ಯಾಸ್‌ಕೆರನ್ಹಾಸ್‌ರವರು ಹೇಳಿದ್ದು, ಇಮಾಂರವರಲ್ಲ.

ಶ್ರೀ ಎ. ಭೀಮಪ್ಪನಾಯಕ್.—70 ಲಕ್ಷ ರೂಪಾಯಿಗಳು ಮಾತ್ರ ಎಂದು ಇಮಾಂರವರೂ ಹೇಳಿದ್ದಾರೆ. ಅವರು ಅದನ್ನು ಹೇಳುವಾಗ ಸರ್‌ಚಾರ್ಜಿನಿಂದ ಬರುವುದನ್ನು ಮರೆತರೆಂದು ಕಾಣುತ್ತದೆ. ಅಲ್ಲದೆ, ನಾವು ಇನ್ನೂ ಪೂರ್ತಿಯಾಗಿ ನಮ್ಮಲ್ಲಿರುವ ವಿದ್ಯುಚ್ಛಕ್ತಿಯ ಉಪಯೋಗ ಪಡೆದಿಲ್ಲ. ಇನ್ನೂ ಟರ್ಬೈನ್‌ಗಳನ್ನು ಹೆಚ್ಚಿಗೆ ಹಾಕಿ ಲೈನ್‌ಗಳನ್ನು ಎಲ್ಲಾ ಕಡೆಗೂ ಎಳೆದು, ಎಲೆಕ್ಟ್ರಿಸಿಟಿಯ utilityಯನ್ನು ಜಾಸ್ತಿ ಮಾಡಿಕೊಳ್ಳುವುದಾದರೆ ಇನ್ನೂ ಹೆಚ್ಚಿಗೆ ಆದಾಯ ಪಡೆಯುವುದಕ್ಕೆ ಅವಕಾಶವಿದೆ. ಇದರ ಜೊತೆಗೆ ಇನ್ನೂ ಒಂದು ಅಂಶವನ್ನು ನಾವು ನೆನಪಿನಲ್ಲಿಡಬೇಕು. ನಾವು ನಮ್ಮ ದೇಶದಲ್ಲಿ ವಿದ್ಯುಚ್ಛಕ್ತಿಯನ್ನು ಯಾವ ದರದಂತೆ ಮಾರುತ್ತಿದ್ದೇವೆ ? ಹೊರದೇಶದಲ್ಲಿ ಯಾವ ರೀತಿ ಮಾರುತ್ತಿದ್ದಾರೆ? ಈ ದಿವಸ ನಾವೂ ಕಡೆಗೆ ಬೊಂಬಾಯಿನಲ್ಲಿರುವಂತೆ ಯೂನಿಟ್ಟಿಗೆ 8 ಆಣೆ ವಿಧಿಸಿದರೂ ನಮ್ಮ ಆಧಾಯ 94 ಲಕ್ಷವಿರುವುದಕ್ಕೆ ಬದಲು 188 ಲಕ್ಷವಾಗುವುದಿಲ್ಲವೇ ? ಅನೇಕ ಕೈಗಾರಿಕೆಗಳಿಗೆ ಯೂನಿಟ್ಟಿಗೆ ಮೂರು ಕಾಸಿನಂತೆ ನಾವು ಮಾರುತ್ತಿದ್ದೇವೆ! ಇದರಿಂದ ಎಷ್ಟು ಕೈಗಾರಿಕೆಗಳು ನಡೆಯುತ್ತಿವೆ, ಎಷ್ಟು ಲಕ್ಷಾಂತರ ಜನರಿಗೆ ಕೂಲಿ ದೊರೆಯುವಂತಾಗಿದೆಯೆಂಬುದನ್ನು ನೋಡಬೇಡವೇ ? ಇವೆಲ್ಲಾ ದೇಶದ ಆದಾಯವಲ್ಲವೇ ? ಹಾಗೆಯೇ ಆಹಾರದ ಬೆಳವಣಿಗೆ ಯೂನಿಟ್ಟಿಗೆ ಆರು ಕಾಸಿನಂತೆ ಮಾರುತ್ತಿದ್ದೇವೆ. ಇದರಿಂದ ದೇಶಕ್ಕೆ ಎಷ್ಟು ಉಪಯೋಗವಾಗುತ್ತಿದೆ ! ನಾವು ಮಾರುತ್ತಿರುವ ದರಕ್ಕೂ ಇತರ ಪ್ರಾಂತ್ಯಗಳವರು ಮಾರುತ್ತಿರುವ ದರಕ್ಕೂ ಇರತಕ್ಕ ವ್ಯತ್ಯಾಸವನ್ನು ಮಾನ್ಯಸದಸ್ಯರು ಗಮನಿಸಬೇಡವೇ ! ಇಂಥ ವಿಚಾರಗಳಲ್ಲೆಲ್ಲಾ ಸರ್ಕಾರ ವ್ಯಾಪಾರಗಾರನಂತೆ ರೂಪಾಯಿಗೆ ಅರ್ಧಾಣೆ ಲಾಭ ತೆಗೆಯದೆ ಹೋದರೆ ಆ ಉದ್ಯಮವೇಕೆ ಎಂದು ಹೇಳುವುದಕ್ಕಾಗುತ್ತದೆಯೋ ? ದೇಶದ ಏಳಿಗೆಯನ್ನು ಸಾಧಿಸುವುದು ಮುಖ್ಯ. ಶ್ರೀಮಾನ್ ಶ್ರೀನಿವಾಸಯ್ಯಂಗಾರ್‌ರವರು ಹೇಳಿದರು, ಪಶ್ಚಿಮ ಬಂಗಾಳದವರು ಅಭಿವೃದ್ಧಿ ಇಲಾಖೆಗಳಿಗಾಗಿ ರೂಪಾಯಿನಲ್ಲಿ ಏಳು ಆಣೆ—ಎಂಟು ಆಣೆಯಷ್ಟು ಖರ್ಚುಮಾಡುತ್ತಿದ್ದಾರೆ, ನಮ್ಮಲ್ಲಿ ಎರಡು ಆಣೆ ಹನ್ನೊಂದು ಕಾಸುಗಳಷ್ಟು ಮಾತ್ರ ಎಂದು. ಇದನ್ನು ಯಾವರೀತಿ ಲೆಕ್ಕಹಾಕಿದರೋ ತಿಳಿಯದು. ಏಕೆಂದರೆ ವಿದ್ಯಾಭ್ಯಾಸಕ್ಕೆ ಖರ್ಚುಮಾಡುವುದು developmental activity ಯಲ್ಲವೇ ! ವಿದ್ಯಾಭ್ಯಾಸಕ್ಕಾಗಿ ನಮ್ಮ ದೇಶದ ಒಟ್ಟು 20 ಕೋಟಿ ಆದಾಯದಲ್ಲಿ ನಾಲ್ಕು ಕೋಟಿಗಳನ್ನು ಖರ್ಚುಮಾಡುತ್ತಿದ್ದೇವೆಂದರೆ ಅದೊಂದು ಮೂರಾಣೆ ಖರ್ಚುಮಾಡಿದಂತಾಗುವುದಿಲ್ಲವೇ ?

ಶ್ರೀ ಶ್ರೀನಿವಾಸಯ್ಯಂಗಾರ್.—ಅದೂ ಸರಿಯಲ್ಲ. ನಿಮ್ಮ ಒಟ್ಟು ಖರ್ಚಿರುವುದು 27 ಕೋಟಿ; ಅದರಲ್ಲಿ ನಾಲ್ಕು ಕೋಟಿ ಎಂದರೆ 1/7 ಭಾಗ ಮಾತ್ರ ಆಯಿತು.

ಶ್ರೀ ಎ. ಭೀಮಪ್ಪನಾಯಕ್.—27 ಕೋಟಿಯೇ ಆಗಲಿ, 22 ಕೋಟಿಯೇ ಆಗಲಿ, ಈ ನಾಲ್ಕು ಕೋಟಿ ರೂಪಾಯಿಗಳನ್ನು ನೀವು ಲೆಕ್ಕಕ್ಕೆ ತೆಗೆದುಕೊಂಡಿಲ್ಲವೆಂದು ಕಾಣುತ್ತದೆ. ಹಾಗೆಯೇ Irrigation Worksಗಳಿಗಾಗಿ ಖರ್ಚುಮಾಡುತ್ತಿರುವುದನ್ನೂ ಕೂಡ ನೀವು ಲೆಕ್ಕಕ್ಕೆ ತೆಗೆದುಕೊಂಡಿಲ್ಲವೆಂದು ಗೊತ್ತಾಗುತ್ತದೆ. ಆದ್ದರಿಂದ ಮುಖ್ಯವಾಗಿ ಅಭಿವೃದ್ಧಿ ಕಾರ್ಯಗಳು ಯಾವ್ಯಾವು ನಡೆದಿವೆ, ದೇಶದಲ್ಲಿ ಎಷ್ಟು ಜನರಿಗೆ ವಿದ್ಯಾಭ್ಯಾಸ ಕೊಟ್ಟಿದ್ದೇವೆ ಎಂಬುದನ್ನು ಮುಖ್ಯವಾಗಿ ನೋಡಬೇಕು. ವ್ಯಾಪಾರಿಯಂತೆ ಭಾವಿಸಿ ನಮ್ಮಿಂದ ವಿದ್ಯಾಭ್ಯಾಸ ಪಡೆದಿರುವವರು ಒಬ್ಬೊಬ್ಬರೂ 10,000 ರೂಪಾಯಿಗಳನ್ನು ಕೊಡಿ ಎಂದು ಕೇಳೋಣವೇ ? ಮೈಸೂರು ದೇಶದಲ್ಲಿ ಅನೇಕ ಪಶುವೈದ್ಯಶಾಲೆಗಳನ್ನೇರ್ಪಡಿಸಿ ಸಾವಿರಾರು ಸಾಯುವ ದನಗಳನ್ನು ಉಳಿಸಿದ್ದೇವೆ. ರೈತನ ದನಗಳಿಗೆ ದೊಡ್ಡ ರೋಗ ಮುಂತಾದುವುಗಳು ಬರುವುದನ್ನು ತಪ್ಪಿಸಿ ರೈತನನ್ನು ಉದ್ಧಾರಮಾಡಿದರೆ ದೇಶಕ್ಕೆ ಅದೇ ಆದಾಯವಲ್ಲವೇ ! ಹಾಗೆ ಮಾಡದೆ, ವೈದ್ಯಕೀಯ ಸಹಾಯವನ್ನು ಕೊಡದೆ ದೇಶದಲ್ಲಿ 10,000 ದನಗಳನ್ನು ಸಾಯಗೊಳಿಸಿದರೆ ದೇಶಕ್ಕಾಗದ ನಷ್ಟವೆಷ್ಟು ? ಹೀಗೆ ಲುಕ್ಸಾನಾಗುವುದನ್ನು ನೋಡಿ, ಆಸ್ಪತ್ರೆಗಳನ್ನೇರ್ಪಡಿಸಿ ಆ ಲುಕ್ಸಾನನ್ನು ತಪ್ಪಿಸಿದರೆ ದೇಶಕ್ಕೆ ಎಷ್ಟು ಉಪಯೋಗವಾಯಿತೆಂಬುದನ್ನು ಯೋಚನೆ ಮಾಡಿ, ಇಂಥಾದನ್ನೆಲ್ಲಾ ಲೆಕ್ಕಹಾಕಿ ನೋಡಬೇಕೇ ಹೊರತು ಬರೀ ಖೋತಾ ಬಜೆಟ್ಟು ಎಂದು ಹೇಳುವುದು ಸರಿಯೇ ? ಸಾಮಾನ್ಯ ಪರಿಸ್ಥಿತಿಯಲ್ಲಿ Normal Expenditure ಮೊಬಲಗು Normal Income ಮೊಬಲಗಿಗೆ ಮೀರಿರಕೂಡದೆಂಬುದನ್ನು ನಾನು ಒಪ್ಪುತ್ತೇನೆ! ಆ ತತ್ವ ಸಾಮಾನ್ಯ ಪರಿಸ್ಥಿತಿಯಲ್ಲಿ. ಆದರೆ ಈಗ ನಾವಿರುವುದು ಸಾಮಾನ್ಯ ಪರಿಸ್ಥಿತಿಯಲ್ಲ. ಇನ್ನು 5 ವರ್ಷ, 6 ವರ್ಷಗಳ ಕಾಲ ಪಂಚವಾರ್ಷಿಕ ಯೋಜನೆಯ ಕಾಲ. ದೇಶವನ್ನು ಪುನರ್ನಿರ್ಮಾಣ ಮಾಡತಕ್ಕ ಕಾಲ; ದೇಶದ ಆರ್ಥಿಕೋನ್ನತಿಯನ್ನು ಸಾಧಿಸುವ ಕಾಲವಿದು. ಇದೊಂದು ಅಸಾಧಾರಣ ಪರಿಸ್ಥಿತಿ. ಇಡೀ ಭಾರತವೇ ಇದಕ್ಕಾಗಿ ಮುನ್ನುಗ್ಗಿ ದುಡಿಯುತ್ತಿದೆ. ಇದಾದಮೇಲೆ Normal Incomeಗೆ ಸರಿಸಮನಾಗಿ Normal Expenditure ಮಾಡುವ ಪರಿಸ್ಥಿತಿ ಬರುತ್ತದೆ. ಆಗಲೂ ಕೂಡ ಎಷ್ಟೋ ವೇಳೆ ಖರ್ಚನ್ನು ಜಾಸ್ತಿಮಾಡಬೇಕಾದ ಸಂದರ್ಭ ಬರಬಹುದು. ಕೇಂದ್ರದವರು ಯಾವುದಾದರೂ ಯೋಜನೆಯನ್ನು ಕೈಕೊಳ್ಳಿ, ನಾವು Rs. 50,000 ಕೊಡುತ್ತೇವೆ, ನೀವು Rs. 50,000 ಹಾಕಿಕೊಳ್ಳಿ ಎಂದು ಹೇಳಿದರೆ, ನಾವು Normal Exependiture ಗಿಂತಲೂ ಹೆಚ್ಚಿಗೆ ಸಾಲವಾದರೂ ಮಾಡಿ ಆ ಯೋಜನೆಯನ್ನು ಸಾಧಿಸಲು ಕೈಕೊಳ್ಳುವುದು ಅವ

ತ್ಯಕ: ಹಾಗಿಲ್ಲದೆ, Normal Expenditure ಗಿಂತ ಜಾಸ್ತಿಯಾಯಿತೆಂದು ಹೇಳಿ ಕೇಂದ್ರದಿಂದ ಬರುವ 50,000 ರೂಪಾಯಿಗಳನ್ನೂ ಕಳೆದುಕೊಳ್ಳೋಣವೇ? ಅಂಥ ಆಶಾದಾಯಕವಾದ ಒಂದು ಯೋಜನೆ ನಮ್ಮ ಮುಂದೆ ಬಂದರೆ, ಅದರಿಂದ ಜನತೆ ಉದ್ಧಾರವಾಗುತ್ತದೆಂದು ನಮಗೆ ದೃಢಪಟ್ಟರೆ ಸಾಲಪಾದರೂ ಮಾಡಿ ಖರ್ಚುಮಾಡಲೇ ಬೇಕಾಗುತ್ತದೆ.

ಈಗ ನಾವಿರುವುದು ಒಂದು ಅಸಾಧಾರಣ ಪರಿಸ್ಥಿತಿಯಲ್ಲಿ ಎಂಬುದನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಬೇಕೆಂಬ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಇಂಥ ಅಸಾಧಾರಣ ಪರಿಸ್ಥಿತಿಯಲ್ಲಿ ದೇಶವನ್ನು ನಾವು ಕಟ್ಟುತ್ತಿರುವಾಗ ತಾವು ಹೇಳಿದಿರಿ, 'ನಮ್ಮ ಆದಾಯ 5-6 ಕೋಟಿ ರೂಪಾಯಿಗಳು ಮಾತ್ರ ಇರುವಾಗ ನಾವು ಒಂದು ವಿಧವಾದ ಆಡಳಿತವನ್ನಿಟ್ಟುಕೊಂಡಿದ್ದೆವು; ಈಗ 20-30 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕಾದ ಸ್ಥಿತಿ ಬಂದಾಗ, ಆಡಳಿತಕ್ಕಾಗಿ ಇಷ್ಟೇಕೆ ಖರ್ಚುಮಾಡಬೇಕು' ಎಂದು. ಇಷ್ಟೊಂದು ಹಣ ಖರ್ಚುಮಾಡುವಾಗ ಅದಕ್ಕೆ ಸರಿಯಾಗಿ ಸಿಬ್ಬಂದಿಯಿಟ್ಟುಕೊಳ್ಳದಿದ್ದರೆ, ಸಾಕಷ್ಟು ಆಡಳಿತ ಭದ್ರತೆಯಿಲ್ಲದಿದ್ದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಒಂದಾನೊಂದು ಕಾಲದಲ್ಲಿ $2\frac{1}{2}$ ಕೋಟಿ ರೂಪಾಯಿಗಳು ಮಾತ್ರ ಸಿಬ್ಬಂದಿ ವೆಚ್ಚವಿತ್ತು, ಈಗೇಕೆ ಹೆಚ್ಚುಮಾಡಿದಿರೆಂದು ಹೇಳಿ ಆಗಿನ ಸ್ಥಿತಿಯನ್ನೂ ಈಗಿನ ಸ್ಥಿತಿಯನ್ನೂ ಒಂದೇ ಸಮನೆಂದು ಹೋಲಿಸಿದರೆ ಹೇಗೆ! ನಾವು ಖರ್ಚುಮಾಡುವ ಪ್ರತಿಯೊಂದು ಕಾಸೂ ಸರಿಯಾಗಿ ಖರ್ಚು ಮಾಡಬೇಕೆಂದರೆ ಸಾಕಷ್ಟು ಸಿಬ್ಬಂದಿಯಿಟ್ಟುಕೊಳ್ಳಲೇಬೇಕು. ಈಗಿರತಕ್ಕ ಪದ್ಧತಿಯನ್ನು ಬದಲಾಯಿಸಿದರೆ, ಅಥವಾ ವಿಕೇಂದ್ರಿಕರಣ ಮಾಡಿದರೆ ಸ್ವಲ್ಪಮಟ್ಟಿಗೆ ಉಳಿಸಬಹುದೋ ಏನೋ. ಅಂದ ಮಾತ್ರಕ್ಕೆ ನಮ್ಮ ಸರ್ಕಾರದವರು ಮಾಡುವ ಕೆಲಸ ಕಾರ್ಯಗಳೆಲ್ಲಾ ದೈವತ್ವವನ್ನು ಪಡೆದಿವೆಯೆಂದು ನಾನು ಹೇಳುವುದಿಲ್ಲ. ಅನೇಕ ತಪ್ಪುಗಳು ಆಗುತ್ತವೆ. ಆದರೂ ಆ ತಪ್ಪುಗಳೆಲ್ಲಾ ಒಂದೇಸಾರಿ ನಿವಾರಣೆಯಾಗುತ್ತವೆಯೆಂದು ಒಂದು ಔಷಧಿ ಗುಳಿಗೆಯನ್ನು ಕೊಟ್ಟು ಸರಿಮಾಡುವವರು ಯಾರೂ ಇಲ್ಲ. ತಾವೇನೋ ಹೇಳಿದಿರಿ unproductive works ಮೇಲೆ ಅನೇಕವಾಗಿ ಹಣವನ್ನು ಹಾಕಿದ್ದೀರಿ ಎಂದು ದೇಶದಲ್ಲಿ ಜಾಯಿಂಟ್ ಸ್ಟಾಕ್ ಕಂಪೆನಿಗಳನ್ನು ಮಾಡಿಕೊಂಡು ಹೊಸ ಕೈಗಾರಿಕೆಗಳನ್ನು ನಿರ್ಮಾಣ ಮಾಡಬೇಕೆಂದು ಹೊರಟವರು ಸಾಮಾನ್ಯವಾಗಿ ಅನೇಕ ಆಶೋತ್ತರಗಳನ್ನಿಟ್ಟುಕೊಂಡೇ ಹೊರಟಿರುತ್ತಾರೆ. ಯಾರೂ ತಮ್ಮ ಹಣವನ್ನು ಕಳೆದುಕೊಳ್ಳಬೇಕು ಬಂದು ಮನಸ್ಸು ಮಾಡಿಕೊಂಡಿರುವುದಿಲ್ಲ. ಅದರಲ್ಲೂ ಸರ್ಕಾರದವರು ಅವರಿಗೆ ಕೊಡುವುದು 1/10 ಭಾಗ ಮಾತ್ರ. ಹತ್ತರಲ್ಲಿ ಒಂಭತ್ತು ಭಾಗ ಹಣವನ್ನು ಹಾಕಿಕೊಂಡು ಆ ಕಂಪೆನಿಗಳವರು ಮುಂದೆ ಬಂದಿರುತ್ತಾರೆ. ಅಂಥವರಿಗೆ ಸರ್ಕಾರದವರು ಸಹಾಯಮಾಡಬೇಕೆನ್ನುವಾಗ, ಅವರು ಮುಂದೆ ತಮ್ಮ ಹಣವನ್ನೆಲ್ಲಾ ಕಳೆದುಕೊಂಡು ಹೋಗುತ್ತಾರೆಂದು ಭಾವಿಸುವುದಕ್ಕಾಗುತ್ತದೆಯೇ? ಒಂದು ಕಡೆ ನಿರುದ್ಯೋಗ ಸಮಸ್ಯೆಯನ್ನು ಪರಿಹಾರ ಮಾಡಿದಂತಾಗುತ್ತದೆ, ಇನ್ನೊಂದುಕಡೆ ಒಂದು ಕೈಗಾರಿಕೆಗೆ ಉತ್ತೇಜನ ಕೊಟ್ಟಂತಾಗುತ್ತದೆಂದು ಹೇಳಿ ಸರ್ಕಾರದವರು ಸಾಲ ಕೊಡುತ್ತಾರೆ. ಮೈಸೂರು ದೇಶದಲ್ಲಿ ಮೊದಲಿನಿಂದಲೂ ಕೈಗಾರಿಕೆಗಳಿಗೆ ಪ್ರೋತ್ಸಾಹಕೊಡುವ ನೀತಿ ರೂಢಿಯಲ್ಲಿದೆ. ಅದೇ ನೀತಿಯನ್ನು ಮುಂದುವರಿಸಿ ಈಗ ಇನ್ನೂ ಹೆಚ್ಚಿಗೆ ಪ್ರೋತ್ಸಾಹ ಕೊಡುತ್ತಿದೆ ಅಷ್ಟೆ. ಹಿಂದೆ 60-70 ಲಕ್ಷ ರೂಪಾಯಿಗಳ ಉತ್ತೇಜನ ಕೊಡುತ್ತಿರುವಲ್ಲಿ ಈಗ 1-$1\frac{1}{2}$ ಕೋಟಿ ರೂಪಾಯಿಗಳವರೆಗೆ ಉತ್ತೇಜನ ಕೊಟ್ಟಿರುವುದೇ ಇದಕ್ಕೆ ಸಾಕ್ಷಿ. ಈಗಿರುವ ಜಾಯಿಂಟ್ ಸ್ಟಾಕ್ ಕಂಪೆನಿಗಳಲ್ಲಿ ಅನ್ಯಾಯಗಳು ನಡೆಯದಿರುವಂತೆ ನೋಡಿಕೊಳ್ಳುವುದಕ್ಕೆ ಒಂದು Industries Board ಎಂದು ಏರ್ಪಡಿಸಿದ್ದಾರೆ. ಇದರಿಂದ ಅವಕ್ಕೆ ಹಣ ಸಹಾಯವೇ ಅಲ್ಲ, ಎಲೆಕ್ಟ್ರಿಸಿಟಿ ಸಹಾಯ ಮುಂತಾಗಿ ಯಾವ ಸಹಾಯ ಬೇಕೋ ಅದನ್ನೆಲ್ಲಾ ಒದಗಿಸಿ ಅವು ಹೆಚ್ಚು ಲಾಭದಾಯಕವಾಗಿ ಕೆಲಸ ಮಾಡುವಂತೆ ಮಾಡಬೇಕು. ಹಾಗೂ ಅವು ಸರಿಯಾಗಿ ಕೆಲಸಮಾಡದೆ ಹೋದರೆ, ಅಂಥ ಕಂಪೆನಿಗಳನ್ನು ಸರ್ಕಾರದವರೇ ವಶಕ್ಕೆ ತೆಗೆದುಕೊಂಡು ಅವುಗಳ ಬೆಳವಣಿಗೆಯನ್ನು ರೂಪಿಸಬೇಕೆಂದು ಹೇಳುತ್ತೇನೆ.

ಹಾಗೆಯೇ, ವಿದ್ಯಾಭ್ಯಾಸದ ಒಂದು ಯೋಜನೆಯನ್ನು ಜಾರಿಗೆ ತರಬೇಕೆಂದು ಹೇಳಿ 3-4 ವರ್ಷಗಳಿಂದ ಶ್ರಮಿಸಿ ಒಂದು ಸ್ಕೀಮನ್ನು ತಯಾರುಮಾಡಿದರು. ಆ ಸ್ಕೀಮಿನ ವಿಚಾರದಲ್ಲಿ ಅನೇಕ ತೆರವಾದ ಅಭಿಪ್ರಾಯಗಳು ಈ ಸಭೆಯಲ್ಲಿ ಬಂದುವು. ಕೆಲವರು ಅದರಿಂದ ಒಳ್ಳೆಯದಾಗುವುದಿಲ್ಲ ಎಂದು ಹೇಳಿದರು. ಅವರ ಪೈಕಿ ನಾನು ಒಬ್ಬನಾಗಿದ್ದೆ. ಆದರೆ, ಈಚೆಗೆ ಕೇಂದ್ರ ಸರ್ಕಾರದವರು ಆರು ವರ್ಷ ಪ್ರೈಮರಿ ವಿದ್ಯಾಭ್ಯಾಸವಿರಬೇಕೆಂದಿದ್ದುದನ್ನು ತಪ್ಪಿಸಿ ಎಂಟು ವರ್ಷಗಳನ್ನೇ ಉಳಿಸಿಕೊಳ್ಳಬೇಕು ಎಂದು ಹೇಳಿದ ಮೇಲೆ, ಅದು ಈಗಿನ ಪದ್ಧತಿಗೆ ಅಳವಡಿಸಲ್ಪಟ್ಟಿದೆ. ಬೇಸಿಕ್ ಶಿಕ್ಷಣಪದ್ಧತಿ ಇದರಲ್ಲಿ ಸೇರಬೇಕೆಂದು ಕೇಂದ್ರ ಸರ್ಕಾರದವರು ಹೇಳಿದ್ದಾರೆ. ನನಗೇನೋ ಈಗಲೂ ಅದರ ವಿಚಾರದಲ್ಲಿ ಅನುಮಾನವಿದೆ. ನಮ್ಮ ಈಗಿನ ಆರ್ಥಿಕ ಸ್ಥಿತಿಯಲ್ಲಿ ಬೇಸಿಕ್ ಶಿಕ್ಷಣ ಕ್ರಮವನ್ನು ತರಬೇಕಾದರೆ ಬಹಳ ಕಷ್ಟವೇ. ಆದರೂ ಕೇಂದ್ರ ಸರ್ಕಾರದವರು ಈ ಬಗ್ಗೆ $\frac{2}{3}$ ಭಾಗವನ್ನು ನಾವು ವಹಿಸಿಕೊಳ್ಳುತ್ತೇವೆ, $\frac{1}{3}$ ಭಾಗವನ್ನು ನೀವು ವಹಿಸಿಕೊಳ್ಳಿ ಎಂದು ಹೇಳಿದರೆ ನಮಗೆ ಎಷ್ಟೇ ಕಷ್ಟವಾದರೂ ನಾವು ಮಾಡಲೇ ಬೇಕಾಗುತ್ತದೆ.

ಇದು ಈಗಾಗಲೇ ಶ್ರೀಮಾನ್ ಶ್ರೀನಿವಾಸಯ್ಯಂಗಾರ್ ಅವರು ಹೇಳಿದ ಹಾಗೆ 8 ಕೋಟಿ ಹೋಗಿ 4 ಕೋಟಿಗಳಿಗೂ ಇಳಿಯಬಹುದು ಅಥವಾ 4 ಕೋಟಿಗೆ ಸರಿಸಮನಾದರೂ ಆಗಬಹುದು. ಆದರೆ ಈ ಅಂಶವನ್ನು ನಾವು ಇನ್ನೊಂದು ದೃಷ್ಟಿಯಿಂದಲೂ ಕೂಡ ಗಣನೆಗೆ ತೆಗೆದುಕೊಳ್ಳಬೇಕಾಗಿದೆ. ಈ ಅಸೆಟ್ಸ್‌ಗಳಲ್ಲಿ ಕಣ್ಣಿಗೆ ಕಾಣತಕ್ಕಂಥ ಅಸೆಟ್ಸ್‌ಗಳೂ ಇವೆ. ಕಣ್ಣಿಗೆ ಕಾಣಿಸದಿರತಕ್ಕಂಥ ಅಸೆಟ್ಸ್‌ಗಳೂ ಇರುತ್ತವೆ. ಆದಕಾರಣ ಇವೆರಡನ್ನೂ ಸಹ ನಾವು ಲೆಕ್ಕಕ್ಕೆ ತೆಗೆದುಕೊಂಡು ನಮ್ಮ ಆಸ್ತಿಯನ್ನು ನೋಡಬೇಕು. ಈಗ ನಾವು ಒಂದು ಕೆರೆಯನ್ನಾಗಲಿ ಅಥವಾ ಸ್ಕೂಲನ್ನಾಗಲಿ ರಿಪೇರಿ ಮಾಡಿದರೇ ಆಗಲಿ ಅಥವಾ ಈ ಸಂಬಂಧವಾದ ಇತರ ಯಾವ ಒಂದು ಕಾರ್ಯಭಾರವನ್ನೇ ಅಗಲಿ ಅದನ್ನು ಸರಿಪಡಿಸಿ ಅದನ್ನು ಒಂದು ಉಪಯೋಗಕರವಾದ ಕೆಲಸಕ್ಕೆ ಬರುವಂತೆ ಮಾಡತಕ್ಕಂಥ ಪ್ರತಿಯೊಂದು ಬಾಬುಗಳೂ ಕೂಡ ಅಸೆಟ್ಸ್‌ಗಳೆಂದೇ ಹೇಳುತ್ತೇನೆ. ಇದೇ ರೀತಿ ದೇಶದಲ್ಲಿ ವಿದ್ಯಾಭಿವೃದ್ಧಿಗಾಗಿ ಹಾಕಿರತಕ್ಕಂಥ ಹಣವೂ ಸಹ ಒಂದು ಅಸೆಟ್ಸೇ. ಈ ಅಂಶಗಳನ್ನು ಕೂಡ ತಾವು ಲೆಕ್ಕ ಹಾಕಬೇಕೆಂದು ನಾನು ಅವರಿಗೆ ತಿಳಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಆರೋಗ್ಯದ ಬಾಬಿಗೆ ಹಣ ಹಾಕಿ ಜನರನ್ನು ದೃಢಕಾಯರನ್ನಾಗಿ ಮಾಡಿರುವುದೋ ?

ಶ್ರೀ ಎ. ಭೀಮಪ್ಪನಾಯಕ್.—ಅದರ ವಿಷಯವನ್ನಂತೂ ಹೇಳಬೇಕಾದ್ದೇ ಇಲ್ಲ. ಹಾಗೆ ನಾವು ಆ ಬಾಬಿಗೆ ಹಣವನ್ನು ಹಾಕದೆ ಕೈಬಿಟ್ಟು ಜನಾಂಗವನ್ನು ಒಂದು "ನರಪೇತಲನಾರಾಯಣನಂತೆ" ಇರುವ ಹಾಗೆ ಮಾಡಿದರೆ ಆಗ ಇತರ ದೇಶದವರೆಲ್ಲಾ ನಮ್ಮ ಮೇಲೆ ಧಾಳಿ ನಡೆಸಲು ಕಾರಣವಾಗುತ್ತಿತ್ತು. ಆದರೆ ಈ ವಿದ್ಯಾಭ್ಯಾಸದ ಸುಧಾರಣೆಯ ವಿಚಾರವಾಗಿ ಒಂದು ಸೂಚನೆಯನ್ನು ಕೊಟ್ಟಿದ್ದಾರೆ. ಆದರೆ ಈ ಬಗ್ಗೆ ನನ್ನ ಒಂದು ಸೂಚನೆಯೇನೆಂದರೆ—ಆ ಕೇಂದ್ರ ಸರ್ಕಾರದವರು ಈ ವಿಚಾರದಲ್ಲಿ ಏನೊಂದು ನೀತಿಯನ್ನು ಹಾಕಿಕೊಂಡು ಹೋಗುತ್ತಾರೋ ಆ ಒಂದು ನೀತಿಯನ್ನೇ ನಾವೂ ಸಹ ಇಲ್ಲಿ ಹಾಕಿಕೊಂಡು ಹೋಗಬೇಕಾಗಿದೆ. ಆ ಸೆಂಟರಿನಲ್ಲಿಯೇ ಒಂದು ರೀತಿಯ ಸರ್ವೀಸ್ ಎಂದರೆ ಅಲ್ಲೆಲ್ಲಾ ಈ I.A.S. ಪದ್ಧತಿಯನ್ನಿಟ್ಟುಕೊಂಡು, ಇಲ್ಲಿ ನಾವೇ ಒಂದು ರೀತಿಯಲ್ಲಿ ಇದನ್ನು ನಡೆಸಿಕೊಂಡು ಹೋಗಬೇಕೆಂದು ಹೇಳಿದರೆ ಅದು ಸಾಧ್ಯವಾಗದ ಮಾತು. ಈ ಎರಡು ಸರ್ಕಾರಗಳ ಆಡಳಿತ ಪದ್ಧತಿಯೂ ಒಂದೇ ರೀತಿಯಾಗಿರಬೇಕು. ಈಗ ಆ ಕೇಂದ್ರ ಸರ್ಕಾರದವರು ಈ ಹೈಸ್ಕೂಲಿನ ವಿದ್ಯಾಭ್ಯಾಸವನ್ನು 4 ವರ್ಷಗಳಿಂದ 3 ವರ್ಷಗಳಿಗೆ ಇಳಿಸಬೇಕೆಂಬುದಾಗಿ ಆಲೋಚನೆ ಮಾಡುತ್ತಿದ್ದಾರೆಂದು ನಾನು ಕೇಳುತ್ತಿದ್ದೇನೆ. ಹಾಗೆ ಅವರು ಹಾಕತಕ್ಕಂಥ ತತ್ವಗಳನ್ನೆಲ್ಲಾ ನಾವು ಅನುಸರಿಸಿಕೊಂಡುಬರುವುದಾಗಿ ನಾವು ಈಗಾಗಲೇ ಒಪ್ಪಿಕೊಂಡಿದ್ದೇವೆ. ಈಗಾಗಲೇ ಅವರು ಅಲ್ಲಿ ಈ ಹೈಸ್ಕೂಲಿನ ಅವಧಿಯನ್ನು 4 ವರ್ಷಗಳಿಂದ 3 ವರ್ಷಗಳಿಗೆ ಇಳಿಸಿದ್ದಾರೆಂದು ಕೇಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಹಾಗೆ ಅವರಿನ್ನೂ ಅದನ್ನು ಕಡಮೆ ಮಾಡಿಲ್ಲ.

ಶ್ರೀ ಎ. ಭೀಮಪ್ಪನಾಯಕ್.—ನಾನು ಕೇಳಿರತಕ್ಕದ್ದನ್ನು ನಾನೀಗ ಹೇಳುತ್ತಿದ್ದೇನೆ. ಅದು ಸರಿಯೋ ಅಥವಾ ಸರಿಯಲ್ಲವೋ ಎನ್ನುವುದನ್ನು ತಿಳಿಸತಕ್ಕದ್ದು ಸರ್ಕಾರದ ಜವಾಬ್ದಾರಿ. ಈ ಹಿಂದೆ 4 ವರ್ಷಗಳ ಕಾಲೇಜ್ ಕೋರ್ಸನ್ನು ನಿರ್ಧರ ಮಾಡಲಾಗಿತ್ತು. ಆದರೆ ಈಗ ಅದನ್ನೂ ಕೂಡ 3 ವರ್ಷಗಳಿಗೆ ಇಳಿಸಬೇಕೆಂದಿದ್ದಾರೆಂದು ಕೇಳುತ್ತೇನೆ. ಹೀಗಾದಮೇಲೆ ಆಗ ನಮ್ಮ ಈ ಇಂಟರ್ ಕಾಲೇಜುಗಳೆಲ್ಲಾ ಹೊರಟು ಹೋಗುತ್ತವೆ. ಹೈಸ್ಕೂಲಿನಲ್ಲಿ ತೇರ್ಗಡೆ ಹೊಂದತಕ್ಕಂಥ ವಿದ್ಯಾರ್ಥಿಗಳು ಇನ್ನು ಮುಂದೆ ನೇರವಾಗಿ ಕಾಲೇಜಿಗೆ ಹೋಗಿ ಸೇರಬೇಕಾಗಿರುತ್ತದೆ. ಹೀಗೆ ಇನ್ನು ಮುಂದೆ ಎಲ್ಲಾ ವಿದ್ಯಾರ್ಥಿಗಳೂ ನೇರವಾಗಿ ಕಾಲೇಜಿಗೆ ಹೋಗುವುದಾದರೆ ಈಗ ಪ್ರತಿಯೊಂದು ಜಿಲ್ಲಾ ಕಸಬೆಗಳಲ್ಲಿಯೂ ಹಾಲಿ ಇರತಕ್ಕ ಇಂಟರ್ ಕಾಲೇಜುಗಳನ್ನೆಲ್ಲಾ ತಾವು ತೆಗೆದುಹಾಕಿಬಿಡುತ್ತೀರಾ? ಅಥವಾ ಹಾಗೆ ಇವುಗಳನ್ನು ತೆಗೆದು ಹಾಕದೆ ಹಾಗೇ ಸುಮ್ಮನೆ ಕೈಬಿಟ್ಟುಬಿಡುತ್ತೀರಾ? ಅಥವಾ ಇವುಗಳನ್ನೆಲ್ಲಾ ಮುಂದೆ ಕಾಲೇಜುಗಳನ್ನಾಗಿ ಮಾಡುತ್ತೀರಾ ಎನ್ನುವುದೊಂದೂ ಗೊತ್ತಾಗುತ್ತಿಲ್ಲ. ಹಾಗೊಂದು ವೇಳೆ ನಾಳೆ ತಾವು ಈ ಇಂಟರ್ ಕಾಲೇಜುಗಳನ್ನೆಲ್ಲಾ ತೆಗೆದುಹಾಕಿಬಿಟ್ಟು ಆ ಜಿಲ್ಲೆಗಳಲ್ಲೆಲ್ಲಾ ಕೇವಲ ಒಂದು ಹೈಸ್ಕೂಲು ವಿದ್ಯಾಭ್ಯಾಸವನ್ನೇ ಅಖೈರು ವಿದ್ಯಾಭ್ಯಾಸದ ಅವಧಿಗೆ ಇಳಿಸಿಬಿಟ್ಟರೆ—ಅಂದರೆ ಅಲ್ಲೆಲ್ಲಾ ಈ ವಿದ್ಯಾಭ್ಯಾಸವನ್ನು ಕೇವಲ ಹೈಸ್ಕೂಲಿನ ಮಟ್ಟಕ್ಕೆ ನಿಲ್ಲಿಸಿ ಬಿಟ್ಟರೆ ಆಗ ನಮ್ಮ ಈ ವಿದ್ಯಾಭಿವೃದ್ಧಿ ಮುಂದುವರಿಯುವುದಕ್ಕೆ ಬದಲಾಗಿ ರಿಟ್ರೋಗ್ರೇಡ್ ಆಗುತ್ತದೆ. ಅಷ್ಟೇ ಅಲ್ಲದೆ ಈಗಾಗಲೇ ಶ್ರೀಮಾನ್ ಶ್ರೀನಿವಾಸಯ್ಯಂಗಾರ್ ಅವರು ಹೇಳಿರುವಂತೆ ಇದು ಡಿಟರಿಯೊರೇಟ್ ಕೂಡ ಆಗುತ್ತದೆ. ಈ ದಿವಸ ತಾವು ಕಾಲೇಜುಗಳಲ್ಲೆಲ್ಲಾ third year course ವರೆಗೆ ಮಾತ್ರ ಇರಬೇಕೆಂದರೆ ಆಗ ಈ ಕಾಲೇಜುಗಳೆಲ್ಲಾ III ಗ್ರೇಡ್ ಕಾಲೇಜುಗಳಾಗುತ್ತವೆ. ಇದರಿಂದ ಇನ್ನೂ ಒಂದು ಹೆಚ್ಚಿನ ತೊಂದರೆ ಮತ್ತು ಅನನುಕೂಲವಿದೆ. ಅದೇನೆಂದರೆ ಈ ದಿವಸ ಸಂಸ್ಥಾನದ ಒಂದು ಮೂಲೆಯಿಂದ ಯಾರಾದರೊಬ್ಬ ವಿದ್ಯಾರ್ಥಿಯು ಕಾಲೇಜು ವಿದ್ಯಾಭ್ಯಾಸ ಮಾಡಬೇಕೆಂದು ಅಪೇಕ್ಷೆಪಟ್ಟರೆ, ಉದಾಹಣೆಗೆ-ಚಿತ್ರದುರ್ಗದಿಂದಲೋ ಅಥವ ಶಿವಮೊಗ್ಗದಿಂದಲೋ ಒಬ್ಬ ವಿದ್ಯಾರ್ಥಿ ಕಾಲೇಜಿಗೆ ಸೇರಬೇಕಾಗಿದ್ದರೆ ಅವನು ತನ್ನ ಜಿಲ್ಲೆಯನ್ನು ಬಿಟ್ಟು ಈ ಬೆಂಗಳೂರಿಗೋ ಅಥವಾ ಮೈಸೂರಿಗೋ ಬರಬೇಕಾಗಿರುತ್ತದೆ. ಹೀಗೆ ಅವರು ಈ ದೊಡ್ಡ ದೊಡ್ಡ ನಗರಗಳಿಗೆ ಬಂದಾಗ ಅವರಿಗೆ ಕನಿಷ್ಠ ಪಕ್ಷ ತಿಂಗಳೊಂದಕ್ಕೆ 100—150 ರೂಪಾಯಿಗಳ ಜೀವನದ ವೆಚ್ಚ ಬರುತ್ತದೆ. ಹೀಗಾದರೆ ಆತನ ಪೂರ್ತಿ ವಿದ್ಯಾ ವ್ಯಾಸಂಗದ ಖರ್ಚು ಎಷ್ಟಾಗಬಹುದು ಎನ್ನುವುದನ್ನು ಲೆಕ್ಕಹಾಕಿದರೆ ಅನೇಕರು ಈ ಓದನ್ನೇ ಕೈಬಿಡಬೇಕಾಗುತ್ತದೆ. ಆದಕಾರಣ ತಾವು ಈ ಇಂಟರ್ ಕಾಲೇಜುಗಳನ್ನೆಲ್ಲಾ ಫಸ್ಟ್ ಗ್ರೇಡ್ ಕಾಲೇಜುಗಳನ್ನಾಗಿ ಪರಿವರ್ತಿಸಿದರೆ ಆಗ ಪ್ರತಿಯೊಬ್ಬ ವಿದ್ಯಾರ್ಥಿಗೂ ತನ್ನ ತನ್ನ ಜಿಲ್ಲೆಯಲ್ಲೇ ತನಗೆ ವಿದ್ಯಾಭ್ಯಾಸವನ್ನು ತನ್ನ 14ನೆಯ ವರ್ಷದ ಅನಂತರವೂ ಪಡೆಯಲು ಅವಕಾಶ ಉಂಟಾಗುತ್ತದೆ. ಇದರಿಂದ ನ್ಯಾಷನಲ್ ಆದಾಯ ಹೆಚ್ಚುತ್ತದೆ. ಜನರ ಜೀವನದ ಖರ್ಚು ಅರ್ಧಕ್ಕೆ ಅರ್ಧ ಕಡಮೆಯಾಗುತ್ತದೆ. ಹೀಗೆ ಅರ್ಧ ಕಡಮೆಯಾಗತಕ್ಕದ್ದನ್ನು ನಾವು ಉಳಿತಾಯವೆಂದು ಭಾವಿಸಬಹುದು. ಹೀಗೆ ಮಾಡಿದರೆ ಅರ್ಧ ಖರ್ಚು ಕೂಡ ಕಡಮೆಯಾಗುತ್ತದೆ. ಅನಂತರ ಅವರು ಈ ಬೆಂಗಳೂರು ಮೈಸೂರುಗಳಿಗೆ ಈ B.Sc. ಮತ್ತು B.Sc. (Hons.); M.Sc.; M.Sc. (Hons.) ಮತ್ತು ಇತರ ಪಾರಿಭಾಷಿಕ ವ್ಯಾಸಂಗಕ್ಕಾಗಿ ಇಲ್ಲಿಗೆ ಬರತಕ್ಕಂಥ ಒತ್ತಡ ಕೂಡ ಬಹಳಮಟ್ಟಿಗೆ ಇದರಿಂದ ಕಡಮೆಯಾಗುತ್ತದೆ. ಈಗಿರುವಷ್ಟು ರಷ್ ಮುಂದಕ್ಕೆ ಇರುವುದಿಲ್ಲ. ಈ ಎಲ್ಲ ಕಾರಣಗಳಿಂದಲೂ ನಾನು ಈ ಇಂಟರ್ ಕಾಲೇಜುಗಳನ್ನೆಲ್ಲಾ I ಗ್ರೇಡ್ ಕಾಲೇಜುಗಳನ್ನಾಗಿ ಮಾಡಬೇಕೆಂದು ಹೇಳುತ್ತೇನೆ. ಈಗ ತಾವು ಈ ಬಾಬಿಗಾಗಿ 10 ಲಕ್ಷ ರೂಪಾಯಿಗಳನ್ನು ತೆಗೆದಿಟ್ಟರೆ ಸಾಕೆಂದು ಗೊತ್ತಾಗುತ್ತದೆ. ಇದನ್ನು ಪರಿಶೀಲನೆ ಮಾಡಿದರೆ ಆಗ ಒಂದೊಂದು ಕಾಲೇಜಿಗೂ ಒಂದೊಂದು ಲಕ್ಷ ರೂಪಾಯಿಗಳು ಬಿದ್ದ ಹಾಗಾಯಿತು. ಇಷ್ಟಕ್ಕಾದರೂ ಹಣವನ್ನು ನಾವು ಎಲ್ಲಿಂದ ತರುವುದು ಎಂದು ಸರ್ಕಾರದವರು ಕೇಳಬಹುದು. ಅದಕ್ಕೆ ಹಣವನ್ನೊದಗಿಸಲು ಬೇಕಾದಷ್ಟು ಮಾರ್ಗಗಳಿವೆಯೆಂದು ಹೇಳುತ್ತೇನೆ. ತಾವೀಗ ಕೈಗೊಂಡಿರುವ ಆ ಸಂಸ್ಕೃತಿ ಪ್ರಚಾರ ಒಂದನ್ನು ನಿಲ್ಲಿಸಿದರೆ ಸಾಕು, ಇದಕ್ಕೆ ಸಾಕಾಗುವಷ್ಟು ದುಡ್ಡು ಉಳಿಯುತ್ತದೆ. ತಾವು ಈ ದಿವಸ ಕೈಗೊಂಡಿರುವಂಥ ಈ ಸಂಸ್ಕೃತಿ ಪ್ರಸಾರ ಕಾರ್ಯದಿಂದ ದೇಶಕ್ಕೆ ಉಪಕಾರವಾಗುವುದಕ್ಕೆ ಬದಲಾಗಿ ಅಪಘಾತವಾಗುತ್ತಿದೆ. ಈ ದಿವಸ ನಮ್ಮ ಸರ್ಕಾರ ಕೈಗೊಂಡಂಥ ಈ ಒಂದು ಯೋಜನೆ ಕೊನೆಗೆ ಎಲ್ಲಿ ಹೋಗಿ ಕಾರ್ಯಗತವಾಗಲು ನಿಂತಿದೆ

ಎಂದರೆ ಮೊನ್ನೆ ತಾನೆ ಮೇಲ್ಮನೆಯ ಸದಸ್ಯರಾದಂಥ ಶ್ರೀ ಎಂ. ಪಿ. ಎಲ್. ಶಾಸ್ತ್ರಿಗಳು ಹೇಳಿರುವಂತೆ ಇದು ಹೋಗಿ ಮುಳುಬಾಗಿಲ್ ತಾಲ್ಲೂಕಿನಲ್ಲಿ ಒಬ್ಬ ಶೇಕದಾರರ ಕೈಲಿ ನಿಂತಿರುತ್ತದೆ. ಮೇಲ್ಮನೆಯ ಸದಸ್ಯರಾದ ಶ್ರೀಮಾನ್ ಶಾಸ್ತ್ರಿಗಳು ಆ ಮುಳುಬಾಗಿಲು ತಾಲ್ಲೂಕಿನಲ್ಲಿ 7ನೆಯ ತಾರೀಖು ಒಂದು ಭಾಷಣ ಮಾಡಬೇಕೆಂದು ಗೊತ್ತಾಗಿದ್ದುದರ ಪ್ರಕಾರ ಅವರಿಗೆ ಅಲ್ಲಿಗೆ ದಯಮಾಡಿಸಬೇಕೆಂದು ತಿಳಿಸತಕ್ಕಂಥ ಆ ಒಂದು ನೋಟೀಸ್ ಅವರಿಗೆ ಇಲ್ಲಿ. ಬೆಂಗಳೂರಿನಲ್ಲಿ 8ನೇ ತಾರೀಖು ತಲಪಿತಂತೆ. ಈ ಸಮಾಚಾರವನ್ನು ಅವರು ಆ ಮೇಲ್ಮನೆಯಲ್ಲೇ ತಿಳಿಸಿದ್ದಾರೆ. ಹೀಗಿರುವಾಗ ಇದರ ಆಡಳಿತ ಹೀಗೆ ನಡೆಯುತ್ತಿದೆ, ಇದರಿಂದ ದೇಶಕ್ಕೆ ಎಷ್ಟರಮಟ್ಟಿನ ಉಪಕಾರವಾಗುತ್ತಿದೆ ಎಂಬುದನ್ನು ತಾವೆಲ್ಲರೂ ಆಲೋಚಿಸಬೇಕು. ಇನ್ನು ಈ ಸಂಸ್ಕೃತಿ ಪ್ರಸಾರದ ಬಗ್ಗೆ ಅಲ್ಲಲ್ಲೇ ಆಗಾಗ್ಗೆ ಹೋಗತಕ್ಕಂಥ ಜನರಿಗೆಲ್ಲಾ ಎರಡನೇ ತರಗತಿಯ ರೈಲ್ವೆ ಛಾರ್ಜನ್ನೂ ಮತ್ತು 20 ರೂಪಾಯಿಗಳ ಭತ್ಯವನ್ನೂ ಅವರು ಕೇಳುವ ಮೊದಲೇ ಟ್ರೆಜರಿಯಿಂದ ಖರ್ಚು ಹಾಕಿ ಕೊಡಬೇಕೆಂದು ತಿಳಿಸಿದ್ದಾರಂತೆ. ಇಂಥ ಅವಕಾಶ ಯಾವ ಅಸೆಂಬ್ಲಿ ಸದಸ್ಯರಿಗೂ ಇಲ್ಲ. ಯಾರನ್ನಾದರೂ ಒಬ್ಬರನ್ನು "You are appointed as the lecturer to deliver a lecture in such and such a village in Molakalmuru taluk" ಎಂದು ಹೇಳಿ ಕಳುಹಿಸಿಬಿಟ್ಟರೆ ಅಂಥವರಿಗೆ ಆ ತಾಲ್ಲೂಕಿನ ಅಮಲ್ದಾರರು—No T.A. Bill, no auditing, no Accountant General—ಯಾವುದೂ ಇಲ್ಲದೆ ಅವರಿಗೆ ದುಡ್ಡು ಕೊಟ್ಟು ಕಳುಹಿಸಬೇಕೆಂದು ತಿಳಿಸಿದ್ದಾರಂತೆ. (ಸಭೆಯ ಕೋಲಾಹಲ).

ಒಬ್ಬ ಮಾನ್ಯ ಸದಸ್ಯರು.—ಹೀಗೆ ಮಾಡಿದ್ದರಿಂದ ಅನ್‌ಎಂಪ್ಲಾಯ್‌ಮೆಂಟ್ ಪ್ರಾಬ್ಲಂ ಸಾಲ್ವಾಯಿತೋ ಇಲ್ಲವೋ?

ಶ್ರೀ ಎ. ಭೀಮಪ್ಪನಾಯಕ್.—ಹೌದು ಹೌದು. ಇದೂ ಒಂದು ರೀತಿಯ ಪರಿಹಾರವೇ ಸರಿ. ಆದರೆ ಈ ಅನ್‌ಎಂಪ್ಲಾಯ್‌ಮೆಂಟ್ ಪ್ರಾಬ್ಲಂನ್ನು ಸರ್ಕಾರದವರು ಒಂದು ಸರಿಯಾದ ಮಾರ್ಗದಲ್ಲಿ ಬಗೆಹರಿಸದೆ ಇಂಥ ಮಾರ್ಗದಲ್ಲೇ ಹೋಗುತ್ತಿದ್ದರೆ, ಈಗಾಗಲೇ ಶ್ರೀಮಾನ್ ಶ್ರೀನಿವಾಸಯ್ಯಂಗಾರ್ ಅವರು ತಿಳಿಸಿರುವಂತೆ ಅಂಧಕಾರ ಬಡ್ಜೆಟ್ ಎಂದು ಹೇಳಲೇಬೇಕಾಗುತ್ತದೆ. ಈಗ ದೇಶದಲ್ಲಿ ಎಂಥ ಸಂಸ್ಕೃತಿ ನಡೆಯುತ್ತಿದೆಯೆಂದರೆ "As is the master so the sishya" ಎನ್ನುವಂತೆ ಇದೆ. ಈಗ ಈ ಯೋಜನೆಯನ್ನು ಪ್ರಾರಂಭಿಸಿರತಕ್ಕ ಯಾರನ್ನು ನಾವುಗಳೆಲ್ಲರೂ "ಮಹಾಪ್ರಭುಗಳೆಂದು" ಹೇಳುತ್ತಿದ್ದೇವೊ, ಆ ಪದ ಅಲ್ಲಿಗೇ ನಿಲ್ಲದೆ ಅದು ಕೆಳಗಿನವರೆಗೂ ಹೋಗಿ ಈ ದಿವಸ ಆ ರೆವಿನ್ಯೂ ಇನ್ಸ್ಪೆಕ್ಟರನ್ನೂ ಸಹ 'ಮಹಾಸ್ವಾಮಿ" ಎನ್ನತಕ್ಕಂಥ ಸಂದರ್ಭ ಈಗ ಬಂದಿದೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ—ದೇಶದಲ್ಲಿರತಕ್ಕಂಥ ಅನೇಕ ಪಾರಿಭಾಷಿಕ ಪ್ರವೀಣರಿಗೆ ಸರ್ವೀಸ್ ಎಕ್ಸ್‌ಟೆನ್ಷನ್‌ಗಳು ಸಿಕ್ಕುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ—there are many gems of officers in Mysore State—ಅಂಥವರುಗಳನ್ನೆಲ್ಲಾ ಕೆಲಸದಿಂದ ಈ ದಿವಸ ತೆಗೆದುಹಾಕಿದ್ದಾರೆ. ಮಹಮ್ಮದ್ ಹಯಾತ್ ಇವರನ್ನು ವಯಸ್ಸಾಯಿತು ನೀವು ಕೆಲಸ ಬಿಟ್ಟು ಬಿಡಿ ಎಂದು ಹೇಳಿ ಅವರನ್ನು ಕೆಲಸದಿಂದ ತೆಗೆದುಬಿಟ್ಟಿದ್ದಾರೆ. ಆದರೆ ಆತನ ವಯಸ್ಸು ಒಂದನ್ನು ಮಾತ್ರ ಇವರು ನೋಡಿದರೇ ಶಿವಾಯಿ ಆತನ ಬುದ್ಧಿ, ಕುಶಲತೆ ಮತ್ತು ಅನುಭವದ ಕಡೆಗೆ ಗಮನವನ್ನೇ ಕೊಡಲಿಲ್ಲ. ಹಿಂದೆ ಆ ಶಿವನಸಮುದ್ರ ಸುಟ್ಟುಹೋಗಿದ್ದಾಗ ಪುನಃ ಅವನ್ನು ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲವೆನ್ನುತ್ತಿದ್ದ ಸಮಯದಲ್ಲಿ ಆತನ ಬುದ್ಧಿ ಕುಶಲತೆಯಿಂದ ಅದನ್ನು ಹೇಗೆ ಸರಿಪಡಿಸಲಾಯಿತು! ಅದೇ ರೀತಿ ಆ ಬಾಲಕೃಷ್ಣನ್ ಮತ್ತು ಡಾ|| ಪಿಚ್‌ಮುತ್ತು-ಈತನಂಥ ದೊಡ್ಡ ವಿದ್ಯಾವಂತರು ದೇಶದಲ್ಲಿ ಮತ್ತೊಬ್ಬರಿಲ್ಲ. He is the only man who has the highest qualifications in India. ಇಂಥವರು ಯಾರಿಗೂ ಕೂಡ ಒಂದು ದಿವಸದ ಎಕ್ಸ್‌ಟೆನ್ಷನ್ ಸಹ ಸಿಕ್ಕಲಿಲ್ಲ. ಆದರೆ ಈ ಸಂಸ್ಕೃತಿ ಪ್ರಸಾರದ ಸಾಹೇಬರಿಗೆ—"ನೀವು ಎಲ್ಲಿಯವರೆಗೆ ಇರಬೇಕೆನ್ನುತ್ತೀರೋ ಅಲ್ಲಿಯವರೆಗೂ ಅಂದರೆ until further orders ಎಂದು ಹೇಳಿ ಅವರಿಗೆ ಎಕ್ಸ್‌ಟೆನ್ಷನ್ ಕೊಡಲಾಗಿದೆ. This is not correct. ಆ ಹೆಲ್ತ್ ಇಲಾಖೆಯ ಅಧಿಕಾರಿಗಳಾದ ಚಂದ್ರಶೇಖರ್ ಅವರನ್ನೂ ಹೀಗೆ ಕೆಲಸದಿಂದ ತೆಗೆದಿದ್ದಾರೆ. ಇವರಿಗೆ ಸರಿಸಮಾನರಾದಂಥ ವಿದ್ಯಾವಂತರು ಈ ಬಾಬಿನಲ್ಲಿ ಮತ್ತೊಬ್ಬರಿಲ್ಲ. ಈ ದಿವಸ ಇಂಥ ನುರಿತ ವ್ಯಕ್ತಿಗಳನ್ನೆಲ್ಲ ಕೆಲಸದಿಂದ ತೆಗೆದುಹಾಕಿದನಂತರ ಆ ಸ್ಥಾನಗಳಿಗೆ ನಾಳೆ ಬರತಕ್ಕವರು ಯಾರು? ಇನ್ನೂ ಆ ಕಾಲೇಜ್ ವಿದ್ಯಾಭ್ಯಾಸ ಮುಗಿದು ನಾಲ್ಕು ದಿನಗಳು ಕಳೆದಿಲ್ಲದಂಥ ಹುಡುಗರನ್ನು ತಂದು ಅಲ್ಲಿಗೆ ಹಾಕುತ್ತಾರೆ. ಇಂಥವರು ಯಾರಾದರೂ ಆ ಸ್ಥಾನಗಳಿಗೆ ಬಂದು ಬಿಡುತ್ತಾರೆ. ಆದರೆ ಹೀಗೆಲ್ಲಾ ಮಾಡಬಾರದು. This is not correct. ಯಾವಾಗ ಇವರು ಒಂದು ಖಚಿತವಾದ ಪಾಲಿಸಿಯನ್ನು ಹಾಕಿಕೊಂಡು ಯಾರಿಗೂ ಎಕ್ಸ್‌ಟೆನ್ಷನ್ ಕೊಡುವುದಿಲ್ಲ ಎಂದು ಹೇಳುತ್ತಾರೋ ಆಗ ಆ ಪಾಲಿಸಿಯ ಪ್ರಕಾರ ಬ್ರಹ್ಮನ ಮಗನೇ ಬರಲಿ ಆತನಿಗೂ ಕೊಡಬಾರದು. ಹಾಗೆ ಮಾಡದೆ ಬೇಕಾದವರಿಗೆ ಎಕ್ಸ್‌ಟೆನ್ಷನ್ ಕೊಡುವುದು, ಬೇಡವಾದವರಿಗೆ ರೂಲ್ಸು ಹೇಳುವುದು ಇವೆಲ್ಲಾ ಸರಿಯಾದುದಲ್ಲ. ಈ ಒಂದು ಅಪ್ರಯೋಜಕ ಬಾಬಿನಂಥ ಬಾಬುಗಳು ನಮ್ಮ ಸರ್ಕಾರದಲ್ಲಿ ಇನ್ನೂ ಅನೇಕವಾಗಿವೆ. ಉದಾಹರಣೆಗೆ ಅಡಲ್ಟ್ ಲಿಟರೆಸಿ. ಈಗ ಈ ಪದವನ್ನು ಯಾರಾದರೂ ತಪ್ಪಾಗಿ ಉಚ್ಚರಿಸಬಹುದೆಂಬ ಭಾವನೆಯಿಂದಲೋ ಏನೋ ಇದಕ್ಕೆ ಅಡಲ್ಟ್ ಎಜ್ಯುಕೇಷನ್ ಶಾಖೆ ಎಂದು ಹೆಸರಿಟ್ಟುಕೊಂಡಿದ್ದಾರೆ. ಈ ಇಲಾಖೆಯ ಕಾರ್ಯ ಚಟುವಟಿಕೆಗಳು ಯಾವುವು ಎಂದರೆ ವ್ಯಾನಿನಲ್ಲಿ ಹೋಗಿ ಪ್ರಚಾರ ನಡೆಸುವುದು, ಕೋಲು ಹೊಯ್ಯುವುದು, ಲಂಬಾಣಿಗರನ್ನು ಹಿಡಿದು ತಂದು ಅವರನ್ನು ಕುಣಿಸುವುದು, ಮತ್ತು ಡ್ರಾಮ. ಇದೇನೇನು ನಮ್ಮ ಸಂಸ್ಕೃತಿ? ಇವೇ ಈ ಇಲಾಖೆಗಳು ಕೈಗೊಂಡು ನಡೆಸುತ್ತಿರುವ ಪ್ರಚಾರ ಕಾರ್ಯಗಳು? ಇದನ್ನೆಲ್ಲಾ ನೋಡಿದರೆ ಕೊನೆಗೆ ಈ ಬಗ್ಗೆ ನೇಮಕವಾಗಿರುವಂಥ ಕೆಲವು ಸಮಿತಿಗಳಿವೆಯಲ್ಲಾ ಆ ಸಮಿತಿಯ ಸದಸ್ಯರೂ ಕೂಡ ಕೊನೆಗೆ ಡ್ರಾಮ ಮಾಡಬೇಕಾಗುತ್ತದೇನೋ ಎಂದೆನಿಸುತ್ತದೆ. ಇದು ಯಾವ ಸಂಸ್ಕೃತಿಯೋ? ಇದನ್ನೆಲ್ಲಾ ಬೆಳಸಿ ದೇಶವನ್ನು ಇದರಿಂದಲೇ ಹೇಗೆ ಉದ್ಧಾರ ಮಾಡುತ್ತಾರೋ ಅದು ನನಗಂತೂ ಗೊತ್ತಾಗುವುದಿಲ್ಲ. ನನಗೆ ಇವುಗಳ ಬಗ್ಗೆ ಇನ್ನೇನೂ ಭಯವಿಲ್ಲ. ಆದರೆ ಕೊನೆಗೆ ಇವುಗಳೆಲ್ಲಾ ಹೋಗಿ ಎಲ್ಲಿ ಆ ಬೌರಿಂಗ್ ಇನ್ಸ್ಟಿಟ್ಯೂಟ್ ಮತ್ತು ನೈಟ್‌ಕ್ಲಬ್‌ಗಳಿವೆಯಲ್ಲಾ ಹಾಗೆ ಆಗಿಬಿಡುತ್ತವೆಯೋ ಅನ್ನತಕ್ಕಂಥ ಒಂದು ಭಯವುಂಟಾಗಿದೆ. ಆದರೆ ಇಂಥದೆಲ್ಲಾ ನಮ್ಮ ಹಿಂದೂ ಕಲ್ಚರ್‌ಗೆ ಸರಿಹೋಗುವುದಿಲ್ಲ. ಇದಕ್ಕೆ ಸರಿಯಾದಂಥ ಕಾರ್ಯಕ್ರಮಗಳನ್ನು ಈ ಇಲಾಖೆಗಳಿಲ್ಲದೇನೇ ಮಾಡು

(ಶ್ರೀ ಎ. ಭೀಮಪ್ಪನಾಯಕ್.)

ವುದಕ್ಕೆ ಸಾಧ್ಯವಿದೆ. ಈಗ ನಮ್ಮ ಹಿಂದೂ ಹೆಣ್ಣು ಹುಡುಗರಿಗೆ ಸ್ಕೂಲಿನಲ್ಲಿ ಸಂಗೀತವನ್ನೂ ಪಾಠವಾಗಿಟ್ಟಿದ್ದಾರೆ. ಹೈಸ್ಕೂಲಿನಲ್ಲಿ ಕೂಡ ಹೆಣ್ಣು ಮಕ್ಕಳಿಗೆ ಈ ಸಂಗೀತ ಪಾಠದ ಪ್ರವಚನವಿದೆ. ಆದರೆ ಅವರು ಹೈಸ್ಕೂಲಿನಿಂದ ಪಾಸಾಗಿ ಹೋದ ಮೇಲೆ ಜೂನಿಯರ್ ಇಂಟರ್‌ನಲ್ಲಿ ಈ ಸಂಗೀತ ಪಾಠವನ್ನು ತೆಗೆದುಕೊಳ್ಳಬೇಕೆಂದರೆ, ಅದನ್ನು ಯಾವ ಇಂಟರ್ ಕಾಲೇಜಿನಲ್ಲೂ ಇಡದೆ ಕೇವಲ ಬೆಂಗಳೂರು ಇಂಟರ್ ಕಾಲೇಜಿನಲ್ಲಿ ಮಾತ್ರ ಇಟ್ಟಿರುವುದರಿಂದ, ನೀವೆಲ್ಲರೂ ಬೆಂಗಳೂರಿಗೆ ಹೋಗಬೇಕು ಎಂದು ಹೇಳುತ್ತಿದ್ದಾರೆ. ಹೀಗಾದರೆ ಯಾರು ವಿದ್ಯಾಭ್ಯಾಸ ಮಾಡುತ್ತಾರೆ? ಇದೇನು ಒಂದು ಆನ್ಯುಯಲ್ ಕೋರ್ಸೋ ಅಥವಾ ಮಂತ್ಲಿ ಕೋರ್ಸೋ ಅಥವಾ ಇದು ಇನ್ನಾವ ಫಾಲೋ ಆನ್ ಕೋರ್ಸೋ ಅದು ನನಗಂತೂ ತಿಳಿಯದು. ಹೀಗಾದರೆ ಇದು ಕೊನೆಗೆ ಬಹಳ ತೊಂದರೆಗೆ ಬರುತ್ತದೆ. ಯಾವುದಾದರೂ ಒಂದು ಕೋರ್ಸನ್ನು ಇವರು ಒಂದು ಕಡೆ ಪ್ರಾರಂಭ ಮಾಡಿದರೆ ಅದು ಎಲ್ಲಾ ಶಾಲಾ ಕಾಲೇಜುಗಳಲ್ಲಿಯೂ ಇರುವಂತೆ ಮಾಡಬೇಕು ಎಂದು ಹೇಳುತ್ತೇನೆ. ಇನ್ನೂ ಇದೇ ರೀತಿ ಈ ಹೆಣ್ಣು ಮಕ್ಕಳಿಗೆ ಹೋಂಸೈನ್ಸ್ ಮತ್ತು ಡೊಮೆಸ್ಟಿಕ್ ಸೈನ್ಸ್ ಎಂಬ ಪಾಠಗಳಿವೆ. ಆದರೆ ಇವುಗಳಿಗೆ ಸರಿಯಾದ ಪಾಠಶಾಲೆಗಳಿಲ್ಲ, ಲ್ಯಾಬೊರೇಟರಿಗಳಿಲ್ಲ. ಆದರೆ ನಮ್ಮ ದೇಶದಲ್ಲಿ ಹುಟ್ಟತಕ್ಕ ಪ್ರತಿಯೊಬ್ಬ ಹೆಣ್ಣು ಮಗಳೂ ಅಡಿಗೆ ಮಾಡತಕ್ಕದ್ದನ್ನು ಸ್ವಾಭಾವಿಕವಾಗಿಯೇ ಕಲಿತುಕೊಂಡೇ ಇರುತ್ತಾಳೆ.

ಇವರಿಗೆ ನಾವು ಸ್ಕೂಲಿನಲ್ಲಿ ಆ ಅಡಿಗೆ ಮಾಡತಕ್ಕದ್ದನ್ನೇನೂ ಹೇಳಿಕೊಡಬೇಕಾದ್ದಿಲ್ಲ. ಅದು ಅನಾವಶ್ಯಕ. ಆ ಇಂಗ್ಲೆಂಡ್ ಅಂಥ ಸ್ಥಳಗಳಲ್ಲಿ ಆದರೆ ಅಲ್ಲೆಲ್ಲಾ ಮನೆಯಲ್ಲಿ ಅಡಿಗೆಮಾಡಲು ಬಟ್ಲರ್‌ಗಳನ್ನು ಇಟ್ಟುಕೊಂಡಿರುತ್ತಾರೆ. ಆದ್ದರಿಂದ ಅಲ್ಲಿ ಅವರಿಗೆ ಇದು ಆವಶ್ಯಕವಾಗಿದೆಯೇ ಹೊರತು ನಮಗೇನೂ ಅದರ ಆವಶ್ಯಕತೆ ಅಷ್ಟಾಗಿಲ್ಲ. ಹೀಗಿದ್ದಾಗ್ಯೂ ಕೂಡ ಈಗ ನಮ್ಮಲ್ಲಿಯೂ ಈ ಡೊಮೆಸ್ಟಿಕ್ ಸೈನ್ಸ್ ಅನ್ನುವುದು ಇರಬೇಕೆಂದರೆ ಇದಕ್ಕೆ ನಾನೇನು ಹೇಳಲಿ? ಇಂಥಾದ್ದೆಲ್ಲಾ ನಮ್ಮ ಪದ್ಧತಿಯೇ ಅಲ್ಲ. ಆದಕಾರಣ ಸರ್ಕಾರದವರು ಇದನ್ನೆಲ್ಲಾ ಸರಿಮಾಡಬೇಕು.

ಇನ್ನು ಶ್ರೀ ಕೆ. ಪಟ್ಟಾಭಿರಾಮನ್‌ಅವರು ಹೇಳಿದ ಹಾಗೆ—ಈ ವಿದ್ಯಾ ಇಲಾಖೆಯಲ್ಲಿ ಇರುವಂಥ ಪಠ್ಯ ಪುಸ್ತಕಗಳ ಕರಿಕ್ಯುಲಮನ್ನು ಸರ್ಕಾರದವರು ಸ್ವಲ್ಪ ನೋಡಬೇಕಾಗಿದೆ. ಇದನ್ನು ಅವಲೋಕಿಸಿ ನೋಡಿದರೆ ಇನ್ನೂ ದುಬಾರಿಯಾಗುತ್ತದೆ. ಒಂದಾಣೆ, ಒಂದೂವರಾಣೆ ಇದ್ದಂಥ ಪುಸ್ತಕಗಳಿಗೆಲ್ಲಾ ಈಗ ಸರ್ಕಾರಿ ಮುದ್ರಣಾಲಯದಲ್ಲಿ ಮುದ್ರಿಸಿ ಅವುಗಳನ್ನು ಹತ್ತಾಣೆ, ಹದಿನಾಲ್ಕಾಣೆಗಳಿಗೊಂದರಂತೆ ಮಾರಾಟ ಮಾಡಲಾಗುತ್ತಿದೆಯೆಂದು ಕೇಳುತ್ತಿದ್ದೇನೆ. ಸರ್ಕಾರಿ ಬುಕ್ ಡೀಲರುಗಳು ಹೀಗೆಲ್ಲಾ ಲಾಭ ಸಂಪಾದನೆ ಮಾಡುತ್ತಿದ್ದಾರಂತೆ. ಇದು ಯಾವ ಧರ್ಮ? ಇದಕ್ಕಾಗಿಯೇ ಏನು ನಾವು ಒತ್ತಾಯ ಮತ್ತು ಉಚಿತ ಶಿಕ್ಷಣ ಕೊಡಬೇಕೆಂದು ಹೇಳಿದ್ದು? Is it for this reason that we accepted the free and compulsory education? Is it not an indirect way of levying fees? Is it correct? ಹಾಗೆ ನಾವು ದೇಶದ ಮುಂದೆ ಸಾರಿರತಕ್ಕ ತತ್ವಕ್ಕೆ ಇದು ತೀರ ವಿರುದ್ಧವಾಗಿಲ್ಲವೇ? ಒಂದು ವರ್ಷದಲ್ಲಿ ಒಂದೆರಡು ರೂಪಾಯಿ ಕೊಟ್ಟು ಪುಸ್ತಕಗಳನ್ನು ಕೊಂಡಿದ್ದರೆ ಅವು ಆತನ ವಿದ್ಯಾಭ್ಯಾಸ ಮುಗಿಯುವವರೆಗೂ ಬರುತ್ತಿದ್ದವು. ಆದರೆ ಈಗ ಹಾಗಿಲ್ಲ. ನಾನು ಅನೇಕ ವಿಚಾರಗಳನ್ನು ಈ ಬಗ್ಗೆ ನಿರ್ದಿಷ್ಟವಾಗಿ ಕೇಳಿ ತಿಳಿದುಕೊಂಡಿದ್ದೇನೆ. ಸರ್ಕಾರಿ ಪ್ರೆಸ್ಸಿನಲ್ಲಿ ಅಚ್ಚಾಗಿರತಕ್ಕ ಟೆಕ್ಸ್ಟ್ ಬುಕ್ಕುಗಳು ಬುಕ್ ಸೆಲ್ಲರ್‌ಗಳ ಮನಾಪಲಿಯಾಗಿ ಅವರು ಸಿಕ್ಕಿದಂತೆ ದುಡ್ಡನ್ನು ದುಡಿಯುತ್ತಿದ್ದಾರೆ. ಹೀಗೇಕೆ ತಾವು ಪ್ರತಿ ವರ್ಷವೂ ಈ ಟೆಕ್ಸ್ಟ್ ಬುಕ್ಕುಗಳನ್ನು ಬದಲಾಯಿಸುತ್ತಿದ್ದೀರಿ? ಈ ಹಿಂದೆ ನಾವೆಲ್ಲರೂ ವಿದ್ಯಾಭ್ಯಾಸ ಮಾಡುತ್ತಿದ್ದಂಥ ಕಾಲದಲ್ಲಿ ಆ "ಗೋವು ಕರುವನು ಬಿಟ್ಟು ಬಂದು" ಅನ್ನತಕ್ಕಂಥ ಟೆಕ್ಸ್ಟ್ ಬುಕ್ಕನ್ನು 20 ವರ್ಷಗಳಾದಾಗ್ಯೂ ಬದಲಾಯಿಸುತ್ತಿರಲಿಲ್ಲ. ಈಗ ಈ ದಿವಸ ಇದ್ದದ್ದು ನಾಳೆಗೆ ಇಲ್ಲ—ನಾಳೆ ಇರುವುದು ನಾಡಿದ್ದು ಇರುವುದಿಲ್ಲ. ಆದರೆ ನಮ್ಮ ಕಾಲದಲ್ಲಿ ನಾವು ಓದಿ ಬಿಟ್ಟಂಥ ಪುಸ್ತಕಗಳು ನಮ್ಮ ಮಕ್ಕಳು ಮೊಮ್ಮಕ್ಕಳಿಗೆಲ್ಲಾ ಬರುತ್ತಿದ್ದವು. ಆಗ ಚ. ವಾಸುದೇವಯ್ಯ ಎಂಬವರ ಬಾಲ ಬೋಧೆಯನ್ನೇ ಬಹಳ ವರ್ಷದವರೆಗೂ ಇಟ್ಟಿದ್ದರು. ಆದರೆ ಈಗ ಯಾರೋ ಒಬ್ಬರು ಮೊದಲು ಅವರು "ಆಟ" ಎಂದು ಬರೆದಿರುವುದಕ್ಕೆ ಬದಲಾಗಿ "ಓಟ" ಎಂದು ಬರೆದಿದ್ದಾರೆ. ಇದು ತುಂಬ ರಿಫಾರಂ ಆಗಿದೆ ಎಂದು ಹೇಳಿ ಮೊದಲಿದ್ದುದನ್ನು ಬದಲಾಯಿಸಿ ಬಿಟ್ಟು ಈಗ ಬೇರೆ ಇಟ್ಟಿದ್ದಾರೆ. ಆದರೆ ಹೀಗೆಲ್ಲಾ ಈ ಪಠ್ಯ ಪುಸ್ತಕಗಳನ್ನು ಬದಲಾಯಿಸಬಾರದು. ಇದರಿಂದ ಬಹಳ ತೊಂದರೆಯಾಗುತ್ತದೆ. ಹೀಗೆಲ್ಲಾ ಬದಲಾವಣೆ ಮಾಡಬಾರದು.

ಇನ್ನು ಈ ಸೋಷಿಯಲ್ ಸರ್ವಿಸ್ ವಿಚಾರ ತೆಗೆದುಕೊಂಡರೆ ನಮ್ಮಲ್ಲಿ ಎಷ್ಟಿವೆ? ಸೇವಾದಳ, ಕಾಂಗ್ರೆಸ್ ಸೇವಾದಳ, ಸ್ಕೌಟ್ ಸೇವಾದಳ, ಶ್ರಮದಾನ ಶಿಬಿರ ಹೀಗೆ ವಿಶೇಷವಾಗಿವೆ. ಇವುಗಳಿಗೆಲ್ಲಾ ಸರ್ಕಾರದಿಂದ ಗ್ರಾಂಟನ್ನು ಬೇರೆ ಕೊಡಲಾಗುತ್ತಿದೆ. ಇವರು ಎಲ್ಲಿಗಾದರೂ ಕೆಲಸಕ್ಕೆ ಬಂದರೆ ಇವರಿಗೆ ತಲೆಗೆ ಹತ್ತು ರೂಪಾಯಿಗಳಂತೆ ಖರ್ಚಿಗೆ ಕೊಡಬೇಕಾಗುತ್ತದೆ. 100 ಜನರು ಬಂದರೆ 1,000 ರೂಪಾಯಿಗಳನ್ನು ಕೊಡಬೇಕು. ಹೀಗೆ ಒಂದು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರೆ ಇವರೆಲ್ಲರೂ ಸೇರಿ ಮಾಡಿರುವ ಬದುಕು ಎಷ್ಟೆಂಬುದನ್ನು ನೋಡಿದರೆ ಇವರೆಲ್ಲರೂ ಸೇರಿ ಒಂದು ಕಣದ ಅಗಲದಷ್ಟು ಜಾಗ ಕೆತ್ತಿರುತ್ತಾರೆ! ಆದರೆ ಯಾರೂ ಕೂಡ ಇಂಥ ಸಂಸ್ಥೆಗಳು ಇರಲೇಬೇಕೆಂದು ಹೇಳುವುದಿಲ್ಲ. ಕೇವಲ 100-200 ರೂಪಾಯಿಗಳಲ್ಲಿ ಆಗತಕ್ಕಂಥ ಕೆಲಸಕ್ಕೆ ಇಷ್ಟೊಂದು ಹಣ ಖರ್ಚು ಮಾಡಿದರೆ ಆ ಕೆಲಸ ಆದ ಹಾಗೆಯೇ ಆಯಿತು! ಆದರೆ ನಾನಾದರೂ ಈ ಸಂಸ್ಥೆಗಳು ಇರಬೇಕು ಎಂದು ಹೇಳತಕ್ಕವನೇ ಆಗಿದ್ದೇನೆ. ಆದರೆ ಈ ಸಂಸ್ಥೆಗಳೆಲ್ಲಾ ಹೇಗಿರಬೇಕೆಂದರೆ—ಅವುಗಳಲ್ಲಿ ಸರಿಯಾದ ಒಂದು ಶಿಸ್ತು, ಸಂಯಮ ಎಲ್ಲರಿಗೂ ದೊರಕುವಂತಿರಬೇಕು. ಹಾಗೆ ಇವುಗಳಲ್ಲಿ ಕೆಲಸ ಮಾಡತಕ್ಕವರು ಒಂದು ರಾಷ್ಟ್ರಭಾವನೆಯನ್ನಿಟ್ಟುಕೊಂಡು ದೇಶಾಭಿಮಾನವನ್ನಿಟ್ಟುಕೊಂಡು ಕೆಲಸ ಮಾಡಿದರೆ ದೇಶಾಭಿವೃದ್ಧಿ ಆಗುತ್ತದೆ. ಆದುದರಿಂದ ದೇಶಾಭಿವೃದ್ಧಿಗೆ ಇಂಥ ಸಂಸ್ಥೆಗಳು ಬೆಳೆಯಲೇಬೇಕಾಗಿದೆ.

ಇದು ಜನತೆಯ ಬೆಂಬಲದಿಂದ ಬೆಳೆಯಬೇಕೇ ಹೊರತು ಇದಕ್ಕೆಲ್ಲಾ ಸರ್ಕಾರ ಹಣ ಖರ್ಚು ಮಾಡುತ್ತಾ ಹೋದರೆ ಹೇಗೆ? ಹಾಗೆ ಮಾಡಿದರೆ ಶ್ರೀಮಾನ್ ಶ್ರೀನಿವಾಸಯ್ಯಂಗಾರ್ಯರು, ಇಮಾಮು ಸಾಹೇಬರು ಇವರ ಟೀಕೆಗೆ ಗುರಿಯಾಗಬೇಕಾಗುತ್ತದೆ. ಆದುದರಿಂದ ಇಂಥ ಸಂಸ್ಥೆಗಳಿಗೆ ಸಾರ್ವಜನಿಕರ

ಬೆಂಬಲ ಹಣ ಸಹಾಯ ದೊರೆಯುವಂತೆ ಮಾಡಲಿ. ಹೇಗಿದ್ದರೂ ಇತ್ತೀಚೆಗೆ ಬಿರುದು ಬಾವಲಿಗಳನ್ನು ಕೊಡುವ ಪದ್ಧತಿ ಮಾತ್ರ ಬಂದಿದೆ, ಇಂಥ ಸಹಾಯ ಕಾರ್ಯಗಳನ್ನು ಮಾಡಿದರೆ ಕೊಡುತ್ತಾರೆ.

ಹಳ್ಳಿಗಳಲ್ಲಿ ಸ್ಕೂಲುಗಳ ಕಟ್ಟಡಗಳಿಲ್ಲದೆ ಇವನ್ನು ಕಟ್ಟಲು ಅನೇಕರು ಎರಡು ಮೂರು ಸಾವಿರ ರೂಪಾಯಿಗಳನ್ನು ದಾನವಾಗಿ ಕೊಟ್ಟಿದ್ದಾರೆ. ಈ ಹಣ ಎಷ್ಟೋ ದಿವಸಗಳಿಂದ ಖಜಾನೆಯಲ್ಲಿ ಬಿದ್ದಿದೆ. ಈ ಹಣವನ್ನು ಬಡ್ಡಿಗಾದರೂ ಕೊಟ್ಟಿದ್ದರೆ ಎಷ್ಟೋ ಬಡ್ಡಿ ಬರುತ್ತಿತ್ತು. ಕಟ್ಟಡಗಳಿಗಾಗಿ ಹತ್ತು ಲಕ್ಷ ರೂಪಾಯಿ ಕೊಟ್ಟರೆ ಅದರಲ್ಲಿ ಎಷ್ಟು ಕಟ್ಟುತ್ತಾರೋ ಅದಕ್ಕಿಂತ ಹೆಚ್ಚು ಕಟ್ಟಬಹುದು. ಸ್ಕೂಲುಗಳಿಗೆ ಆರ್.ಸಿ.ಸಿ., ಮಂಗಳೂರು ಹಂಚಿನ ಕಟ್ಟಡಗಳೇನೂ ಬೇಕಾಗಿಲ್ಲ, ಹಳ್ಳಿಗಳಲ್ಲಿ ಹೆಂಚಿದೆ, ಗಳುಗಳಿವೆ ಅವುಗಳನ್ನೇ ಉಪಯೋಗಿಸಿ ಸಣ್ಣ ಸಣ್ಣ ಕಟ್ಟಡಗಳನ್ನು ಕಟ್ಟಲಿ. ಹೀಗೆ ಮಾಡಿದರೆ plinth area ಚದರ ಗಜಕ್ಕೆ ಹತ್ತು ರೂಪಾಯಿ ಆಗುವುದು ಐದೇ ರೂಪಾಯಿನಲ್ಲಿ ಆಗುತ್ತದೆ. ವಿದ್ಯಾ ಸೌಕರ್ಯ ಮಾಡಿದ್ದೇವೆ ಎಂದರೆ, ಇನ್ನೂ ಮಾಡುವುದಕ್ಕೆ ಸಾಧ್ಯವಿದೆ.

ಕೊನೆಯದಾಗಿ. ಪ್ರಾಂತ್ಯ ಪುನರ್ವಿಂಗಡಣೆಯ ವಿಚಾರದಲ್ಲಿ. . . .

Mr. SPEAKER.—You will have other occasions to speak about that.

Sri A. BHEEMAPPA NAIK.—I will finish it within two minutes. ಇಷ್ಟು ಮಾತ್ರ ಹೇಳುತ್ತೇನೆ. ನಮಗೇನೋ ಒಂದು ಸಂದರ್ಭ ಒದಗಿದೆ; ಇದನ್ನು ಬಹಳ ಆಲೋಚನೆ ಮಾಡಿ ಉಪಯೋಗಿಸಿಕೊಳ್ಳಬೇಕು. ಪ್ರಾಂತ್ಯ ಪುನರ್ವಿಂಗಡಣೆ ಬರಿಯ ಮೈಸೂರಿಗೆ ಮಾತ್ರವಲ್ಲ ಇಡೀ ಭಾರತವನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡುತ್ತಿದ್ದಾರೆ. ಎಂದಮೇಲೆ ಆಗ ಮೈಸೂರಿನವರು ಏನು ಅಭಿಪ್ರಾಯ ಪಟ್ಟರು ಎನ್ನುವುದನ್ನು ಜನತೆ ನೋಡಬೇಕಾಗುತ್ತದೆ. ಆದುದರಿಂದ ಈ ಪ್ರಶ್ನೆಯನ್ನು ಬಹಳ ವಿಶಾಲ ದೃಷ್ಟಿಯಿಂದ ನೋಡಬೇಕು. ಶೇಷಾದ್ರಿ ಸಮಿತಿ ಹೀಗೆ ಹೇಳಿದ್ದಾರೆಂದು ಹೇಳುವವರನ್ನು ಒಂದು ಪ್ರಶ್ನೆ ಕೇಳುತ್ತೇನೆ. 25 ಕೋಟಿ ರೂಪಾಯಿ ಆದಾಯವಿರುವ ದೇಶದಲ್ಲಿ ಒಂದು ಕೋಟಿ ಜನಸಂಖ್ಯೆಗೆ ಐದು ಕೋಟಿ ರೂಪಾಯಿ ಖೋತಾ ಇದೆ. ಇದೇ ಒಂದು ಕೋಟಿ ಜನರಿರುವ ಪ್ರಾಂತ್ಯದಲ್ಲಿ ಒಂದು ಕೋಟಿ ಖೋತಾ ಇದೆ. ಇದರಲ್ಲಿ ಯಾವುದು surplus ಆಯಿತು? ಷಾತೆತ್ತಿದರೆ ಅವರು ಬರೆದಿದ್ದಾರೆ, ಒಂದು ಕೋಟಿ ಖೋತಾ ಬೀಳುತ್ತದೆ ಎಂದು ಹೇಳುತ್ತಾರೆ. ಯಾವಾಗಲೂ deficit ಎನ್ನುವುದೇ ನಮ್ಮ ಪದವಾಗಿದೆ. ಯಾವೊತ್ತು ನಮ್ಮ ಹಣ ಕಾಸಿನ ಮಂತ್ರಿಗಳು ನಮ್ಮ ಬಡ್ಜೆಟ್ ಸರ್ಪ್ಲಸ್ ಎಂದು ಹೇಳಿದ್ದಾರೆ? ಶೇಷಾದ್ರಿ ಸಮಿತಿ ಒಂದು ಕೋಟಿ deficit ಆಗುತ್ತದೆ ಎಂದು ಹೇಳಿದ್ದಾರೆಂದರೆ ಅದು ಬರಿಯವಾದಕ್ಕಾಗಿಯೇ ಹೊರತು ನಿಜವಲ್ಲ, ದಕ್ಷಿಣ ಉತ್ತರ ಕನ್ನಡ ಒಂದೇ ಕಡೆಯಿಂದ ಎಂಟು major ports ಸಿಕ್ಕುವುದಾದರೆ ಎಷ್ಟು ಅನುಕೂಲವೆಂಬುದನ್ನು ನೋಡಬೇಕು. ಹೈದರಾಲಿ ಸರ್ವಸ್ವವನ್ನೂ ತ್ಯಾಗಮಾಡಿ ಈ ಎಂಟು ಪೋರ್ಟ್‌ಗಳನ್ನು ವಶಪಡಿಸಿಕೊಂಡು ದಕ್ಷಿಣ ಕನ್ನಡ ಉತ್ತರ ಕನ್ನಡ ಪ್ರದೇಶಗಳಿಗಾಗಿ ಎಷ್ಟೋ ಹೋರಾಡಿ ಗೆದ್ದ. ಆಮೇಲೆ ಮೈಸೂರಿನ ಕೈಕಾಲು ಕತ್ತರಿಸುವುದಕ್ಕಾಗಿ ಉತ್ತರ ಕನ್ನಡವನ್ನು ಬೊಂಬಾಯಿಗೂ ದಕ್ಷಿಣ ಕನ್ನಡವನ್ನು ಮದರಾಸಿಗೂ ಹರಿದು ಹಂಚಿದರು. ಹೀಗಾಗಿ ಮೈಸೂರ ದೇಶಕ್ಕೆ ಧಕ್ಕೆ ಬಂತು. ಈಗ ತಾನೇ ತಾನಾಗಿ ಬರುತ್ತಿದೆ. ಹೈದರಾಲಿ ರಕ್ತವನ್ನು ಚೆಲ್ಲಿ ಗೆದ್ದದ್ದು ನಮಗೆ ತಾನೇ ತಾನಾಗಿ ಬರುವಾಗ ಅದನ್ನು ಕೈಬಿಡುವುದಾದರೆ ಅದಕ್ಕಿಂತಲೂ ತಿಳಿಗೇಡಿತನ ಇನ್ನಾವುದೂ ಇಲ್ಲ. ಆದಕಾರಣ ಹಾಗೆ ಮಾಡಬಾರದು, ಎಂದು ಹೇಳುತ್ತೇನೆ.

Mr. SPEAKER.—The House will now rise and meet again at 3-50 of the Clock.

The House adjourned for Lunch at Twenty minutes past Three of the Clock and reassembled at Fifty minutes past Three of the Clock.

[MR. SPEAKER in the Chair.]

Mr. SPEAKER.—I wish to bring to the notice of the House that many Hon'ble Members came and represented to me that they wanted to speak to-day. I would therefore strictly limit the time to 15 minutes for each Member.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ, ನಮ್ಮ ಮುಂದೆ ಮಂಡಿಸಿರತಕ್ಕ ಹಣಕಾಸಿನ ತಃಖ್ತೆಯನ್ನು ಸ್ವಾಗತಿಸುತ್ತಾ ಕೆಲವು ಮಾತುಗಳನ್ನಾಡಲು ಅಪೇಕ್ಷಿಸುತ್ತೇನೆ. ಈಗಾಗಲೇ ಶ್ರೀಮಾನ್ ಭೀಮಪ್ಪನಾಯಕರು ಸರ್ಕಾರದ ದೃಷ್ಟಿಯಲ್ಲಿ ಒಂದು ಸುಖೀ ರಾಜ್ಯವನ್ನು ಸ್ಥಾಪನೆ ಮಾಡಬೇಕಾಗಿರುವಾಗ ಖೋತಾ ಬಡ್ಜೆಟ್ ಹೇಗೆ ಅನಿವಾರ್ಯ ಅವರ ಧ್ಯೇಯ ಸಾಧನೆಗೆ ಎಂಬುದನ್ನು ಸಾಕಷ್ಟು ಕಾರಣಗಳನ್ನು ಕೊಟ್ಟು ಸ್ಥಿರಪಡಿಸಿದ್ದಾರೆ. ಅವರ ಮಾತಿಗೆ ನಾನು ಬೆಂಬಲಕೊಡುತ್ತಾ ಒಂದು ವಿಷಯವನ್ನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ಸಾಲಿನ ಖರ್ಚು ಬಾಬಿನಲ್ಲಿ Nation-building activitiesಗಾಗಿ ಹೋದವರ್ಷಕ್ಕಿಂತ ಸುಮಾರು 240 ಲಕ್ಷ ರೂಪಾಯಿಗಳನ್ನು ಈ ವರ್ಷದ ಬಡ್ಜೆಟ್ಟಿನಲ್ಲಿ ಹೆಚ್ಚು ಖರ್ಚು ಮಾಡುವುದಕ್ಕೆ ಅವಕಾಶ ಮಾಡಿದ್ದಾರೆ. ಇದುವರೆಗೆ ಮಾತನಾಡಿದ ಸದಸ್ಯರಲ್ಲಿ ಖೋತಾ ಬಡ್ಜೆಟ್ ಎಂದು ಯಾರು ಟೀಕೆ ಮಾಡಿದರೋ ಅವರು, 'ಈ ಖೋತಾ ಸರಿತೂಗಿಸಬೇಕಾದರೆ' ಹೇಗೆ ಮಾಡುತ್ತೀರಿ, ಸಾಲವನ್ನೆತ್ತುವ ಹಣದಿಂದ ಮಾಡುವುದು ಸರಿಯೆ, ತೆರಿಗೆ ಹಾಕುವುದು ಸರಿಯೆ? ಎಂದು ಕೇಳಿದರು. ಇನ್ನೊಂದು ವಿಧಾನದಲ್ಲಿ ಮಾಡಬಹುದು. ಮುಂದಿನ ಸಾಲಿಗೆ ರಾಷ್ಟ್ರಾಭಿವೃದ್ಧಿ ಕಾರ್ಯಗಳಿಗೆ ಖರ್ಚುಮಾಡದೆ ಆ ಖರ್ಚನ್ನು ಕಡಮೆ ಮಾಡಿದರೆ ಸರಿತೂಗಿಸಬಹುದು. ಇದನ್ನು ಮಾತ್ರ ಒಪ್ಪದೆ ಖೋತಾ ಇರಬಾರದೆಂದು ಹೇಳಿದರೆ ಅದೆಷ್ಟು ಸಮಂಜಸವಾಗಿರುತ್ತದೆಂಬುದನ್ನು ಸದಸ್ಯರೇ ಯೋಚನೆ ಮಾಡಬೇಕು. ರಾಷ್ಟ್ರಾಭಿವೃದ್ಧಿ ಕೆಲಸಗಳಿಗೆ ಹೆಚ್ಚು ಖರ್ಚು ಮಾಡಬೇಕೆಂದು ಎಲ್ಲರೂ ಹೇಳುತ್ತಾರೆ. ದೇಶದಲ್ಲಿ ಯಾವ ಮೂಲೆಗೆ ಹೋದರೂ ಕೆರೆಗಳಾಗಬೇಕು, ರಸ್ತೆಗಳ ನಿರ್ಮಾಣವಾಗಬೇಕು, ಸ್ಕೂಲುಗಳು ಬೇಕು, ಆಸ್ಪತ್ರೆಗಳು ಬೇಕು ಎಂದು

(ಶ್ರೀ ಡಿ. ದೇವರಾಜ್ ಅರಸ್.)

ಜನರು ಕೇಳುತ್ತಾ ಏಕ ರೀತಿಯಲ್ಲಿ ಎಲ್ಲರೂ ಪ್ರಗತಿ ಹೊಂದಬೇಕೆಂದು ಹೇಳುವ ಕಾಲದಲ್ಲಿ ಇದಕ್ಕೆಲ್ಲಾ ಹೆಚ್ಚು ಹಣವನ್ನೊದಗಿಸುವುದು ಸರ್ಕಾರದ ಕರ್ತವ್ಯ. ಆದುದರಿಂದ ಇದಕ್ಕೆ ನಾವು ಗಾಬರಿ ಪಡಬೇಕಾಗಿಲ್ಲ. ಮುಖ್ಯ ಮಂತ್ರಿಗಳು ತಮ್ಮ ಭಾಷಣದ ಮೊದಲಿನಲ್ಲಿ ವ್ಯವಸಾಯದಿಂದ ಉತ್ಪತ್ತಿಯಾಗತಕ್ಕ ಪದಾರ್ಥಗಳ ಬೆಲೆಗಳು ಇಳಿತಾಯವಾಗುತ್ತಿವೆ, ಇದನ್ನು ತಡೆಗಟ್ಟಿ ಸಮಸ್ಥಿತಿಯಲ್ಲಿಡುವುದಕ್ಕೆ ಇಂಡಿಯಾ ಸರ್ಕಾರದವರು ಕೆಲವು ಯೋಜನೆಗಳನ್ನು ಹಾಕಿಕೊಂಡಿದ್ದಾರೆಂದು ಅಪ್ಪಣೆ ಕೊಡಿಸಿದ್ದಾರೆ. ಆದರೆ ಇನ್ನೊಂದು ಮಾತನ್ನು ಹೇಳಿದ್ದಾರೆ.

"I find that the scheme applies only to specified areas and grains. . . ." ಎಂದು ಹೇಳಿ, "It is therefore essential that ragi and rice should be included in this scheme."

ಎಂದು ಸಲಹೆ ಮಾಡಿದ್ದಾರೆ. ಹಣಕಾಸಿನ ಸಚಿವರಾಡತಕ್ಕ ಈ ಮಾತನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ ಮತ್ತು ಈ ಸಭೆಯವರು ಕೂಡ ಒಪ್ಪುತ್ತಾರೆಂದು ಭಾವಿಸುತ್ತೇನೆ. ಅವರ ಮಾತನ್ನು ಸಮರ್ಥಿಸುವುದಕ್ಕೆ ಕೆಲವು ಮುಖ್ಯ ಅಂಕಿ ಅಂಶಗಳನ್ನು ಸಭೆಯ ಮುಂದಿಡಲಪೇಕ್ಷಿಸುತ್ತೇನೆ. ಐದು ವರ್ಷದ ಯೋಜನೆಯಲ್ಲಿ ಬಹು ಭಾಗವನ್ನು ವ್ಯವಸಾಯಾಭಿವೃದ್ಧಿಗಾಗಿ, ನಮ್ಮ ದೇಶ ಸ್ವಪರಿಪೂರ್ಣತೆಯನ್ನು ಹೊಂದಲೆಂದು, ಖರ್ಚುಮಾಡಿದ್ದಾರೆ. ಈ ಸಂದರ್ಭದಲ್ಲಿ ಹಣಕಾಸಿನ ಸಚಿವರು ಇನ್ನೊಂದು ಮಾತು ಹೇಳಿದ್ದಾರೆ.

"With several measures that have been adopted under the Grow More Food Scheme, agriculture in the country is at least in the upgrade."

ಎಂದು ಅಪ್ಪಣೆ ಕೊಡಿಸಿದ್ದಾರೆ. Upgrade ಆಗಿದೆ ಎಂಬ ವಿಷಯದಲ್ಲಿ ನನಗೆ ಸ್ವಲ್ಪ ಸಂದೇಹ. ನಿಜವಾಗಿ ಅಭಿವೃದ್ಧಿ ಹೊಂದಿದೆಯೋ ಇಲ್ಲವೋ ಎನ್ನುವುದನ್ನು ನಾನು ಸ್ವಲ್ಪ ಶಂಕೆಯಿಂದ ನೋಡುವವನಾಗಿದ್ದೇನೆ. Census of India 1951 ಮೊದಲನೆಯ ಭಾಗದ 236ನೆಯ ಪುಟದಲ್ಲಿ 'progress of cultivation since 1935' ಎಂದು ಕೆಲವು ಅಂಶಗಳನ್ನು ಕೊಟ್ಟಿದ್ದಾರೆ. ಇದನ್ನು ನೋಡುವುದಾದರೆ, ನಮ್ಮ ದೇಶದಲ್ಲಿ 1921ನೆಯ ಇಸವಿಯಲ್ಲಿ,

		Acre
Average net area sown is	...	62,91,599
In 1931 ,,	...	65,10,712
In 1941 ,,	...	67,28,634
In 1951 ,,	...	63,39,397

ಇದರಲ್ಲಿ average area irrigated more than once.

		ಎಕರೆ
1921ನೆಯ ಇಸವಿಯಲ್ಲಿ	...	9,85,068
1931 ,,	...	10,95,367
1941 ,,	...	11,39,237
1951 ,,	...	11,36,233

ಅಂದರೆ, 1941ನೆಯ ಸಾಲಿನಲ್ಲಿ ನೀರಾವರಿಯಲ್ಲಿದ್ದ ಜಮೀನಿನ ವಿಸ್ತೀರ್ಣ 1951ನೆಯ ಸಾಲಿಗೆ ಇನ್ನೂ ಕಡಮೆಯಾಗುತ್ತಾ ಬಂತು.

4 P. M.

ಹೀಗೆ ಅಂಕಿ ಅಂಶಗಳನ್ನು ನಾವು ನೋಡಿದಾಗ cultivated area ಒಟ್ಟಿನಲ್ಲಿ ಕಡಿಮೆ ಮತ್ತು ನೀರಾವರಿ ಕಾಮಗಾರಿಗಳಿಂದ ವ್ಯವಸಾಯ ಮಾಡತಕ್ಕಂಥ ವಿಸ್ತೀರ್ಣ ಕೂಡ 1941ನೇ ಇಸವಿಗಿಂತಲೂ ಕಡಮೆಯಾಗಿದೆ. ಈಗ ವ್ಯವಸಾಯಾಭಿವೃದ್ಧಿ ಹೊಂದುತ್ತಿದೆ ಎಂದು ಮಾತಿನಲ್ಲಿ ಹೇಳಿದರೆ, ಇದಕ್ಕೂ ಅದಕ್ಕೂ ಸಮಂಜಸವಾಗುತ್ತಿಲ್ಲವೆಂದು ಹೇಳುವುದೇ ನನ್ನ ವಾದ. ಹಿಂದೆ Tenancy Amendment ಬಿಲ್ಲಿನ ಮೇಲೆ ಮಾತನಾಡುತ್ತ ಮಾನ್ಯ ಸ್ನೇಹಿತರಾದ ಶ್ರೀಮಾನ್ ಚನ್ನಬಸಪ್ಪನವರು ಸುಮಾರು 26-27 ಲಕ್ಷ ಎಕರೆ ಹಿಡುವಳಿ ಬಂಜರು ಆಗಿ ನಮ್ಮ ಸಂಸ್ಥಾನದಲ್ಲಿ ಉಳಿದಿದೆಯೆಂದು ಅಂಕಿ ಅಂಶಗಳನ್ನು ಕೊಟ್ಟರು. ಇಲ್ಲಿ ವ್ಯವಸಾಯಗಾರರು ಎಲ್ಲರೂ ಉದ್ದೇಶ ಪೂರ್ವಕವಾಗಿ ಬಂಜರು ಬಿಟ್ಟುಕೊಂಡಿದ್ದಾರೆಯೋ ಅಥವಾ ವ್ಯವಸಾಯ ಮಾಡುವುದಕ್ಕೆ ಶಕ್ತಿ ಸಾಲದೆ ವರ್ಷೇ ವರ್ಷೇ ಈ ರೀತಿ ಜಮೀನು ಪಾಳುಬೀಳುತ್ತಿದೆಯೋ ಎಂಬುದು ಸ್ವಲ್ಪ ಯೋಚನೆ ಮಾಡತಕ್ಕಂಥ ವಿಚಾರ. ಆದರೆ ಸರ್ಕಾರದವರು ಈಗ ಆಹಾರದ ವಿಷಯದಲ್ಲಿ ಸ್ವಪರಿಪೂರ್ಣತೆಯನ್ನು ಹೊಂದಿದ್ದೇವೆ ಮತ್ತು ನಾವು ಇನ್ನೂ ಹೊರಗಡೆಗೂ ಕೂಡ ಆಹಾರವನ್ನು ಕಳುಹಿಸಬಹುದು ಎಂದು ಹೇಳುತ್ತಿದ್ದಾರೆ. ಈ ರೀತಿಯಾಗಿಯೂ ಬೆಳೆ ಮಾಡತಕ್ಕಂಥ ವಿಸ್ತೀರ್ಣ ಕಡಿಮೆಯಾದರೂ ಕೂಡ ಆಹಾರ ಧಾನ್ಯ ಹೆಚ್ಚು ಇರಬೇಕಾದರೆ ಬರೀ ಐದು ವರ್ಷಗಳ ಯೋಜನೆಯಲ್ಲಿ ಮಾಡಿರತಕ್ಕಂಥ ಕೆಲಸ ಕಾರ್ಯಗಳಿಂದಲೇ ಹೆಚ್ಚಾಯಿತೇ ಅಥವಾ intensive cultivation ಅಂದರೆ ಅಧಿಕ ಪ್ರಮಾಣದಲ್ಲಿ ಗೊಬ್ಬರ ಹಾಕಿ ವ್ಯವಸಾಯ ಮಾಡಿದ್ದರಿಂದ ಮಾತ್ರವೇ ನಮ್ಮ ಆಹಾರ ಧಾನ್ಯಗಳು ಹೆಚ್ಚಾಯಿತೇ ಎಂಬುದನ್ನು ಕೂಡ ನಾವು ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಐದು ವರ್ಷಗಳ ಯೋಜನೆಯ ಜೊತೆಗೆ ಎರಡು ವರ್ಷಗಳಿಂದ ಈಚೆಗೆ ಮಳೆಗಾಲ ಬಹಳ ಚೆನ್ನಾಗಿ ಆಗಿದೆ. ಬಹುಶಃ ಪ್ರಕೃತಿಯ ದಯವೂ ಕೂಡ ನಮ್ಮ ವ್ಯವಸಾಯದ ಉತ್ಪತ್ತಿಗೆ ಸಹಾಯಕವಾಗಿದೆ. ಆದ್ದರಿಂದ ನಮ್ಮ ದೇಶದಲ್ಲಿ ಆಹಾರ ಬಹಳವಾಗಿ ಹೆಚ್ಚಾಗಿದೆಯೆಂದು ಭಾವಿಸಬಹುದು. ಆದರೆ ಅಂಕಿ ಅಂಶಗಳನ್ನು ನೋಡಿದರೆ ವ್ಯವಸಾಯಗಾರರ ಸ್ಥಿತಿ ಅಷ್ಟೇನೂ ಉತ್ತಮವಾಗಿಲ್ಲ. ಉತ್ತಮವಾಗುವ ಚಿಹ್ನೆ ಇದ್ದಿದ್ದರೆ ಜಮೀನನ್ನು ಹೀಗೆ ಪಾಳುಬಿಡುತ್ತಿರಲಿಲ್ಲ. ಅದಕ್ಕೆ ಬದಲಾಗಿ ಹೆಚ್ಚು ಹೆಚ್ಚು ಲಾಭ ಪಡೆಯುವುದಕ್ಕೆ ಪ್ರಯತ್ನಪಡುತ್ತಿದ್ದರು. ಈಗ ಹತ್ತು ವರ್ಷಗಳ census ಪ್ರಕಾರ ವ್ಯವಸಾಯದ ಒಟ್ಟು ವಿಸ್ತೀರ್ಣ ಕಡಮೆ ಆಗುತ್ತಾ ಇರುವುದನ್ನು ನೋಡಿದರೆ, ಅದರಿಂದ ನಮಗೇನು ತೋರುತ್ತದೆ ಎಂದರೆ ವ್ಯವಸಾಯ upgrade ಆಗುತ್ತಾ ಇಲ್ಲ, ಸರ್ಕಾರದವರು ಇನ್ನೂ ಹೆಚ್ಚಾಗಿ ರಕ್ಷಣೆ ಕೊಡಬೇಕಾದುದು ಇದೆ ಎಂಬುದು ನಮಗೆ ಚೆನ್ನಾಗಿ ವ್ಯಕ್ತವಾಗುತ್ತದೆ. ಆಹಾರ ಧಾನ್ಯಗಳ ಬೆಲೆ ಇಳಿಯುತ್ತಾ ಇರುವುದನ್ನು ನಾವು ಒಂದು ವೇಳೆ stabilise ಮಾಡುವುದಾದರೆ, standardise ಮಾಡುವುದಾದರೆ, ಕೊಳ್ಳುವವರಿಗೆ ಬಹಳ ಕಷ್ಟವಾಗಿರುತ್ತದೆ ಎಂದು ಒಂದು ವಾದವಿದೆ. ಇನ್ನೊಂದು ವಾದ ನಮ್ಮ ದೇಶದಲ್ಲಿ ಜಮೀನ್ದಾರರಿಗೆ ಬಹಳ ಅನುಕೂಲವಾಗಿ ಬರುತ್ತದೆ, ಆದುದರಿಂದ ಆಹಾರ ಧಾನ್ಯಗಳ ಬೆಲೆಯನ್ನು

stabilise ಮಾಡಕೂಡದೆಂಬುದು. ಆದರೆ ಜಮೀನ್‌ದಾರರು ಯಾರು ಎಂಬುದನ್ನು ಕೂಡ ಇಲ್ಲಿ ಗಮನಿಸಬೇಕಾಗಿದೆ. ನಮ್ಮ ದೇಶದಲ್ಲಿ 50 ಎಕರೆಗೆ ಒಳಪಟ್ಟು ಹಿಡುವಳಿದಾರರು ಶೇಕಡ 85 ರಷ್ಟು ಇದ್ದಾರೆ. ಅಂದರೆ ಸುಮಾರು 55 ಲಕ್ಷ ಪ್ರಜೆಗಳು 50 ಎಕರೆ ಜಮೀನಿಗೆ ಒಳಪಟ್ಟ ಹಿಡುವಳಿ ಜಮೀನು ಇಟ್ಟುಕೊಂಡಿರುವವರು ಬರುತ್ತಾರೆ. ಇವರೆಲ್ಲರನ್ನೂ ಜಮೀನ್‌ದಾರರೆಂದು ಹೇಳುವುದಾದರೆ, ನಾನು ಅದಕ್ಕೆ ಏನೂ ಹೇಳುವುದಿಲ್ಲ ; ಒಂದುವೇಳೆ ಅವರು Middle Class ಅಥವಾ Lower Middle Class categoryಗೆ ಸೇರುವವರೆಂದು ಒಪ್ಪುವುದಾದರೆ ಅವರು ಯಾವ ಆಹಾರ ಧಾನ್ಯವನ್ನು ಬೆಳೆಯುತ್ತಾರೋ ಅದರ ಮಾರಾಟವನ್ನು stabilise ಮಾಡಬೇಕು. ಅವರಿಗೆ ಲಾಭವಾಗುವ ರೀತಿಯಲ್ಲಿ, ಬೆಲೆ ಒದಗಿಸುವುದನ್ನು ನಾವು ಯೋಚನೆ ಮಾಡಬೇಕು. ಈ ದೃಷ್ಟಿಯಿಂದ ಮುಖ್ಯ ಮಂತ್ರಿಗಳು ಹೇಳಿರುವ ಪ್ರಕಾರವಾಗಿ ಮತ್ತು ಭತ್ತಕ್ಕೂ ಕೂಡ ಒಂದು stability of price ಬರಬೇಕು. ಎಂದು ನಾನು ಹೇಳುತ್ತೇನೆ. ಅದನ್ನು ಅನುಮೋದಿಸಬೇಕು ಮತ್ತು ಭಾರತ ಸರ್ಕಾರದವರು ಇದಕ್ಕೆ ಕೂಡಲೇ ಗಮನವಿಟ್ಟು ಮೈಸೂರು ದೇಶದಲ್ಲಿ ಆಹಾರ ಧಾನ್ಯಗಳ ಬೆಲೆಯು ಇಳಿಯದ ರೀತಿ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ.

ಆ ಮೇಲೆ ಐದು ವರ್ಷದ ಯೋಜನೆ ಮತ್ತು ಎರಡನೆಯ ಐದು ವರ್ಷದ ಯೋಜನೆ ಇವೆರಡಕ್ಕೂ ಕೂಡ ದುಡ್ಡು ಒದಗಿಸುವ ವಿಚಾರ ಪ್ರಸ್ತಾಪ ಮಾಡುತ್ತೇನೆ. ಮೊದಲನೆ ಪಾಂಚವಾರ್ಷಿಕ ಯೋಜನೆ 1956 ರಲ್ಲಿ ಸಂಪೂರ್ಣವಾಗುತ್ತದೆ. ಅದು ಸಂಪೂರ್ಣವಾಗಬೇಕಾದರೆ ಇನ್ನೂ 14 ಕೋಟಿ ರೂಪಾಯಿಗಳಮೇಲೆ ದುಡ್ಡು ಬೇಕಾಗಿದೆ. ಇದರ ಜೊತೆಗೆ ಈ ಎರಡನೆಯ ಪಾಂಚವಾರ್ಷಿಕ ಯೋಜನೆಗೆ ಸುಮಾರು 100 ಕೋಟಿ ರೂಪಾಯಿಗಳು ಬೇಕಾಗಿವೆ. ಈ ದುಡ್ಡನ್ನು ಯಾವ ರೀತಿ ಒದಗಿಸಬೇಕೆಂಬುದಕ್ಕೆ ಈ ಸಭೆಯ ಮಾನ್ಯ ಸದಸ್ಯರು ಸಲಹೆ ಕೊಡಬೇಕೆಂದು ಹೇಳಿ ನಮ್ಮ ಮಾನ್ಯ ಹಣಕಾಸಿನ ಸಚಿವರು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ಈ ಎರಡನೇ ಪಾಂಚವಾರ್ಷಿಕ ಯೋಜನೆಗೆ 100 ಕೋಟಿ ರೂಪಾಯಿಗಳನ್ನು ಅಂದಾಜು ಮಾಡಿದ್ದಾರೆ. ಅಂದರೆ ಪ್ರತಿವರ್ಷವೂ 20 ಕೋಟಿ ರೂಪಾಯಿಗಳಷ್ಟು ನಾವು ಖರ್ಚು ಮಾಡಬೇಕಾಗುತ್ತದೆ. ಈ ಎರಡನೆ ಪಾಂಚವಾರ್ಷಿಕ ಯೋಜನೆಗೆ ದುಡ್ಡನ್ನು ಒದಗಿಸುವುದಕ್ಕೆ ನಮ್ಮ ಸಲಹೆಗಳನ್ನು ಕೇಳುತ್ತಿದ್ದಾರೆ.

ಸ್ವಾಮಿ, ನಾವು ದುಡ್ಡನ್ನು ಒದಗಿಸುವುದಕ್ಕೆ ಆಗದೆ ಹೋದರೆ 100 ಕೋಟಿ ರೂಪಾಯಿ ಖರ್ಚುಮಾಡಬೇಕು ಎಂದು ಹಾಕಿಕೊಂಡಿದ್ದಂಥ Planನ್ನು ಕಡಮೆಮಾಡಿಕೊಳ್ಳಬೇಕು. ಅದು ಒಂದು ವಿಧಾನ, 100 ಕೋಟಿ ಬಿಟ್ಟು 50 ಅಥವಾ 25 ಕೋಟಿ ಅಂದರೆ ಎಷ್ಟು ದುಡ್ಡು ಒದಗುತ್ತದೋ ಅಷ್ಟನ್ನು ಒದಗಿಸಿ ಆ ರೀತಿ Planನ್ನು ಬದಲಾವಣೆಬೇಕು. ಇನ್ನೊಂದು ವಿಧಾನ ಏನೆಂದರೆ, ಯಾವ ರೂಪದಲ್ಲಾದರೂ 100 ಕೋಟಿ ರೂಪಾಯಿಗಳನ್ನು ಒದಗಿಸುವುದಕ್ಕೆ ಪ್ರಯತ್ನಮಾಡಬೇಕು. ನಾವು ಈ ಹಣವನ್ನು ಒದಗಿಸಬೇಕಾದರೆ ತೆರಿಗೆಗಳ ರೂಪದಲ್ಲಿ ಒದಗಿಸಬೇಕು ; ಜೊತೆಗೆ ಸಾಲ ತೆಗೆದುಕೊಳ್ಳಬೇಕು ; ನಮಗೆ ಈಗ ಬರತಕ್ಕಂಥ ಆದಾಯ, Normal revenue ಏನು ಸರ್ಕಾರಕ್ಕೆ ಬರುತ್ತದೋ ಅದನ್ನು ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡಬೇಕು. ಮತ್ತು ವ್ಯಥಾ ಏನಾದರೂ ಖರ್ಚು ಆಗುತ್ತಿದ್ದರೆ ಅದನ್ನು ಕಡಮೆ ಮಾಡಬೇಕು, ಹೀಗೆ ಕೆಲವು ವಿಧಾನಗಳು ನಮ್ಮ ಮುಂದೆ ಇವೆ. ತೆರಿಗೆಗಳನ್ನು ಹೆಚ್ಚಿಸಬೇಕು ಎಂದು ಹೇಳುವಾಗ ನಮಗೆ ಅನೇಕರಿಗೆ ಈ ತೆರಿಗೆಗಳ ಭಾರ ಈಗಾಗಲೇ ಹೊರುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಆದುದರಿಂದ ನಾವು ತೆರಿಗೆಗಳನ್ನು ಹೊರುವುದಕ್ಕೆ ಸಾಧ್ಯವಿಲ್ಲವೆಂಬ ಒಂದು ವಾದವಿದೆ. Social service ಬೇಕು, ನಮ್ಮ ಅಭಿವೃದ್ಧಿ ಕಾರ್ಯಗಳು ಮುಂದುವರಿಯಬೇಕು, ಎರಡನೆ ಪಾಂಚವಾರ್ಷಿಕ ಯೋಜನೆಯಲ್ಲಿ ಅಗತ್ಯವಾಗಿ ಆಗಬೇಕಾದಂಥ ಸೌಕರ್ಯಗಳು ಒಂದು ಕಡೆ ಆಗಬೇಕು ಎಂದರೆ ತೆರಿಗೆಗಳನ್ನು ಹೊರುವುದಕ್ಕೂ ತಯಾರಾಗಿರಬೇಕು. ತೆರಿಗೆಗಳನ್ನು ಹೊರುವುದಕ್ಕೆ ಶಕ್ತಿಯಿಲ್ಲ ಎಂದರೆ Planನ್ನು ಕೈಬಿಡಬೇಕು. ಹೀಗಿರುವಾಗ ತೆರಿಗೆಗಳನ್ನು ಹೊರುವುದಕ್ಕೆ ತಯಾರು ಆಗಲೇಬೇಕು. ಮುಖ್ಯಮಂತ್ರಿಗಳು Agricultural Income-taxನ್ನು Commercial Crops ಮೇಲೆ ಹಾಕಬೇಕು. ಎನ್ನತಕ್ಕಂಥ ಒಂದು ಸೂಚನೆ ಕೊಟ್ಟಿದ್ದಾರೆ. ಅದರಿಂದ ಸುಮಾರು 20 ಲಕ್ಷ ರೂಪಾಯಿ ಬರಬಹುದು ಎಂದು ಹೇಳುತ್ತಾರೆ. ಹೋದ ಸಾಲಿನಲ್ಲಿ ಭೂ ಕಂದಾಯವನ್ನು ಹೆಚ್ಚಿಸಬೇಕೆಂದು ಕೊಟ್ಟಿದ್ದ ಸೂಚನೆ ಕಾರಣಾಂತರದಿಂದ ನಮ್ಮ ಮುಂದೆ ಬರಲಿಲ್ಲ. ಭೂ ಕಂದಾಯವನ್ನು ಒಂದಲ್ಲ ಒಂದು ವಿಧದಲ್ಲಿ ಹೆಚ್ಚಿಸಬೇಕಾಗುತ್ತದೆ ಎಂದು ನಾನು ಹೇಳುತ್ತೇನೆ. ನೀರಾವರಿ ಕಾಮಗಾರಿಗಳಿಂದ ಅನುಕೂಲಗಳನ್ನು ಪಡೆಯುವ ಭೂಮಿಗಳಿಗೆಲ್ಲಾ water rateನ್ನು ಹೆಚ್ಚಿಸಬೇಕಾದ ಪರಿಸ್ಥಿತಿ ಬರುತ್ತದೆ. ಹೀಗೆ ನಾವು ಕೆಲವು ತೆರಿಗೆಗಳನ್ನು ಕೊಡಲೇಬೇಕು. ಎರಡನೇ ಪಾಂಚವಾರ್ಷಿಕ ಯೋಜನೆಯನ್ನು ನಾವು ತಯಾರು ಮಾಡುವಾಗ ಜನಗಳ ಸಹಕಾರಬೇಕು ಎಂದು ಹೇಳಿ ಸರ್ಕಾರದ ಅಧಿಕಾರಿಗಳೂ, ಮತ್ತು ಮಾನ್ಯ ಮಂತ್ರಿಗಳೂ ಭಾಷಣಮಾಡುತ್ತಿದ್ದಾರೆ. ಬರೀ ಭಾಷಣಮಾಡಿದ ಕ್ಷಣವೇ ಜನಗಳು ಎಲ್ಲರೂ ಕೂಡ ಅದಕ್ಕೆ enthusiastic ಆಗಿ ಸಹಾಯ ಮಾಡುತ್ತಾರೆಂದು ತಿಳಿದುಕೊಂಡಿದ್ದರೆ ಅದು ಅಷ್ಟು ಸಾಧುವಲ್ಲವೆಂದು ಅಭಿಪ್ರಾಯ ಪಡುತ್ತೇನೆ. ಹಾಗಿಲ್ಲದೆ ಜನಗಳೆಲ್ಲರೂ ಕೂಡ ಒಮ್ಮನಸ್ಸಿನಿಂದ ಸಹಾಯ ಮಾಡಬೇಕಾದರೆ ಒಂದುವೇಳೆ ತೆರಿಗೆ ಕೊಡಬೇಕು ಎಂದು ಮನಸ್ಸು ಮಾಡಬೇಕಾದರೆ ಒಂದು ವಿಧಾನವನ್ನು ನಾವು ಯೋಚನೆ ಮಾಡಬೇಕು. ಅದೇನೆಂದರೆ ಎಲ್ಲಾ ಜನಗಳೂ ಈ ಯೋಜನೆಯನ್ನು ತಯಾರು ಮಾಡುವಾಗ ಅದರಲ್ಲಿ ಭಾಗಿಗಳಾಗಬೇಕು. ಶ್ರೀಮಾನ್ ಶಿವಪ್ಪನವರು Village levelನಲ್ಲಿ plans ತಯಾರಾಗಬೇಕಲ್ಲವೆ ಎಂಬ ಪ್ರಶ್ನೆ ಕೇಳಿದರು. ಈಗ 100 ಕೋಟಿ ರೂಪಾಯಿಗಳ ಯೋಜನೆ ಇದೆ ಎಂದು ಸುಮ್ಮನೆ ಹೇಳುತ್ತಿದ್ದಾರೆಯೇ ಹೊರತು ಯಾವರೀತಿ ಅದನ್ನು ಮಾಡಿದ್ದಾರೆ. ಅದರಲ್ಲಿ ಏನೇನು ಅಡಕವಾಗಿದೆ ಎಂಬುದು ನಮ್ಮ ಒಂದು ಕೋಟಿ ಜನಸಂಖ್ಯೆಗೆ ಅರ್ಥವಾಗುತ್ತಾ ಇಲ್ಲ. ಅದಕ್ಕೆ ನನ್ನ ಸಲಹೆ ಏನೆಂದರೆ, ಈ ಯೋಜನೆಯಲ್ಲಿ ಜನರು ಎಲ್ಲರೂ ಭಾಗಿಗಳಾಗಬೇಕಾಗಿದ್ದರೆ, ಅದರಲ್ಲಿ ಉತ್ಸಾಹವುಂಟಾಗಬೇಕಾಗಿದ್ದರೆ, ಪ್ರತಿಹಳ್ಳಿಗೂ ಹೋಗಿ ಕೆಲಸ ಕಾರ್ಯಗಳು ಏನಾಗಬೇಕು, ಯಾವ ರಸ್ತೆ ಆಗಬೇಕು, ಯಾವ ಸ್ಕೂಲುಗಳು ಆಗಬೇಕು ಎಂಬುದನ್ನು ವಿಚಾರಿಸಬೇಕು. ಒಂದೊಂದು ತಾಲ್ಲೂಕಿನ ಪ್ರತಿನಿಧಿಗಳು, ಸ್ಥಳದ ಮುಖ್ಯಸ್ಥರ ಇಲ್ಲವೇ ಪಂಚಾಯಿತಿ ಚೇರ್‌ಮನ್‌ರವರು ಹೀಗೆ ಎಲ್ಲರೂ ಸೇರಿ ಚರ್ಚೆಯಲ್ಲಿ ಭಾಗವಹಿಸಿ ನಮ್ಮ ಸಂಸ್ಥಾನಕ್ಕೆ ಅನ್ವಯಿಸತಕ್ಕಂಥ ಎರಡನೆಯ ಪಾಂಚ ವಾರ್ಷಿಕ ಯೋಜನೆಯನ್ನು ತಯಾರುಮಾಡುವುದಕ್ಕೆ ಅವರು ಭಾಗಿಗಳಾದ ಪಕ್ಷದಲ್ಲಿ ಇದರ

(ಶ್ರೀ ಡಿ. ದೇವರಾಜ್ ಅರಸ್.)

ಪ್ರಯೋಜನ ಅವರಿಗೆ ಮನವರಿಕೆ ಆದ ಪಕ್ಷದಲ್ಲಿ ಅಭಿವೃದ್ಧಿ ಕಾರ್ಯಗಳಿಗೋಸ್ಕರ ನಮ್ಮ ಜನಗಳು ದುಡ್ಡನ್ನು ತೆರಿಗೆ ರೂಪದಲ್ಲಿ ಕೊಡುವುದಕ್ಕೆ ಖಂಡಿತವಾಗಿಯೂ ಹಿಂಜರಿಯುವುದಿಲ್ಲ.

ಶ್ರೀ ಜೆ. ಮಹಮದ್ ಇಮಾಂ.—ಕೈಯಲ್ಲಿ ದುಡ್ಡು ಇದ್ದರೆ ?

ಶ್ರೀ ಡಿ. ದೇವರಾಜ್ ಅರಸ್.—ಮುಖ್ಯ ಮಂತ್ರಿಗಳು prohibition ವಿಚಾರವಾಗಿ ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈಗ ನಮ್ಮ ಸಂಸ್ಥಾನದಲ್ಲಿ ಪಾನನಿರೋಧ ಕ್ರಮ ಜಾರಿಯಲ್ಲಿದೆ. ಅದು ಯಾವ ರೀತಿ ಕೆಲಸ ಮಾಡುತ್ತಿದೆ ಎಂಬುದನ್ನು ಈಗಾಗಲೇ ತಿಳಿದುಕೊಂಡಿದ್ದೇವೆ. ಕೆಲವರು "ಇದು ಕಾಂಗ್ರೆಸ್ಸಿನವರ ತತ್ವ" ಮಹಾತ್ಮ ಗಾಂಧಿಯವರು ಹೇಳಿದಂಥ ಮುಖ್ಯ ತತ್ವ ಅದನ್ನು ಕೈಬಿಡುವುದಕ್ಕೆ ಸಾಧ್ಯವಿಲ್ಲ. ಏನಾದರೂ ಆಗಲಿ prohibition ದೇಶಾದ್ಯಂತ ಕಾರ್ಯಗತ ಮಾಡಬೇಕೆಂದು ಹೇಳುತ್ತಾರೆ. ಇವೆತ್ತಿನ ದಿವಸದ ಪ್ರಶ್ನಾವಳಿಯಲ್ಲಿ prohibition ವಿಚಾರದಲ್ಲಿ ಅನೇಕ ಪ್ರಶ್ನೆಗಳು ಬಂದುವು. ಚಿಕ್ಕಮಗಳೂರು ಡಿಸ್ಟ್ರಿಕ್ಟಿನಲ್ಲಿ ನಾನು ನೋಡಿದಹಾಗೆ 1949-50ನೇ ಇಸವಿಯಲ್ಲಿ fines 47 ಕೇಸುಗಳು ಇದ್ದುದು 1955ರಲ್ಲಿ fine ಹಾಕಿದ 1,666 ಕೇಸುಗಳಿಗೇರಿವೆ. ಇದೇರೀತಿ ದೇಶಾದ್ಯಂತ ಎಲ್ಲಿಯೂ ಕೂಡ illicit distillation ಜಾಸ್ತಿಯಾಗುತ್ತಿದೆ. ತಮಾಷೆಯಾಗಿ ಹೇಳುವುದಾದರೆ ಇದು ಒಂದು cottage industry ಆಗಿದೆಯೆಂದು ಅನೇಕರು ಹೇಳುತ್ತಿದ್ದಾರೆ. ಹೀಗಿರುವಾಗ ಇದನ್ನು ಪುನರ್ವಿಮರ್ಶೆ ಮಾಡಬೇಕಾದ ಕಾಲ ಒದಗಿದೆಯೆಂದು ತೋರುತ್ತದೆ. ಕೆಲವರು 'ಇದು ಒಂದು ideal' ಏನೇ ಆದರೂ ಕೂಡ prohibition ಮುಂದುವರಿಸಲೇ ಬೇಕು, ಎಂದು ವಾದಿಸುತ್ತಿದ್ದಾರೆ. ಆದರೆ ನಾನು ಹೇಳುತ್ತೇನೆ. "Prohibition is not an aim in itself. It is a means for some other end." ಸಮಾಜದಲ್ಲಿ ಈ ಕುಡಿತದಿಂದ ಜನರು ಕೆಟ್ಟು ಹೋಗುತ್ತಿರುವುದನ್ನು ತಪ್ಪಿಸಬೇಕಾದುದು ನಮ್ಮ ಅಂತಿಮ ಗುರಿ. ಅದಕ್ಕೆ ಎಲ್ಲಾ ಕಡೆಯೂ ಹೆಂಡವನ್ನು ತಯಾರುಮಾಡುವುದನ್ನು ತಪ್ಪಿಸಬೇಕು ಎಂಬುದು ಒಂದು ಸಾಧನೆ. ಒಂದು ಮಾರ್ಗ.

ಈಗ ಆ ಮಾರ್ಗವನ್ನನುಸರಿಸುವುದರಲ್ಲಿ ಅನೇಕ ಲೋಪ ದೋಷಗಳು ಕಂಡುಬಂದಿವೆ. ಅದು successful ಆಗಿ ನಡೆಯುವುದಿಲ್ಲವೆಂದು ಅನೇಕರು ಹೇಳುತ್ತಿದ್ದಾರೆ. ಹೀಗಿರುವಾಗ ಅದೇ ಒಂದು ideal ಎಂದು ಹೇಳಿ ಭ್ರಾಂತರಾಗಿ ಅದಕ್ಕೇ ಯಾವತ್ತಿಗೂ ಅಂಟಿಕೊಂಡಿರುವುದು ಸರಿಯಲ್ಲ. ಬೇರೆ ರೀತಿಯಿಂದ ನಮ್ಮ ಅಂತಿಮ ಗುರಿಯನ್ನು ಸಾಧಿಸುವುದಕ್ಕೆ, ಸಮಾಜ ಕ್ಷೇಮಕ್ಕೆ ಯಾವುದು ಅವಶ್ಯಕವೋ ಅದನ್ನು ಅವಲಂಬಿಸುವುದಕ್ಕೆ ಧೈರ್ಯವಾಗಿ ದೀರ್ಘವಾಗಿ ಯೋಚನೆ ಮಾಡಬೇಕಾದ ಕಾಲ ಬಂದಿದೆಯೆಂದು ನಾನು ಹೇಳಬಯಸುತ್ತೇನೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ (ಹೊಸಕೋಟೆ—ಆನೇಕಲ್).—1955-56ನೆಯ ಇಸವಿಯ ಆಯವ್ಯಯ ಪಟ್ಟಿಯನ್ನು ಸಂತೋಷದಿಂದ ಸ್ವಾಗತಿಸುತ್ತಾ ಒಂದೆರಡು ವಿಷಯಗಳನ್ನು ಸೂಚಿಸಲು ಇಚ್ಛಿಸುತ್ತೇನೆ. ಈ ಆಯವ್ಯಯ ಪಟ್ಟಿಯನ್ನು ಸಂತೋಷವಾಗಿ ಸ್ವಾಗತಿಸುತ್ತೇನೆಂದು ಹೇಳುತ್ತಿದ್ದೇನೆ. ಇದಕ್ಕೆ ಮುಖ್ಯ ಕಾರಣ, ಸಾಮಾನ್ಯ ಜನರ ತಲೆಯಮೇಲೆ ಯಾವ ತೆರಿಗೆಯನ್ನೂ ಹೇರದೆ, ಪಂಚವಾರ್ಷಿಕ ಯೋಜನೆಗೆ ಬೇಕಾದಷ್ಟು ಹಣವನ್ನು ಒದಗಿಸಿರತಕ್ಕದ್ದು, ಮತ್ತು ಮೊದಲನೆಯ ಪಂಚವಾರ್ಷಿಕ ಯೋಜನೆಯನ್ನು ಯಶಸ್ವಿಯಾಗಿ ಮಾಡಲು ಸಾಕಾದಷ್ಟು ಹಣವನ್ನು ಈಗಾಗಲೇ ವೆಚ್ಚ ಮಾಡಿರತಕ್ಕದ್ದು. ಹೋದ ವರುಷ ಯಾವ ಹೆಚ್ಚಿನ ತೆರಿಗೆಯನ್ನೂ ವಿಧಿಸದೆ, ಎಲೆಕ್ಟ್ರಿಸಿಟಿ ಸರ್‌ಚಾರ್ಜ್ ಮತ್ತು ಸ್ಟಾಂಪ್ ಡ್ಯೂಟಿ ಮತ್ತು ರಿಜಿಸ್ಟ್ರೇಷನ್ ಫೀ ಇವುಗಳನ್ನು ಮಾತ್ರ ವಿಧಿಸಿ ಇಷ್ಟರಮಟ್ಟಿಗೆ ಪ್ರಗತಿದಾಯಕವಾದ ಕಾರ್ಯಕ್ರಮವನ್ನು ಕೈಕೊಂಡಿರತಕ್ಕದ್ದಕ್ಕಾಗಿ ನಿಜವಾಗಿಯೂ ನಮ್ಮ ಸಂತೋಷವನ್ನು ವ್ಯಕ್ತಪಡಿಸಬೇಕಾಗಿದೆ. ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಅಡಕವಾಗಿದ್ದಂಥಾದ್ದು ವ್ಯವಸಾಯ, ವಿದ್ಯುಚ್ಛಕ್ತಿ ಮತ್ತು ನೀರಾವರಿ ಈ ಮೂರು ಬಾಬುಗಳಿಗೂ ವಿಶೇಷವಾಗಿ ಖರ್ಚುಮಾಡಿ ಯಶಸ್ಸನ್ನುಗಳಿಸಿದ್ದಾರೆ. ವ್ಯವಸಾಯದ ವಿಷಯದಲ್ಲಿ ಹೇಳುವುದಾದರೆ ಈಗಾಗಲೇ ಸುಮಾರು 586 ಕೆರೆಗಳನ್ನು ಪುನರುದ್ಧಾರ ಮಾಡಿದ್ದಾರೆ. 800 ಕೆರೆಗಳ ಹೂಳನ್ನು ತೆಗೆದಿದ್ದಾರೆ. 20,700 ಟನ್‌ಗಳಷ್ಟು ಬತ್ತದ ಬೀಜವನ್ನು ರೈತರಿಗೆ ಒದಗಿಸಿದ್ದಾರೆ. 45,300 ಟನ್‌ಗಳಷ್ಟು ಸೀಮೆ, ಗೊಬ್ಬರವನ್ನೂ, 80,000 ಟನ್‌ಗಳಷ್ಟು ಕಂಪೋಸ್ಟ್ ಗೊಬ್ಬರವನ್ನೂ ಒದಗಿಸಿದ್ದಾರೆ. ಭದ್ರಾ ಜಲಾಶಯವೆಂಬ 17 ಕೋಟಿಚಿಲ್ಲರೆ ರೂಪಾಯಿಗಳ ದೊಡ್ಡ ಯೋಜನೆಯನ್ನು ಕೈಕೊಂಡು ಅದರ ಫಲವಾಗಿ 2 ಲಕ್ಷ 24,000 ಎಕರೆಗಳನ್ನು ನೀರಾವರಿ ಸಾಗುವಳಿಗೆ ತರಲು ಪ್ರಯತ್ನಪಟ್ಟಿದ್ದಾರೆ; ಅಲ್ಲದೆ 41,400 ಕಿಲೋವಾಟ್‌ಗಳಷ್ಟು ವಿದ್ಯುಚ್ಛಕ್ತಿಯ ಉತ್ಪತ್ತಿಯಾಗುತ್ತದೆ. 1956ನೆಯ ಇಸವಿಯ ಹೊತ್ತಿಗೆ 20,000 ಎಕರೆಗಳಿಗೆ ನೀರೊದಗುತ್ತದೆಂದು ಹೇಳಿದ್ದಾರೆ. ತುಂಗಾ ಅಣೆಕಟ್ಟಿಗಾಗಿ 212 ಲಕ್ಷ ರೂಪಾಯಿಗಳು ಖರ್ಚುಮಾಡಿ ಈಗಾಗಲೇ 7,000 ಎಕರೆಗಳನ್ನು ಸಾಗುವಳಿಗೆ ತಂದಿದ್ದಾರೆ. ಜೂನ್ 1955ರ ಹೊತ್ತಿಗೆ ಇನ್ನೂ 10,000 ಎಕರೆಗಳು ಸಾಗುವಳಿಗೆ ಬರುವುದಾಗಿವೆ. ಮುಂದಿನ ಡಿಸೆಂಬರ್ ಹೊತ್ತಿಗೆ ಇನ್ನೂ 5,000 ಎಕರೆಗಳು ಸಾಗಿಗೆ ಬರುತ್ತವೆಂದು ಹೇಳಿದ್ದಾರೆ. ನುಗು ಜಲಾಶಯದಿಂದ ನಾಲ್ಕು ಸಾವಿರ ಎಕರೆಗಳು ಸಾಗುವಳಿಗೆ ಬರುತ್ತವೆ. ಈ ರೀತಿಯಾಗಿ ವ್ಯವಸಾಯದ ಬಾಬಿನಲ್ಲಿ ಬಹಳಮಟ್ಟಿಗೆ ಉನ್ನತ ಸ್ಥಿತಿಗೆ ಬಂದಿದ್ದೇವೆ. ಒಟ್ಟಿನಲ್ಲಿ ಹೇಳುವುದಾದರೆ, ಪಂಚವಾರ್ಷಿಕ ಯೋಜನೆಯಲ್ಲಿ ಸಾಧಿಸಬೇಕಾಗಿದ್ದುದನ್ನೆಲ್ಲಾ ಹೋದ ವರ್ಷವೇ ಸಾಧಿಸಿದ್ದೇವೆ.

ಇನ್ನು ವಿದ್ಯುಚ್ಛಕ್ತಿಯ ವಿಷಯವನ್ನು ಹೇಳುವುದಾದರೆ, ಮಹಾತ್ಮ ಗಾಂಧಿ ಹೈಡ್ರೋ-ಎಲೆಕ್ಟ್ರಿಕ್ ವರ್ಕ್ಸ್ ಈಗಾಗಲೇ ಮುಗಿಯುತ್ತಾ ಬಂದಿದೆ. 324 ಮೈಲಿಗಳ ದೂರದಷ್ಟು ಟ್ರಾನ್ಸ್ಮಿಷನ್ ಲೈನುಗಳನ್ನೂ ಎಳೆದಿರುವುದಲ್ಲದೆ, 220 ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸಲಾಗಿದೆ. 3,721 ನೀರಾವರಿ ಪಂಪುಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸಲಾಗಿದೆ.

ಪಂಚವಾರ್ಷಿಕ ಯೋಜನೆಯ ಅಂಗವಾಗಿ 53 ಮೈಲಿಗಳ ರಸ್ತೆಯನ್ನು ಸಿಮೆಂಟ್ ಕಾಂಕ್ರೀಟ್ ಮಾಡಿದೆ. 920 ಮೈಲಿಗಳ I.V.C. ರೋಡುಗಳನ್ನು ಮಾಡಲಾಗಿದೆ. ಅಂತೂ ಒಟ್ಟಿನಲ್ಲಿ 14 ಕೋಟಿ 56 ಲಕ್ಷ ರೂಪಾಯಿಗಳಷ್ಟು ಪಂಚವಾರ್ಷಿಕ ಯೋಜನೆಗಾಗಿ ಖರ್ಚಾಗಿದೆ.

ಇನ್ನು ಜನಪ್ರಗತಿಗಾಗಿ ಕೈಕೊಂಡಿರತಕ್ಕ ಕಾರ್ಯಗಳೆಂದರೆ—23 ಪಶುವೈದ್ಯಶಾಲೆಗಳು, 35 ಹೊಸ ಆಸ್ಪತ್ರೆಗಳು, ಮೂರು ಹೆಲ್ತ್ ಯೂನಿಟ್ಟುಗಳು, 1,548 ಕುಡಿಯುವ ನೀರಿನ ಬಾವಿಗಳನ್ನು ಏರ್ಪಡಿಸಲಾಗಿದೆ. 79 ಮುನಿಸಿಪಾಲಿಟಿಗಳಿಗೆ ಒಂದು ಕೋಟಿ

8 ಲಕ್ಷ ರೂಪಾಯಿಗಳನ್ನು ಕುಡಿಯುವ ನೀರಿನ ಸೌಕರ್ಯವನ್ನು ಒದಗಿಸುವುದಕ್ಕಾಗಿ ಒದಗಿಸಲಾಗಿದೆ. ಬೆಂಗಳೂರು, ಮೈಸೂರು, ದಾವಣಗೆರೆ ಈ ಸಿಟಿಗಳಲ್ಲಿ ನೀರಿನ ಸೌಕರ್ಯಕ್ಕಾಗಿ ಒಂದು ಕೋಟಿ ರೂಪಾಯಿಗಳಷ್ಟು ಒದಗಿಸಲಾಗಿದೆ. ಇಂಥ ದೊಡ್ಡ ಬಡ್ಜೆಟ್ಟನ್ನು ತಯಾರುಮಾಡಿ ದೇಶಾಭ್ಯುದಯ ಕಾರ್ಯಗಳನ್ನು ಕೈಕೊಳ್ಳುವಾಗ ಆದಾಯಕ್ಕಿಂತಲೂ ವೆಚ್ಚ ಹೆಚ್ಚಾಗಿದೆಯೆಂದು ಹೇಳುವಾಗ, ಈ ವೆಚ್ಚ ವಿವೇಕಯುತವಾಗಿ ಖರ್ಚು ಮಾಡಲಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಮುಖ್ಯವಾಗಿ ನಾವು ಗಮನದಲ್ಲಿಟ್ಟು ಕೊಳ್ಳಬೇಕು ಅಷ್ಟೆ. ಆದರೆ, ಇದೇ ರೀತಿಯಾಗಿ ವರ್ಷ ವರ್ಷವೂ ನಮ್ಮ ವೆಚ್ಚವನ್ನು ಹೆಚ್ಚಿಸಿಕೊಳ್ಳುತ್ತಾ ಹೋಗುವುದಾದರೆ ಅದನ್ನು ಹೇಗೆ ಸರಿದೂಗಿಸುವುದು ಎಂದು ಅನೇಕ ಮಾನ್ಯ ಸದಸ್ಯರು ಕೇಳಿದ್ದಾರೆ. ನಮ್ಮ ಆದಾಯ ಹೆಚ್ಚಿಸಿಕೊಳ್ಳಬೇಕಾದರೆ ನಮಗಿರತಕ್ಕ ಮಾರ್ಗಗಳೆಂದರೆ, ಲಾಭದಾಯಕವಾಗಿ ಕೆಲಸ ನಡೆಯತಕ್ಕ ಕೈಗಾರಿಕೆಗಳಿಂದ ಹೆಚ್ಚಿಗೆ ಲಾಭ ಬರುವಂತೆ ಅವುಗಳ ಲೆಕ್ಕಗಳಮೇಲೆ ಹತೋಟಿಯಿಟ್ಟು ಕೊಳ್ಳುವುದು ಮತ್ತು ಅಲ್ಲಿ ಹಣ ದುರ್ವ್ಯಯವಾಗದಂತೆ ಮಾಡುವುದು ಒಂದು ಮಾರ್ಗ ; ಸಾಲವನ್ನು ಪಡೆಯುವುದು ಎರಡನೆಯ ಮಾರ್ಗ ; ಆಮೇಲೆ ಮೂರನೆಯದು ಕೇಂದ್ರ ಸರ್ಕಾರದವರಿಂದ ಸಾಲವನ್ನೋ ಅಥವಾ ಗ್ರಾಂಟನ್ನೋ ಪಡೆಯತಕ್ಕದ್ದು. ಈ ಮಾರ್ಗಗಳನ್ನೆಲ್ಲಾ ಅನುಸರಿಸಿಯೂ ಕೂಡ ನಾವೀಗ ಸುಮಾರು 4 ಕೋಟಿ ರೂಪಾಯಿಗಳನ್ನು ನಮ್ಮ ಬಡ್ಜೆಟ್ಟಿನಲ್ಲಿ ಖೋತಾ ಕಾಣುತ್ತಿದ್ದೇವೆ, ಆದ್ದರಿಂದ ಇನ್ನು ಇದನ್ನು ಸರಿದೂಗಿಸಿಕೊಳ್ಳಬೇಕಾದರೆ ಉಳಿದಿರತಕ್ಕ ಒಂದು ಮಾರ್ಗವೇನೆಂದರೆ ನಮ್ಮ ಸಂಸ್ಥಾನಕ್ಕೂ ಕೇಂದ್ರ ಸರ್ಕಾರಕ್ಕೂ ಆದ ವಿಲೀನೀಕರಣ ಒಪ್ಪಂದವನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವಿದೆಯೇ ಎಂಬುದನ್ನು ಆಲೋಚಿಸುವುದು. ನಮ್ಮ ಸಂಸ್ಥಾನಕ್ಕಿದ್ದಂಥ ಉತ್ಪತ್ತಿಯಲ್ಲಿ ಬಹುಭಾಗವನ್ನು ನಾವು ಈ ವಿಲೀನೀಕರಣದ ದೆಸೆಯಿಂದ ಕೇಂದ್ರ ಸರ್ಕಾರಕ್ಕೆ ಬಿಟ್ಟುಕೊಟ್ಟಿದ್ದೇವೆ. ರಾಜ್ಯಾಂಗದ 278 ಮತ್ತು 290 ನೆಯ ವಿಧಿಗಳ ಪ್ರಕಾರ ರಾಜ್ಯಾಂಗ ಜಾರಿಗೆ ಬಂದ 5 ವರ್ಷಗಳವರೆಗೆ ಆ ಒಪ್ಪಂದವನ್ನು ಬದಲಾವಣೆ ಮಾಡಲು ಅವಕಾಶವಿರಲಿಲ್ಲ. ಈಗ 5 ವರ್ಷಗಳನ್ನು ಕಳೆದಿದ್ದೇವೆ. ಇನ್ನು Financial Commission ಸ್ಥಾಪನೆಯಾಗಿ ನಮ್ಮ ಸಂಸ್ಥಾನಕ್ಕೆ ಬರುವುದರಲ್ಲಿದೆ. ಈ ಸಂದರ್ಭದಲ್ಲಿ ನಮ್ಮ ಸಂಸ್ಥಾನಕ್ಕೆ ಕೇಂದ್ರ ಸರ್ಕಾರದವರು ಕೊಡುತ್ತಿದ್ದಂಥ ಸಾಲ ಮುಂತಾದುವುಗಳನ್ನು ಹೇಳಿ ನಮಗೆ ಹೆಚ್ಚಿಗೆ ಹಣ ಬರುವಂತೆ ಒತ್ತಾಯ ಮಾಡದೆ ಬೇರೆ ವಿಧಿಯಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಆಮೇಲೆ, ಈ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಅನೇಕ ಮಿಡ್ಲ್ ಸ್ಕೂಲುಗಳನ್ನೂ ಮತ್ತು ಹೈಸ್ಕೂಲುಗಳನ್ನೂ ತೆರೆದಿದ್ದಾರೆ. ಇವುಗಳ ಜೊತೆಗೆ ಈ ವರ್ಷದ ಆಯವ್ಯಯ ಪಟ್ಟಿಯ ಪ್ರಕಾರ ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸಕ್ಕಾಗಿ 64 ಲಕ್ಷ ಚಿಲ್ಲರೆ ರೂಪಾಯಿಗಳನ್ನೂ, ಸೆಕೆಂಡರಿ ವಿದ್ಯಾಭ್ಯಾಸಕ್ಕಾಗಿ 87,25,000 ರೂಪಾಯಿಗಳನ್ನೂ, ಪ್ರೈಮರಿ ವಿದ್ಯಾಭ್ಯಾಸಕ್ಕಾಗಿ 187 ಲಕ್ಷದ 28 ಸಾವಿರ ರೂಪಾಯಿಗಳನ್ನೂ, ಸ್ಪೆಷಲ್ ವಿದ್ಯಾಭ್ಯಾಸಕ್ಕಾಗಿ 16 ಲಕ್ಷ 80 ಸಾವಿರ ರೂಪಾಯಿಗಳನ್ನೂ, ಜನರಲ್ ವಿದ್ಯಾಭ್ಯಾಸಕ್ಕಾಗಿ 101 ಲಕ್ಷ ರೂಪಾಯಿಗಳನ್ನೂ ಒದಗಿಸಿದ್ದಾರೆ. ಈ ರೀತಿ ಒಟ್ಟು ವಿದ್ಯಾಭ್ಯಾಸಕ್ಕಾಗಿ 4 ಕೋಟಿ 48 ಲಕ್ಷರೂಪಾಯಿಗಳನ್ನು ಕೊಟ್ಟಂತಾಗಿದೆ

ಇಷ್ಟೊಂದು ಹಣ ವಿದ್ಯಾಭ್ಯಾಸಕ್ಕಾಗಿ ವೆಚ್ಚ ಮಾಡುತ್ತಿರುವಾಗ, ಇದರಿಂದ ನಮ್ಮ ಹೆಣ್ಣು ಮಕ್ಕಳಿಗೇನಾದರೂ ಉಪಯೋಗವಾಗುತ್ತಿದೆಯೋ ಎಂಬುದರ ಬಗ್ಗೆ ಸೂಕ್ಷ್ಮವಾಗಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಇದುವರೆಗೂ ಹಿಂದುಳಿದ ಜನಾಂಗಕ್ಕೆ ವಿದ್ಯಾಭ್ಯಾಸ ಸೌಕರ್ಯವನ್ನೊದಗಿಸುವುದಕ್ಕಾಗಿ ಹೆಚ್ಚಿಗೆ ಸಹಾಯ ನೀಡಬೇಕೆಂದು ಎಷ್ಟೋ ನಿರ್ಣಯಗಳೂ, ಭಾಷಣಗಳೂ ಆಗಿದ್ದರೂ, ಹೈಸ್ಕೂಲಿನಲ್ಲೇ ಆಗಲಿ, ಮಿಡ್ಲ್ ಸ್ಕೂಲಿನಲ್ಲೇ ಆಗಲಿ ಹಿಂದುಳಿದ ವಿದ್ಯಾರ್ಥಿನಿಯರಿಗಾಗಿ ವಿದ್ಯಾರ್ಥಿವೇತನವನ್ನು ಒದಗಿಸುತ್ತಿಲ್ಲವೆಂದು ಹೇಳಬೇಕಾಗಿದೆ. ವಿಶ್ವವಿದ್ಯಾನಿಲಯದಲ್ಲಿಯಾದರೋ, ಅಲ್ಲಿ ಓದುತ್ತಿರತಕ್ಕ ವಿದ್ಯಾರ್ಥಿನಿಯರಿಗೆ ಕಳೆದ ಎರಡು ವರ್ಷಗಳಿಂದ ಫೀಜು ಮಾಫಿ ಇದ್ದುದನ್ನು ತೆಗೆದು ಹಾಕಿ ಕಡ್ಡಾಯವಾಗಿ ಫೀಜು ಕೊಡಬೇಕೆಂದು ಮಾಡಿದ್ದಾರೆ. ನಾಲ್ಕು ಕೋಟಿ 48 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವ ವಿದ್ಯಾಬಾಬಿಗೆ, ಈ ಫೀಜಿನಿಂದ ಬರುವ 5-6 ಸಾವಿರ ರೂಪಾಯಿಗಳು ಇಲ್ಲದಿದ್ದ ಮಾತ್ರಕ್ಕೇ ಏನೂ ಬಡ್ಜೆಟ್ಟು ಹೆಚ್ಚು ಕಡಮೆಯಾಗುತ್ತಿರಲಿಲ್ಲ. ಇದನ್ನು ತಪ್ಪಿಸಬೇಕೆಂದು ಹೇಳಿ ಯೂನಿವರ್ಸಿಟಿಯವರೂ, ಅಕೆಡಿಮಿಕ್ ಕೌನ್ಸಿಲ್‌ನವರೂ ನಿರ್ಣಯ ಮಾಡಿ ಸರ್ಕಾರಕ್ಕೆ ಕಳುಹಿಸಿಕೊಟ್ಟರೂ ಅದಕ್ಕೆ ಸರ್ಕಾರ ಗಮನ ಕೊಟ್ಟಿಲ್ಲ. ಮೈಸೂರು ಸಂಸ್ಥಾನದಲ್ಲಿ ಹುಡುಗಿಯರಿಗೆ ಕೊಟ್ಟಿದ್ದ ಈ ವಿಶೇಷ ರಿಯಾಯಿತಿ ಬಹಳ ಅಗತ್ಯವಾದದ್ದೆಂದು ಸುಧಾರಣಾ ಸಮಿತಿಯವರು ಕೂಡ ಸಲಹೆ ಮಾಡಿದ್ದಾರೆ. ಇದನ್ನು ಕೂಡಲೆ ಗಮನಿಸಿ ಹೈಸ್ಕೂಲು ಮತ್ತು ಮಿಡ್ಲ್ ಸ್ಕೂಲುಗಳಲ್ಲಿ ಓದುತ್ತಿರತಕ್ಕ ಹಿಂದುಳಿದ ಪಂಗಡದ ವಿಧ್ಯಾರ್ಥಿನಿಯರಿಗೆ ಸ್ಕಾಲರ್‌ಷಿಪ್ಪನ್ನೂ ಮತ್ತು ವಿಶ್ವವಿದ್ಯಾನಿಲಯದಲ್ಲಿ ಹೆಣ್ಣು ಮಕ್ಕಳಿಗೆ ಫೀಜು ರಿಯಾಯಿತಿಯನ್ನೂ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಟಿ. ಎಲ್. ಮೂಡಲಗಿರಿಗೌಡ (ಕುಣಿಗಲು).—ತುಮಕೂರು ಫಸ್ಟ್ ಗ್ರೇಡು ಕಾಲೇಜಿನಲ್ಲಿರತಕ್ಕ ಹೆಣ್ಣು ಮಕ್ಕಳಿಗೆ ಯಾರೊಬ್ಬರಿಗೂ ಇದುವರೆಗೂ ಫೀಜು ಬಿಟ್ಟಿಲ್ಲವೆಂಬುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಬೆಂಗಳೂರು ಮಹಾರಾಣಿ ಕಾಲೇಜಿನಲ್ಲಿ ನೋಡಿ ಎಷ್ಟು ವಿದ್ಯಾರ್ಥಿನಿಯರು ಕೊಡುತ್ತಿದ್ದಾರೆ ಎಂಬುದನ್ನು.

ಇನ್ನು ವಿದ್ಯಾಭ್ಯಾಸ ಸುಧಾರಣೆಗಳು. ಈ ಸುಧಾರಣೆಗಳನ್ನು ಜಾರಿಗೆ ತರುವುದಕ್ಕಾಗಿ ಸರ್ವೋದಯ ದಿನ ಎಂದು ಆಚರಿಸಿದ್ದಾಯಿತು. ತತ್ಪರಿಣಾಮವಾಗಿ ಅನೇಕ ಹುಡುಗರು ಮೇಲಿನ ತರಗತಿಗಳಿಗೆ ಹಾಕಲ್ಪಟ್ಟು ಆಗಲೇ ಒಂದುವರೆ ತಿಂಗಳಾದರೂ, ಇನ್ನೂ ಪಠ್ಯ ಪುಸ್ತಕಗಳು ಯಾವುವೆಂಬುದನ್ನೇ ನಿಗದಿ ಮಾಡದೆ ಹೋಗಿ, ಹುಡುಗರು ಹಳೆಯ ಪುಸ್ತಕಗಳನ್ನು ಓದುವ ಹಾಗಿಲ್ಲ, ಹೊಸ ಪುಸ್ತಕಗಳು ಸಿಕ್ಕುವ ಹಾಗಿಲ್ಲ ಹೀಗಾಗಿ, ಶ್ರೀಮಾನ್ ಶಿವಪ್ಪನವರು ಹೇಳಿದಂತೆ, ಹುಡುಗರು ಸ್ಕೂಲಿಗೆ ಹೋಗುವುದು, ಹಾಜರಾತಿ ಕೊಟ್ಟು ವಾಪಸು ಬರುವುದು, ಹೀಗಾಗಿದೆ. ಇನ್ನೊಂದು ವಿಷಾದಕರವಾದ ವಿಷಯವೇನೆಂದರೆ, ಅನೇಕ ಹೆಣ್ಣು ಮಕ್ಕಳು ಕಳೆದ ವರ್ಷ ಮಿಡ್ಲ್ ಸ್ಕೂಲು ನಾಲ್ಕನೆಯ ತರಗತಿಯಲ್ಲಿದ್ದವರು ತೇರ್ಗಡೆಯಾಗಿ ಹೈಸ್ಕೂಲಿಗೆ ಪ್ರವೇಶಕ್ಕೆ ಹೋದಾಗ seat ಗಳಿಲ್ಲವೆಂದು ಹೇಳಿ ನಿರಾಶರಾಗಿ ಹಿಂತಿರುಗುತ್ತಿರುವುದನ್ನು ಕಾಣುತ್ತಿದ್ದೇವೆ. ನಿತ್ಯವೂ 10-15 ಕಾಗದಗಳನ್ನು

(ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.)

ಬರೆಯುವುದು, ಎಲ್ಲಿಯೂ ಸ್ಥಳಾವಕಾಶವಿಲ್ಲವೆಂದು ಜವಾಬು ಪಡೆಯುವುದೇ ಅವರ ನಿತ್ಯ ಕೆಲಸವಾಗಿದೆ. ಇದು ಬಹಳ ಶೋಚನೀಯ. ಹೆಚ್ಚುತ್ತಿರುವ ವಿದ್ಯಾರ್ಥಿನಿಯರ ಸಂಖ್ಯೆಗನುಸಾರವಾಗಿ ಹೈಸ್ಕೂಲಿನಲ್ಲಿ ಸ್ಥಳಾವಕಾಶವಿಲ್ಲದಿರುವ ಅಂಶವನ್ನು ವಿದ್ಯಾ ಮಂತ್ರಿಗಳು ಗಮನಿಸಿ ಖಂಡಿತವಾಗಿ ಆದಷ್ಟು ಬೇಗ ಈಗ ತೇರ್ಗಡೆಯಾಗಿರುವ ವಿದ್ಯಾರ್ಥಿನಿಯರಿಗೆ ವಿದ್ಯಾಭ್ಯಾಸಕ್ಕೆ ಅವಕಾಶವನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ.

ಆಮೇಲೆ, ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ವಿದ್ಯಾರ್ಥಿನಿಲಯಗಳಿಗಾಗಿ ಹೆಚ್ಚಿನ ನಿಗಾ ಕೊಡುತ್ತೇವೆ, ಕೋಮುವಾರು ಹಾಸ್ಟಲುಗಳನ್ನು ಕಡಮೆ ಮಾಡಿ ಸಾರ್ವಜನಿಕ ವಿದ್ಯಾರ್ಥಿನಿಲಯಗಳನ್ನು ಹೆಚ್ಚು ಹೆಚ್ಚಿಗೆ ಸ್ಥಾಪನೆ ಮಾಡಬೇಕೆಂದಿರುವುದಾಗಿ ಹೇಳಿದ್ದಾರೆ. ಹೀಗೆ ಸಾರ್ವಜನಿಕ ವಿದ್ಯಾರ್ಥಿನಿಲಯಗಳ ವಿಷಯವನ್ನು ಗಣನೆಗೆ ತೆಗೆದುಕೊಳ್ಳುವಾಗ ಮೆಡಿಕಲ್ ಕಾಲೇಜು ಮತ್ತು ಬೆಂಗಳೂರು ಮಹಾರಾಣಿ ಕಾಲೇಜು ಈ ಕಾಲೇಜುಗಳಲ್ಲಿ ಹುಡುಗಿಯರಿಗೆ ಹಾಸ್ಟಲನ್ನು ಕಟ್ಟಿಸಿಕೊಡಬೇಕೆಂದು ಹೇಳುತ್ತೇನೆ. ಮೆಡಿಕಲ್ ಕಾಲೇಜಿನ ವಿದ್ಯಾರ್ಥಿನಿಯರಿಗೆ ಹಾಸ್ಟಲ್ ಬೇಕೆಂದು ಬಹಳ ಕಾಲದಿಂದಲೂ ಅನೇಕ ಪ್ರಾರ್ಥನೆಗಳು ಬಂದರೂ ಕೂಡ ಇದುವರೆಗೂ ಅದಕ್ಕೆ ಗಮನಕೊಟ್ಟಿಲ್ಲ. ಇನ್ನೂ Nurses ಕ್ವಾರ್ಟರ್ಸ್‌ನಲ್ಲೇ ಅದು ನಡೆಯುತ್ತಿದೆ. ಅಲ್ಲಿ ಏನೇನೂ ಅನುಕೂಲಗಳಿಲ್ಲ. ಆದಷ್ಟು ಬೇಗನೆ ಹೆಣ್ಣು ಮಕ್ಕಳಿಗಾಗಿ ಒಂದು ಮೆಡಿಕಲ್ ಕಾಲೇಜ್ ಹಾಸ್ಟಲನ್ನು ಕಟ್ಟಿಸಿಕೊಡಬೇಕೆಂದು ಹೇಳುತ್ತೇನೆ.

ಬೆಂಗಳೂರಿನಲ್ಲಿರತಕ್ಕ ಮಹಾರಾಣಿ ಕಾಲೇಜಿನ ಹಾಸ್ಟಲು ಕೂಡ ಹಿಂದೆ 50-60 ಜನರಿಗಾಗಿ ಕಟ್ಟಿದ್ದುದು ಈಗ 1,000 ಜನರಿಗೂ ಆಗಬೇಕಾಗಿ ಬಂದು ಬಹಳ ಸ್ಥಳ ಸಂಕೋಚವಾಗಿದೆ. ಇದನ್ನು ಮನಗಂಡು ಅದರ ಬಡಾವಣೆಗೆ ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಸಿವಿಲ್ ವರ್ಕ್ಸ್ ವಿಚಾರ. ಈ ಸಾರಿಯ ಬಡ್ಜೆಟ್ಟಿನಲ್ಲಿ-ಪ್ರತಿ ಜಿಲ್ಲೆಗೂ ಸಿವಿಲ್ ವರ್ಕ್ಸ್‌ಗಾಗಿ ಹಂಚಿರುವುದನ್ನು ನೋಡಿದರೆ, ಬೆಂಗಳೂರು ಜಿಲ್ಲೆಗೆ ಬಹಳ ಕಡಮೆ ಹಣ ಕೊಟ್ಟಿದ್ದೀರಿ ಎನ್ನಬೇಕು. ಏನೂ ಒದಗಿಸಿಯೇ ಇಲ್ಲವೆಂದರೂ ಹೆಚ್ಚಲ್ಲ.

4-30 P.M.

ಒದಗಿಸಿಯೇ ಇಲ್ಲ ಎಂದು ಹೇಳಿದರೂ ಹೇಳಬಹುದು. ನಾನೇನೋ ಬೆಂಗಳೂರು ಸಿಟಿಯಲ್ಲಿ ವಾಸಮಾಡುತ್ತಿದ್ದರೂ ಜಿಲ್ಲೆಯ ಪರಿಸ್ಥಿತಿ ಏನು ಎಂಬುದು ನನಗೆಲ್ಲಾ ಚೆನ್ನಾಗಿ ಗೊತ್ತಾಗಿದೆ. ತಾವು ಆ ಹೊಸಕೋಟೆಯ ತಾಲ್ಲೂಕಿಗೆ ಯಾವ ಒಂದು ರಸ್ತೆಯ ರಿಪೇರಿಗಾಗಲಿ ಅಥವಾ ಕೆರೆಯ ರಿಪೇರಿಗಾಗಲಿ ಹಣವನ್ನು ಒದಗಿಸಿಲ್ಲ.

ಇನ್ನು ಈ ಪಾಂಚವಾರ್ಷಿಕ ಯೋಜನೆಯ ಸಂಬಂಧದಲ್ಲೇ ಸೋಷಿಯಲ್ ವೆಲ್‌ಫೇರ್ ಅಂದರೆ ಸಮಾಜದ ಹಿತರಕ್ಷಣೆಯ ಅಂಗವಾಗಿ ಒಂದು ಬೋರ್ಡನ್ನು ಮೈಸೂರು ಸಂಸ್ಥಾನದಲ್ಲಿ ಸ್ಥಾಪಿಸಲಾಗಿರುತ್ತೆಂಬ ಅಂಶವನ್ನು ನಾವು ಮೊನ್ನೆ ಮುಖ್ಯ ಮಂತ್ರಿಗಳು ಮಾಡಿದ ಭಾಷಣದಿಂದ ತಿಳಿದುಕೊಂಡಿದ್ದೇವೆ. ಈ ಹಿಂದೆ ಒಂದಾವರ್ತಿ ಮೊದಲು ಈ ಪಾಂಚವಾರ್ಷಿಕ ಯೋಜನೆಯ ಕಾರ್ಯ ಕಲಾಪಗಳು ಮೈಸೂರಿನಲ್ಲಿ ಪ್ರಾರಂಭವಾದಾಗ ಈ ವೆಲ್‌ಫೇರ್ ಸ್ಟೇಟ್‌ನ ರೂಪರೇಖೆಗಳೇನು ಎಂಬುದರ ಬಗ್ಗೆ ಅಂಕಿ ಅಂಶಗಳನ್ನು ಹುಡುಕಲು ಸಂಸ್ಥಾನದ ಯಾವ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್ ಇದೆಯೋ ಅದರಲ್ಲೂ ಕೂಡ ದೊರೆಯಲಿಲ್ಲ. ಅನಂತರ ಹೀಗೆ ಅವುಗಳನ್ನೆಲ್ಲಾ ಸಿದ್ಧಪಡಿಸಿಕೊಂಡು ಮೈಸೂರಿನಲ್ಲಿ ಒಂದು ರೇಡಿಯೋ ಭಾಷಣವನ್ನು ನಾನು ಮಾಡಬೇಕಾಗಿದ್ದಂಥ ಪ್ರಸಂಗ ಬಂದಿತ್ತು, ಆಗ ಮಾಡಿದ್ದಾಯಿತು. ಆದರೆ ಇತ್ತೀಚೆಗೆ ಇಂಥ ಒಂದು ಸಾಮಾಜಿಕ ಹಿತರಕ್ಷಣೆಯ ಬೋರ್ಡಿನ ಉದ್ಘಾಟನೆಯನ್ನು 1954ನೆಯ ನವೆಂಬರ್ 11ನೆಯ ತಾರೀಖಿನಲ್ಲಿ ನಮ್ಮ ರಾಷ್ಟ್ರಾಧ್ಯಕ್ಷರಾದ ಡಾ॥ ಬಾಬೂ ರಾಜೇಂದ್ರ ಪ್ರಸಾದ್ ರವರು ಮೈಸೂರಿಗೆ ಬಂದಿದ್ದಾಗ ನಡೆ ನಡೆಸಿದರೆಂದು ಹೇಳಿದ್ದಾರೆ. ಈ ಬೋರ್ಡಿಗೆ ಈಗ ಶ್ರೀಮತಿ ಎಂ. ಆರ್. ಲಕ್ಷಮ್ಮನವರನ್ನು ಅಧ್ಯಕ್ಷಿಣಿಯರನ್ನಾಗಿ ಮಾಡಿದ್ದಾರೆಂದು ತಿಳಿಸಿದ್ದಾರೆ. ಆದರೆ ಇದು ಇನ್ನು ಮುಂದೆ ಆ ಹಳ್ಳಿ ಜನರಿಗೆ ಎಷ್ಟರಮಟ್ಟಿಗೆ ಉಪಯೋಗವಾಗುತ್ತದೆ ಅನ್ನತಕ್ಕ ವಿಷಯಗಳು ಯಾವುವೂ ನಮಗೆ ಆ ವರದಿಯಲ್ಲಿ ಸಿಕ್ಕುತ್ತಿಲ್ಲ. ಈ ವಿಚಾರವನ್ನು ದೇಶದಲ್ಲಿರತಕ್ಕಂಥ ಪ್ರತಿಯೊಬ್ಬ ಸಮಾಜ ಸುಧಾರಣಾ ವ್ಯಕ್ತಿಗೂ ತಿಳಿದುಕೊಳ್ಳಲು ಅವಕಾಶ ಮಾಡಿಕೊಟ್ಟರೆ ಆಗ ಇದರ ಪೂರ್ಣ ಫಲವನ್ನು ಮತ್ತು ಇದರ ಸೌಲಭ್ಯವನ್ನು ದೇಶಾದ್ಯಂತವೂ ಪಡೆಯುವುದಕ್ಕೆ ಅನುಕೂಲವಾಗುತ್ತದೆ.

ಇನ್ನು ತಾವು ಈ ಟ್ರಾಕ್ಟರ್ ಮತ್ತು ಬುಲ್‌ಡೋಜರುಗಳಿಗಾಗಿ 9 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆಯೆಂದು ಹೇಳಿದ್ದೀರಿ. ಈ ವಿಚಾರವಾಗಿ ನಾನು ಒಂದು ಅಂಶವನ್ನು ಸರ್ಕಾರದವರ ಗಮನಕ್ಕೆ ತರಬೇಕಾಗಿದೆ. ಬೌರಿಂಗ್‌ಪೇಟೆ ತಾಲ್ಲೂಕಿನಲ್ಲಿ ಕಾವೇರಪ್ಪ ಎಂಬತಕ್ಕವರಿಗೆ ಕೊಡಲಾಗಿದ್ದಂಥ ಆ ಟ್ರಾಕ್ಟರ್ ಇಲ್ಲಿಗೆ 4-5 ತಿಂಗಳಿಂದ ಅವರಲ್ಲೇ ಇದ್ದರೂ ದಿನಕ್ಕೆ ಅದು 1-2 ಘಂಟೆಗಳೂ ಕೂಡ ಕೆಲಸ ಮಾಡದೆ ಹೋದುದರಿಂದ ಅವರಿಗೆ ತುಂಬಾ ಲುಕ್ಸಾನಾಗಿದೆ. ಈ ದಿವಸ ಅವರು ಕೇವಲ ಕೂಲಿ ಆಳುಗಳನ್ನಿಟ್ಟುಕೊಂಡಿದ್ದರೂ ಎಷ್ಟೋ ಕೆಲಸ ಅವರಿಗೆ ಆಗುತ್ತಿತ್ತು. ಆದರೆ ಏನೋ ಒಂದು ಆಸೆಯಿಟ್ಟುಕೊಂಡು ತೆಗೆದುಕೊಂಡುಹೋದ ಈ ಟ್ರಾಕ್ಟರಿನಿಂದ ತುಂಬಾ ಲುಕ್ಸಾನಾಗಿರುತ್ತದೆಯೆಂದು ಆ ಪಾರ್ಟಿಯು ಬಂದು ಮಾನ್ಯ ವ್ಯವಸಾಯ ಸಚಿವರ ಮುಂದೆ ಎಲ್ಲಾ ವಿಚಾರಗಳನ್ನು ನಿವೇದನೆ ಮಾಡಿಕೊಂಡಿದ್ದಾರೆ. ಮಾನ್ಯ ಮಂತ್ರಿಗಳಿಗೂ ಕೂಡ ಆ ಪಾರ್ಟಿಗೆ ಇದರಿಂದ ಬಹಳ ಅನ್ಯಾಯವಾಗಿದೆಯೆಂಬ ಅಂಶ ಗೊತ್ತಾಗಿದೆ. ಈ ವಿಚಾರವನ್ನು 1953ನೆಯ ಆಡಿಟರ ವರದಿಯಲ್ಲಿ ಕೂಡ ತಿಳಿಸಿದ್ದಾರೆ. ಈ ವ್ಯವಹಾರವಲ್ಲಿ 32 ಲಕ್ಷ ರೂಪಾಯಿಗಳು ನಷ್ಟವಾಗಿರುವುದಾಗಿ ಆ ವರದಿಯಲ್ಲೇ ಸೂಚಿಸಿದ್ದಾರೆ. ಹೀಗೆ ಸರ್ಕಾರದವರು ವೃಥಾ ನಷ್ಟವಾಗುವಂಥ ಬಾಬುಗಳಿಗೆ ಗಮನಕೊಡಬಾರದು. ರೈತರಿಗೆ ಇಂಥ ಮಿಷನರಿಗಳಿಂದ ಸೌಲಭ್ಯ ದೊರೆಯುತ್ತದೆಯೆಂದು ಅವರಿಗೆ ತಿಳಿದಿದ್ದರೆ ಮಾತ್ರ ಕೊಡಬೇಕೇ ಶಿವಾಯಿ ಹಾಗೆ ಅನ್ಯಥಾ ಪಾರ್ಟಿಗಳಿಗೆ ಇವುಗಳನ್ನು ಕೊಟ್ಟು ಇತ್ತಲಾಗಿ ಅವರಿಗೆ ಕೆಲಸವೂ ಸಾಗದೆ, ಅತ್ತ ಕೇವಲ 3-4 ಸಾವಿರ ರೂಪಾಯಿಗಳ ಕೂಲಿ ಕೊಟ್ಟಿದ್ದರೆ ಆಗುತ್ತಿದ್ದಂಥ ಬದುಕಿಗೆ ಅವರು ವಿಶೇಷ ಹಣವನ್ನೇ ಖರ್ಚುಮಾಡುವಂತೆ ಮಾಡಬಾರದು. ಇಂಥದ್ದಕ್ಕೆ ತಾವು ಮುಖ್ಯ ಗಮನ ಕೊಡಬೇಕೆಂದು ಹೇಳಿ, ಒಟ್ಟಿನಲ್ಲಿ ರೈತರಿಗೆ ಹೆಚ್ಚು ಹಣ ಖರ್ಚಾಗುವಂತೆ ಮಾಡದೆ ವಿವೇಕದಿಂದ ಕೆಲಸ ನಡೆಸಲು ಅವಕಾಶ ದೊರೆಯುವಂತೆ ಇದ್ದರೆ ಮಾಡ

ಬೇಕೆಂದು ಹೇಳಿ ನಾನು ಈ ಬಡ್ಜೆಟ್ಟನ್ನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ.

Sri Mulka GOVINDA REDDY (Chitaldrug).—Mr. Speaker, Sir, at the out-set I would like to take very strong objection to the way in which the members of this Legislature have been treated. The privileges, the rights have been curtailed by the Government with regard to the constitutional amendments. Under the Constitution, any amendment of the Constitution shall take place according to the procedure prescribed here. Article 368 :

> "An amendment of this Constitution may be initiated only by the introduction of a Bill for the purpose in either House of Parliament, and when the Bill is passed in each House by a majority of the total membership of that House and by a majority of not less than two-thirds of the members of that House present and voting, it shall be presented to the President for his assent and upon such assent being given to the Bill, the Constitution shall stand amended in accordance with the terms of the Bill.
>
> "Provided that if such amendment seeks to make any change in. . . . . .
>
> the amendment shall also require to be ratified by the Legislatures of not less than one-half of the States specified in Parts A and B of the First Schedule by resolutions to that effect passed by these Legislatures before the Bill making provision for such amendment is presented to the President for assent."

The Chief Minister has admitted on the 11th or 12th of October, the Central Government sent an intimation to the Government of Mysore that the Constitution (Third Amendment) Bill was being discussed and passed by the Parliament and that it should be discussed by the State Legislatures. The Council as well as the Legislative Assembly were in session for ten days afterwards and the extracts and the complete proceedings on that Constitution (Third Amendment) Bill were sent to the Government of Mysore on the 24th of October. This amendment was necessary as it would expire on the 26th of January 1955. There was plenty of time for the Government of Mysore to convene a session of this Assembly and take the opinion of the members of this Assembly on that Constitution (Third Amendment) Bill. In spite of long time having been allowed to the Government of Mysore, they did not care to convene an emergent session of this Assembly and take the opinion of the members of this Assembly and I also fail to understand why the President gave his assent to this Bill when the procedure as laid down in Article 368 was not followed. I therefore urge that the Government should never give room for such lapses and the privileges of the members of this House should not be curtailed.

There is a great deal of talk regarding the economic objective of the Congress Governments.

Sri K. HANUMANTHAIYA.—Not mere talk ; it is deed.

Sri Mulka GOVINDA REDDY.—From the Co-operative they came to Welfare State. From Welfare State they have come to Socialistic Pattern of Society.

Sri Kadidal MANJAPPA (Minister for Revenue Public Works).—Which you are afraid of.

Sri Mulka GOVINDA REDDY.—I am not afraid. Pandit Nehru while moving this resolution at the Avadi Congress, stated :

> "Planning should take place with a view to the establishment of a socialistic pattern of society where the principal means of production are under social ownership or control, production is progressively speeded up and there is equitable distribution of the national wealth."

As regards this I have no quarrel. I welcome this. But Maulana Azad stated in the Subjects Committee that it is only a reiteration of the stand that was already taken by the Congress. This is only an election slogan.

Sri Kadidal MANJAPPA.—From which book you are reading ?

Sri Mulka GOVINDA REDDY.—This is 'Janata' published in Bombay. Why was this sudden urge for Pandit Nehru or for the Congress to make a departure in their statements of policy ? I understand and anyone can easily infer that it was because he returned from China where he saw so much of progress in that country. He thought that if he were to proceed in the old rut, it might not be possible to take the country to the cherished goal. So we have got to change our tactics and policy. It is only after seeing the progress in China he thought that it was necessary to give a new orientation to their policy and that this socialistic pattern of society would be helpful in moulding the country. Yesterday, in a very simple way Sri Imam explained what socialism is. (*Laughter*). I am not going into the theories and thesis ; it will take at least two days for me to explain. (*Laughter*). He has explained in a simple way so that it can be understood by the common man in the street. So also Bernard Shaw has explained in that way. I would like to read what Bernard Shaw has said in "The Intelligent Woman's Guide to Socialism and Capitalism". Bernard Shaw with his characteristic pragmatism, boiled down socialism to economic equality. He has said in that book :

> "The only satisfactory plan is to give everybody an equal share, no matter what sort of a person she is or how old she is, or what sort of work she does, or what her father was. Socialism faces Caesars and Soviets, Presidents and patriarchs, British Cabinets and Italian Dictators or Popes, patrician oligarchs and plebeian demagogues, with its unshaken demonstration that they cannot have a stable and prosperous State without equality of income. They may plead that such equality is ridiculous. That will not save them from the consequences of inequality."

Therefore, economic equality is the criterion The State Governments or the Central Government after the dawn of independence, have done nothing to bring down the inequality or to see that the economic equality is achieved. The following table reveals the income distribution. I will read it out :

Range of income			Per cent of population	Per cent of National Income
Rs.		Rs,		
3,000	to	4,999	0·86	2.05
5,000	to	9,999	0·37	2.00
10,000	to	14,999	0.13	1.18
15,000	to	24,999	0.08	1.25
25,000	to	49,999	0.05	1.5
50,000	to	99,999	0.016	0.94
100,000 and above			0.008	1.25

It will be evident that .35 per cent of the population receives 6.25 per cent of the national income.

Mr. SPEAKER.—The Hon'ble Member is spending his time in reading out such matters.

Sri Mulka GOVINDA REDDY.—Regarding the industrial concerns and managements that are vested in some of the managing agents, 503 important industrial concerns are managed by 3,728 Directors. This does not mean there are 3,728 individual Directors. Only 1,013 hold the 3,728 Directorships. Again, of these, 800 Directorships are held by 20 persons who really rule India. (Asoka Mehta's "Who Owns India ? ")

Mr. SPEAKER.—It will not help our Budget discussion now. You have touched on the point. Leave it at that.

Sri Mulka GOVINDA REDDY.—A Director of a Bank draws Rs. 5,000 ; an I.C.S. Secretary Rs. 3,000 to 4,000. An I.A.S. Officer draws Rs, 1,800 to Rs. 2,500. The ratio of disparity works out to be roughly 1 : 8,000 in India. It is about 1 : 80 in Russia and 1 : 7 in Socialist Israel. Yesterday, Sir, some people were telling that the National Income, *i.e.*, income per capita, has increased. I would like to give you some information that has been furnished in one of his books by Dr. V. K. R. V. Rao.

Mr. SPEAKER.—Does it refer to the national income of Mysore State?

Sri Mulka GOVINDA REDDY.—It applies to Mysore State also.

"Dr. V. K. R. V. Rao, in a recent article in the annual number of CAPITAL compared the findings of a national income survey he had conducted for 1931–32. . ."

It should be noted, Sir, that 1930-31 was a world depression year.

"...... with the results of the National Income Committee's inquiry for 1950-51. The most important conclusion that Dr. Rao had drawn from it was that during the two decades, between 1931-32 and 1950-51, the per capita annual national income had practically remained constant in real terms. While it was estimated to be Rs. 62 in 1931-32, the figure for 1950-51 was Rs. 265, an increase of about 327 per cent in money terms. If the increase in price level during the period was taken into consideration, it would come down to Rs. 64.2 at constant prices.

"Dr. Rao further showed that contary to the popular impression, the average wage per factory worker in 1950-51 was less than that in 1931-32 in terms of constant prices, the increase in the money wage being 270 per cent as against a rise in prices of 310 per cent."

Therefore, Dr. Rao says that there has been a shift in favour of the higher income groups among the agricultural classes also.

Mr. SPEAKER.—The Hon'ble Member has already taken 15 minutes.

Sri Mulka GOVINDA REDDY.—So, the Congress Government have not done anything to bring down the inequality and disparity of incomes. Mr. Deshmukh, while presenting the Central Budget to the Parliament, has imposed a heap of taxes which we have got to bear. Sri Lal Bahadur Shastri, the Railway Minister has also imposed taxes by way of increased railway charges on passengers travelling more than 150 miles.

Sri K. HANUMANTHAIYA.—These are Central subjects and I do not know whether he is in order in making a speech on subjects which are in the purview of the Centre.

Sri J. MOHAMED IMAM.—We are ventilating our grievances because of the taxes imposed by the Centre.

Mr. SPEAKER.—You have your representatives in the Parliament and the Council of States. They will ventilate the grievances. I have no objection to your ventilating grievances on the levy of taxes, but we should consider whether it will not be a waste of the time of this House.

Sri J. MOHAMED IMAM.—What the cumulative effect will be on account of the taxes imposed is being further amplified by the member.

Mr. SPEAKER.—The Hon'ble Member will please confine himself to the Budget. He has already taken sufficient time. I will allow him five more minutes only.

Sri Mulka GOVINDA REDDY.—We have to pay more for our sugar; we have to pay more for our cloth. Further, there is another feature which has been lost sight of by some of the members. It is regarding the income-tax levy. Even the unmarried persons are going to be taxed on an income of one thousand rupees they will be getting. This is going to be levied.

A Member.—(*On bachelors*).

Sri Mulka GOVINDA REDDY.—Not only on bachelors, but on middle class people. If they are rich bachelors, it does not matter. But the pity is that the poor and middle class people are going to be affected for the increase in railway fares for the first 150 miles.

Mr. SPEAKER.—May I bring to the notice of the Hon'ble Member that there is some force in the point raised by the Leader of the House? Our scope of discussion is limited only to the omissions and commissions of our Government and also of the administration within the control of our Government. Therefore, I can only allow Hon'ble Members to make a passing remark on this subject.

Sri Mulka GOVINDA REDDY.—The Mysore Government propose to levy

(SRI MULKA GOVINDA REDDY.)

agricultural income-tax on plantations and certain lucrative commercial crops on a sliding scale with suitable exemption limits. When the prices of the agricultural commodities are falling, when State Governments and Central Government are actively considering the question of price support—I understand that the Madhya Pradesh Government has already made arrangements for buying up Jawar and other things—I cannot understand how the Government of Mysore could think of levying taxes on certain lucrative commercial crops on a sliding scale with suitable exemption limits. I would like to show to the House to what extent the prices of agricultural commodities and commercial crops have fallen down.

Sri K. HANUMANTHAIYA.—I cannot understand his theory. We are not taxing the agriculturists as such, but only their income. If they get sufficient income, they will have to otherwise pay; they do not pay.

Mr. SPEAKER.—At any rate it is not opposed to the policy of Socialism.

Sri Mulka GOVINDA REDDY.—Cotton which was being sold at Rs. 11 per maund has come down to Rs. 6 per maund, falling by 45 per cent.

Groundnut from Rs. 6 to Rs. 3—has fallen by 50 per cent.

Chillies from Rs. 30 to Rs. 15—has fallen by 50 per cent.

Jaggery from Rs. 4-8-0 to Rs. 2-8-0—has fallen by 45 per cent.

Cotton seeds from 7 seers per rupee to 16 seers per rupee—has fallen down by 60 per cent.

Jawar from Rs. 28 to Rs. 18—has fallen by 40 per cent.

White jawar from Rs. 38 to Rs. 28—has fallen by 45 per cent.

Ragi from Rs. 35 per palla to Rs. 17—has fallen by 50 per cent.

Navane from Rs. 25 per palla to Rs. 14—has fallen by 48 per cent.

Paddy from Rs. 25-28 per palla to Rs. 15-20—has fallen by 40 per cent.

Wheat from Rs. 60 to Rs. 30—has fallen by 50 per cent.

Horsegram from Rs. 30 to Rs. 20—has fallen by 33 per cent.

Bengalgram from more than Rs. 50—to 25—has fallen by 50 per cent.

Sri K. HANUMANTHAIYA.—This is just like AIR's announcement of prices.

Sri Mulka GOVINDA REDDY.—I have announced this so that you can gauge the fall in agricultural prices and how much it is going to affect the ryot whom our Government are seriously considering to help from his present predicament.

On page 2, the Finance Minister has stated : "We had the privilege of the visit of Marshal Tito, President of Yugoslavia." We welcomed Marshal Tito's visit. But, unfortunately, members of this Legislature were not given an opportunity to meet Marshal Tito. It is a lapse on the part of the Government. They should not resort to it again.

Regarding efficiency in administration, Sri Pattabhiraman has touched that point yesterday that there is a fall in efficiency of administration. . . .

Sri K. HANUMANTHAIYA.—No, no. He did not say that.

Sri Mulka GOVINDA REDDY.—There is a fall in efficiency in administration. I would earnestly urge for decentralisation of powers. Too much concentration of power will not be for the Government to function efficiently and will not help the ryot who is in need of speedy remedy.

Regarding land distribution, Sir, Sri Pattabhiraman has very rightly pointed out that it is better that land grant is distributed on the spot itself. It will avoid litigation and trouble to the ryot, *i.e.*, the land that is available with the Government is distributed to the landless. Whatever is available, it is better that it is done on the spot and appeals avoided.

Regarding Education, on 30th January, a new scheme has been introduced. I want to point out that some of the students whose mother-tongue is not Kannada are forced to learn through Kannada as the medium of instruction in the high schools. This is really unthinkable. Students whese mother tongue isTelugu or Urdu should not bé compelled to learn through Kannada as the medium of

instruction. This is nothing but language imperialism. I would urge upon Government to allow telugu students to learn through Telugu as the medium of instruction. Regarding Public Works . . . .

Mr. SPEAKER.—Hon'ble Member may refer to the subjects he has not covered while speaking on Demands.

Sri Mulka GOVINDA REDDY.—Regarding Public Works, moneys that are allotted to this Department, the way in which those moneys are spent is really a scandal. Money is not spent throughout the year. Money is spent in January, February and March. Bills are rushed through and works are rushed through so much so that there is much leakage in this Department. In 1953 October, two tanks at Chitaldrug, Sangenahalli and Thuppadahalli tanks were breached. A Committee was appointed by the Government rightly under the Chairmanship of Sri L. Siddappa who is a member of the Opposition Party.

Mr. SPEAKER.—It goes to the credit of the Government.

Sri J. MOHAMED IMAM.—He said rightly.

Sri Mulka GOVINDA REDDY.—Whenever an allegation is made, whenever a charge is made, it is but right that the Government should appoint a Committee under the Chairmanship of an Opposition member. That is why I said rightly. They have submitted a note, *i.e.*, Sri L. Siddappa, and Sri H. R. Guruv Reddy. Why I am bringing this to the notice of this august House is—they have pointed out that certain action is necessary to be taken against the persons who were responsible for the defects of anecuts. So far we have not heard from the Government what action they have taken. This is how the note reads:

"It is clear from the conclusions reached by us that in the case of both the tanks the work from start to finish has not been done according to specifications. This leads us to an inference that the Engineer Officers who were entrusted with the task of executing these two important new works have, either, as is alleged by the residents of some of the villages surrounding Sangenahalli tank, been corrupt and have allowed higher rates for manifestly inferior work with a view to share the profits or they have been grossly negligent in their duties, thus causing great loss to the State Exchequer.

"The land-owners below these two tanks have also suffered great loss owing to sudden on rush of water. Crops on their lands have been washed away, top soil on cultivated lands has been eroded making the lands unfit for cultivation for one or two years to come and in some instances a lot of silt has been deposited in irregular shapes. We were also told that many irrigation wells have been silted up. We have not assessed the damage caused to the land-owners due to the loss of crops, and damage done to the lands and kapila wells as it was outside the scope of our enquiry and also as the local Revenue Authorities have made an assessment of the same. When we were in Jagalur the Amildar showed us a copy of the damage report he has made to the higher authorities and it looked to us to give a fair estimate of the damages caused to the land-owners.

"Whether the Engineer Officers allowed this bad work out of corrupt motives or due to indifference or negligence in the discharge of their duties we are of opinion they are equally guilty and they should not be allowed to go unpunished. We leave it to Government to cause such further enquiry as they deem fit to apportion the guilt among the several officers and officials who were responsible for the preparation of the projects, for checking the same and for executing the works connected therewith as we see that so many officers are connected with them. In addition to any disciplinary action that may be taken against them, the officers responsible have

(SRI MULKA GOVINDA REDDY.)

to be made to pay at least a token amount out of the loss that Government will have to incur to make good the damages. Our proposals for punishment and for recovery of the losses may seem very drastic."

What they have stated here applied equally to other works that the Government have undertaken under the Public Works Department.

Mr. SPEAKER.—You have taken more than 25 minutes.

Sri Mulka GOVINDA REDDY.—Yes. Regarding Road Transport, we have all along welcomed the Road Transport to be nationalised. It is good that they have taken up some routes. We want the Government to take up some more routes. The profit that has been shown was acclaimed to be due to efficient management and reduction in operational costs. There was plenty of overloading in these Government buses. I do not know why under the law of the land, the Government buses should be treated on a separate footing apart from private operators ? On the other hand, I understand the Chief Minister awarded a medal to one of the drivers and the conductors of a bus which was plying from Bangalore to Hassan for having brought Rs. 720 per trip. The maximum capacity of a bus would be about 40 and if the rate is Rs. 5 per trip and Rs. 10 up and down, it will be Rs. 400. I cannot understand how the Chief Minister presiding over a function gave rewards for such breaking of law. On the other hand, they should have been punished.

Lastly, this is very interesting. Our Ministers go about parading, opening bazaars, opening mutton shops and opening tea stalls: . . .

Sri Kadidal MANJAPPA.—No mutton shop was ever opened by any Minister.

Sri Mulka GOVINDA REDDY.—I tell you that a mutton shop was opened by Sri T. Mariappa when he was the Home Minister. When emergent situation arises in Mysore State, these Ministers will not have time to meet the concerned persons. When the Electric strike in Mysore State could have been avoided, these Ministers refused to meet the representatives of the Labour Union, especially, I am referring to the Minister for Electricity. He refused to meet the President of the Electricity Employees Union. If he had met them, I am sure, the differences could have been thrashed out and the strike could have been easily averted. It was because of the intransigence of the Government and because of their persistence not to meet the concerned persons that this Electric strike took place. It was not on very fundamental differences, but, because the Chief Minister and some of the Ministers paraded that the electrical employees wanted more amenities and their demands were unreasonable, that the strike took place. The Government, the Conciliation Officer before whom conciliation proceedings took place, were prepared to concede and they did concede certain demands, but the hitch came because the Government wanted to insert 18 months, clause wherein they demanded that the employees should not make any fresh demands during the period of 18 months. According to the Industrial Disputes Act, only 6 months could be demanded and it was the right of any industrial concern to demand that period. So, because of this insertion at a later stage by Government, the electric strike took place. The Hon'ble the Chief Minister was not prepared to discuss this matter with the Members of this Legislature, that is, myself and Sri Gopala Gowda. We wanted to avert the strike but the Chief Minister was not prepared to discuss this matter with us. On the other hand, he could afford time to attend tea parties and dinner parties ; if he was prepared to attend a tea party organised by a barman, it is really ridiculous and shameful that such a thing should happen, Sir and I only warn that our Ministers should be careful.

Sri Kadidal MANJAPPA.—I want to know who is that barman ?

Sri Mulka GOVINDA REDDY.—He attended a Tea Party arranged in Ambassador Hotel.

Sri Kadidal MANJAPPA.—Arranged by whom?

Sri Mulka GOVINDA REDDY.—By the proprietor of that Hotel. Barman means one who sells liquor.

Mr. SPEAKER.—The Hon'ble Member should close his speech.

Sri Mulka GOVINDA REDDY.—This state of affairs should not continue. Our Ministers should know where to accept, from whom to accept such addresses or dinners or tea parties.

Sri J. MOHAMED IMAM.—When are we dispersing?

Mr. SPEAKER.—There are so many Hon'ble Members willing to speak. I think we can continue till 6 o'clock.

Sri G. SHIVAPPA.—There is the Congress Exhibition.

Mr. SPEAKER.—I leave it to the House to consider which is more important. So, we shall sit up to 6 o'clock.

ಶ್ರೀ ಜಿ. ದುಗ್ಗಪ್ಪ (ಹೊಳಲ್ಕೆರೆ—ಅನುಸೂಚಿತ ಜಾತಿಗಳು).—1955-56ನೇ ಆಯವ್ಯಯದ ಪಟ್ಟಿಯನ್ನು ನಾನು ಸ್ವಾಗತಿಸುತ್ತಾ ಒಂದೆರಡು ಮಾತುಗಳನ್ನು ಹೇಳ ಬಯಸುತ್ತೇನೆ. ನನ್ನ ಮಾನ್ಯ ಸ್ನೇಹಿತರಾದ ಶ್ರೀಮಾನ್ ಮುಲ್ಕಾ ಗೋವಿಂದರೆಡ್ಡಿಯವರಿಗೆ "Shame" ಎಂದು ಹೇಳುತ್ತಾ ಇರುವುದು ಮತ್ತು ವಿರೋಧಿಸುವುದೇ ಒಂದು ಚಾಳಿ ಆಗಿದೆ. ಆದ್ದರಿಂದ ಇದರ ಬಗ್ಗೆ ಹೆಚ್ಚಾಗಿ ಗಮನ ಕೊಡಬೇಕಾದುದಿಲ್ಲವೆಂದು ಹೇಳುತ್ತೇನೆ.

Sri Mulka GOVINDA REDDY.—Without fear or favour, we want to say what we wish to say.

ಶ್ರೀ ಜಿ. ದುಗ್ಗಪ್ಪ.—ಅದಕ್ಕೇ ಅಭ್ಯಾಸ ಆಗಿದೆಯೆಂದು ಹೇಳಿದುದು. ಎದುರುಪಕ್ಷದ ನಾಯಕರು ಹೇಳುವುದು ಒಂದೇದಾಟಿ.

ಸ್ವಾಮಿ, ನನ್ನ ಮಾನ್ಯ ಸ್ನೇಹಿತರಾದ ಶ್ರೀಮಾನ್ ಜಿ. ಶಿವಪ್ಪನವರು Family planning ವಿಷಯ ಬಹಳವಾಗಿ ಹೇಳಿದರು. ಅವರ ಮಾತನ್ನೂ ಅವರ ವಾದದ ಸರಣಿಯನ್ನೂ ಕೇಳುತ್ತಾ ನನಗೆ ಶ್ರೀಮಾನ್ ರಾಮಮೂರ್ತಿಯವರ ಭಾಷಣ ನೆನಪು ಆಯಿತು. ಅವರು ಮೈಸೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ಭಾಷಣ ಮಾಡುತ್ತಾ "ಚೈನಾ ಈ ದಿವಸ ದೊಡ್ಡ ಜನಶಕ್ತಿ ಸಹಾಯದಿಂದ ಅಂತಹ ದೊಡ್ಡ ಪ್ರಗತಿಯನ್ನು ಸಾಧಿಸುವುದಕ್ಕೆ ಸಾಧ್ಯವಾಯಿತು. ಇಂಡಿಯಾದಲ್ಲಿ ಇದನ್ನು ಉದಾಹರಣೆಯಾಗಿಟ್ಟುಕೊಂಡು ಹೇಳಬೇಕಾದರೆ ಇಲ್ಲಿರುವ ಜನಶಕ್ತಿ ಮತ್ತು ವಿದ್ಯುಚ್ಛಕ್ತಿ ಇವೆರಡನ್ನೂ ಸರಿಯಾಗಿ ಅಭಿವೃದ್ಧಿಮಾಡಿಕೊಂಡಲ್ಲಿ ಮಾತ್ರ ನಮ್ಮ ದೇಶದಲ್ಲಿ ಪ್ರಜಾ ಪ್ರಭುತ್ವ ಸರಿಯಾಗಿ ನಡೆಯುತ್ತದೆ" ಎಂದು ಹೇಳಿದರು. "Man plus electricity is equal to democracy in India" ಎಂದು ಹೇಳಿದ ಹಾಗಾಯಿತು. ಇದು ಮೈಸೂರಿಗೆ ಬಹಳ ಚೆನ್ನಾಗಿ ಅನ್ವಯಿಸುತ್ತದೆ. ನಮ್ಮಲ್ಲಿ ವಿದ್ಯುಚ್ಛಕ್ತಿ ಇದೆ. ಇಂಡಿಯಾ ದೇಶದಲ್ಲೆಲ್ಲಾ ಪ್ರಪ್ರಥಮವಾಗಿ ವಿದ್ಯುಚ್ಛಕ್ತಿಯನ್ನು ತಯಾರು ಮಾಡಲು ಪ್ರಾರಂಭಿಸಿದವರು ನಾವು. ಅಂತಹುದರಲ್ಲಿ ನಾವು population ಜಾಸ್ತಿಯಾಗುತ್ತದೆ ಎಂಬುದರಲ್ಲಿ ಯಾವ ವಿಧವಾದ ಶಂಕೆ ಇಟ್ಟುಕೊಳ್ಳಬೇಕಾದುದೂ ಇಲ್ಲ ಎಂದು ಶ್ರೀ ಶಿವಪ್ಪನವರಿಗೆ ಒಂದು ಮಾತನ್ನು ಹೇಳಬೇಕಾಗಿದೆ. ಶ್ರೀಮಾನ್ ಮ್ಯಾಸ್ಕರನ್ಹಾಸ್‌ರವರು ಬಹಳ ಹೆಚ್ಚು ಹಣವನ್ನು Irrigationಗೋಸ್ಕರ ಏತಕ್ಕೆ ಖರ್ಚುಮಾಡಬೇಕು ಎಂಬ ಬಗ್ಗೆ ಕೇಳಿದರು. ಈ ಮಾನ್ಯ ಸಭೆಯ ಗಮನಕ್ಕೆ ಒಂದು ಅಂಶ ತರುತ್ತೇನೆ. ವಿಜ್ಞಾನದಲ್ಲಿ ಎಷ್ಟೇ ಪ್ರಪಂಚ ಮುಂದುವರಿದರೂ ಸಹ ಇಲ್ಲಿಯವರೆಗೆ ವಿಜ್ಞಾನಿಗಳಿಗಾಗಲಿ, Scientistsಗಳಿಗಾಗಲಿ, ದವಸವನ್ನೂ, ಆಹಾರ ಧಾನ್ಯಗಳನ್ನೂ ತಯಾರು ಮಾಡತಕ್ಕಂಥ ಒಂದು ವಿಧಾನವು ಇದುವರೆಗೂ ಗೊತ್ತಾಗಿಲ್ಲ. ಈ ರೀತಿ ಮೂಲವಸ್ತುಗಳಿಂದ ಆಹಾರ ಧಾನ್ಯಗಳನ್ನು ತಯಾರುಮಾಡುವ ಒಂದು ಶಕ್ತಿ ಇರತಕ್ಕಂಥಾದ್ದು ಸಸ್ಯಗಳಿಗೆ ಮಾತ್ರ. ಸಸ್ಯಗಳಿಗೆ ಬರತಕ್ಕಂಥ ಶಕ್ತಿ ಭೂಮಿಯಲ್ಲಿ ಇರತಕ್ಕಂಥ ನಾಲ್ಕು ಅಂಗುಲ ಮಣ್ಣಿನಿಂದ. ನಮ್ಮಲ್ಲಿರತಕ್ಕಂಥ electricityಯು ಪ್ರತಿಯೊಂದು ಸೌಕರ್ಯವನ್ನೂ ನಾವು ಈ ದಿವಸ ಪಡೆಯುತ್ತಿದ್ದೇವೆ. ಆದರೆ ಆಹಾರ ಧಾನ್ಯಗಳನ್ನು ಬೆಳೆಯುವ ಶಕ್ತಿ ಈ ದಿವಸ ಇರುವುದು ಗಿಡ ಸಸ್ಯಗಳಿಗೆ ಮಾತ್ರ. ವ್ಯವಸಾಯವನ್ನೇ ಆಧಾರ ಭೂತವನ್ನಾಗಿ ನಂಬಿಕೊಂಡಿರುವ ಮಳೆಯ ನೀರನ್ನೇ ಆಶ್ರಯಿಸಿಕೊಂಡು ಬೆಳೆಯತಕ್ಕಂಥ ನಮ್ಮ ದೇಶದಲ್ಲಿ ವ್ಯವಸಾಯದಲ್ಲಿ ಹೆಚ್ಚುಹೆಚ್ಚು ಮುಂದುವರಿಯುವುದಕ್ಕೆ ಎಷ್ಟು ಹಣವನ್ನು ಖರ್ಚುಮಾಡಿ ನೀರನ್ನು ಕೊಡಿಟ್ಟರೂ ಸಹ ಅದು ಕಮ್ಮಿ ಎಂದು ಹೇಳಬೇಕು. ನಾನು ಮರಾಮತ್ ಇಲಾಖೆಯ ಬಗ್ಗೆ ಒಂದೆರಡು ಮಾತನ್ನು ಆಡಬೇಕೆಂದು ಬಯಸುತ್ತೇನೆ.

ಅಧ್ಯಕ್ಷರು.—ಅದರ ಮೇಲೆ ಏತಕ್ಕೆ ಹೆಚ್ಚಿಗೆ ಆಶೆ?

ಶ್ರೀ ಜಿ. ದುಗ್ಗಪ್ಪ.—ಮರಾಮತ್ತು ಇಲಾಖೆ ಮಲಾಮತ್ತು ಇಲಾಖೆಯಾಗಿದೆ. ಈ ಇಲಾಖೆಗೆ ಸಂಬಂಧಪಟ್ಟ ಕಾಗದ ಪತ್ರಗಳು ಎಲ್ಲಿಗೆ ಹೋಗುತ್ತವೆ, ಎಲ್ಲಿಗೆ ಬರುತ್ತವೆ ಎಂಬ ವಿಚಾರ ಗೊತ್ತಾಗುವುದಿಲ್ಲ. There must be some man interested and he must follow the paper. Them only the paper will move from table to table or from office to office. Otherwise we do not know what happens to those papers.

ಒಂದು ಉದಾಹರಣೆಗೆ ಹೇಳುವುದಾದರೆ 1946ನೇ ಇಸವಿಯಲ್ಲಿ ಶ್ರೀಮಾನ್ ಎಲ್. ಸಿದ್ದಪ್ಪನವರು Minister ಆಗಿದ್ದಾಗಿನಿಂದಲೂ ಒಂದು ಕೆರೆ ಕಟ್ಟಬೇಕು ಎಂದು ಕೇಳಿ ಕೊಳ್ಳುತ್ತಿದ್ದಾರೆ. ನಮ್ಮಲ್ಲಿ ಒಂದು ಸ್ಥಳ ಇದೆ. ಹೆಚ್ಚಾಗಿ ನೀರು ಅಲ್ಲಿ ಹರಿದು ಹೋಗುತ್ತದೆ. ಅದಕ್ಕೆ ಅಡ್ಡಲಾಗಿ ಏರಿಹಾಕಿದರೆ ಕೆರೆ ಆಗುತ್ತದೆ. ಅದನ್ನು 1946ನೇ ಇಸವಿಯಿಂದ ಇಲ್ಲಿಯವರೆಗೂ ಮಾಡಿಸಿಕೊಡಿ ಎಂದು ಹೇಳಿಗಿದ್ದಾಯಿತು. ನಾವು papers follow ಮಾಡುತ್ತಿಲ್ಲ. ಒಬ್ಬ interested person ಇದ್ದರೆ ಹೇಗೆ ಒಂದು ಕೆಲಸ ಆಗಬಹುದೋ ಅಷ್ಟು ವೇಗವಾಗಿ ಈ ಕೆಲಸವಾಗುವುದಿಲ್ಲ. ಅಂತು ದೇವರದಯದಿಂದ ಈ ವರುಷದ Budget ನಲ್ಲಿ ಅದನ್ನು ಸೇರಿಸಿದ್ದಾರೆ. ಆದರೆ ಒಂದು ವಿಚಾರವನ್ನು ಮಾತ್ರ ವಿಷಾದದಿಂದ ಹೇಳಬೇಕಾಗಿದೆ. ಈ ಸಾಲಿಗೆ 5 ಸಾವಿರ ರೂಪಾಯನ್ನು ಮಾತ್ರ ಖರ್ಚುಮಾಡಬಹುದು ಎಂದು ಹೇಳಿದ್ದಾರೆ, Administrative

(ಶ್ರೀ ಜಿ. ದುಗ್ಗಪ್ಪ.)

sanction, technical sanction ಎಂದು ಏನೇನು ಇವೆಯೋ; ಇವು ಆಗುವುದರೊಳಗಾಗಿ ಏನೇನು ಆಗುತ್ತದೋ ಈ ಡಿಪಾರ್ಟ್‌ಮೆಂಟಿನ ಮಲಾಮತ್ತಿನಲ್ಲಿ ಹೇಳುವುದಕ್ಕೆ ಸಾಧ್ಯವಿಲ್ಲ.

ಈ ಬಗ್ಗೆ, ತಾವು, ಯಾವ interested party ಇಲ್ಲದೆ ಇದ್ದರೂ ಸಹ, ಪ್ರತಿದಿವಸವೂ ಸರ್ವೆ ಸಾಮಾನ್ಯವಾಗಿ ಕಾಗದ ಪತ್ರಗಳು ಬೇಗಬೇಗ ಆಫೀಸಿನಿಂದ ಆಫೀಸಿಗೆ ಹೋಗುವಂತೆ ಮಾಡಬೇಕೆಂದು ಹೇಳುತ್ತೇನೆ. ಇಲಾಖಾ ಮೊಖ್ತೇಸರುಗಳು ಒಂದಂಶವನ್ನು ಮುಖ್ಯವಾಗಿ ನೆನಪಿನಲ್ಲಿಡಬೇಕಾಗಿತ್ತು. ಸುಮಾರು 10 ವರುಷಗಳಾದರೂ ಈ ಕೆಲಸ ಪ್ರಾರಂಭವಾಗಿ ಪೂರ್ತಿಯಾಗದೆಯಿದ್ದ ಮೇಲೆ, ಅದರಿಂದಾಗಿ ದೇಶದ ಉತ್ಪನ್ನ ಎಷ್ಟು ಕಮ್ಮಿಯಾಯಿತು ಎಂಬುದನ್ನು ಈ ಮೊಖ್ತೇಸರುಗಳು ಗಮನಿಸಲಿಲ್ಲವಲ್ಲಾ ಎಂದು ವಿಷಾದ ಪಡಬೇಕಾಗಿದೆ. ಈ ಅಂಶವನ್ನು ತಾವು ಇನ್ನಾದರೂ ಈ ಇಲಾಖಾ ಮೊಖ್ತೇಸರುಗಳ ಗಮನಕ್ಕೆ ತಂದು ಅವರಿಗೆ ಮನವರಿಕೆಯಾಗುವಂತೆ ಹೇಳುತ್ತೀರೆಂದು ನಂಬಿದ್ದೇನೆ.

ಆಮೇಲೆ, ನಮ್ಮ ಮಾನ್ಯ ಸದಸ್ಯರು ಹೇಳಿದ ಒಂದು ಮಾತನ್ನು ನಾನು ಪುನಃ ಹೇಳಬಯಸುತ್ತೇನೆ. ಪುನರುಕ್ತಿಯಾದರೂ ತಪ್ಪಿಲ್ಲವೆಂದು ನಾನು ಭಾವಿಸುತ್ತೇನೆ. ಈಗ ನಮ್ಮಗಿರತಕ್ಕ ಕಾನೂನಿನ ಪ್ರಕಾರ ಒಬ್ಬರಿಗೆ ಇಷ್ಟು ಜಮೀನನ್ನು ಕೊಡಬಹುದೆಂದು ಸ್ಥಳೀಯ ಅಧಿಕಾರಿಗಳಿಗೆ ಅಧಿಕಾರ ಕೊಟ್ಟಿದೆ. ನಮ್ಮ ಜಿಲ್ಲೆಯ ಡೆಪ್ಯುಟಿ ಕಮಿಷನರ ವಿಚಾರ ಹೇಳುವುದಾದರೆ ಅಲ್ಲಿ ಇಲ್ಲಿಯವರೆಗೂ ಒಂದು ಎಕರೆಯ ವಿಷಯದಲ್ಲಾಗಲಿ, ಒಂದು ಗುಂಟೆಯ ವಿಷಯದಲ್ಲಾಗಲೀ ಒಂದು ಅಪೀಲು ಕೂಡ ಹೋಗಿಲ್ಲ. ಎಲ್ಲೆಲ್ಲಿ ಜಮೀನಿದೆಯೋ ಅಲ್ಲಿಯೇ ಡೆಪ್ಯುಟಿ ಕಮಿಷನರು ಸಂಬಂಧಪಟ್ಟವರನ್ನು ಕರೆಸಿಕೊಂಡು ಅಲ್ಲೇ dispose ಮಾಡುತ್ತಿದ್ದಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಅಪೀಲಿಗೆ ಅವಕಾಶವಿರಕೂಡದೆಂದು ತಮ್ಮ ಅಭಿಪ್ರಾಯವೇ?

ಶ್ರೀ ಜಿ. ದುಗ್ಗಪ್ಪ.—ಅಲ್ಲಿಂದ ಒಂದೂ ಅಪೀಲ್ ಹೋಗಿಲ್ಲವೆಂದು ಹೇಳುತ್ತಿದ್ದೇನೆ ಅಷ್ಟೆ. ಈಗಿರತಕ್ಕ ಪದ್ಧತಿಯಲ್ಲಿ ಅಪೀಲ್ ಹೋಗುವುದಕ್ಕೆ ಎಷ್ಟೋ ಅವಕಾಶವಿದೆ; ಅದನ್ನು ತೆಗೆಯಬೇಕೆಂದು ನಾನು ಹೇಳುತ್ತಿಲ್ಲ. ಆದರೆ, ಅದೇನು ಗ್ರಹಚಾರವೋ, ಸಾಮಾನ್ಯವಾಗಿ ಡಿಪ್ರೆಸ್ಡ್ ಕ್ಲಾಸ್‌ನವರಿಂದ ದರಖಾಸ್ತು ಅರ್ಜಿಗಳು ಬಂದಿತು ಎಂದರೆ ಪ್ರಪಂಚದಲ್ಲಿ ಇಲ್ಲದ ಇರತಕ್ಕ queryಗಳು ಬರುತ್ತವೆ, ಡೆಪ್ಯುಟಿ ಕಮಿಷನರು ಯಾರಿಗೆ ಕೊಟ್ಟರೂ ಸಾಮಾನ್ಯವಾಗಿ ಅಪೀಲ್ ಇರುತ್ತದೆ. ಇದರಿಂದಾಗಿ ಡಿಪ್ರೆಸ್ಡ್ ಕ್ಲಾಸಿನವರಿಗೆ ಜಮೀನು ಸಿಕ್ಕಬೇಕಾದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ, ನಾನು ಕೇಳಿಕೊಳ್ಳುವುದೇನೆಂದರೆ, ಎಲ್ಲಾ ಜಿಲ್ಲಾಧಿಕಾರಿಗಳೂ ಈ ದರಖಾಸ್ತು ಅರ್ಜಿಗಳನ್ನು ಖುದ್ದಾಗಿ ಪರಿಶೀಲನೆಮಾಡಿ ಯಾವ ಅಪೀಲಿಗೂ ಅವಕಾಶವಿಲ್ಲದ ರೀತಿಯಲ್ಲಿ ಜಮೀನಿಲ್ಲದಿರುವವರಿಗೆ ಸರಿಯಾಗಿ ಯಾವ ತೊಂದರೆಯೂ ಇಲ್ಲದೆ ಆದಷ್ಟು ಜಾಗ್ರತೆ ಜಮೀನು ಸಿಕ್ಕುವಂತೆ ಮಾಡಬೇಕೆಂದು ಹೇಳಿ ಸೂಕ್ತ ಸಲಹೆಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಚಾರ. ಮುಂಚೆ ನಮ್ಮಲ್ಲಿ Communal Schools ಎಂದು ಹೇಳಿ ಕೆಲವು ಪಂಗಡಗಳವರಿಗಾಗಿಯೇ ಎಂದು ಏರ್ಪಡಿಸಿದ್ದು ಇವೆ. ಅವನ್ನು ಖಂಡಿತವಾಗಿ ವಜಾಮಾಡಬೇಕು. ಮಕ್ಕಳು ಇನ್ನೂ ಚಿಕ್ಕ ವಯಸ್ಸಿನಲ್ಲಿರುವಾಗಲೇ ಹೀಗೆ special schools ಎಂದು ಅವರಿಗೆ ಮಾಡಿ ಕೋಮುವಾರು ಭಾವನೆಗಳನ್ನು ತುಂಬುವುದು ಸರಿಯಲ್ಲ. ಆದ್ದರಿಂದ ಆ ಸ್ಕೂಲುಗಳನ್ನು ವಜಾಮಾಡಿ ಜನರಲ್ ಸ್ಕೂಲುಗಳಾಗಿ ಪರಿವರ್ತನೆಮಾಡುವುದು ಅವಶ್ಯಕ.

ನಿಮ್ನ ತರಗತಿಯವರಿಗೆ ಕೊಡುತ್ತಿರುವ ಸ್ಕಾಲರ್‌ಷಿಪ್ಪುಗಳನ್ನು ನೋಡುವುದಾದರೆ, 1952-53ನೆಯ ಇಸವಿಯಿಂದಲೂ ಒಂದೇರೀತಿಯಾಗಿದೆ. 7-8 ವರ್ಷಗಳಿಂದ ನಿಮ್ನ ವರ್ಗದ ವಿದ್ಯಾರ್ಥಿಗಳ ಸಂಖ್ಯೆ ಒಂದೇ ಸಮನೆ ಜಾಸ್ತಿಯಾಗುತ್ತಿದ್ದರೂ ಸ್ಕಾಲರ್‌ಷಿಪ್ಪಿನ ಮೊತ್ತಮಾತ್ರ constant ಆಗಿದೆ. ಒಂದು ಬಿಲ್ಲೆಯನ್ನೂ ಕೂಡ ಜಾಸ್ತಿಮಾಡಿಲ್ಲ, ಅದನ್ನು ತಾವು ಸ್ವಲ್ಪ ಗಮನಿಸಬೇಕು. ಅಲ್ಲದೆ, 9,000 ರೂಪಾಯಿಗಳನ್ನು ಇಡೀ ಸಂಸ್ಥಾನಕ್ಕೆ girls' scholarshipಗೆಂದು ಕೊಟ್ಟಿದೆ. ಇತರ ಡಿಸ್ಟ್ರಿಕ್ಟ್‌ಗಳು ಏನು ಅನ್ಯಾಯ ಮಾಡಿವೆಯೋ ಕಾಣೆ, ಈ ಸ್ಕಾಲರ್‌ಷಿಪ್‌ನಲ್ಲಿ ಬಹುಭಾಗ ಬೆಂಗಳೂರು ಮತ್ತು ಕೋಲಾರಕ್ಕೇ ವಿನಿಯೋಗವಾಗುತ್ತಿದೆ. ಈ ಸಾರಿ ಚಿತ್ರದುರ್ಗಕ್ಕೆ ಒಂದೇ ಒಂದು ಸ್ಕಾಲರ್‌ಷಿಪ್ ದೊರೆತಿದೆ. ಒಟ್ಟಿನಲ್ಲಿ ಇದು equitable ಆಗಿ ಹಂಚಿಕೆಯಾಗುತ್ತಿಲ್ಲವೆಂದು ಹೇಳಬೇಕಾಗಿದೆ.

ಹಿಂದೆ ಕೆಲವು ಹಳ್ಳಿಗಳು ಅನೇಕ ಕಾರಣಗಳಿಂದ abandon ಆಗಿ, ಅವು ಈಗ State forestಗೆ ಸೇರಿವೆ. ಆ ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಾವಿಗಳೂ ಇವೆ; ಸಾಗುವಳಿಗೆ ಅನುಕೂಲವಾದ ಜಮೀನುಗಳೂ ಇವೆ. ಈಗ ಎಲ್ಲೆಲ್ಲೂ ಜಮೀನುಗಳುಬೇಕೆಂದು ಕೇಳುತ್ತಿರುವಾಗ ಈ ಹಳ್ಳಿಗಳನ್ನು restore ಮಾಡಿಕೊಟ್ಟು ಅಲ್ಲೇ ಒಂದು ಕಾಲೋನಿ ಏರ್ಪಡಿಸಿ ಅಭಿವೃದ್ಧಿಗೆ ತರುವುದಕ್ಕೆ ಸಹಾಯಮಾಡಬೇಕೆಂದು ನಾನು ಹೇಳುತ್ತೇನೆ. ಈ ಸಂದರ್ಭದಲ್ಲಿ ಆಲ್ದನಹಳ್ಳಿ ಡಿಪ್ರೆಸ್ಡ್ ಕ್ಲಾಸ್ ಕೋ-ಆಪರೇಟಿವ್ ಕಾಲೋನಿಯು ಉದಾಹರಣೆಯು ಅನುಕರಣೀಯವಾಗಿದೆ. ಸುಮಾರು 240 ಎಕರೆಗಳಿರತಕ್ಕ ಆ ಪ್ರದೇಶದಲ್ಲಿ 43 ಸಂಸಾರಗಳನ್ನು ಕೂಡಿಸಿ ಒಂದು ಕೋ-ಆಪರೇಟಿವ್ ಸೊಸೈಟಿಯನ್ನು ತೆರೆದರು. ಮೊದಲನೆಯ ವರ್ಷದಲ್ಲಿ 900 ರೂಪಾಯಿಗಳ ಸಾಲವನ್ನು ಸರ್ಕಾರದವರು ಕೊಟ್ಟರು. ಆ ವರ್ಷವೇ 10,998 ರೂಪಾಯಿಗಳ ಬೆಳೆಯಾಯಿತು. ಮಾರನೆಯ ವರ್ಷದಲ್ಲಿ ಅದೇ ಫಸಲು 21,491 ರೂಪಾಯಿನಷ್ಟು ಮೂರನೆಯ ವರ್ಷದಲ್ಲಿ 32,392 ರೂಪಾಯಿಗಳಿಗೆ ಏರಿತು. ಮುಖ್ಯಮಂತ್ರಿಗಳೇ ಅಲ್ಲಿಗೆ ಭೇಟಿ ಇತ್ತಾಗ ಅಲ್ಲಿದ್ದ ಭತ್ತದ ರಾಶಿಯನ್ನು ನೋಡಿ ಎಷ್ಟು ಸಂತೋಷಪಟ್ಟರು! ಇಂಥ ವ್ಯವಸಾಯದ ಕಾಲೋನಿಗಳನ್ನು ಏರ್ಪಡಿಸಿ ಅವುಗಳು ಅಭಿವೃದ್ಧಿಯಾಗುವುದಕ್ಕೆ ಸಹಾಯಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಈಗ ಹಾಲಿ ಕೆಲಸಮಾಡುತ್ತಿರತಕ್ಕ ಸೆಂಟ್ರಲ್ ಡಿಪ್ರೆಸ್ಡ್ ಕ್ಲಾಸ್ ಸಮಿತಿಯವರು ಒಂದು ನಿರ್ಣಯ ಮಾಡಿ ಒಂದು ಸಮಿತಿಯನ್ನೇರ್ಪಡಿಸಿದ್ದಾರೆ. ಆ ಸಮಿತಿಯಲ್ಲಿ ರೆವಿನ್ಯೂ ಕಮಿಷನರ್‌ರವರೂ ಇದ್ದಾರೆ. ಎಲ್ಲೆಲ್ಲಿ ಇಂಥ ಕಾಲೊನಿಗಳನ್ನು ಮಾಡುವುದಕ್ಕೆ ಯೋಗ್ಯವಾದ ಸ್ಥಳಗಳಿವೆಯೋ ಅಲ್ಲೆಲ್ಲಾ ಇಂಥಾ ಕಾಲೊನಿಗಳನ್ನು ಏರ್ಪಡಿಸಿ ಆದಷ್ಟುಮಟ್ಟಿಗೆ ಹಿಂದುಳಿದ ವರ್ಗದವರನ್ನು ಅಲ್ಲಿ ನೆಲಸುವಂತೆ ಮಾಡಿ ಅವರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವುದು ಈ ಸಮಿತಿಯ ಉದ್ದೇಶ. ಸರ್ಕಾರದವರು ಇದರ ಬಗ್ಗೆ ಸ್ವಲ್ಪ ಮಟ್ಟಿಗೆ ನಿಗಾವಹಿಸಬೇಕೆಂದು ಹೇಳುತ್ತೇನೆ

ಇತ್ತೀಚಿಗೆ ಸರ್ಕಾರದವರ ಹಿಂದುಳಿದ ವರ್ಗದವರ ಉಪಯೋಗಕ್ಕಾಗಿ ಹಾಸ್ಟಲುಗಳನ್ನು ಅಲ್ಲಲ್ಲೇ ಕಟ್ಟಿಸುತ್ತಿರುವುದು ಗಮನಾರ್ಹವಾದ ವಿಚಾರ. ಈ

ಹಾಸ್ಟೆಲುಗಳಿಗೆ ಪ್ರವೇಶಗಳನ್ನು ಕೊಡುವ ಬಗ್ಗೆ, ನನ್ನ ವೈಯಕ್ತಿಕ ಅಭಿಪ್ರಾಯವನ್ನು ಹೇಳುವುದಾದರೆ, ಅಲ್ಲಿ 25 ಪರ್ಸೆಂಟಿನಷ್ಟು ಸ್ಥಾನಗಳಿಗೆ ಬೇರೆ ಕಮ್ಯೂನಿಟಿಗಳವರನ್ನು ಸೇರಿಸುವಂಥ ಒಂದು ನೀತಿಯನ್ನು ಅನುಸರಿಸಿದರೆ, ಮುಂದಕ್ಕೆ ಒಂದು ಮಾರ್ಗವನ್ನು ಹಾಕಿಕೊಟ್ಟಂತಾಗುತ್ತದೆ. At least in the student community we can very well bring out this touchability among the students. I think I am sure it is the sure way of removing untouchability. ಒಂದು ಮಾತಿನಲ್ಲಿ ಹೇಳುವುದಾದರೆ, ಸರ್ಕಾರದಿಂದ ಹಣವನ್ನು ಪಡೆಯುತಕ್ಕಂಥ Communal Hostel ಗಳೆಲ್ಲೆಲ್ಲಾ, ಅದು ಯಾವ ಪಂಗಡದದರಿಗೆ ಸೇರಿದೆಯೋ ಆ ಪಂಗಡಕ್ಕೆ ಸೇರದ ವಿದ್ಯಾರ್ಥಿಗಳನ್ನು ಕೆಲವರನ್ನು ಸೇರಿಸಿಕೊಳ್ಳಬೇಕೆಂಬ ಒಂದು ಷರತ್ತಿನ ಮೇಲೆಯೇ ಹಣ ಸಹಾಯವನ್ನು ಕೊಡುವುದಾದರೆ, ಅದರಿಂದ ಮುಂದೆ ಒಂದು ವಿಶೇಷ ಪ್ರಗತಿಯನ್ನು ಸಾಧಿಸಲು ಸಹಾಯವಾಗುತ್ತದೆಂದು ನಾನು ಭಾವಿಸುತ್ತೇನೆ.

ಅಮೇಲೆ ಈ ಮಾನ್ಯ ಸಭೆಯ ಗಮನಕ್ಕೆ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ಕೊಟ್ಟಿರುವ ರಿಪೋರ್ಟಿನ ವಿಚಾರದಲ್ಲಿ ಒಂದು ಮಾತು ಹೇಳುತ್ತೇನೆ. Gradation and seniority list of officials ವಿಚಾರದಲ್ಲಿ ಅಲ್ಲಿ ಈರೀತಿ ಹೇಳಿದ್ದಾರೆ. "During the examination of Registers and records of Unit Officers, it was found in some unit gradation list of officials had not been properly maintained and in some other cases gradation lists have not been opened; and even if they were opened they were not kept up-to-date. The Commission emphasises the importance of this material for determining the seniority of officials for promotions from one grade to the next in the order of seniority. ಇದರಲ್ಲಿ ಹೇಳಿರುವ ನೀತಿಯನ್ನು ಸರ್ಕಾರದವರು ಅಕ್ಷರಶಃ ಪಾಲಿಸಬೇಕೆಂದು ನಾನು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಇದಲ್ಲದೆ, ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ಎಲ್ಲಾ ಇಲಾಖೆಯ ಮೊಖ್ತೇಸರುಗಳಿಗೂ ಒಂದು ಸರ್ಕ್ಯುಲರನ್ನು ಕಳುಹಿಸಿದ್ದಾರೆ. ಅದರ ಪ್ರಕಾರ ಯಾವುದೇ ಗ್ರೇಡಿನಲ್ಲಿ ಸೀನಿಯಾರಿಟಿ ಕೊಡುವಾಗ ಯಾವರೀತಿ ಮಾಡಬೇಕೆಂದು ಹೇಳಿ ಒಂದು ಷೆಡ್ಯೂಲನ್ನು ಹಾಕಿಕೊಟ್ಟಿದ್ದಾರೆ. ಆ ಷೆಡ್ಯೂಲಿನಲ್ಲಿರುವಂತೆ ಚಾಚೂ ತಪ್ಪದೆ ನಡೆಯಬೇಕೆಂದು ಮೊಖ್ತೇಸರುಗಳಿಗೆಲ್ಲಾ ತಿಳಿಸಬೇಕೆಂದು ಹೇಳುತ್ತೇನೆ. ಪಬ್ಲಿಕ್ ಸರ್ವಿಸ್ ಕಮಿಷನ್‌ನವರು ಇವೆಲ್ಲವನ್ನೂ ನೋಡಿಕೊಳ್ಳುತ್ತಾರೆಂದು ಇಲಾಖಾ ಮೊಖ್ತೇಸರುಗಳಿಗೆ ಒಂದು ಭೀತಿಯಿರಬಹುದು. ಆದರೂ ಸರ್ಕಾರದವರು ತಾವು ಸಾದರುಮಾಡಿರುವ ಆರ್ಡರನ್ನು ಸರಿಯಾಗಿ ಪಾಲನೆಮಾಡುತ್ತಿದ್ದಾರೆಯೇ ಇಲ್ಲವೇ ಎಂಬುದನ್ನು ನಿಗಾ ಇಟ್ಟು ನೋಡಿಕೊಳ್ಳಬೇಕೆಂದು ಹೇಳುತ್ತೇನೆ.

ಕೊನೆಯದಾಗಿ, ನಿಮ್ನ ತರಗತಿಯವರ ಅಭಿವೃದ್ಧಿಯ ಬಗ್ಗೆ ಸರ್ಕಾರದವರು ತೋರಿಸುತ್ತಿರುವ ನೀತಿ ಸರಿಯಾಗಿದ್ದರೂ ಕೂಡ, ಕೆಲವುವೇಳೆ ಅವರಲ್ಲಿ ಒಂದು ಬಗೆಯ ಅಸಹನೀಯ ನೀತಿ, ಉದಾಸೀನ ನೀತಿಯಿರುವುದನ್ನು ನಾವು ನೋಡುತ್ತಿದ್ದೇವೆ. ಮುಖ್ಯಮಂತ್ರಿಗಳು ಹೇಳಿದರೂ, ನಮ್ಮ ನೌಕರರಿಗೆ ತುಂಬ ability ಇದೆ ಎಂದು. ಅದನ್ನು ನಾನು ಒಪ್ಪುತ್ತೇನೆ. Ability ಮತ್ತು ದಕ್ಷತೆಯಿಂದ ಕೆಲಸಮಾಡುವುದು ಅವರ ಗುಣವಾಗಿದ್ದರೂ, ಸರ್ಕಾರದ ನೀತಿ ಯಾವ ರೀತಿಯಿರಬೇಕೆಂದರೆ ಅದನ್ನು ಪ್ರೋತ್ಸಾಹಿಸುವಂತೆ ಇರಬೇಕು. ಅಧಿಕಾರಿಗಳಿಗೆ ಇರತಕ್ಕ ದಕ್ಷತೆಯನ್ನು ಕುಂಠಿತಗೊಳಿಸುವಂತಿರಕೂಡದು. ಉದಾಹರಣೆಗೆ ಹೇಳುವುದಾದರೆ, ಒಬ್ಬರಿಗೆ ಪ್ರೊಮೋಷನ್ ಕೊಡುವುದನ್ನೇ ಆಗಲಿ, increment ಕೊಡುವುದನ್ನೇ ಆಗಲಿ, it must not be left to one's whims and fancies. Government should at least follow some principle while giving extension or reappointment to any officer. It is doubtful for me to say whether they have followed this procedure; I do not know from which date they are following it. But they say one thing and do practically another thing.

Sri Kadidal MANJAPPA.—I want to know the instances where the Government have followed different principles in regard to promotions?

ಶ್ರೀ ಜಿ. ದುಗ್ಗಪ್ಪ.—ಈದಿವಸ ನಾನು ಅದನ್ನು ಹೇಳುವುದಕ್ಕೆ ತಯಾರಾಗಿಲ್ಲ. ಪಬ್ಲಿಕ್ ಸರ್ವಿಸ್ ಕಮಿಷನ್‌ರವರು ಕೊಟ್ಟಿರುವ ರಿಪೋರ್ಟಿನಲ್ಲೇ ಆ remarksನ್ನು ತಾವೇ ನೋಡಬಹುದು.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ —ಸರ್ಕಾರದವರು ಅವಕ್ಕೆ ಸರಿಯಾಗಿ explanation ಕೂಡ ಕೊಟ್ಟಿದ್ದಾರೆ.

ಶ್ರೀ ಜಿ. ದುಗ್ಗಪ್ಪ.—ಕೊಟ್ಟಿಲ್ಲ. ಈಗಿನ ಹೊಸ ವಾತಾವರಣದಲ್ಲಿ ನಾನು ಈ ಮಾನ್ಯ ಸಭೆಯ ಸದಸ್ಯರನ್ನು ಕೇಳಿಕೊಳ್ಳುವುದೇನೆಂದರೆ, ಹಿಂದುಳಿದ ಪಂಗಡದವರ ವಿಚಾರದಲ್ಲಿ ಈಗ ಮೊನ್ನೆತಾನೆ ಹಿಂದುಳಿದ ಪಂಗಡದವರ ಕಮಿಷನ್ನಿನ ಅಧ್ಯಕ್ಷರಾದ ಕಾಕಾ ಕಾಳೆಲ್‌ಕರ್‌ರವರು ಯಾವ ರೀತಿ ನಡೆದುಕೊಳ್ಳಬೇಬೇಕೆಂದು ಸೂಚನೆ ಕೊಟ್ಟಿದ್ದಾರೋ ಅದರಂತೆ ನಡೆದುಕೊಳ್ಳಬೇಕೆಂದು ಹೇಳುತ್ತೇನೆ. ಅವರ ಭಾಷಣದ ತರ್ಜುಮೆಯನ್ನು ಈ ಸಾರಿಯ ಗ್ರಾಮಾಭ್ಯುದಯ ಸಂಚಿಕೆಯಲ್ಲಿ ಕೊಟ್ಟಿದೆ. ಅಧ್ಯಕ್ಷರ ಅಪ್ಪಣೆಪಡೆದು ಅದರಲ್ಲಿನ ಕೆಲವು ಭಾಗಗಳನ್ನು ಮಾತ್ರ ಓದಬಯಸುತ್ತೇನೆ.

5-30 P.M.

ಅವರು ಹೇಳಿದ್ದಾರೆ "ಈ ಬಹು ಜನರನ್ನು ಈಗ ಧೈರ್ಯದಿಂದ ನಿರ್ಲಕ್ಷಿಸಲು ಸಾಧ್ಯವಿಲ್ಲ. ಅವರನ್ನು ನಮ್ಮ ಒಡೆಯರು. ಅವರನ್ನು ವಿದ್ಯಾವಂತರನ್ನಾಗಿ ಮಾಡೋಣ; ನಮಗೆ ಸಾಧ್ಯವಾಗಬಹುದಾದಷ್ಟು ವೇಗದಲ್ಲಿ ಅವರ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕೆ ಅವರಿಗೊಂದು ತರಬೇತುಕೊಡೋಣ. ಹೀಗೆ ಮಾಡುವುದರಲ್ಲಿ ಮಾತ್ರವೇ ಅವರ ಮತ್ತು ನಮ್ಮ ಸಂರಕ್ಷಣೆ ಹಾಗೂ ರಾಷ್ಟ್ರದ ಭವಿಷ್ಯ ಅಡಗಿದೆ."

ಅಕ್ಬರನು ಸಿಂಹಾಸನವನ್ನೇರಿದಾಗ ಸಣ್ಣವನಾಗಿಯೂ, ಅನುಭವಿಯಾಗಿಯೂ ಇದ್ದನು. ರಾಜ್ಯದ ಆಡಳಿತವನ್ನು ನಡೆಸಲು ತನ್ನ ಒಬ್ಬ ಸಚಿವನಿಗೆ ಅವಕಾಶವಿತ್ತು, ಆ ಮಂತ್ರಿಗೆ ಖಾನ್ ಬಾಬಾ ಎಂಬ ಹೆಸರಿಟ್ಟನು ಆ ಹೆಸರಿನಲ್ಲಿ ಗೌರವ ಹಾಗೂ ಆದರದ ಧ್ವನಿಯೆರಡೂ

(ಶ್ರೀ ಜಿ. ದುಗ್ಗಪ್ಪ)

ಅಡಗಿದ್ದವು. ಖ್ವಾಜ ಬಾಬಾ ಅಕ್ಬರನ ಹೆಸರಿನಲ್ಲಿ ರಾಜ್ಯವನ್ನು ರಾಜನಿಷ್ಠೆ ಮತ್ತು ದೈವನಿಷ್ಠೆಗಳಿಂದ ಆಳಿದನು. ಆದರೆ ಖ್ವಾಜ ಬಾಬಾ ತನ್ನದೇ ಆದ ರೀತಿಯಲ್ಲಿ ಆಡಳಿತ ನಡೆಸುತ್ತಿರುವುದನ್ನು ಅಕ್ಬರನು ಕಂಡುಕೊಂಡಾಗ ಮೌನದಿಂದ ಮೆಕ್ಕಾಕ್ಕೆ ಯಾತ್ರೆ ಹೋಗುವುದಕ್ಕೆ ಸರಿಯಾದ ಕಾಲವಿಂದು ಎಂದು ಖ್ವಾಜ ಬಾಬಾನಿಗೆ ಸೂಚಿಸಿದನು.'' ಅಂದರೆ ಅಕ್ಬರ್ ಚಕ್ರವರ್ತಿಯು ತನ್ನ ಕೆಲಸಗಳನ್ನು ತಾನು ನೋಡಿಕೊಳ್ಳುವಷ್ಟು ವಯಸ್ಕನಾದನೆಂದು ಇದರಿಂದ ಅರ್ಥವಾಗುತ್ತದೆ. ಇಂದಿನ ಖ್ವಾಜ ಬಾಬಾಗಳು ಎಂದರೆ ಮಹಾ ಜನರು ಬಹುಜನರಿಂದ ಇದೇ ರೀತಿಯ ಸೂಚನೆಯನ್ನು ಇನ್ನು ಸ್ವಲ್ಪ ಕಾಲದಲ್ಲೇ ನಿರೀಕ್ಷಿಸಲೇ ಬೇಕು. ರಾಷ್ಟ್ರದಲ್ಲಿ ನವನಾಯಕತ್ವ ಏರ್ಪಾಡು ಆಗುತ್ತದೆ ಅನ್ನುವುದೇ ಅದರ ಅರ್ಥ. ಅಧಿಕಾರವು ತೀವ್ರದಲ್ಲೇ ಕೈಗಳನ್ನು ಬದಲಾಯಿಸುವುದು. ಬಹುಜನರ ವಿಶ್ವಾಸವನ್ನು ಪಡೆದವರಿಗೆ ಮಾತ್ರ ಅವರ ಸೇವೆ ಮಾಡುವ ಸೌಲಭ್ಯ ದೊರೆಯುತ್ತದೆ. ಮಹಾಜನರು ತಮ್ಮ ಮೇಲುತನವನ್ನು ಬಿಟ್ಟುಕೊಟ್ಟು ತಮ್ಮ ನಿಸ್ವಾರ್ಥ ಸೇವೆಯನ್ನು ಮತ್ತು ಈ ಮೂಲಕ ರಾಷ್ಟ್ರ ಸೇವೆಯನ್ನು ನಡೆಸುವುದರಲ್ಲಿಯೇ ತೃಪ್ತಿಪಟ್ಟುಕೊಳ್ಳಬೇಕು ಎಂದು ಇಷ್ಟು ಹೇಳಿ ನಾನು ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ—ಅನುಸೂಚಿತ ಜಾತಿಗಳು).—ಸ್ವಾಮಿ, ಈಗ ಸರ್ಕಾರದವರು ಸಭೆಯ ಮುಂದೆ ಮಂಡಿಸಿರತಕ್ಕಂಥ 1955-56ನೆಯ ಸಾಲಿನ ಆಯವ್ಯಯದ ಪಟ್ಟಿಯನ್ನು ನಾನು ಸ್ವಾಗತಿಸುತ್ತೇನೆ. ಹೀಗೆ ಸ್ವಾಗತಿಸುವ ಸಂಬಂಧದಲ್ಲಿ ನಾನು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈ ಬಜೆಟ್ಟಿನ ಬಗ್ಗೆ ಈಗಾಗಲೇ ನಮ್ಮ ಅನೇಕ ಮಾನ್ಯ ಸ್ನೇಹಿತರುಗಳು ತಮ್ಮ ಕೆಲ ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಆದರೆ ನಮ್ಮ ವಿರೋಧಪಕ್ಷದ ಸದಸ್ಯರಲ್ಲೊಬ್ಬರಾದಂಥ ಶ್ರೀಮಾನ್ ಶ್ರೀನಿವಾಸಯ್ಯಂಗಾರ್ ಅವರು 1946-47ನೆಯ ಸಾಲಿನಿಂದಲೂ ಕೆಲವು ಅಂಕಿ-ಅಂಶಗಳನ್ನು ಲೆಕ್ಕಹಾಕಿಕೊಂಡು ಸರ್ಕಾರದ ಪಾಲಿಸಿಯನ್ನು ಬಹಳ ಕಟುವಾಗಿ ಟೀಕಿಸುತ್ತ ಅನೇಕ ವಿವರಣೆಗಳನ್ನು ಅವರು ಕೊಟ್ಟಿದ್ದಾರೆ. ಹಾಗೆ ಅವರು ಸಂಗ್ರಹಣ ಮಾಡತಕ್ಕಂಥ ಅಂಕೀ ಅಂಶಗಳು ಮತ್ತು ಅವರು ಕೊಟ್ಟಿರತಕ್ಕ ವಿವರಣೆಗಳೆಲ್ಲ ಬಹಳ ಸಹಜವಾದುವುಗಳೇ ಆಗಿರುತ್ತವೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಆದರೆ ಇದೇ ಸಂಬಂಧದಲ್ಲಿ ನಾನೂ ಸಹ ಕೆಲವು ಮಾತುಗಳನ್ನಾಡಬೇಕೆಂದು ಇಚ್ಛೆಸಿದ್ದೇನೆ.

ಈ ದಿವಸ ನಮ್ಮ ಭಾರತವು ಒಂದು ಸ್ವತಂತ್ರವಾದಂಥ ರಾಜ್ಯ. ಈ ದಿವಸ ದೇಶದಲ್ಲಿರತಕ್ಕ ಪ್ರತಿಯೊಬ್ಬ ಪ್ರಜೆಗೂ ತನ್ನ ಹಕ್ಕನ್ನು ಚಲಾಯಿಸುವ ಅಧಿಕಾರ ಬಂದಿದೆ. ಈ ದಿವಸ ಅವರು ಚುನಾವಣೆಮಾಡಿ ಕಳುಹಿಸಿಕೊಡತಕ್ಕಂಥ ಉಮೇದುವಾರರುಗಳು ಇಲ್ಲಿಗೆ ಬಂದು ರಾಜ್ಯಭಾರ ನಡೆಸತಕ್ಕಂತ ದಿನಗಳಿವು. ಈ ದಿವಸ ಹಾಗೆ ದೇಶದಲ್ಲಿ ಯಾರು ಯಾರು ನಮಗೆಲ್ಲ ಅವರ ಓಟನ್ನು ಕೊಟ್ಟು ಕಳುಹಿಸಿದ್ದಾರೋ ಅಂಥ ಜನರ ಯೋಗಕ್ಷೇಮಗಳನ್ನು ಮತ್ತು ಅವರ ಒಂದು ಅಭಿವೃದ್ಧಿಯನ್ನು ಸಾಧಿಸಬೇಕಾಗಿದ್ದರೆ ಯಾರೇ ಆಗಲಿ ಅವರು ಹೆಚ್ಚು ಹೆಚ್ಚು ಹಣವನ್ನು ಖರ್ಚುಮಾಡಲೇ ಬೇಕಾಗುತ್ತದೆ. ವೆಲ್‌ಫೇರ್ ಸ್ಟೇಟ್ ಎಂದು ಕರೆಯುವುದರ ಅರ್ಥವಾದರೂ ನಾನು ತಿಳಿದುಕೊಂಡಿರುವಹಾಗೆ ಒಂದು ಸಮಾಜದಲ್ಲಿರತಕ್ಕ ಪ್ರತಿಯೊಬ್ಬ ವ್ಯಕ್ತಿಯನ್ನೂ ಎಲ್ಲಾ ರೀತಿಯಲ್ಲಿಯೂ ಬದಲಾವಣೆಯಾಗತಕ್ಕ ರೀತಿಯಲ್ಲಿ ನಡೆಸತಕ್ಕದ್ದೇ ಆಗಿರುತ್ತೆಂದು ನಾನು ಭಾವಿಸುತ್ತೇನೆ. ಹೀಗೆ ಮಾಡತಕ್ಕದ್ದು ಅವಶ್ಯಕ ಮತ್ತು ಇದು ಸರ್ಕಾರದ ಜವಾಬ್ದಾರಿ. ಆದುದರಿಂದ ಕೇವಲ ಒಂದು ಅಸ್ಥಿಪಂಜರವನ್ನು ನೋಡಿ ಅದರ ಮೇಲೆ ಲೆಕ್ಕಹಾಕಿಕೊಂಡು ಕೆಲಸ ಮಾಡಬೇಕು ಎಂದು ಹೇಳತಕ್ಕದ್ದು ಈ ಕಾಲಕ್ಕೆ ಸರಿಯಾದ್ದಲ್ಲ. ನಾನು ಹೀಗೆ ಹೇಳಿದರೆ ಈ ಅಭಿಪ್ರಾಯವನ್ನು ಮಾನ್ಯ ವಿರೋಧಪಕ್ಷದ ಸದಸ್ಯರೂ ಸಹ ಒಪ್ಪಿಕೊಳ್ಳುತ್ತಾರೆಂದು ಭಾವಿಸುತ್ತೇನೆ. ವಿರೋಧಪಕ್ಷದ ಸದಸ್ಯರು ಮಾತನಾಡುತ್ತಾ, 1952-53ರಲ್ಲಿ ಕೆಲವು ಬಾಬುಗಳಲ್ಲಿ ಖರ್ಚು ಬಾಬು ಕಡಮೆಯಾಗಿದ್ದರೂ ಬಜೆಟ್ ಖೋತಾ ಆಯಿತೆಂದು ಹೇಳಿದ್ದಾರೆ. ಹಾಗೆ ಅವರು ಹೇಳುತ್ತ ಆ ವರ್ಷ ವಿದ್ಯಾಭ್ಯಾಸಕ್ಕಾಗಿ ತೆಗೆದಿಟ್ಟ 20·9 ಲಕ್ಷ ರೂಪಾಯಿಗಳು ಖರ್ಚಾಗಲಿಲ್ಲ ಎಂದು ಹೇಳಿದ್ದಾರೆ. ಆದರೆ ನಾನು ಇದಕ್ಕೊಂದು ಉದಾಹರಣೆಯನ್ನು ಹೇಳುತ್ತೇನೆ. ಈ ಆಯವ್ಯಯವೆಲ್ಲ ಕೇವಲ ಒಂದು ಅಂದಾಜು ಮಾಡತಕ್ಕದ್ದೇ ವಿನಾಃ ನಾವು ಈಗ ಯಾವುದಾದರೊಂದು ಬಾಬಿಗೆ ಎಷ್ಟು ಮೊಬಲಗು ಖರ್ಚಾಗಬಹುದು ಅನ್ನುವ ಒಂದು ಅಂದಾಜಿನ ಮೇಲೆ ಅದಕ್ಕೆ ಮೊಬಲಗನ್ನು ತೆಗೆದಿಟ್ಟರೆ—ಅದನ್ನು ನಾವು ಕಾರಣವಿಲ್ಲದಿದ್ದಾಗ್ಯೂ ಪೂರ್ತಿಯಾಗಿ ಖರ್ಚು ಮಾಡಲೇ ಬೇಕು ಅನ್ನತಕ್ಕಂಥ ನಿರ್ಬಂಧ ಯಾವುದೂ ಇಲ್ಲ. ಅಂಥ ಒಂದು ವಿಧಿ ಯಾವುದೂ ಇಲ್ಲ. ಹಾಗೆ ನಾವು ಮೊದಲು ಒದಗಿಸತಕ್ಕ ಮೊಬಲಗಿನಿಂದ ಜನರಿಗೆ ಯಾವ ಒಂದು ಅನುಕೂಲ ಮಾಡಬೇಕು ಎಂಬ ಉದ್ದೇಶಕ್ಕಾಗಿ ಮುಡುಪು ಮಾಡಿ ಇಡುತ್ತೇವೋ ಅದು ಸದ್ವಿನಿಯೋಗವಾಗುತ್ತದೆಯೇ, ಅದರಿಂದ ಜನರಿಗೊಂದು ಅನುಕೂಲ ಲಭಿಸುತ್ತದೆಯೇ ಅನ್ನುವುದನ್ನೆಲ್ಲಾ ನಮ್ಮ ಗಮನದಲ್ಲಿಟ್ಟುಕೊಂಡು ಅದನ್ನು ಖರ್ಚು ಮಾಡಬೇಕಾಗಿರುವಾಗ 'ಸುಮ್ಮನೆ ತೆಗೆದಿಟ್ಟಿದ್ದೇವೆ—ಖರ್ಚು ಮಾಡಿಬಿಡೋಣ' ಅನ್ನುವುದು ಸರಿಯಲ್ಲ. ಯಾವ ಯಾವ ಇಲಾಖೆಗೆ ನಾವು ಈಗಖರ್ಚು ಮಾಡುತ್ತಿದ್ದೇವೋ. ಆ ಹಣದಿಂದ ಜನರಿಗೆ ಒಂದು ಒಳ್ಳೆಯದಾಗಬೇಕು, ಆ ಹಣದ ವಿನಿಯೋಗದಿಂದ ದೇಶಾಭಿವೃದ್ಧಿ ಕಾರ್ಯಗಳು ನಡೆಯಬಹುದೇ ಅಥವಾ ಇಲ್ಲವೇ ಅನ್ನುವುದನ್ನು ನಾವು ಆಲೋಚನೆ ಮಾಡಬೇಕು. ಈ ಹಣವನ್ನು ವಿನಿಯೋಗಿಸತಕ್ಕಂಥ ಅಧಿಕಾರಿಗಳ ಮೇಲೆ ಸರಿಯಾದ ನಿಗಾ ಇಡಬೇಕು. ಇಷ್ಟೆಲ್ಲಾ ಎಚ್ಚರಿಕೆಗಳನ್ನು ನಾವು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುವುದಾದರೆ—ಆಗ ಈ ರೀತಿ ನಾವು ಅಂದಾಜ ಮಾಡಿರತಕ್ಕಂಥ ಮೊಬಲಗಿನಲ್ಲಿ ಕೊಂಚ ಉಳಿತಾಯವಾದರೂ ಆಗಬಹುದು ಇಲ್ಲವೇ ಕೊಂಚ ಹೆಚ್ಚಾಗಿ ಖರ್ಚಾಗತಕ್ಕ ಪ್ರಸಂಗ ಬಂದರೂ ಬರಬಹುದು. ಆದುದರಿಂದ ನಾವು ಈ ಬಜೆಟ್ಟಿನ ಒಂದು ಅಸ್ಥಿಪಂಜರ ನೋಡಿ ಲೆಕ್ಕಹಾಕುವುದಕ್ಕೆ ಹೋಗತಕ್ಕಂಥ ಕಾಲ ಇದಲ್ಲ ಅನ್ನುವುದನ್ನು ಮಾತ್ರ ನಾನು ಅವರಿಗೆ ಹೇಳಲಚ್ಛೆಸುತ್ತೇನೆ.

ಈಗ ದ್ವಿತೀಯ ಪಾಂಚವಾರ್ಷಿಕ ಯೋಜನೆಯ ಬಗ್ಗೆ 100 ಕೋಟಿ ರೂಪಾಯಿಗಳ ಖರ್ಚಿನ ಒಂದು ಅಂದಾಜಿನ ಮೇಲೆ ದೇಶಾಭಿವೃದ್ಧಿಯ ಕೆಲಸ ಕಾರ್ಯಗಳನ್ನು ನಡೆಸಬೇಕೆಂಬುದಾಗಿ ಒಂದು ಅಂದಾಜನ್ನಿಟ್ಟುಕೊಂಡಿದ್ದಾರೆ. ಇದರ ಬಗ್ಗೆ ಹಣವನ್ನೊದಗಿಸಲು ನಾವು ಯಾವ ರೀತಿ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು, ನಾವು ಏನೇನು ಮಾಡಬೇಕಾಗಿದೆ, ಇದಕ್ಕಾಗಿ ನಾವು ಏನೇನನ್ನು ಒದಗಿಸಿಕೊಳ್ಳಬೇಕಾಗಿದೆ ಎನ್ನುವುದು ಈಗಿನ ಒಂದು ಬಹಳ ಮುಖ್ಯವಾದ ವಿಚಾರ. ಇದರ ಬಗ್ಗೆ ನಾವೆಲ್ಲರೂ ಈಗ ಆಲೋಚನೆ ಮಾಡಬೇಕಾಗಿದೆ. ಇದರ ಬಗ್ಗೆ ನಾನು ಹೇಳ ಬಯ

ಸುವುದೇನೆಂದರೆ—ನಿನ್ನೆಯ ದಿವಸ ನಮ್ಮ ಶ್ರೀಮಾನ್ ಕೆ. ಪಟ್ಟಾಭಿರಾಮಯ್ಯರವರು ಯಾವ ಒಂದು ಸೂಚನೆಯನ್ನು ಕೊಟ್ಟಿದ್ದಾರೆಯೋ ಅದನ್ನೇ ಈಗ ನಾವೆಲ್ಲರೂ ಒಪ್ಪಿಕೊಳ್ಳಬೇಕಾಗಿದೆ ಎಂದು ನನಗೆ ಕಾಣುತ್ತಿದೆ. ಈಗ ನಾವು ಅಬಗ್ಗೆ ಒಂದು ಸಲಹಾ ಸಮಿತಿಯನ್ನು ನೇಮಕ ಮಾಡತಕ್ಕದ್ದು ಅತ್ಯಗತ್ಯ. ಈ ದಿವಸ ನಾವು ಯಾವ ರೀತಿ ನಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಬೇಕು, ತೆರಿಗೆಯ ಭಾರವನ್ನು ಹೊರತಕ್ಕಂಥ ಶಕ್ತಿ ಯಾರಿಗಿದೆ ಅನ್ನುವುದನ್ನು ನಾವೀಗ ನಿಗದಿ ಮಾಡಬೇಕಾದಂಥ ಕಾಲ ಸನ್ನಿಹಿತವಾಗಿದೆ. ಈಗ ಅಂದಾಜ ಮಾಡಿರತಕ್ಕ ಖರ್ಚಿನ ಮೇರೆ 14 ಕೋಟಿ ರೂಪಾಯಿಗಳು ಬೇಕಾಗಿದೆ, ಅದಕ್ಕಾಗಿಯೇ ಈ ಸಾಲಿನ ಆಯವ್ಯಯವನ್ನು ಮಂಡಿಸತಕ್ಕ ಕಾಲದಲ್ಲಿ ಯಾವ ಯಾವ ಹೊಸ ತೆರಿಗೆಗಳನ್ನು ಹಾಕಬೇಕೆಂಬ ಬಗ್ಗೆ ಯೋಚನೆ ಮಾಡಿ ಈಗ ಕೆಲವು ಕಮರ್ಷಿಯಲ್ ಕ್ರಾಪುಗಳ ಮೇಲೆ ತೆರಿಗೆಯನ್ನು ಹಾಕಬಹುದೆಂಬ ವಿಚಾರದಲ್ಲಿ ನಮ್ಮೆಲ್ಲರ ಸಲಹೆ ಪಡೆಯತಕ್ಕ ಬಗ್ಗೆ ಅದನ್ನೀಗ ನಮ್ಮ ಮುಂದಿಟ್ಟಿದ್ದಾರೆ. ಈ ರೀತಿಯ ಒಂದು ಹೆಚ್ಚು ಕಂದಾಯವನ್ನು ಈ ದಿವಸ ಸರ್ಕಾರದವರು ಹಾಕದೆ ಹೋದರೆ ಖರ್ಚಿನ ಬಾಬಿನಲ್ಲಿ ಒಂದೇ ಕಡೆ ಖರ್ಚು ಹೆಚ್ಚಾಗಿ—ಆದಾಯದ ಬಾಬಿನಲ್ಲಿ ಆದಾಯವಿಲ್ಲದೆ ಹೋದಾಗ ಖೋತಾ ಬಡ್ಜೆಟ್ ಆಗಿಯೇ ಆಗಬೇಕು. ಹೀಗೆ ಇನ್ನೂ 1-2 ವರ್ಷಗಳ ಕಾಲ ವರಮಾನದ ಕಡೆಗೆ ನಾವು ಯಾವ ಗಮನವನ್ನೂ ಕೊಡದೆ ಖರ್ಚು ಬಾಬಿನ ಕಡೆಗೇ ಗಮನಕೊಡುತ್ತಾ ಹೋದರೆ ಇನ್ನೂ ಈ ಪ್ರಸಂಗ ಬಹಳ ಕಠಿಣವಾಗಬಹುದು. ಆದುದರಿಂದ ಈ ವಿಚಾರವನ್ನು ಸರ್ಕಾರದವರು ಬಹಳ ತೀವ್ರವಾಗಿ ಆಲೋಚನೆ ಮಾಡತಕ್ಕಂಥದು ಸೂಕ್ತವಾದುದೆಂದು ನಾನಾದರೂ ಈ ಸಂದರ್ಭದಲ್ಲಿ ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೂ ಒಂದು ಬಹಳ ಪ್ರಾಮುಖ್ಯವಾದಂಥ ವಿಚಾರವಿದೆ. ಈಗ ಈ ಸಹಕಾರ ಪದ್ಧತಿಯ ಮೇರೆಗೆ—ಪರಸ್ಪರ ಸಹಾಯ ಸಂಘಗಳ ಮೂಲಕ Short-term Credits ಎಂಬೊಂದು ರೀತಿಯಾಗಿ ರೈತರಿಗೆ ಸಾಲ ಕೊಡತಕ್ಕಂಥ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಿದ್ದಾರೆ. ಈ ಸಂಬಂಧದಲ್ಲಿ ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾದವರು ಹಣವನ್ನು ಕೊಡಲು ಮುಂದೆ ಬಂದಿದ್ದಾರೆ. ಇದು ಬಹಳ ಶ್ಲಾಘನೀಯವಾದಂಥ ಪದ್ಧತಿ. ಇದು ದೇಶಕ್ಕೆ ಬಹಳ ಉಪಯುಕ್ತವಾದಂಥ ಯೋಜನೆಯೆಂದು ಭಾವಿಸುತ್ತೇನೆ. ಈ ಯೋಜನೆಗನುಸಾರವಾಗಿ ಜನರಿಗೆ ಹೆಚ್ಚು ಅನುಕೂಲತೆಗಳನ್ನೊದಗಿಸಲು ಈ ವಿದ್ಯುಚ್ಛಕ್ತಿಯ ಬಾಬಿಗೆ ಹೆಚ್ಚು ಹಣವನ್ನು ಖರ್ಚುಮಾಡಬೇಕೆಂದು ಇದ್ದೇವೆ. ಆದರೆ ನಾನು ಇದೇ ಸಂದರ್ಭದಲ್ಲಿ ಒಂದು ಅಂಶವನ್ನು ಸರ್ಕಾರದವರಲ್ಲಿ ಅರಿಕೆಮಾಡಿಕೊಳ್ಳಲು ಇಷ್ಟಪಡುತ್ತೇನೆ. ನಮ್ಮ ತಾಲ್ಲೂಕಿಗೆ ಈ ವಿದ್ಯುಚ್ಛಕ್ತಿಯನ್ನು ವ್ಯವಸಾಯದ ಕೆಲಸಗಳಿಗಾಗಿ ಒದಗಿಸಿಕೊಡಬೇಕೆಂದು ನಾವು ಅನೇಕ ವರ್ಷಗಳಿಂದಲೂ ಕೇಳುತ್ತಲೇ ಬಂದಿದ್ದೇವೆ. ಆದರೆ ಸರ್ಕಾರದವರಿಗೆ ಅದೇನು ಕಾರಣದಿಂದಲೋ ಅಥವಾ ಅದನ್ನು ಯಾವ ಉದ್ದೇಶದಿಂದಲೋ ಒದಗಿಸುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ. ಕೇಳಿದರೆ ನಾನಾ ತರದ ವಾದಗಳನ್ನು ಹೂಡುತ್ತಿದ್ದಾರೆ. ದಕ್ಷಿಣ ಕನ್ನಡ, ಬೊಂಬಾಯಿ, ಇತ್ಯಾದಿ ಪ್ರಾಂತ್ಯಗಳಿಗೆಲ್ಲಾ ಒಂದು ಒಪ್ಪಂದಮಾಡಿಕೊಂಡು ಅದರ ಪ್ರಕಾರ ಅವರಿಗೆ ವಿದ್ಯುಚ್ಛಕ್ತಿಯನ್ನೊದಗಿಸುತ್ತಿದ್ದಾರೆ. ಹೀಗೆ ನಮ್ಮ ಸರ್ಕಾರದವರಿಗೆ ಈ ವಿದ್ಯುಚ್ಛಕ್ತಿಯನ್ನು ಹೊರಗಡೆಯವರಿಗೂ ಕೂಡ ಒದಗಿಸಲು ಸಾಧ್ಯವಿದ್ದಾಗ—ನಮ್ಮ ಸಂಸ್ಥಾನದಲ್ಲಿರತಕ್ಕವರಿಗೆ ಅದನ್ನು ಕೊಡಿ ಎಂದು ಕೇಳಿದರೆ, ಅದನ್ನು ಕೊಡುವುದಕ್ಕೆ ಮನಸ್ಸಿಲ್ಲದೆ, ನಮಗೆ ಸಾಕಷ್ಟು ಆದಾಯಬರುವುದಿಲ್ಲ ಎಂದು ಹೇಳುತ್ತಿರುವಾಗ ಇನ್ನು ಎಷ್ಟರಮಟ್ಟಿಗೆ ಇವರು ರೈತನ ವ್ಯವಸಾಯೋದ್ಯಮಗಳಿಗೆ ಇದರಿಂದ ಅನುಕೂಲ ಕಲ್ಪಿಸಿಕೊಡುತ್ತಾರೋ ಅದು ನನಗಂತೂ ಗೊತ್ತಾಗುವುದಿಲ್ಲ. ಈ ವಿದ್ಯುಚ್ಛಕ್ತಿಯು ಸಾರ್ವಜನಿಕರಿಗೆಲ್ಲಾ ನಿತ್ಯ ಬಳಕೆಗೆ ಅತ್ಯಾವಶ್ಯಕವಾದಂಥ ಒಂದು ವಸ್ತುವೆಂಬುದಾಗಿ ನಾನು ಭಾವಿಸಿದ್ದೇನೆ. ಕೆಲವು ಕಡೆ ಈ ಉತ್ಪತ್ತಿ ಕಡಮೆಯಿದ್ದಾಗ್ಯೂ ಆ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸಿದ್ದಾರೆ. ಆದರೆ ನಾನು ಬಂದಿರತಕ್ಕಂಥ ಆ ಕ್ಷೇತ್ರ ಯಾವುದಿದೆಯೋ ಅದಕ್ಕೆ ವಿದ್ಯುಚ್ಛಕ್ತಿಯ ಸರಬರಾಯಿಯನ್ನು ಮಾಡಬೇಕೆಂಬ ವಿಚಾರದಲ್ಲಿ ಇಲ್ಲಿ ನಡೆಯತಕ್ಕ ಪ್ರತಿಯೊಂದು ಅಧಿವೇಶನದಲ್ಲೂ ನಾನಾ ರೂಪವಾಗಿ ಪ್ರಶ್ನಾವಳಿಗಳ ಮೂಲಕವೂ, ಖೋತಾ ನಿರ್ಣಯಗಳ ಮೂಲಕವೂ ವಿಷಯವನ್ನು ಸರ್ಕಾರದವರ ಗಮನಕ್ಕೆ ತರುತ್ತಲೇ ಇದ್ದೇನೆ. ಅಷ್ಟಾಗಿದ್ದರೂ ನಮ್ಮ ಮಾನ್ಯ ಮಂತ್ರಿಗಳಿಗೆ ಅದನ್ನು ಒದಗಿಸಲು ಇನ್ನೂ ಅವರಿಗೆ ಸಾಧ್ಯವೇ ಆಗಿಲ್ಲ. ಅವರು ಮನಸ್ಸನ್ನು ಮಾಡಿದಹಾಗೆ ಕಾಣುವುದಿಲ್ಲ. ನಮ್ಮ 'Charity begins at home' ಅನ್ನುವ ಹಾಗೆ ಈ ತತ್ವವನ್ನು ಕಾರ್ಯತಃ ಪ್ರತಿಪಾದಿಸಬೇಕಾಗಿದ್ದರೆ ಸರ್ಕಾರದವರು ಇದಕ್ಕೆ "ನಿಮ್ಮೆಲ್ಲರ ಸಹಕಾರ ಬೇಕು. ಅದಿಲ್ಲದಿದ್ದರೆ ನಾವು ಈ ಕೆಲಸ ಮಾಡುವುದಕ್ಕಾಗುವುದಿಲ್ಲ" ಎಂದು ಹೇಳುತ್ತಿದ್ದಾರೆ. ಆದರೆ ನಾವು ಇವರಿಗೆ ಅಂಥ ಒಂದು ಸಹಕಾರವನ್ನು ನೀಡಬೇಕಾಗಿರುವುದರಿಂದಲೇ ತಾವು ನಮ್ಮನ್ನು ವಿದ್ಯಾವಂತರನ್ನಾಗಿ ಮಾಡಿ, ನಾವೆಲ್ಲಾ ಹಿಂದುಳಿದ ಜನರು, ಸರ್ಕಾರ ನಮ್ಮನ್ನು ಮುಂದಕ್ಕೆ ತರಬೇಕಾಗಿದೆ. ಎಂದು ಕೇಳಿಕೊಳ್ಳುತ್ತಿದ್ದೇವೆ—ಈ ಅಂಶವನ್ನು ಸರ್ಕಾರ ಗಣನೆಗೆ ತೆಗೆದುಕೊಂಡಿದೆಯೇ, ಎಂದು ನೋಡಿದರೆ ಹೀಗೆ ಜನರಿಗೊಂದು ಉಪಯೋಗ ಕರವಾದಂಥ ಯೋಜನೆಯಾವುದನ್ನೂ ಸರಿಯಾಗಿ ಸರ್ಕಾರ ಇಟ್ಟುಕೊಂಡಿಲ್ಲ ಎಂದು ನಾನಾದರೂ ಹೇಳಬೇಕಾಗಿದೆ

ಈಗ ಈ ವಿದ್ಯಾಭ್ಯಾಸಕ್ಕಾಗಿ ಸರ್ಕಾರದವರು ಹೆಚ್ಚಿಗೆ ಹಣವನ್ನೊದಗಿಸಿದ್ದಾರೆ. ಇದರಲ್ಲಿಯೂ ಕೂಡ ಒಂದು ಹೆಚ್ಚಿನ ವಿಚಾರವಿದೆ. ಅದು ಯಾವುದೆಂದರೆ ಈ ಜನರಲ್ ಹಾಸ್ಟಲುಗಳನ್ನು ಕಟ್ಟತಕ್ಕಂಥ ವಿಚಾರ. ಆದರೆ ಇದರ ಜೊತೆಗೆ ನಿಮ್ನ ತರಗತಿಗಳವರ ವಿದ್ಯಾರ್ಥಿಭವನಗಳನ್ನು ಕಟ್ಟಿಸತಕ್ಕ ಯೋಜನೆಯನ್ನೂ ಕೂಡ ಇಟ್ಟುಕೊಂಡಿದ್ದಾರೆ. ಆದರೆ ಸರ್ಕಾರದವರು ಈ ದಿವಸ ಈ ಸಾರ್ವಜನಿಕ ಹಾಸ್ಟಲುಗಳನ್ನು ನಿರ್ಮಾಣ ಮಾಡಲು ಹೊರಟಿರುವಾಗ ಮತ್ತೇಕೆ ಪ್ರತ್ಯೇಕವಾಗಿ ಈ ನಿಮ್ನ ತರಗತಿಯವರಿಗಾಗಿಯೇ ಒಂದುಕಡೆ ಹಾಸ್ಟಲುಗಳನ್ನು ಕಟ್ಟಿಸಬೇಕು ಎಂಬುದಾಗಿ ನಾನು ಈಗ ಸರ್ಕಾರದವರಿಗೊಂದು ಪ್ರಶ್ನೆಹಾಕುತ್ತೇನೆ. ಒಂದೊಂದು ಹಾಸ್ಟಲನ್ನು ಕಟ್ಟಬೇಕಾಗಿದ್ದರೆ, ಅಥವಾ ಒಂದೊಂದು ಜಿಲ್ಲೆಯಲ್ಲೂ ಈ ಹಾಸ್ಟಲನ್ನು ಕಟ್ಟಿಸಬೇಕಾಗಿದ್ದರೆ ಎರಡು ಮೂರು ಲಕ್ಷ ರೂಪಾಯಿಗಳಾದರೂ ಬೇಕಾಗಬಹುದು. ಆಗ ಇಡೀ ಸಂಸ್ಥಾನಕ್ಕೆಲ್ಲಾ 25—30 ಲಕ್ಷ ರೂಪಾಯಿಗಳನ್ನು ಖರ್ಚುಮಾಡಬೇಕಾಗುವುದು, ಹೀಗೆ ಸಾರ್ವಜನಿಕರ ಹಾಸ್ಟಲುಗಳನ್ನು ಕಟ್ಟುವುದಕ್ಕೇ ಒಂದು ಕಡೆ ಖರ್ಚು, ಹರಿಜನರಿಗೆ ಹಾಸ್ಟಲುಗಳನ್ನು ಕಟ್ಟಿಸಲು ಮತ್ತೊಂದುಕಡೆ ಖರ್ಚು, ಎಂದರೆ ಅಲ್ಲಿಗೆ ಎರಡುಕಡೆ ಒಂದೇ ಕೆಲಸಕ್ಕೆ ಹಣವನ್ನು ಖರ್ಚು ಮಾಡಿದಹಾಗಾಯಿತು. ಇದರಿಂದ ಖರ್ಚು ಇಮ್ಮಡಿ ಆಯಿತು. ಹೀಗೆ ಆಗತಕ್ಕ ಖರ್ಚನ್ನು ಉಳಿಸಲು

(ಶ್ರೀ ಬಿ. ಟಿ. ಕೆಂಪರಾಜ್.)

ತಾವು ಈ ಸಾರ್ವಜನಿಕರ ವಿದ್ಯಾರ್ಥಿನಿಲಯಗಳಲ್ಲೇ ಈ ನಿಮ್ನ ತರಗತಿಗಳವರಿಗೂ ಪ್ರವೇಶ ಮಾಡಲು ಸರಿಯಾದ ಅವಕಾಶವನ್ನು ಕಲ್ಪಿಸುವುದು ಸೂಕ್ತವೆಂದು ಹೇಳುತ್ತೇನೆ.

ಶ್ರೀ ಎಂ. ಮಾದಯ್ಯ.—ಸಾರ್ವಜನಿಕ ಹಾಸ್ಟೆಲುಗಳಿಗೆ ಕೊಟ್ಟಿರುವ ಹಣದಲ್ಲಿ ನಿಮ್ನ ಪಂಗಡದವರ....

Mr. SPEAKER.—That is not his argument. That is your argument.

ಶ್ರೀ ಬಿ. ಟಿ. ಕೆಂಪರಾಜ್.—Casteless and Classless ಸಮಾಜವನ್ನು ಎಂದರೆ ವರ್ಣರಹಿತ ವರ್ಗರಹಿತ ಸಮಾಜವನ್ನು ನಿರ್ಮಾಣಮಾಡಬೇಕೆಂಬ ಉದ್ದೇಶ ಸರ್ಕಾರಕ್ಕಿದೆ, ಈ ತತ್ವವನ್ನು ಅನುಸರಿಸತಕ್ಕದ್ದು ನಮ್ಮ ನೀತಿಯಾಗಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಈ ಒಂದು ತತ್ವವನ್ನನುಸರಿಸುವಾಗ ಹರಿಜನರಿಗೇ ಬೇರೆ ಹಾಸ್ಟೆಲುಗಳನ್ನು ಮಾಡುತ್ತೇವೆಂದು ಯೋಜನೆಯನ್ನು ಕೈಗೊಳ್ಳುವುದಾಗಲೀ ಆ ರೀತಿ ಹಾಸ್ಟೆಲುಗಳನ್ನು ಕಟ್ಟುವುದೇ ಆಗಲೀ ಇತರ ಜಾತೀಯ ವಿದ್ಯಾರ್ಥಿ ಹಾಸ್ಟೆಲುಗಳನ್ನು ಕಟ್ಟುವುದೇ ಆಗಲೀ ಇವೆಲ್ಲವೂ ಒಂದು ಮಾರ್ಗದಲ್ಲಿ ಎರಡು ಕವಲುಗಳೊಡೆದಂತಾಗುತ್ತದೆ, ಯಾವ ತತ್ವವನ್ನೊಪ್ಪಿಕೊಂಡಿದ್ದೇವೋ ಅದಕ್ಕೆ ಎರಡರ್ಥ ಕಲ್ಪಿಸಿದ ಹಾಗಾಗುತ್ತದೆ. ಅದುದರಿಂದ ಸಾರ್ವಜನಿಕ ಹಾಸ್ಟೆಲುಗಳಲ್ಲಿ ನಿಮ್ನ ಪಂಗಡದ ವಿದ್ಯಾರ್ಥಿಗಳೂ ಸೇರಿ ವಿದ್ಯಾಭ್ಯಾಸ ಮಾಡುವುದು ಸೂಕ್ತ. ಹಾಗಿಲ್ಲದೆ ಇವರಿಗೇ ಬೇರೆ ಹಣವನ್ನು ಖರ್ಚುಮಾಡುವುದರಿಂದ ಹೆಚ್ಚು ಹಣ ಖರ್ಚಾಗುವುದಕ್ಕೆ ಅವಕಾಶ ಕಲ್ಪಿಸಿದ ಹಾಗಾಗುತ್ತದೆಂದು ಈ ಸಂದರ್ಭದಲ್ಲಿ ಅರಿಕೆ ಮಾಡಿಕೊಳ್ಳಬೇಕಾಗಿದೆ.

ಸ್ವಾಮಿ, ಪಬ್ಲಿಕ್ ವರ್ಕ್ಸ್ ಅಥವಾ ಮರಾಮತ್ತು ಶಾಖೆಯ ವಿಚಾರದಲ್ಲಿ ಎಷ್ಟು ಹೇಳಿದರೂ ಸ್ವಲ್ಪವೇ ಎಂದು ನನಗನ್ನಿಸುತ್ತದೆ. ಏಕೆಂದರೆ . . .

Mr. SPEAKER.—That is a spending department. Everybody has to speak on it.

ಶ್ರೀ ಬಿ. ಟಿ. ಕೆಂಪರಾಜ್.—ಯಾವುದಾದರೂ ಒಂದು ಕೆಲಸವನ್ನು ತೆಗೆದುಕೊಳ್ಳಬೇಕು, ಅದಕ್ಕೆ ಪೂರ್ತಿ ಅಂದಾಜುಮಾಡಿ, ಸರ್ಕಾರಕ್ಕೆ ಕಳುಹಿಸಬೇಕೆಂದು ಹೇಳಿದರೆ ಸುಮಾರು ಐದು ವರ್ಷವಾದರೂ ಆಗುವುದಿಲ್ಲ. . . .

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯರು ಹೇಳಿದ್ದ ಒಂದು ಕಾಮಗಾರಿ ಒಂದೇ ವರ್ಷದಲ್ಲಿ ಮಂಜೂರಾಗಿದೆ!

ಶ್ರೀ ಬಿ. ಟಿ. ಕೆಂಪರಾಜ್.—ಆ ಯೋಜನೆ 1936 ರಿಂದಲೂ ಸರ್ಕಾರದ ಮುಂದಿತ್ತು, ಅದನ್ನು ಮಾನ್ಯ ಸಚಿವರು 1954ರಲ್ಲಿ ಪೂರ್ತಿಮಾಡಿಕೊಟ್ಟರು. ಇದಕ್ಕಾಗಿ ಅವರಿಗೆ ಅಭಿನಂದನೆ ಸಲ್ಲಿಸಬೇಕಾಗಿದೆ. ನಾನು ಹೇಳುವುದು ಒಟ್ಟಿನಲ್ಲಿ ಒಂದು ಯೋಜನೆಯ ಮಾತಲ್ಲ. ಇಡೀ ದೇಶದಲ್ಲಿ ಈ ಒಂದು ಇಲಾಖೆ ಮಾಡಬೇಕಾದ ಕೆಲಸ ಬಹಳ ಇದೆ, ಈ ದೃಷ್ಟಿಯಿಂದ ಹೇಳುತ್ತಿದ್ದೇನೆ. ಈ ಇಲಾಖೆಯ ಕೆಲಸ ಮಂದಗತಿಯಲ್ಲಿ ನಡೆಯುತ್ತಿದೆ. . . .

ಶ್ರೀ ಕಡಿದಾಳ್ ಮಂಜಪ್ಪ.—ಈಗ ಬಹಳ ಚುರುಕಾಗಿದೆ.

ಶ್ರೀ ಬಿ. ಟಿ. ಕೆಂಪರಾಜ್.—ಇದಕ್ಕೆ ಕಾರಣವೇನೆಂದರೆ, ಈ ಇಲಾಖೆಯಲ್ಲಿರತಕ್ಕ ಅಧಿಕಾರಿಗಳು ಹೆಚ್ಚು ಕಷ್ಟಪಟ್ಟು ಕೆಲಸಮಾಡುತ್ತಾರೆಂದು ನಾವು ಅಂದುಕೊಂಡರೂ ಸಹ ಅಲ್ಲಿರತಕ್ಕ ಫೈಲುಗಳೂ ಕಾಗದ ಪತ್ರಗಳೂ ಬಹಳ ನಿಧಾನವಾಗಿ ಸಾಗುತ್ತವೆ ಹೋಗುತ್ತವೆ. ಇದಕ್ಕೆ ಕಾರಣವೇನೋ ಗೊತ್ತಿಲ್ಲ ಕೆಲಸ ಕಾರ್ಯಗಳನ್ನು ಬಹಳ ಹುರುಪಿನಿಂದಲೂ ಉತ್ಸಾಹದಿಂದಲೂ ಮಾಡಿಸಬೇಕೆಂದು ನಮಗೆ ಆಶೆ. ಆದರೆ ಒಂದು ಕಾಗದ ಸಬ್‌ಓವರ್ಸಿಯರಿಂದ ಅಸಿಸ್ಟೆಂಟ್ ಇಂಜಿನಿಯರ ಆಫೀಸಿಗೆ ಬರುವುದಕ್ಕೆ ಸುಮಾರು ಆರು ತಿಂಗಳಾಗುತ್ತದೆ. ತ್ವರಿತವಾಗಿ ಕೆಲಸಗಳಾದರೆ, ಜನರಿಗೆ ತಮ್ಮ ಕೆಲಸ ಮಾಡಿಸಿದ್ದೇವೆಂಬ ತೃಪ್ತಿಯಾಗಿ ಅವರ ಕಣ್ಣಿಗೆ ಕಾಣುತ್ತದೆ; ಅವರ ಮನಸ್ಸಿಗೂ ಒಪ್ಪುವಂತೆ ನಾವು ಹೇಳುವುದಕ್ಕೆ ಅವಕಾಶವಾಗುತ್ತದೆ. ಪಾಶ್ಚಾತ್ಯ ದೇಶಗಳಿಗೂ ನಮ್ಮ ದೇಶಕ್ಕೂ ಇರುವ ವ್ಯತ್ಯಾಸವನ್ನು ಇನ್ನೂ ನಮ್ಮ ಜನರು ಅರ್ಥಮಾಡಿಕೊಂಡಿಲ್ಲ. ಅವರ ಕಾರ್ಯ ವಿಧಾನವನ್ನು ಇಲ್ಲಿ ಅರ್ಥಮಾಡಿಕೊಂಡಿಲ್ಲ.

Mr. SPEAKER.—Hon'ble Member has taken twenty minutes already!

Sri B. T. KEMPARAJ.—Shall I sit down, Sir?

Mr. SPEAKER.—I request the Hon'ble Member to close his speech.

ಶ್ರೀ ಬಿ. ಟಿ. ಕೆಂಪರಾಜ್.—ನಮ್ಮ ಹಳ್ಳಿಗಾಡಿನ ಜನರಿಗೆ ಏನು ಹೊಸ ಯೋಜನೆಗಳಾಗುತ್ತವೆಯೋ ಸರ್ಕಾರದವರು ಯಾವುದೊಂದು ನೀತಿಯನ್ನನುಸರಿಸುತ್ತಾರೋ ಆ ನೀತಿಯ ಬಗ್ಗೆ ಅವರಿಗೆ ತಿಳಿವಳಿಕೆಕೊಡಬೇಕು. ಆದರೆ ಕೆಲವು ತಿಳಿಯುವುದಿಲ್ಲ. ಉದಾಹರಣೆಗೆ, ವಿದ್ಯಾ ಸುಧಾರಣೆ ಎಂದು ಒಂದು ಹೊಸ ಯೋಜನೆ ಇದೆ. ಇದರ ಬಗ್ಗೆ ತಿಳಿದುಕೊಳ್ಳುವ ಶಕ್ತಿ ಅಷ್ಟಾಗಿ ಅವರಿಗಿಲ್ಲ. ಆದರೆ ಅವರಿಗೆ ಅಗತ್ಯವಾಗಿ ಬೇಕಾಗಿರುವ ವಿದ್ಯುಚ್ಛಕ್ತಿ ಸರಬರಾಯಿ, ರಸ್ತೆ ರಿಪೇರಿ, ಕುಡಿಯುವ ನೀರಿನ ಭಾವಿ ಮುಂತಾದ ಕೆಲಸಗಳ ಮೇಲೆ ಹೆಚ್ಚಿನ ಗಮನವಿರುತ್ತದೆ. ಇಷ್ಟಲ್ಲದೆ, ಸರ್ಕಾರದವರು ಯಾವ ನೀತಿಯನ್ನನುಸರಿಸುತ್ತಾರೆ, ದೇಶದ ಹಿತಕ್ಕಾಗಿ, ಜನರಿಗೆ ಉಪಯೋಗವಾಗುವ ಹಾಗೆ ಏನೇನು ಮಾಡುತ್ತಿದ್ದಾರೆ ಎಂದು ತಿಳಿದುಕೊಳ್ಳುವ ಶಕ್ತಿ ಅವರಲ್ಲನೇಕರಿಗೆ ಬಂದಿಲ್ಲ. ಅವರಿಗೆ ಬೇಕಾಗಿರುವುದು ವ್ಯವಸಾಯಕ್ಕೆ ಬೇಕಾದ ಅನುಕೂಲವಾದ ಏರ್ಪಾಡು! ಅವರು ತಿರುಗಾಡಲು ಮತ್ತು ಅವರು ಬೆಳೆಯುವ ಪದಾರ್ಥಗಳನ್ನು ಬೇರೆ ಬೇರೆ ಸ್ಥಳಗಳಿಗೆ ಕೊಂಡೊಯ್ಯಲು ಅನುಕೂಲವಾದ ರಸ್ತೆ, ಕುಡಿಯುವುದಕ್ಕೆ ನೀರಿನ ವ್ಯವಸ್ಥೆ, ಈ ಸೌಕರ್ಯಗಳ ಬಗ್ಗೆ ಅವರ ಮನಸ್ಸು ಹೋಗುವುದರಿಂದ ಈ ಪಬ್ಲಿಕ್ ವರ್ಕ್ಸ್ ಇಲಾಖೆ ಜಾಗ್ರತೆ ಚಟುವಟಿಕೆಯಿಂದ ಕೆಲಸ ಕಾರ್ಯಗಳನ್ನು ಮಾಡುವುದು ಅತ್ಯಗತ್ಯ. ಇನ್ನಾದರೂ ಮಾನ್ಯ ಸಚಿವರು ಇದಕ್ಕೆ ಸರಿಯಾದ ಏರ್ಪಾಡನ್ನು ಮಾಡುವುದು ಒಳ್ಳೆಯದೆಂದು ಅರಿಕೆ ಮಾಡುತ್ತೇನೆ ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. SPEAKER.—Now, we shall close. Before that, I want to announce that tomorrow we shall meet from 8-30 A.M. to 11-30 A.M. and again from 2 to 7 P.M. Questions will be taken up at 2.00 P.M.

The Assembly adjourned for the day at Fifty-five Minutes past Five of the Clock, to meet again on Friday, the 11th March 1955 at Thirty Minutes past Eight of the Clock in the morning.

MYSORE LEGISLATIVE ASSEMBLY

SIXTEENTH DAY.

Friday, 11th March 1955.

The House met in the Assembly Hall, Old Public Offices, Bangalore, at Thirty Minutes past Eight of the Clock.

MR. SPEAKER (SRI H. S. RUDRAPPA, B.SC., LL.B.) in the Chair.

BUDGET FOR 1955-56

General Discussion *(continued)*.

Mr. SPEAKER.—We shall limit the time and strictly adhere to the time-limit.

Sri R. ANANTARAMAN (Chamarajapet).—Some members were given chance to speak on the Rajpramukh's Address. They may be given some more time to speak.

Mr. SPEAKER.—I will strictly adhere to the time-limit because there are many Hon'ble Members who wish to speak, and we must give them opportunity to do so.

ಶ್ರೀ ಎಂ. ಮಾದಯ್ಯ (ನಂಜನಗೂಡು—ಅನುಸೂಚಿತ ಜಾತಿಗಳು).—ಅಧ್ಯಕ್ಷರೇ, ನಮ್ಮ ಮುಂದಿರತಕ್ಕ ಈ ಆಯವ್ಯಯ ಪಟ್ಟಿಯನ್ನು ನಾನು ಸ್ವಾಗತಿಸುತ್ತೇನೆ. ಹಾಗೆ ಸ್ವಾಗತಿಸುತ್ತಾ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಬಡ್ಜೆಟ್ಟಿನ ಎರಡನೆಯ ಭಾಗದಲ್ಲಿ ರೂರಲ್ ಡೆವಲಪ್‌ಮೆಂಟಿಗಾಗಿ ಕೊಟ್ಟಿರುವ ಮೊಬಲಗನ್ನು ತಿಳಿಸಿದ್ದಾರೆ. ನಿಮ್ನ ತರಗತಿಯವರಿಗೆ ಈ ಸಾರಿ 35 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಮಾನ್ಯ ಮಂತ್ರಿಗಳು ತಮ್ಮ ಭಾಷಣದಲ್ಲೂ ಹೇಳಿದ್ದಾರೆ, ಇಲ್ಲಿಯೂ ತಿಳಿಸಿದ್ದಾರೆ. ಇದರ ವಿಚಾರದಲ್ಲಿ ಹೇಳುವುದಾದರೆ, ಈ ಪೈಕಿ ಇಂಡಿಯಾ ಸರ್ಕಾರದಿಂದ ನಮಗೆ ಬರತಕ್ಕದ್ದು 6,55,000 ರೂಪಾಯಿಗಳು. ಬಡ್ಜೆಟ್ ಮೆಮೊರಾಂಡಮ್ಮಿನ 66ನೆಯ ಪುಟದಲ್ಲಿ, "The Special grant of Rs. 40 lakhs sanctioned on the recommendations of the Finance Commission is also included in the Revised Budget. The Budget also includes grants for upliftment of Scheduled Castes and Tribes" ಎಂದು ಹೇಳಿದ್ದಾರೆ. ಈ ಪ್ರಕಾರ ಸ್ಪೆಷಲ್ ಗ್ರಾಂಟ್ 40 ಲಕ್ಷ ರೂಪಾಯಿಗಳು ಮತ್ತು ಡಿಪ್ರೆಸ್ಡ್ ಕ್ಲಾಸ್‌ನವರಿಗೆ ಕೊಟ್ಟಿರುವ 6 ಲಕ್ಷ, ಒಟ್ಟು 50 ಲಕ್ಷ ರೂಪಾಯಿಗಳು ಇಂಡಿಯಾ ಸರ್ಕಾರದಿಂದ ಬಂದಿವೆ. ಇದಲ್ಲದೆ Schemes relating to Bellary ಎಂದು ಹೇಳಿ ಒಂದು ಲಕ್ಷದ ಎರಡು ಸಾವಿರ ಕೊಟ್ಟಿದೆ. ಆ ಮೇಲೆ, ಬಡ್ಜೆಟ್ಟಿನ 347ನೆಯ ಪೇಜಿನಲ್ಲಿ ನೋಡುವುದಾದರೆ, ವಿದ್ಯಾಭ್ಯಾಸದ ಬಗ್ಗೆ higher grade teachers 16, lower grade teachers 4 ಎಂಬುದಕ್ಕೆ ಕೊಟ್ಟಿರುವುದನ್ನೂ ಈ ಸಾರಿ ಈ Head ನಲ್ಲಿಯೇ ಸೇರಿಸಿದೆ. ಆದ್ದರಿಂದ ಒಟ್ಟಿನಲ್ಲಿ ಸುಮಾರು 28 ಲಕ್ಷ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ನಮಗಾಗಿ ಕೊಡಲಾಗಿದೆ. ಈ ಪೈಕಿ (2)ನೆಯ Volume ನಲ್ಲಿ ತೋರಿಸಿರುವ ಹಾಗೆ, 17 ಲಕ್ಷ ರೂಪಾಯಿಗಳನ್ನು ಚಾಲ್ತಿ ಸಾಲಿಗೆ ಹೋದ ವರುಷ Vote ಮಾಡಿದ್ದೆವು. ಅದರಲ್ಲಿ ಆರು ಲಕ್ಷ ರೂಪಾಯಿಗಳನ್ನು ಡಿಪ್ರೆಸ್ಡ್ ಕ್ಲಾಸ್ ಹಾಸ್ಟಲುಗಳಿಗಾಗಿ ತೆಗೆದಿಟ್ಟೆವು. ಉಳಿದ 11 ಲಕ್ಷ ರೂಪಾಯಿಗಳನ್ನು ಮಾತ್ರ ಮನೆಗಳನ್ನು ಕಟ್ಟುವುದಕ್ಕಾಗಿ ತೆಗೆದಿಟ್ಟೆವು. Revised estimate ನಲ್ಲಿ ಕೊಟ್ಟಿರುವುದನ್ನು ನೋಡಿದರೆ 17 ಲಕ್ಷ ರೂಪಾಯಿಗಳು ಮಾತ್ರ. ಅಲ್ಲಿಗೆ 17 ಲಕ್ಷ ರೂಪಾಯಿಗಳನ್ನು ಈ ಸಾರಿ ಖರ್ಚುಮಾಡಿದೆಯೆಂದು ಹೇಳಿದ ಹಾಗಾಯಿತು. ಆದರೆ ನಿಜವಾಗಿ ನೋಡಿದರೆ ಅಷ್ಟು ಖರ್ಚು ಮಾಡಿಲ್ಲ. 6 ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿರುವುದರ ಪೈಕಿ ಆರ್ಥಿಕ ಸಚಿವರು ತಮ್ಮ ಭಾಷಣದಲ್ಲಿ ಹೇಳಿರುವ ಹಾಗೆ 1,69,000 ರೂಪಾಯಿಗಳು ಮಾತ್ರ ಖರ್ಚಾಗಿವೆಯೆಂದು ಗೊತ್ತಾಗುತ್ತದೆ. ಅಲ್ಲಿಗೆ, ಸುಮಾರು ಐದು ಲಕ್ಷ ರೂಪಾಯಿಗಳು ಈ ತಿಂಗಳ ಕೊನೆಗೆ lapse ಆಗುತ್ತವೆ. ಹೀಗಾಗಿ ಸದುದ್ದೇಶದಿಂದ ಹಾಸ್ಟಲುಗಳಿಗೆ ಖರ್ಚಾಗಲಿ ಎಂದು ಇಟ್ಟಿದ್ದರೂ ನಿಮ್ಮ ಯಂತ್ರ ಸರಿಯಾಗಿಲ್ಲದ್ದರಿಂದ ಅದು ಖರ್ಚಾಗಲಿಲ್ಲ. ಹೀಗೆ ಖರ್ಚಾಗದಿರುವುದನ್ನು ನ್ಯಾಯವಾಗಿ ಖರ್ಚುಮಾಡಿಸಬೇಕಾಗಿತ್ತು; ಕೊನೆಗೆ ಅದನ್ನು ಲ್ಯಾಪ್ಸ್ ಆಗದಂತೆಯಾದರೂ ಮಾಡಬಹುದಾಗಿತ್ತು. ಹೇಗೆಂದರೆ, ಕಳೆದ ಸಾರಿ ಬಡ್ಜೆಟ್ ಅಧಿವೇಶನದಲ್ಲಿ ಸಭೆಯ ಮುಂದೆ ಡಿಪ್ರೆಸ್ಡ್ ಕ್ಲಾಸ್ ಅಮಿಲಿಯೋರೇಷನ್ ಫಂಡನ್ನು ಏರ್ಪಡಿಸತಕ್ಕ ಪ್ರಶ್ನೆ ಬಂದು ಅದಕ್ಕೆ ಈ ಸಭೆ ಒಪ್ಪಿಗೆಯನ್ನು ಕೊಟ್ಟಿತ್ತು. ಆಗ್ಗೆ ಎರಡು ಲಕ್ಷ ರೂಪಾಯಿಗಳ ಒಂದು ಫಂಡು ಮಾಡುವುದಕ್ಕೆ ಅಪ್ಪಣೆ ಕೇಳಿದಿರಿ, ಅದನ್ನು ಕೊಟ್ಟಿದ್ದೆವು. ಈಗ ನೋಡಿದರೆ ಈ ಎರಡು ಲಕ್ಷ ರೂಪಾಯಿಗಳೂ ಅಲ್ಲಿ ಈಗ ಕಾಣುವುದಿಲ್ಲ. ಅದೇನಾಯಿತೋ ಗೊತ್ತಿಲ್ಲ. 1954-55ರ Revised Estimate ನಲ್ಲೂ ಸಹ ಅದನ್ನು ಸೇರಿಸಿಲ್ಲ. ಆದ್ದರಿಂದ ಈ ತಿಂಗಳಿನ ಕೊನೆಯಲ್ಲಾದರೂ ಈ ವಿಷಯವನ್ನು ಸೇರಿಸಿ ಎರಡು ಲಕ್ಷ ರೂಪಾಯಿನ ಫಂಡನ್ನಿಡುವುದಕ್ಕೆ ಸಾಧ್ಯವಿದೆ. ಅಲ್ಲಿಗೆ ಈ ಸಾರಿಯ ಬಡ್ಜೆಟ್ಟಿನಲ್ಲಿ ಕಾಣಿಸಿರುವ ಒಂದು ಲಕ್ಷ ರೂಪಾಯಿಗಳೂ ಸೇರಿ ಮೂರು ಲಕ್ಷ ರೂಪಾಯಿಗಳಾಗುತ್ತವೆ. ಆದ್ದರಿಂದ, ಈಗಲೂ ಕಾಲ ಮಿಂಚಿಲ್ಲ, ಈ ಎರಡು ಲಕ್ಷ ರೂಪಾಯಿಗಳನ್ನು ಸೇರಿಸಿಕೊಡಬೇಕೆಂದು ನಾನು ಸೂಚನೆಕೊಡುತ್ತೇನೆ. ಹಿಂದೆ ಸರ್ಕಾರದವರು ಎಷ್ಟೋ ಸದುದ್ದೇಶ

(ಶ್ರೀ ಎಂ. ಮಾದಯ್ಯ).

ವಿಟ್ಟುಕೊಂಡು ಹಣವನ್ನೊದಗಿಸಿದ್ದರೂ ಸಹ ಅದು ಖರ್ಚಾಗದೆ lapse ಆಯಿತು. ಸ್ವಲ್ಪವೂ ಕೂಡ ಲ್ಯಾಪ್ಸ್ ಆಗದಂತೆ ಮಾಡುತ್ತೇವೆಂದು ಹೇಳಿ ಈ ಸಭೆಯು vote ತೆಗೆದುಕೊಂಡಿದ್ದರೂ ಸಹ ನಾಲ್ಕು ಲಕ್ಷ ರೂಪಾಯಿಗಳನ್ನು ಲ್ಯಾಪ್ಸ್ ಮಾಡಿಸಿದ್ದಾರೆ. ಹಾಗೆಯೇ ಈ ವರ್ಷದ ಬಡ್ಜೆಟ್ಟಿನಲ್ಲಿ 1953-54ನೆಯ ಇಸವಿಯಲ್ಲಿ ಒದಗಿಸಿದ್ದ 24 ಲಕ್ಷ ರೂಪಾಯಿಗಳ ಪೈಕಿ 15,77,000 ರೂಪಾಯಿಗಳು ಮಾತ್ರ Depressed Class Housing Scheme ಗಾಗಿ ಖರ್ಚಾಗಿದೆ. ಒಂದು ಫಂಡು ಏರ್ಪಡಿಸಿ ಒಂದೆರಡು ಲಕ್ಷ ರೂಪಾಯಿಗಳನ್ನು ಮಾತ್ರ ಹಾಕಿದೆ. ಇದರಿಂದಲೇ ಗೊತ್ತಾಗುತ್ತದೆ, that the remaining amount has lapsed ಎಂದು. ಈ ಪ್ರಕಾರ ಒಂದು ಕೈಯಲ್ಲಿ ಕೊಟ್ಟಿರುವುದನ್ನು ಇನ್ನೊಂದು ಕೈಯಲ್ಲಿ ತೆಗೆದುಕೊಂಡ ಹಾಗಾಗುತ್ತಿದೆ. ಹೀಗೆ ಲ್ಯಾಪ್ಸ್ ಆಗಿರುವ ಕಾರಣದಿಂದ, ಇಲ್ಲಿ ಇಷ್ಟು ಹಣ ಕೊಟ್ಟಿದ್ದರೂ ನಮಗೆ ಕೈಗೆ ಬರುವುದು ಕೇವಲ 22 ಲಕ್ಷ ರೂಪಾಯಿಗಳು ಮಾತ್ರ—ಅದೂ ಬಳ್ಳಾರಿಯೂ ಸೇರಿ. ಮಾನ್ಯ ಸದಸ್ಯರು ಮತ್ತು ಸರ್ಕಾರದವರು ಇದನ್ನು ಗಮನಕ್ಕೆ ತಂದುಕೊಂಡು ಸೂಕ್ತ ರೀತಿಯಲ್ಲಿ ಸರಿಪಡಿಸಬೇಕೆಂದು ಹೇಳುತ್ತೇನೆ.

ಡಿಪ್ರೆಸ್ಡ್ ಕ್ಲಾಸ್‌ನವರ ಅಭಿವೃದ್ಧಿಗಾಗಿ ಒಂದು ಸೆಮಿನಾರನ್ನು ಏರ್ಪಡಿಸುವುದರಲ್ಲಿದ್ದಾರೆಂದು ಕೇಳಿದ್ದೇನೆ. ಆದರೆ ಇದನ್ನು ಏರ್ಪಡಿಸಿರುವುದು ಸಕಾಲವಲ್ಲ. ಈ ತಿಂಗಳೊಳಗೇ ಮಾಡಬೇಕೆಂದು ಹೇಳಿದ್ದೀರಿ. ಈ ಸಭೆಯ ಕೆಲವು ಮಾನ್ಯ ಸದಸ್ಯರೂ ಅದಕ್ಕೆ ಸಂಬಂಧಪಟ್ಟಂತೆ ಏರ್ಪಡಿಸಿರುವ ಸಬ್ ಕಮಿಟಿಗಳಲ್ಲಿದ್ದಾರೆಂದು ಗೊತ್ತಾಗಿದೆ. ಈಗ ಈ ಅಧಿವೇಶನ ನಡೆಯುತ್ತಿರುವಲ್ಲಿ, ಈ ತಿಂಗಳ ಕೊನೆಗೇ ಈ ಸೆಮಿನಾರಿಗೆ ಸಿದ್ಧತೆಗಳನ್ನು ಮಾಡಿಕೊಳ್ಳಬೇಕೆಂದರೆ ಬಹಳ ಕಷ್ಟ. ಆದ್ದರಿಂದ ಇದನ್ನು ನಿಲ್ಲಿಸಿ, ಈ ಅಧಿವೇಶನವಾದಮೇಲೆ ಮುಂದಿನ ತಿಂಗಳಿನಲ್ಲೋ ಅಥವಾ ಆಮೇಲೆಯೋ ಇಟ್ಟುಕೊಂಡು ಸರಿಯಾಗಿ ಯೋಜನೆಗಳನ್ನೂ ಸಿದ್ಧತೆಗಳನ್ನೂ ತಯಾರಿಸಿಕೊಂಡು ಮಾಡಬೇಕೆಂದು ಹೇಳುತ್ತೇನೆ.

ಆಮೇಲೆ ಡಿಪ್ರೆಸ್ಡ್ ಕ್ಲಾಸಿನವರ ಅಭಿವೃದ್ಧಿಗಾಗಿ ಹಾಸ್ಟಲುಗಳಿಗಾಗಿಯೂ ಮತ್ತು ಸ್ಕಾಲರ್‌ಷಿಪ್ಪುಗಳಿಗಾಗಿಯೂ ಹೆಚ್ಚಿಗೆ ಹಣ ಕೊಡಬೇಕೆಂದು ಪದೇ ಪದೇ ಒತ್ತಾಯಮಾಡುತ್ತಿದ್ದೇವೆ. ಇದರಿಂದಾಗಿ ಸರ್ಕಾರದವರು ಮಾಡಿರುವ ಒಂದು ಅಭಿನಂದನಾರ್ಹವಾದ ವಿಚಾರವೇನೆಂದರೆ, ಸರ್ಕಾರದವರು ಹಾಸ್ಟಲುಗಳಿಗಾಗಿ ಬಹಳ ಉದಾರ ಮನಸ್ಸಿನಿಂದ ಸಹಾಯ ಮಾಡಲು ಮುಂದೆ ಬಂದು ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದಲ್ಲದೆ, ಇನ್ನೂ ಒಂದು ಕೋಟಿ ರೂಪಾಯಿಗಳನ್ನು ಬೇಕಾದರೂ ಖರ್ಚು ಮಾಡುವುದಾಗಿ ಹೇಳಿದ್ದಾರೆ. ಅವರ ಮನಸ್ಸಿಗೆ ಈಗತಾನೆ ಸ್ವಲ್ಪ ಅರಿವು ಬಂಧಂತೆ ಕಾಣುತ್ತದೆ. ಆಮೇಲೆ ಡಿಪ್ರೆಸ್ಡ್ ಕ್ಲಾಸ್ ಮತ್ತು ನಿಮ್ನ ತರಗತಿಯವರಿಗೆ ಸ್ಕಾಲರ್‌ಷಿಪ್ ಕೊಡತಕ್ಕ ಬಗ್ಗೆ ಕೊಟ್ಟಿರುವ ಮೊಬಲಗು ಒಂದೇ ರೀತಿಯಾಗಿದೆ. ಇದುವರೆಗೆ ನೀವು ಕೊಟ್ಟಿರುವ ಸಹಾಯದಿಂದ ಏನಿದ್ದರೂ ನಮ್ಮಲ್ಲಿ ಅನುಕೂಲಸ್ಥರ ಮಕ್ಕಳನ್ನು, ಯಾರ Voice ಹೆಚ್ಚಿಗೆ ಕೇಳಿಬರುತ್ತಿತ್ತೊ, ಅಂಥವರ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಲು ಸಾಧ್ಯವಾಯಿತೇ ಹೊರತು, ಜನ ಸಾಮಾನ್ಯರ, ಬಡಜನರ ಮಕ್ಕಳನ್ನು ವಿದ್ಯಾಭ್ಯಾಸ ಮಾಡಿಸಲು ಆಗಿಲ್ಲ.

ಆದುದರಿಂದ ಸರ್ಕಾರದವರು ಕೋಟಿಗಟ್ಟಲೆ ಖರ್ಚು ಮಾಡಲು ಮುಂದೆ ಬಂದಿರುವಾಗ, ಈ ಬಾಬಿಗೆ ಇನ್ನೂ 4-5 ಲಕ್ಷ ರೂಪಾಯಿಗಳನ್ನು ಹೆಚ್ಚಿಗೆ ಖರ್ಚು ಮಾಡದೆ ಹೋದರೆ ಇದು ಸಾಧ್ಯವೇ ಆಗುವುದಿಲ್ಲ. ಆದುದರಿಂದ ತಾವು ಇದನ್ನು ಖಂಡಿತ ಮಾಡಬೇಕೆಂದು ಸೂಚಿಸಲಿಚ್ಛಿಸುತ್ತೇನೆ. ಈಗ ತಾವು ಈ ಸಾರ್ವಜನಿಕ ವಿದ್ಯಾರ್ಥಿ ಭವನಗಳನ್ನು ಕಟ್ಟಿಸತಕ್ಕ ಬಗ್ಗೆ 5 ಲಕ್ಷ ರೂಪಾಯಿಗಳನ್ನು ತೆಗೆದಿಟ್ಟುಕೊಂಡಿದ್ದೇವೆ ಎಂದು ಹೇಳಿದ್ದೀರಿ. ಇದು ಬಹಳ ಸ್ವಾಗತಾರ್ಹವಾದದ್ದು. ಈಗ ತಾವು ಮಾಡುತ್ತಿರುವ ರೀತಿಯಲ್ಲಿ ಈ ಹಿಂದುಳಿದ ಪಂಗಡದವರಿಗೂ ನಿಮ್ನ ವರ್ಗದವರಿಗೂ, ಇತರ ಎಲ್ಲಾ ಕೋಮಿನವರಿಗೂ ಈ ವಿದ್ಯಾಭ್ಯಾಸದಲ್ಲಿ ಒಂದು ಹೆಚ್ಚಿನ ಡಿಸ್‌ಪ್ಯಾರಿಟಿಯುಂಟಾಗಿ ಇದರಿಂದ ವಿದ್ಯಾವಂತರ ಪರ್ಸೆಂಟೇಜ್ ಸಹ ಹೆಚ್ಚು ಕಡಮೆ ಆಗುತ್ತದೆ. ಅನುಕೂಲಸ್ಥರಿಗೇ ಅನುಕೂಲ ದೊರೆಯುತ್ತಾ ಹೋದರೆ ಅನಾನುಕೂಲಸ್ಥರ ಮಕ್ಕಳು ಮುಂದಕ್ಕೆ ಬರುವುದು ಹೇಗೆ? ಆದುದರಿಂದ ಈ ವಿದ್ಯಾಭ್ಯಾಸದ ಅನುಕೂಲ ದೊರೆಯದೇ ಇರತಕ್ಕಂಥ ಮಕ್ಕಳು ಯಾರಿದ್ದಾರೋ ಅವರಿಗೊಂದು ಹೆಚ್ಚಿನ ಅವಕಾಶಮಾಡಿಕೊಡಿ ಎಂದು ಮಾತ್ರ ಹೇಳುತ್ತಿದ್ದೇನೆ. ಈಗ ತಾವೇ ಅಪ್ಪಣೆ ಕೊಡಿಸಿರುವ ಹಾಗೆ ನಮ್ಮ ಗುರಿ ಇರುವುದು casteless and classless ಸೊಸೈಟಿಯನ್ನು ನಿರ್ಮಾಣ ಮಾಡಬೇಕು ಎಂಬುದು. ಹೀಗೆ ಮಾಡಿರತಕ್ಕದ್ದು ಬಹಳ ಒಳ್ಳೆಯದು. ಇದು ನಮ್ಮ ರಾಜ್ಯಾಂಗಕ್ಕೂ ಅನುಕೂಲವಾಗಿದೆ. ಮೇಲಾಗಿ ನಮ್ಮದು ಸೆಕ್ಯುಲರ್ ಸ್ಟೇಟ್. Casteless and classless ಸೊಸೈಟಿ ಅಂದರೂ ಒಂದೇ ಸೆಕ್ಯುಲರ್ ಸ್ಟೇಟ್ ಅಂದರೂ ಒಂದೇ. ಹೀಗೆ ನಾವು ಇಂಥ ಒಂದು ಹೊಸ ವ್ಯವಸ್ಥೆಯನ್ನು ಈ ದಿವಸ ಮಾಡತಕ್ಕದ್ದು ನಮ್ಮ ನ್ಯಾಷನಲ್ ಅಡ್ವಾನ್ಸ್‌ಮೆಂಟಿಗೆ ಬಹಳ ಸಹಕಾರಿಯಾಗುತ್ತದೆ. ಈ ದಿವಸ ನಮ್ಮ ನ್ಯಾಷನಲ್ ಅಡ್‌ವಾನ್ಸ್‌ಮೆಂಟಿಗೆ ಈ ಕೋಮುವಾರು ಭಾವನೆಗಳು ಬಹಳ ಮಟ್ಟಿಗೆ ಅಡ್ಡಿಯಾಗಿರುತ್ತವೆ. ದೇಶಾಭಿವೃದ್ಧಿಯ ಸನ್ನಿವೇಶದಲ್ಲಿ ಈ ಕೋಮುವಾರು ಹಾವಳಿ ಇರಬಾರದು. ನಾನು ಇದರ ಬಗ್ಗೆ ಒಂದು ಪ್ರತ್ಯೇಕ ನಿರ್ಣಯವನ್ನೇ ತರಬೇಕೆಂದಿದ್ದೆನು.

ಶ್ರೀ ಕಡಿದಾಳ್ ಮಂಜಪ್ಪ (ರೆವಿನ್ಯೂ ಮತ್ತು ಮರಾಮತ್ ಶಾಖಾ ಮಂತ್ರಿಗಳು).—ಅದನ್ನು ಹೋಗಲಾಡಿಸಲು ಏನು ಮಾಡಬೇಕೆಂಬ ಬಗ್ಗೆ ತಾವೇನು ಹೇಳುತ್ತೀರಿ?

ಶ್ರೀ ಎಂ. ಮಾದಯ್ಯ.—ಈಗ ತಾವು ಜಾತಿಗಳ ಮೇಲೆ, ಇವರು ಇಂಥ ಜಾತಿ, ಅವರು ಅಂಥ ಜಾತಿ ಎಂಬ ಭೇದ ಭಾವನೆಗಳನ್ನು ಬರವಣಿಗೆಯಲ್ಲಿ, ಅಂದರೆ ಧಾಖಲೆಗಳಲ್ಲಿ ಇಡುತ್ತಿದ್ದೀರಿ. ಇದನ್ನು ತಾವು ತಪ್ಪಿಸಿ, ಯಾವುದಾದರೂ ಒಂದು ಅಂಕಿ ಅಂಶದ ಮೇಲೆ ನಿರ್ಧರಿಸಿದರೆ, ಹಾಗೆ ಇನ್ನು ಮುಂದೆ ಯಾರೂ ಈ ಜಾತಿಗಳನ್ನು ಕಾಗದದ ಮೇಲೆ ಬರೆಯಬಾರದು ಎಂದು ಮಾಡಿದರೆ ಅದೇ ಆಗುತ್ತದೆ.

ಶ್ರೀ ಕಡಿದಾಳ್ ಮಂಜಪ್ಪ.—ಪಂಚಾಂಗ ಹೋದರೆ ನಕ್ಷತ್ರವೂ ಹೋಗಿ ಬಿಡುತ್ತದೆಯೇ?

ಶ್ರೀ ಎಂ. ಮಾದಯ್ಯ.—ಶ್ರೀಮಾನ್ ನಾಗಪ್ಪನವರು ಇಂಟರ್ ಕ್ಯಾಸ್ಟ್ ಮ್ಯಾರೇಜಿನ ಅಗತ್ಯದ ಬಗ್ಗೆ ಒಂದು ನಿರ್ಣಯವನ್ನೇ ತಂದಿದ್ದಾರೆ. ದೇಶ ಮುಂದಕ್ಕೆ ಬರಬೇಕಾಗಿದ್ದರೆ ಈ ಇಂಟರ್ ಕ್ಯಾಸ್ಟ್ ಮ್ಯಾರೇಜುಗಳಿಗೆ ಅವಕಾಶಕೊಡುವುದು ತೀರ ಅಗತ್ಯ. ಇದರಿಂದ ಈಗ ಯಾರುಯಾರಿಗೆ ಈ ಸವರ್ಣ ಹಿಂದುಗಳಲ್ಲಿ ಸಂಪರ್ಕ ಇರುವುದಿಲ್ಲವೋ ಅವರೆಲ್ಲರೂ ಸಂಪರ್ಕ ಬೆಳೆಸಲು ಅವಕಾಶ

ವಾಗಿ ಆ ಮೂಲಕ ಈಗ ಕಾಣುತ್ತಿರುವ ಈ ಕಮ್ಯುನಲ್ ಟೆಂಡೆನ್ಸಿ ಕ್ರಮೇಣ ಹೋಗುತ್ತದೆ. ತಾವು ಇದನ್ನು ಮಾಡದೆ ಕೈಬಿಟ್ಟರೆ ನಮ್ಮ ಪ್ರತಿಯೊಂದು ವಾಕ್ ಆಫ್ ಲೈಫಿನಲ್ಲೂ ನಾವು ಹಿಂದೆ ಬಿದ್ದು ನಮ್ಮ ಡೆಮಾಕ್ರಸಿಯೆಲ್ಲಾ ಹಿಂದುಳಿದು ಹೋಗುತ್ತದೆ. ಆಗ ಇದೊಂದು ಕಮ್ಯುನಲ್ ಸ್ಟೇಟ್ ಆಗುತ್ತದೆ. ಅದುದರಿಂದ ಇಂಥಾದ್ದಕ್ಕೆಲ್ಲಾ ಅವಕಾಶವಿಲ್ಲದೆ ಇರುವಂತೆ ಮಾಡಲು ತಾವು ಎಲ್ಲರಿಗೂ ಒಂದೇ ಕಡೆ ಈ ಕಟ್ಟಡಗಳನ್ನು ಕಟ್ಟಿಸಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಬಾಯಲ್ಲಿ ಮಾತ್ರ ಎಲ್ಲರೂ ಈ ಕೋಮುವಾರು ಭಾವನೆ ಹೋಗಬೇಕೆಂದು ಹೇಳುತ್ತಾರೆ. ಆದರೆ ಅದು ಕಾರ್ಯತಃ ನಡೆಯುತ್ತಿಲ್ಲ. ಏತಕ್ಕೆಂದರೆ "Blood is thicker than water" ಎನ್ನುವ ಹಾಗೆ ಅವರು ಆದನ್ನು ಬಿಟ್ಟು ಬಿಡಬೇಕು ಎಂದು ಎಷ್ಟೇ ಮಾಡಿದರೂ ಅದು ಹೇಗೋ ಆಗಿ ಅವರಲ್ಲಿ ಸೇರಿಕೊಂಡೇ ಬಿಡುತ್ತದೆ. ಅವರಿಗೇ ಕೆಲವು ವೇಳೆ ಅದು ಗೋಚರ ಸಹ ಆಗುವುದಿಲ್ಲ. ಈ ಕಾರಣದಿಂದ ಸರ್ಕಾರದವರು ಆವಶ್ಯಕವಾದ ಎಲ್ಲಾ ಪ್ರಯತ್ನಗಳನ್ನೂ ಮಾಡಿ ಈ ಜಾತಿ ಮಾತ್ಸರ್ಯಗಳಿಗೆ ಅವಕಾಶವಿಲ್ಲದಂತೆ ಇದನ್ನು ತಡೆಗಟ್ಟುವುದಕ್ಕೆ ಏನೇನು ಪ್ರಯತ್ನಗಳನ್ನು ಮಾಡಬೇಕೋ ಅದೆಲ್ಲವನ್ನೂ ಮಾಡಲೇಬೇಕೆಂದು ತಿಳಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri R. ANANTARAMAN (Chamarajpet).—Mr. Speaker, Sir, I rise to support the Budget. The Leader of the Opposition has bitterly criticised. . . .

Sri J. MOHAMED IMAM (Jagalur).—I protest against the use of the word 'bitterly'. I never criticised bitterly. I always criticise very sweetly. No bitterness.

Sri R. ANANTARAMAN.—. . . and also other members have criticised that the Budget is a deficit one. The Leader of the Opposition has also stated that the deficit is a gradual one; in 1951-52 it was about one crore and it has gone up now to Rs. 4 crores, and 9 lakhs. I may tell him that the opinion of the economic experts and also of the finance experts is that, in the stage of planning, there would be usually the deficit budget and it is also welcome.

Sri J. MOHAMED IMAM.—Who is that expert?

Sri R. ANANTARAMAN.—Because, the State will be having a number of developmental activities. That is why we need not be afraid that we are having deficit budgets. In other States also they are having deficit budgets and even in the Centre. So let us not be afraid that we are having a deficit budget and the State is having a gloomy future. Let us not be afraid of that because the State has taken up many developmental activities. So it is my duty to bring to his notice how far our State, ever since the Congress Ministry came into office, has improved in all walks of life. For example, in Education, in 1948-49 the previous Government was spending about Rs. 2 crores, 78 lakhs. In the year 55-56 it is now spending about Rs. 4.5 crores.

Sri S. SRINIVASA IYENGAR (T.-Narasipur).—Propose to spend.

Sri R. ANANTARAMAN.—Now it has almost doubled up. This year, we find in the Chief Minister's Speech, that we are opening 233 primary schools, 150 basic schools, 16 new type middle schools, 31 pucca middle schools and 4 high schools. The number of school-going children will be almost doubled up and the expenditure also doubled up and the number of schools also almost doubled up. Also we find that the Government is going to appoint about 200 additional teachers and the total amount to be spent for these appointments and also for the running of these institutions will be about Rs. 15.62 lakhs. We are all aware that the educational reforms were introduced this year on the 30th of January and our State is the first State which has introduced the educational reforms. Hon'ble Leader of the Opposition was also a member of the Reforms Committee. He has also applauded that the educational reforms is praiseworthy and in this respect our State is giving a lead to the other States.

As regards medical facilities, in 1918 there were 451 hospitals. In 1955 we are having 509.

Sri J. MOHAMED IMAM.—What about the budget?

Sri R. ANANTARAMAN.—Apart from these hospitals, there are 254 Ayurvedic dispensaries run by the District Boards. As regards hospitals, this year we find from the Chief Minister's speech and also from the Budget that 45 new hospitals will be started; one combined dispensary and one maternity hospital were opened this year; in all 18 local fund dispensaries.

As regards health centres, in 51-52 there were 128 health centres. In 1955 we are having 186. The money spent on Public Health in the year 1947-48 when the Congress Ministry came into

(SRI R. ANANTARAMAN.)

power, was about Rs. 9,12,000. In 55-56 Rs. 41,01,000 will be spent. As regards hospitals, they are spending about Rs. 1,19,56,000 this year. I did not get the figures for 47-48. It was less than even half. So we find from these details that the Government are spending more on education and hospitals.

As regards Co-operation, in 1947-48 there were about 252 co-operative societies. In the year 1955-56 it is almost double—575 and there are about 6·56 lakhs of members and the paid up capital amounts to Rs. 1.86 crores, and the working capital 9·28 crores. No doubt, criticisms are offered that these institutions are not running well, but the Government have assured that they would see that these institutions run well and they are now going to appoint audit staff so that they would go and audit the accounts and see that there will not be many cases of misappropriation in the future. Also one noteworthy feature is, under this heading, short term credit is given to the agriculturist as arranged for by the Reserve Bank. In every session, the Hon'ble Members used to express that the loan was given only to the people in the cities and also rich people but not given to the poor agriculturists. But due to the efforts of the Central Government and also our State Government, the Reserve Bank is now coming forward to give loans to the agriculturists also.

As regards Animal Husbandry, in 1947 there were 139 veterinary hospitals. In 1955 we are having 225 veterinary hospitals. It is almost double.

Electricity: In the year 1947, 1,027 pumps were there. Electricity was supplied only to 1,027 pump sets. In 1955 there are 5,534 sets—almost five times in number. In 1947, 228 villages were supplied with electricity and now in 1955, 731 villages are supplied with electricity. These activities show that the Government have done a good lot of work to improve the lot of the villagers.

One noteworthy feature is, we have introduced prohibition in six districts. No doubt there would be many cases of illicit distillation. Though criticisms are offered that it is run on co-operative basis, there is illicit distillation, etc., still it has helped the common man. Many people in the villages have now given up drinking. I am of opinion that prohibition should have been extended to the whole State, but the Government have not shown any inclination this year to extend prohibition; I hope they will extend prohibition to some of the important districts at least.

As regards irrigation projects, I need not tell you that the Government are giving the utmost attention towards these projects. Tunga is completed. Nugu is almost completed and the Government are spending money over the Bhadra Reservoir and I hope this project also will be completed as early as possible and due to this far-sighted policy of the Government, food problem is not at all facing us. In those days when we were having rationing and control, the anxiety of the common man was to get food and every person had to run up to the ration shop to get some foodstuffs and those days are now gone and everywhere we get plenty of food due to the far sighted policy of the Government in relaxing the control. I am told they spent about Rs. 2 crores on rationing when there was food control. Then, there were food controls for the procurement and supply of foodstuffs for the poorer classes of people. Now we are not spending a pie except eight or nine lakhs of rupees over the staff just to audit the accounts and the Government have saved so much of money under that head.

9 A.M.

In the address of the Chief Minister, he has said that this year there is going to be a separation of Judiciary from the Executive. Our neighbouring State of Madras has almost completed that scheme and the State of Mysore will be having this scheme. I hope it will be inaugurated as early as possible. The Chief Minister said that it will be done in one or two months. Provision is also made in the Budget for the separation of the Judiciary from the Executive.

Apart from these, we are having Community Projects and National Extension Schemes and every year National Extension Schemes are introduced in every taluk, and I am sure that by about eight to ten years, all the villages in our State will be covered by this National Extension Scheme.

I wish to say one word about the socialistic pattern of society. The Leader of the Opposition gave his own definition. As I have found, the meaning of the word socialistic pattern of society includes the following things: the owning or the controlling or the management of big and heavy industries and secondly increase of production, and thirdly equitable distribution.

Sri J. MOHAMED IMAM.—What kind of production?

Sri R. ANANTARAMAN.—Production of food, industrial production and everything.

So, there must be equitable distribution of food also. In India, we find that there are 98 per cent of poor people. Only one or two per cent are very rich. Supposing their wealth is distributed to the poorer classes, the standard of living of not even one or two per cent will go up. It is better that the standard of living of these persons is raised so that they could also earn well. With these few remarks, I close my speech.

ಶ್ರೀ ಬಿ. ಪಿ. ನಾಗರಾಜಮೂರ್ತಿ (ಮಳವಳ್ಳಿ).—ಸ್ವಾಮಿ, ಈ ಬಡ್ಜೆಟ್ಟನ್ನು ವಿಮರ್ಶೆ ಮಾಡಿದ ಸಂದರ್ಭದಲ್ಲಿ ವಿರೋಧ ಪಕ್ಷದವರು ಕೆಲವು ಕಟುವಾದ ಟೀಕೆಗಳನ್ನು ಮಾಡಿದ್ದಾರೆ. ಶ್ರೀಮಾನ್ ಭೀಮಪ್ಪ ನಾಯಕರು ಸಂಸ್ಥಾನದ ಆಯವ್ಯಯದ ಪಟ್ಟಿಯನ್ನು ವಿಮರ್ಶೆ ಮಾಡುವಾಗ ಇದನ್ನು ಒಬ್ಬ ಮನುಷ್ಯನ ಆಯವ್ಯಯದ ಪಟ್ಟಿಗೆ ಹೋಲಿಸಿ ಟೀಕೆ ಮಾಡುವುದು ಸೂಕ್ತವಲ್ಲವೆಂದು ಹೇಳಿದರು. ಆದರೆ ಕೆಲವು ಮೂಲಭೂತವಾದ ತತ್ವಗಳಲ್ಲಿ ವೈಯಕ್ತಿಕವಾದ ಮನುಷ್ಯನ ಆಯವ್ಯಯ ತಃಖ್ತೆಗೂ ಸಂಸ್ಥಾನದ ಆಯವ್ಯಯ ತಃಖ್ತೆಗೂ ಬಹಳ ಸಾಮ್ಯವಿದೆಯೆಂಬುದನ್ನು ಯಾರಾದರೂ ಒಪ್ಪಿಕೊಳ್ಳಬೇಕು. ವೈಯಕ್ತಿಕ ಆಯವ್ಯಯದ ಪಟ್ಟಿಯ ತಯಾರಿಕೆಯಲ್ಲಿ ಲಾಭದ ದೃಷ್ಟಿ ಇರಬಹುದು; ಸಂಸ್ಥಾನದ ಆಯವ್ಯಯದಲ್ಲಿ ಇದು ಇಲ್ಲದೇ ಇರಬಹುದು. ಒಬ್ಬ ಮನುಷ್ಯ ತನ್ನ ಆಯವ್ಯಯದ ತಃಖ್ತೆಯನ್ನ ಮಾಡುವಾಗ ಅವನ ಜೀವಮಾನದ ಅವಧಿ ಬಹಳ ಕಡಮೆಯಾದುದರಿಂದ ಅವನು ಲಾಭದ ದೃಷ್ಟಿಯಿಂದ ಮಾಡಬಹುದು. ಆದರೆ ಸಂಸ್ಥಾನದ ಆಯವ್ಯಯದ ಪಟ್ಟಿಯನ್ನು ನಿರ್ಮಾಣ ಮಾಡತಕ್ಕ ಕಾಲದಲ್ಲಿ ಶಾಶ್ವತವಾಗಿ ಸಾರೋದ್ಧಾರವಾಗಿ ನಡೆಯತಕ್ಕ ಕೆಲಸಗಳನ್ನು ಮಾಡುವುದರಿಂದ, ಈ ದೃಷ್ಟಿಯಿಂದ ಇದನ್ನು ವಿಮರ್ಶೆ ಮಾಡಬೇಕಾಗಿದೆ. ಒಬ್ಬ ಆಂಗ್ಲ ಮಹಿಳೆಯು ಈ ವಿಚಾರವನ್ನು ವಿಮರ್ಶೆ ಮಾಡುವ ಕಾಲದಲ್ಲಿ ಬಹಳ ಚೆನ್ನಾಗಿ ಹೇಳಿದ್ದಾಳೆ. "What is the good of the budget to a State and what is the meaning of the budget" ಎಂಬುದನ್ನು ಹೇಳುವಾಗ: 'It only means the Government are worrying themselves before the amount is spent instead of after.' ಇದನ್ನು ಕನ್ನಡದಲ್ಲಿ ಭಾಷಾಂತರ ಮಾಡಿದರೆ, ಆಯವ್ಯಯ ಆಗುವುದಕ್ಕೆ ಮೊದಲೇ ಬೊಬ್ಬೆಯಿಡುವುದು ಬಡ್ಜೆಟ್ ಎಂದು ಹೇಳಬಹುದು. ಅಸಾಮಾನ್ಯ ಕಾಲದಲ್ಲಿ ಇಂಥಾ ಖೋತಾ ಬಡ್ಜೆಟ್ಟನ್ನು ನಿರ್ಮಾಣ ಮಾಡುವುದು ಎಲ್ಲಾ ಸಂಸ್ಥಾನಗಳಲ್ಲಿಯೂ ರೂಢಿಯಲ್ಲಿದೆ, ಇದಕ್ಕೆ ಗಾಬರಿಯಾಗಬೇಕಾಗಿಲ್ಲವೆಂದು ಶ್ರೀಮಾನ್ ಭೀಮಪ್ಪ ನಾಯಕರು ಹೇಳಿದರು. ಆದರೆ ಒಂದು ವಿಷಯವನ್ನು ಹೇಳಲಿಚ್ಛಿಸುತ್ತೇನೆ. ಕಾಂಗ್ರೆಸ್ ಸರ್ಕಾರ ಅಧಿಕಾರವನ್ನು ವಹಿಸಿಕೊಂಡಮೇಲೆ ಸಾಲದಲ್ಲೇ ಹುಟ್ಟಿ ಬೆಳೆಯುತ್ತಿದೆ; ಇನ್ನೂ ಮುಂದೆ ಹೇಳುವುದಾದರೆ, ಕೊನೆಯಲ್ಲಿ ಸಾಲದಲ್ಲೇ ಸಾಯುತ್ತದೆ ಎಂದು ಹೇಳಬೇಕಾಗುತ್ತದೆ. ಆದುದರಿಂದ ಯಾವಾಗಲೂ ಸಾಲದಿಂದಲೇ ಖೋತಾ ಸರಿದೂಗಿಸುತ್ತೇವೆಂದು ಹೇಳುವುದು ಯುಕ್ತವಲ್ಲ. ಹೀಗೆ ಸಾಲದ ಹೊರೆಯನ್ನು ಹೊರುವುದು ಮತ್ತು ಹೊರಿಸುವುದನ್ನು ಸುಖೀರಾಜ್ಯವೆಂದು ಹೇಳುವುದು ಹೋಗಿ ಸುಸ್ತಿ ರಾಜ್ಯವಾಗುತ್ತದೆ.

ಮದ್ಯಪಾನ ನಿರೋಧವನ್ನು ಜಾರಿಗೆ ತಂದಿದ್ದಾರೆ. ಇದರ ಜೊತೆಯಲ್ಲಿ ನಿಮ್ಮ ವರ್ಗದ ಅಭಿವೃದ್ಧಿ ಯೋಜನೆಗೆ ಲಕ್ಷಾಂತರ ರೂಪಾಯಿ ಖರ್ಚುಮಾಡುತ್ತಿದ್ದಾರೆ; ಈ ಬಗ್ಗೆ ಅಂಕಿ ಅಂಶಗಳಿವೆ. ಸಂಸ್ಥಾನದಲ್ಲಿ ಯಾವ ಯಾವ ಪ್ರದೇಶದಲ್ಲಿ ನಿಮ್ಮ ವರ್ಗದವರ ಸಂಖ್ಯೆ ಜಾಸ್ತಿಯಾಗಿದೆ ಎನ್ನುವುದು ಮಾನ್ಯ ಸದಸ್ಯರ ಅನುಭವದಲ್ಲಿದೆ. ಮದ್ಯಪಾನದಿಂದ ತೊಂದರೆಗೀಡಾಗಿರುವವರಲ್ಲಿ ನಿಮ್ಮ ವರ್ಗದವರೇ ಹೆಚ್ಚು. ಅವರ ಅಭಿವೃದ್ಧಿ ಯೋಜನೆಗಳಿಗಾಗಿ ಲಕ್ಷಾಂತರ ರೂಪಾಯಿ ಖರ್ಚುಮಾಡುತ್ತಾರೆ. ಹೀಗೆ ಒಂದು ಕೈಯಲ್ಲಿ ಅವರಿಗೆ ಹಣವನ್ನು ಕೊಡುತ್ತಾರೆ; ಈ ಹಣವನ್ನು ಅವರಿಗೆ ಕೊಡಿಸಿ ಅವರಿಂದ ಬೊಕ್ಕಸಕ್ಕೆ ವಾಪಸು ತೆಗೆದುಕೊಳ್ಳುತ್ತಿದ್ದಾರೆ. ಉದಾಹರಣೆಗೆ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆಯಲ್ಲಿ ಅವರ ಸಂಖ್ಯೆ ಹೆಚ್ಚು ಕೇಂದ್ರೀಕೃತವಾಗಿದೆ. ಇಲ್ಲಿ ಅವರ ಅಭಿವೃದ್ಧಿ ಯೋಜನೆಗೆ ಪ್ರತಿವರ್ಷವೂ ಸರ್ಕಾರದವರು ಹಣವನ್ನೊದಗಿಸುತ್ತಿದ್ದಾರೆ; ರಾಷ್ಟ್ರೀಯ ವಿಸ್ತರಣಾಭಿವೃದ್ಧಿ ಯೋಜನೆಯ ಕೇಂದ್ರವನ್ನೂ ಮಾಡಿದ್ದಾರೆ. ಇವೆರಡಕ್ಕೂ ಹಣ ಖರ್ಚು ಮಾಡುವುದು; ಬೇರೆ ಕಡೆ ಪಾನನಿರೋಧ ಜಾರಿಯಲ್ಲಿದ್ದರೂ ಇಲ್ಲಿ ಜಾರಿಗೆ ತರದೆ ಕುಡಿತದಿಂದ ಸರ್ಕಾರದ ಬೊಕ್ಕಸಕ್ಕೆ ಈ ಜನರಿಂದ ಹಣವನ್ನು ತೆಗೆದುಕೊಳ್ಳುವುದು—ಇದು ಬಹಳ ಅಸಮಂಜಸವಾದ ನೀತಿ.

ನಿಮ್ಮ ವರ್ಗದವರ ಅಭಿವೃದ್ಧಿ ಯೋಜನೆಯ ವಿಷಯದಲ್ಲಿ ಒಂದು ಮಾತು. ಸ್ವಾಮಿ, ನಿಜವಾಗಿಯೂ ನಾನು ಇಲ್ಲಿರತಕ್ಕ ನಿಮ್ಮ ವರ್ಗದ ಮಾನ್ಯ ಸದಸ್ಯರ ಕ್ಷಮೆ ಬೇಡಿ ಒಂದು ವಿಷಯ ಹೇಳಬೇಕಾಗಿದೆ. ಅವರ ವಿಷಯದಲ್ಲಿ ನನ್ನ ನಿಜವಾದ ಅನುಕಂಪ ಮತ್ತು ಸಹಾನುಭೂತಿಯಿಂದ ಹೇಳುತ್ತಿದ್ದೇನೆ. ಸರ್ಕಾರ ಎಲ್ಲಿಯವರೆಗೆ ನಿಮ್ಮ ವರ್ಗದ ಅಭಿವೃದ್ಧಿಗೆ ಸ್ಪೆಷಲ್ ಆಫೀಸರ್ (ಡಿಪ್ರೆಸ್ಡ್ ಕ್ಲಾಸ್ ಕಮಿಷನರ್) ಮತ್ತು ಸ್ಪೆಷಲ್ ರೆವಿನ್ಯೂ ಇನ್ಸ್ಪೆಕ್ಟರ್ ಹುದ್ದೆಗಳನ್ನು ನಿಮ್ಮ ವರ್ಗದವರಿಗೇ ಕೊಡುತ್ತಾ ಬರುತ್ತಾರೆಯೋ ಅಲ್ಲಿಯವರಿಗೆ ಅವರು ಅಭಿವೃದ್ಧಿಯಾಗುವುದಿಲ್ಲವೆಂದು ಹೇಳು

(ಶ್ರೀ ಬಿ. ಪಿ. ನಾಗರಾಜಮೂರ್ತಿ.)

ತ್ತೇನೆ. ಅವರ ಕೆಲಸವನ್ನು ಕಿತ್ತುಕೊಳ್ಳಿ ಎಂದು ನಾನು ಹೇಳುವುದಿಲ್ಲ; ಅವರಿಗೆ ಬೇರೆ ಕೆಲಸಗಳನ್ನು ಇನ್ನೂ ಅಧಿಕ ಸಂಖ್ಯೆಯಲ್ಲಿ ಕೊಡಿ, ಇನ್ನೂ ಹೆಚ್ಚಿನ ಕೆಲಸಗಳನ್ನು ಕೊಡಿ, ಆದರೆ ಅವರಿಂದಲೇ ಆ ವರ್ಗದವರ ಮೋಕ್ಷಸಾಧನೆಯಾಗುತ್ತದೆ, ಅಭಿವೃದ್ಧಿಯಾಗುತ್ತದೆ ಎನ್ನುವುದರಲ್ಲಿ ಅರ್ಥವಿಲ್ಲ. ಇದುವರೆಗೆ ಅವರಿಂದ ಅವರ ಅಭಿವೃದ್ಧಿ ಸಾಧನೆಯಾಗಿಲ್ಲ. ಅವರಿಗೆ ಬದಲಾಗಿ, ಬೇರೆ ದಕ್ಷರೂ, ಜಾತ್ಯತೀತ ಭಾವನೆಯುಳ್ಳವರೂ ಮತ್ತು ನಿಷ್ಪಕ್ಷಪಾತಿಗಳೂ ಆಗಿರುವವರನ್ನು ಆ ಅಧಿಕಾರಕ್ಕೆ ನೇಮಿಸಿದರೆ ಅವರ ಅಭಿವೃದ್ಧಿ ಹೆಚ್ಚು ಸಾಧನೆಯಾಗುತ್ತದೆ.

ಶ್ರೀ ಎಂ. ಮಾದಯ್ಯ.—ಇದಕ್ಕೆ ಒಂದೆರಡು ನಿದರ್ಶನಗಳನ್ನು ಹೇಳಿ.

Mr. SPEAKER.—This is not the time. Time is flying

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಸರ್ಕಾರದಲ್ಲಿ ಐ.ಪಿ.ಎಸ್. ಮತ್ತು ಐ.ಎ.ಎಸ್. ಜಾರಿಗೆ ಬಂದಮೇಲೆ ಅಧಿಕಾರ ವರ್ಗದಲ್ಲಿ ಅಸಮಾಧಾನ, ಅತೃಪ್ತಿ ಜಾಸ್ತಿಯಾಗುತ್ತಿದೆ. ಇದರಿಂದ ಸರ್ಕಾರ ಅಪ್ರತ್ಯಕ್ಷವಾಗಿ ಲಂಚಕ್ಕೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಅಲ್ಲದೆ ರಾಷ್ಟ್ರದ ಸಂಪತ್ತನ್ನು ಹೆಚ್ಚಿಸುವ ಬೇರೆ ಇಲಾಖೆಗಳಲ್ಲಿ ಅತೃಪ್ತಿ, ಅಸಮಾಧಾನ ಹೆಚ್ಚುತ್ತಿದೆ. ಉದಾಹರಣೆಗೆ ಪಬ್ಲಿಕ್ ಹೆಲ್ತ್ ಮತ್ತು ಮೆಡಿಕಲ್ ಇಲಾಖೆಗಳ ಅಧಿಕಾರಿ ವರ್ಗದಲ್ಲಿ ಈ ರೀತಿಯಾಗಿದೆ. ಜನರ ಜೀವವನ್ನುಳಿಸತಕ್ಕ ಇಂಥ ಇಲಾಖೆಗಳಲ್ಲಿ ಬಹಳ ಅಸಮಾಧಾನ ಹೆಚ್ಚಾಗಿದೆ. ಐ.ಎ.ಎಸ್. ಮತ್ತು ಐ.ಪಿ.ಎಸ್. ಎಂದು ಇವರಿಗೆ ಹೆಚ್ಚು ಸಂಬಳ ಕೊಡುತ್ತಿದ್ದಾರೆ. ಆದರೆ ಈ ಇಲಾಖೆಗಳಲ್ಲಿರುವವರಿಗೆ ಇದು ದೊರೆಯಲಿಲ್ಲ. ಇದರಿಂದ ಬಹಳ ಮೇಧಾವಿಗಳೂ ತಜ್ಞರೂ ಆಗಿರುವ ಡಾಕ್ಟರುಗಳು ನಮ್ಮ ದೇಶವನ್ನು ಬಿಟ್ಟು ಬೇರೆ ಕಡೆ ಹೋಗಿದ್ದಾರೆ. ಅಮೆರಿಕಾದಲ್ಲಿಯೂ ಕೆಲಸದಲ್ಲಿದ್ದಾರೆ. ಇದು ನಿಜವಾಗಿ ನಮಗೆ ಹೆಮ್ಮೆಯನ್ನುಂಟು ಮಾಡುವುದಾಗಿದೆ. ಆದರೆ ಅಂತಹವರನ್ನು ಬಿಟ್ಟು ಕೊಡುವುದರಿಂದ ನಮ್ಮ ದೇಶಕ್ಕೆ ಎಷ್ಟು ನಷ್ಟ ಎಂಬುದನ್ನು ಯೋಚನೆ ಮಾಡಬೇಕು. ಮರಾಮತ್ತು ಇಲಾಖೆಯಲ್ಲಿಯೂ ಐ.ಎ.ಎಸ್., ಐ.ಪಿ.ಎಸ್. ಮಾದರಿಯಲ್ಲಿ ಗ್ರೇಡ್‌ಗಳನ್ನು ಮಾಡಿದರೆ ಉತ್ತಮ. ಉದಾಹರಣೆಗೆ, ಛೀಫ್ ಇಂಜಿನಿಯರು ಒಂಭತ್ತು ಕೋಟಿ ರೂಪಾಯಿಗಳ ಜವಾಬ್ದಾರಿಯನ್ನು ವಹಿಸಿದ್ದಾರೆ. ಆದರೆ ಆ ಇಲಾಖೆಯಲ್ಲಿ ಐ.ಎ.ಎಸ್., ಐ.ಪಿ.ಎಸ್. ಮಾದರಿ ಇಲ್ಲದೇ ಇರುವುದರಿಂದ ಆ ಇಲಾಖೆಯ ಅಧಿಕಾರಿಗಳಲ್ಲಿ ಅತೃಪ್ತಿ, ಅಸಮಾಧಾನಗಳಿರುವುದರಿಂದ ಉತ್ಸಾಹದಿಂದ ಕೆಲಸ ಕಾರ್ಯಗಳು ನಡೆಯುವುದಿಲ್ಲ. . . .

ಶ್ರೀ ಕಡಿದಾಳ್ ಮಂಜಪ್ಪ.—ಹಾಗಿದ್ದರೆ, ಎಲ್ಲಾ ಇಲಾಖೆಗಳಿಗೂ ಮಾಡಬೇಕಾಗುತ್ತದೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಮಾಡಿ. ಲಕ್ಷಾಂತರ ರೂಪಾಯಿನ ಅಂದಾಜನ್ನು scrutiny ಮಾಡುವಾಗ ಸ್ವಲ್ಪ ಹೆಚ್ಚು ಕಡಮೆ ಮಾಡಿದರೂ ಎಷ್ಟೋ ನಷ್ಟವಾಗಬಹುದು. ಆದಕಾರಣ ಅವರಲ್ಲಿ ಅಸಮಾಧಾನವನ್ನು ಹೋಗಲಾಡಿಸುವುದಕ್ಕೆ ಅವಕಾಶ ಮಾಡಬೇಕು. ಈ ಇಲಾಖೆಯಲ್ಲಿ ಲಂಚ ರುಷುವತ್ತುಗಳಿವೆ ಎಂದು ಕೆಲವರು ಹೇಳಿದರು. ನಿಜ, ಇಂಥ ದೂರುಗಳು ಬರುತ್ತವೆ. ಹಾಗೆಯೇ ಎಲ್ಲಾ ಇಲಾಖೆಗಳಲ್ಲಿಯೂ ಅಲ್ಪ ಸ್ವಲ್ಪ ಲೋಪದೋಷಗಳಿವೆ. ಅದಕ್ಕೆ ಬೇರೆ ಕ್ರಮಗಳನ್ನು ತೆಗೆದುಕೊಳ್ಳಬೇಕು, ಹಾಗೆ ಮಾಡುತ್ತಿಲ್ಲ. ಉದಾಹರಣೆಗೆ, ಸಂಗೇನಹಳ್ಳಿ, ತುಪ್ಪದಹಳ್ಳಿ ಕೆರೆಗಳು ಒಡೆದುಹೋದ ಸಂಬಂಧದಲ್ಲಿ ಇಂಥವರಿಂದ ಅಪರಾಧವಾಗಿದೆ ಎಂದು ಸಮಿತಿಯವರು ತೀರ್ಮಾನ ಮಾಡಿದರೂ, ಅವರಮೇಲೆ ಕ್ರಮ ತೆಗೆದುಕೊಳ್ಳುವ ಬದಲು ಅವರಿಗೆ ಪ್ರಮೋಷನ್ ಕೊಟ್ಟಿದ್ದಾರೆ! ಇಂಥವರಿಗೆ ಪ್ರಮೋಷನ್ ಕೊಟ್ಟು ಬೇರೆಯವರಿಗೆ, ಬೇರೆ ಇಲಾಖೆಗಳಲ್ಲಿ ನಿಸ್ಪೃಹರಾಗಿ ದಕ್ಷತೆಯಿಂದ ಕೆಲಸ ಮಾಡುವವರಿಗೆ ಏನೂ ಉತ್ತೇಜನ ಕೊಡದೇಯಿರುವುದು ನಿಜವಾಗಿಯೂ ಒಳ್ಳೆಯ ನೀತಿಯಲ್ಲ. ವಿದ್ಯುಚ್ಛಕ್ತಿ ಇಲಾಖೆಯಲ್ಲಿಯೂ ಕೆಲವು ದಕ್ಷರಾದ ಅಧಿಕಾರಿಗಳನ್ನು ವರ್ಷ ವರ್ಷವೂ ಕಳೆದುಕೊಳ್ಳುತ್ತಿದ್ದೇವೆ. ಏಕೆಂದರೆ, ಆ ಇಲಾಖೆಯಲ್ಲಿಯೂ ಅತೃಪ್ತಿ ಅಸಮಾಧಾನಗಳಿವೆ.

ವಿದ್ಯಾಭ್ಯಾಸದ ಇಲಾಖೆಯ ವಿಚಾರದಲ್ಲಿ, ಕಳೆದ ಜನವರಿ 30ನೆಯ ತಾರೀಖಿನಿಂದ, ಸುಧಾರಣೆಯ ಕುರುಹುಗಳನ್ನು ಸೆಕೆಂಡರಿ ವಿದ್ಯಾಭ್ಯಾಸದ ಕ್ಷೇತ್ರದವರೆಗೆ ಮಾತ್ರ ನೋಡುತ್ತಿದ್ದೇವೆ. ಮುಖ್ಯಮಂತ್ರಿಗಳು ಕೊಟ್ಟಿರುವ ಹೇಳಿಕೆಯ ಪ್ರಕಾರ ವಿಶ್ವವಿದ್ಯಾನಿಲಯ ಮತ್ತು ಸೆಕೆಂಡರಿ ಮತ್ತು ಪ್ರೈಮರಿ ವಿದ್ಯಾಭ್ಯಾಸ ಈ ಎರಡು ಕ್ಷೇತ್ರಗಳಲ್ಲಿಯೂ ಸುಧಾರಣೆಯನ್ನು ಜಾರಿಗೆ ತರುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದ್ದೇವೆಂದು ಹೇಳಿದರು. ಈ ಬಗ್ಗೆ ವಿಶ್ವವಿದ್ಯಾನಿಲಯದಲ್ಲಿ ಇದುವರೆಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆಂಬುದು ಯಾವ ಪತ್ರಿಕೆಗಳಲ್ಲಿಯೂ ಬಂದಿಲ್ಲ ಅಥವಾ ಉಪಸ್ಥಾನಪತಿಗಳು ಯಾವ ಹೇಳಿಕೆಯನ್ನು ಕೊಟ್ಟಿರುವುದನ್ನೂ ಕೇಳಿಲ್ಲ. ಒಂದಕ್ಕೊಂದು ಅನುಸರಿಸಿಕೊಂಡು ಎರಡು ಕ್ಷೇತ್ರಗಳಲ್ಲಿಯೂ ಇದನ್ನು ಜಾರಿಗೆ ತರುವುದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳದಿದ್ದರೆ ಹೇಗೆ ಸುಧಾರಣೆಗಳನ್ನು ಜಾರಿಗೆ ತರುತ್ತೇವೆ ಎಂಬುದನ್ನು ಯೋಚನೆ ಮಾಡಬೇಕಾಗಿದೆ.

Mr. SPEAKER.—Time is up. Please close.

A MEMBER.—What is the time limit, Sir ?

Mr. SPEAKER.—It varies from ten to twelve minutes. The remaining points can be referred to when Demands are taken up.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಜಮೀನು ಹಂಚಿಕೆ ವಿಷಯದಲ್ಲಿ ಈಗಾಗಲೇ ಮಾನ್ಯ ಸದಸ್ಯರು ಕೆಲವು ಅಮೂಲ್ಯವಾದ ಸಲಹೆಗಳನ್ನು ಸರ್ಕಾರದ ಮುಂದಿಟ್ಟಿದ್ದಾರೆ. ಸರ್ಕಾರ ಒಂದುಕಡೆ ಜೋಡಿ ಇನಾಮ್‌ಗಳನ್ನು ರದ್ದುಮಾಡಿ ಅವರಿಂದ ಜಮೀನನ್ನು ಕಿತ್ತುಕೊಂಡು ಇನ್ನೊಂದುಕಡೆ ರಾಜಕೀಯ ಸಂತಪ್ತರು ಎಂದು ಅವರಿಗೆ ಜಮೀನುಗಳನ್ನು ಕೊಟ್ಟು, ಅವರ ಜೋಡಿ ಇನಾಮುಗಳನ್ನು ಸೃಷ್ಟಿಮಾಡುತ್ತಿದ್ದಾರೆ. ಅಲ್ಲದೆ ಜಮೀನು ಕೊಡುವ ಸಂಬಂಧದಲ್ಲಿರುವ ನಿಯಮಗಳನ್ನು ರಾಜಕೀಯ ಸಂತಪ್ತರಿಗೆ ಅನ್ವಯಿಸುತ್ತಿಲ್ಲ, ಮಿಕ್ಕವರಿಗೆ ಜಮೀನು ಕೊಟ್ಟರೆ ಅದನ್ನು 20 ವರ್ಷದೊಳಗೆ ಪರಭಾರೆಮಾಡಬಾರದೆಂದು ಮಾಡಿದ್ದಾರೆ. ಆದರೆ ಈ ನಿಯಮಗಳೆಲ್ಲವೂ political sufferersಗೆ ಅನ್ವಯಿಸುವುದಿಲ್ಲ. ಇಂಥ ನಿಬಂಧನೆಗಳನ್ನು ಮಾಡಿದ್ದಾರೆ; ಏಕೆ ಹೀಗೆ ವ್ಯತ್ಯಾಸ ಮಾಡಬೇಕು? ಯಾರು ದುಡಿಮೆ, ತ್ಯಾಗ, ಮಾಶ್ಯಗಳ ಫಲವಾಗಿ ಯುಗಾಂತರದಿಂದ ಜಮೀನುಗಳನ್ನನುಭವಿಸುತ್ತಿದ್ದರೋ ಅವರು ಮಧ್ಯದಲ್ಲಿರುವುದು ಬೇಡವೆಂದು ಅಸ್ಪೃಶ್ಯರೆಂಥು ಹೊರಗಿರಿಸಿ, ಅವರಿಂದ ಹಣವನ್ನು

ತೆಗೆದುಕೊಂಡು ಅವರ ಜಾಗವನ್ನು political sufferers ಎಂದು ಬೇರೆ ಕೆಲವರಿಗೆ ಕೊಟ್ಟು ಅನ್ಯಾಯ ಮಾಡುತ್ತಿದ್ದಾರೆ. ರಾಜಕೀಯ ಸಂತಪ್ತರು ಯಾರು ಎಂಬುದಕ್ಕೆ ನಿರ್ದಿಷ್ಟವಾದ ನೀತಿನಿಯಮಗಳಿಲ್ಲ. ಈ ರಾಜಕೀಯ ಸಂತಪ್ತರು ಎಂಬ ಹೆಸರಿನಲ್ಲಿ ಅಪಾರವಾದ ಅಕ್ಷಮ್ಯವಾದ ಅನ್ಯಾಯವಾಗುತ್ತಿದೆ. ಪಾಪದ ಹೊರೆ ದಿನದಿನಕ್ಕೂ ಜಾಸ್ತಿಯಾಗುತ್ತಿದೆ. ಎಷ್ಟು ಸಂಸ್ಕೃತಿ ಪ್ರಚಾರ ಮಾಡಿದರೂ ಆ ಹೊರೆ ಕಮ್ಮಿಯಾಗಲಾರದು.

ಶ್ರೀ ಡಿ. ವೆಂಕಟೇಶ್ (ಗಾಂಧೀನಗರ).—ಸ್ವಾಮಿ, 1955-56ನೇ ಇಸವಿ ಆಯವ್ಯಯ ಅಂದಾಜುಪಟ್ಟಿ ವಿಚಾರದಲ್ಲಿ Finance Minister ಮಾಡಿಸಿರತಕ್ಕಂಥಾದ್ದು ಬಹಳ ಸಾಧುವಾಗಿದೆ. ಅದನ್ನು ಪ್ರತಿಯೊಬ್ಬರೂ ಕೂಡ ಮನಃ ಪೂರ್ವಕವಾಗಿ ಒಪ್ಪಿಕೊಳ್ಳಬೇಕಾಗಿದೆ. ಏಕೆಂದರೆ ಸುಮಾರು 12 ಕೋಟಿ ರೂಪಾಯಿಗಳನ್ನು ನಮ್ಮ ದೇಶದ Nation Building activities ಎಂದು ಏನು ಹೇಳುತ್ತಿದ್ದೇವೋ ಅದಕ್ಕ ಉಪಯೋಗ ಮಾಡಿದ್ದಾರೆ. ಅದರಲ್ಲಿ Power projects, Irrigation, projects, Community projects, National Extension Schemes, Industries ಮತ್ತು Rural ಮತ್ತು Town Municipal water supply ಇವುಗಳಿಗೆ ಕೋಟಿಗಟ್ಟಳೆ ರೂಪಾಯಿಗಳನ್ನು ಅಂದಾಜುಮಾಡಿ ಮೊಬಲಗನ್ನು ಖರ್ಚುಮಾಡಿದರೆ, ತಕ್ಷಣ ಅದರಿಂದ ಫಲತಾಂಶ ಬಂದಿಲ್ಲ, ಅದರಿಂದ ಬೇಕಾದಷ್ಟು ಆದಾಯಕ್ಕೆ ದಾರಿ ಇಲ್ಲವೆಂಬ ಅನುಮಾನವಿದೆ. ಇದನ್ನು Long standing planning ಎಂದು ತಿಳಿದು, ಅದಕ್ಕೆ ತಕ್ಷಣವೇ ಫಲತಾಂಶ ಬರುವ ಹಾಗೆ ಇಲ್ಲವೆಂದು ತಿಳಿದುಕೊಳ್ಳಬೇಕು. ಈ ಹಣವನ್ನು ಖರ್ಚುಮಾಡುವಾಗ Cost of living condition ಕಡಿಮೆ ಆಗುತ್ತಿದೆಯೇ, Economic standard ಹೆಚ್ಚುವ ಪರಿಸ್ಥಿತಿ ಇದೆಯೇ, ಇದರಿಂದ ಉತ್ಪತ್ತಿ ಹೆಚ್ಚುತ್ತದೆಯೇ, ನಿರುದ್ಯೋಗದ ಪ್ರಶ್ನೆ ಬಹಳ ಪರಿಣಾಮಕಾರಿಯಾಗುವ ಪರಿಸ್ಥಿತಿಗೆ ಬರುತ್ತದೆಯೇ, ಜನರ ಆದಾಯ ಮತ್ತು ವರಮಾನ ಕೂಡ ಹೆಚ್ಚುವ ಪರಿಸ್ಥಿತಿಗೆ ಬರುತ್ತಿದೆಯೇ, ಎಂಬ ವಿಚಾರಗಳನ್ನು ನೋಡಬೇಕು. Efficiency of administration ವಿಚಾರ ಮಾತನಾಡುವಾಗ ಅಧಿಕಾರ ವರ್ಗದವರು ಅದನ್ನು ಒಪ್ಪಿಕೊಳ್ಳಬೇಕಾದುದು ಮತ್ತು ಅವರು ಹೇಗೆ ವರ್ತಿಸುತ್ತಿದ್ದಾರೆ. ಅದರ ಧೋರಣೆ ಏನಿದೆ, ಅವರು ಬ್ರಿಟಿಷರು ಇದ್ದ ಕಾಲದಲ್ಲಿ ಅವರ ಧೋರಣೆ ಏನಿತ್ತು ಎಂಬುದನ್ನು ನೋಡಬೇಕು. ಈಗ ಬದಲಾವಣೆಯಾದ ಕಾಲದಲ್ಲಿ ಅವರ ಜನತೆಯ ಸೇವಕರು ಎನ್ನುವ ಮನೋಭಾವ ಈ ಅಧಿಕಾರ ವರ್ಗದಲ್ಲ ಇನ್ನೂ ಬಂದಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಎಲ್ಲರೂ ಅದೇ ರೀತಿ ಇದ್ದಾರೆ ಎಂದು ಹೇಳುವುದಕ್ಕೆ ಹೋಗುವುದಿಲ್ಲ ; ಅವರಲ್ಲಿ ಉತ್ತಮರೂ ಇದ್ದಾರೆ. ಬಹುಮಟ್ಟಿಗೆ ಅಧಿಕಾರ ವರ್ಗದವರು ತಮ್ಮ ಧೋರಣೆಯನ್ನು ಬದಲಾಯಿಸಬೇಕು. ಅವರ Promotion ವಿಚಾರದಲ್ಲೋ, ಅಥವಾ Transfer ವಿಚಾರದಲ್ಲೋ ಅಥವಾ ಅವರವರ ಆದಾಯವನ್ನು ಹೆಚ್ಚಿಸಿಕೊಳ್ಳುವ ವಿಚಾರದಲ್ಲೋ ಅಥವಾ ಬಾಕಿಯವರಿಗೆ ಕೆಲಸವನ್ನು ಕೊಡುವ ವಿಚಾರದಲ್ಲೋ Top priority ಮೇಲೆ Cabinet ನಲ್ಲಿ ಹೆಚ್ಚಿನ ಭಾಗದ file ಗಳು ದಿನನಿತ್ಯ ಓಡಾಡುತ್ತಿವೆ. ಆದರೆ ಜನತೆಗೆ ಅನುಕೂಲವಾಗತಕ್ಕಂಥ file ಗಳು ಎಲ್ಲಿಯೋ ಕೂತಿರುತ್ತವೆ. ಇದು ಬಹಳ ಅನ್ಯಾಯ. ಉನ್ನತ ಅಧಿಕಾರ ವರ್ಗದವರ ಒಂದು ಕಮಿಟಿಯನ್ನು ಏರ್ಪಾಡು ಮಾಡಿ ಇಂತಹ ಫೈಲುಗಳನ್ನು ಅವರ ಗಮನಕ್ಕೆ ಮತ್ತು ಅವರ ತೀರ್ಮಾನಕ್ಕೆ ಬಿಡುವುದು ಉತ್ತಮ. ಮಂತ್ರಿಮಂಡಲದವರು ದೇಶೋನ್ನತಿಗಾಗಿ ಪ್ರಯೋಜನವಾಗತಕ್ಕ ವಿಚಾರಗಳನ್ನು ಮುಂಚಿತವಾಗಿ ಪರ್ಯಾಲೋಚನೆ ಮಾಡಬೇಕು. ಆದ್ದರಿಂದ ಸರ್ಕಾರದವರು ತಕ್ಷಣ ಆ ರೀತಿ Committee ಮಾಡಬೇಕು ಎಂದು ಅಭಿಪ್ರಾಯವನ್ನು ನಾನು ತಮ್ಮ ಮುಂದೆ ಇಡುತ್ತೇನೆ. ನಮ್ಮ ದೇಶದಲ್ಲಿ 'Justice is at stake' ಎಂದು ಹೇಳಿದರೆ ತಪ್ಪಾಗಲಾರದು. ಒಂದು ಕಡೆ Executive Head ತಾನು supreme ಎನ್ನುವ ಭಾವನೆ ಅವರ ಮನಸ್ಸಿನಲ್ಲಿ ಹುಟ್ಟಿದೆ. ಇನ್ನೊಂದು ಕಡೆ Judiciary ತಾನು ದೇಶಕ್ಕೆ supreme ಎನ್ನತಕ್ಕಂಥ ಭಾವನೆ ಇದೆ. ಇಬ್ಬರಲ್ಲಿ ಯಾರಿಗೆ ಅಧಿಕಾರ ಕೊಟ್ಟಿದ್ದರೂ ಸರಿಯೇ, ಯಾರು supreme ಆಗಿದ್ದರೂ ಸರಿಯೇ, ಅವರಿಗೆ ಮನ್ನಣೆ ಕೊಡುವುದಕ್ಕೆ ನಾವು ಸಿದ್ಧರಾಗಿದ್ದೇವೆ. ದೇಶದ ಜನತೆಯ ಆಶೋತ್ತರಗಳು Legislature ಮುಖಾಂತರ Parliament ಮುಖಾಂತರ ಕಾನೂನುಮಾಡಿ ದೇಶದ ಹಿತದೃಷ್ಟಿಯಿಂದ ಅದನ್ನು interpret ಮಾಡಬೇಕು ಎಂಬುದನ್ನು ಪ್ರತಿಯೊಬ್ಬರೂ ಒಪ್ಪಬೇಕು. ಆದರೆ Administrative authorities ಆಗಲಿ ಅಥವಾ Judiciary ಆಗಲಿ ಒಂದು ಧೋರಣೆಯಲ್ಲಿ ಜನತೆಯ ಆಶೋತ್ತರಗಳಿಗೆ ಅನುಗುಣವಾಗಿ ಮಾಡಲ್ಪಟ್ಟ ಕಾನೂನುಗಳಿಗೆ ವಿರೋಧವಾಗಿ Interpret ಮಾಡುತ್ತಿದ್ದಾರೆ. ಅದು ಸರಿಯಲ್ಲ. ಈಗಿರುವ Judiciary and Administrative Authorities ಮಧ್ಯದಲ್ಲಿ ಒಬ್ಬರಿಗೊಬ್ಬರು rivalry ಧೋರಣೆಯಿಂದ ಜನತೆಗೆ ತೊಂದರೆ ಉಂಟಾಗುತ್ತಿದೆ. ಈ ಉಭಯ ಪಕ್ಷದವರಿಗೂ ನಾನು ಒಂದು warning ಕೊಡಬೇಕಾಗಿದೆ. ದೇಶದ ಜನತೆಗೆ ಇವರನ್ನು Parliamentನಲ್ಲಿ impeach ಮಾಡುವ ಶಕ್ತಿ ಇದೆ. ಜನತೆಯೇ supreme ಎಂಬುವುದನ್ನು ಮರೆಯಬಾರದು. ಇದೇ ಸಂದರ್ಭದಲ್ಲಿ ಅಧಿಕಾರವರ್ಗಕ್ಕೆ, Judiciary ವರ್ಗಕ್ಕೆ ಅಥವಾ Industrial Tribunal ವರ್ಗಕ್ಕೆ ಅಧಿಕಾರಿಗಳನ್ನು ನಿಯಮಿಸುವ ಕಾಲದಲ್ಲಿ ದೇಶದಲ್ಲಿ social enactments ಏನು ಇವೆಯೋ ಜನಗಳ ಆಶೋತ್ತರಗಳು ಏನು ಇವೆಯೋ ಅವಕ್ಕೆ ಅನುಗುಣವಾದ ಮನೋಭಾವ ಇರುವವರನ್ನು, ಒಳ್ಳೆಯ ಮನೋಭಾವನೆ ಇರುವವರನ್ನು ಆ ಸ್ಥಳಗಳಿಗೆ ಹಾಕುವುದು ಒಳ್ಳೆಯದು. ಹಾಗಿಲ್ಲದೆ Capitalist mentality ಅಥವಾ Autocratic, ದೊಡ್ಡ ಮನೆತನದ ಜನಗಳನ್ನು ಆ ಸ್ಥಳಗಳಿಗೆ ಹಾಕಿದ್ದೇ ಆದರೆ ಜನತೆಯ ಆಶೋತ್ತರಗಳಿಗೆ ಮತ್ತು social enactments ಗಳಿಗೆ ವಿರುದ್ಧವಾಗಿ ಕೆಲಸಮಾಡುವ ಮನೋಭಾವ ಅವರಿಗೆ ಇರುವುದರಿಂದ ಇದರಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ, ಈ ರೀತಿ ಮಾಡುವುದು ಸರಿಯಲ್ಲ. ಆದ್ದರಿಂದ Industrial Tribunal ನೇಮಕ ಮಾಡುವ ಕಾಲದಲ್ಲಿ, ಅಥವಾ Judiciaryಗೆ ನೇಮಕ ಮಾಡುವ ಕಾಲದಲ್ಲಿ ಯಾವ ದೃಷ್ಟಿಯಿಂದ ಶಾಸನ ಸಭೆಗಳಲ್ಲಿ ಕಾನೂನುಗಳನ್ನು ಮಾಡಿಸುತ್ತೀರೋ ಅಂತಹ ದೃಷ್ಟಿ ಇರತಕ್ಕಂಥ ಜನ ಮತ್ತು ಅದಕ್ಕಾಗಿ ದುಡಿಯತಕ್ಕಂಥ ಜನ ಮತ್ತು Progressive ಮನೋಭಾವಕ್ಕೆ ಸರಿಯಾಗಿ ವರ್ತಿಸತಕ್ಕಂಥ ಜನರನ್ನು ಆ ಸ್ಥಳಗಳಿಗೆ ಹಾಕುವುದು ಒಳ್ಳೆಯದೇ ವಿನಾ ಅದಕ್ಕೆ ವಿರುದ್ಧವಾದ ಮನೋಭಾವವುಳ್ಳವರನ್ನು ಅಥವಾ ಹಿಂದಿನಕಾಲದ ರೀತಿಯಲ್ಲಿ ರಾಜ್ಯಭಾರ ನಡೆಸತಕ್ಕಂಥವರನ್ನು ಆ ಸ್ಥಳಗಳಿಗೆ ಹಾಕುವುದು ತಪ್ಪು. ಆದ್ದರಿಂದ ಸರಕಾರ

(ಶ್ರೀ ಡಿ. ವೆಂಕಟೇಶ್.)

ದವರು ತಮ್ಮ ಧ್ಯೇಯವನ್ನು ಈ ವಿಚಾರದಲ್ಲಿ ಬದಲಾಯಿಸಬೇಕೆಂದು ಹೇಳಲು ಇಷ್ಟಪಡುತ್ತೇನೆ. ನಮ್ಮ ದೇಶದಲ್ಲಿ ಕೈಗಾರಿಕೆಗಳಲ್ಲಿ Biggest employer ಎಂದರೆ ಮೈಸೂರುರಾಜ್ಯ. ಅವರು ಕೈಗಾರಿಕೆಗಳನ್ನು nationalise ಮಾಡುತ್ತಿದ್ದಾರೆ. ಅನೇಕ ಮುಖ್ಯ ಕೈಗಾರಿಕೆಗಳು ಅವರ ಅಧೀನದಲ್ಲಿವೆ. ಆದರೆ ಖಾಸಗೀ ಮಾಲೀಕರು ದುಡಿಮೆಮಾಡಿ production ಉತ್ತಮಮಾಡಿ efficiency ಉತ್ತಮ ದರ್ಜೆಯಲ್ಲಿರುವಂತೆ ಮಾಡಿ ಹೇಗೆ ಲಾಭವನ್ನು ಗಳಿಸುತ್ತಾರೋ ಅಷ್ಟರಮಟ್ಟಿಗೆ ಈ nationalised ಕೈಗಾರಿಕೆಯಿಂದ ಆಗುತ್ತಾ ಇಲ್ಲ. ಅದನ್ನು ಸರಿಯಾದ ರೀತಿಯಲ್ಲಿ ಮಾಡಬೇಕು. ಇವೊತ್ತಿನದಿವಸ ಇರುವ ಮಂತ್ರಿ ಮಂಡಲದವರು ಸ್ವಲ್ಪ ಜಬರ್‌ದಸ್ತಿನಿಂದ ಇದಕ್ಕೆ ನಿಗಾಕೊಟ್ಟು ಸ್ವಲ್ಪಮಟ್ಟಿಗೆ ಉತ್ತಮದರ್ಜೆಗೆ ಈ ಕೈಗಾರಿಕೆಗಳನ್ನು ತಂದಿದ್ದಾರೆ. ಈ ಮಾತನ್ನು ಹೇಳುವುದಕ್ಕೆ ನಾನು ಹಿಂಜರಿಯುವುದಿಲ್ಲ. ಆದರೂ ಕೂಡ ಖಾಸಗೀ ಕೈಗಾರಿಕೆಗಳಿಗೆ ಇವುಗಳನ್ನು ಹೋಲಿಸಿದರೆ ಅವುಗಳು ಅಷ್ಟು ಒಳ್ಳೆಯ ಪರಿಸ್ಥಿತಿಯಲ್ಲಿಲ್ಲ. ಇದಕ್ಕೆ ಸರಕಾರದವರು ಮನಸ್ಸನ್ನು ಕೊಡಬೇಕು. ಇದಕ್ಕೆ ಮುಖ್ಯಕಾರಣ ಅಲ್ಲಿರುವ ಅಧಿಕಾರಿವರ್ಗದವರು Administrative Head ಆಗಿದ್ದಾರೆಯೇ ವಿನಾ required technical qualification ಇರುವವರು ಆಗಿಲ್ಲ. ಆದ್ದರಿಂದ ಇಂಡಿಯಾ ಸರ್ಕಾರದವರು ಕೂಡ ಈಗ ಅನುಭವದಮೇಲೆ I.A.S. ಮತ್ತು I.P.S. ಆಫೀಸರುಗಳನ್ನು Factory managementಗೆ ನೇಮಕ ಮಾಡುವುದಕ್ಕೆ ಸಿದ್ಧರಾಗಿಲ್ಲ ಮತ್ತು ಆ ರೀತಿ ನೇಮಕ ಮಾಡುವ ಧೋರಣೆಯನ್ನು ಬದಲಾಯಿಸಬೇಕೆಂದು ತೋರಿಸಿದ್ದಾರೆ. ಅದಕ್ಕೆ ಕಾರಣ Technical people ಅಷ್ಟು efficient ಆಗಿರುವವರು ಸಿಕ್ಕುವುದಿಲ್ಲ. ಆದ್ದರಿಂದ ಬೇರೆಯವರನ್ನು ಅಂದರೆ ಖಾಸಗಿ Factory management ಕಡೆ ಕೆಲಸಮಾಡಿ ಬರುವ ಅಧಿಕಾರ ವರ್ಗದವರನ್ನು ಹಾಕಬೇಕೆಂದು ಹೇಳುತ್ತಿದ್ದಾರೆ. ಈ ಧೋರಣೆ ಅವರು ತಾಳಿರುವುದು ಸರಿಯಾಗಿದೆ. ಅದನ್ನು ನಮ್ಮ ಸರ್ಕಾರದವರು ಅನುಷ್ಠಾನಕ್ಕೆ ತರಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ.

ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು ಉತ್ತರ).—1955-56ನೇ ಸಾಲಿನ ಆಯುವ್ಯಯವನ್ನು ಮಂಡಿಸಿರುವುದಕ್ಕೆ ಬಹಳ ಸಂತೋಷಪಡುತ್ತೇನೆ ಮತ್ತು ಅದನ್ನು ಸ್ವಾಗತಿಸುತ್ತೇನೆ ಈ ಸಂದರ್ಭದಲ್ಲಿ ಸರ್ಕಾರದ ಆಡಳಿತ ವಿಚಾರದಲ್ಲಿ ನಾಲ್ಕಾರು ಮಾತುಗಳನ್ನು ಆಡಬೇಕೆಂದು ಇದ್ದೇನೆ. ಈಗ ಇರುವ ರೀತಿಯಲ್ಲಿ ಸರಕಾರ ನಡೆದುಕೊಂಡು ಹೋದರೆ ಪ್ರಜೆಗಳು ಏನು ತಮಗೆ ಆಗಬೇಕೆಂದು ತಿಳಿದುಕೊಂಡಿದ್ದಾರೋ ಅದು ಆಗುವುದಿಲ್ಲ. ಆ ವಿಚಾರವನ್ನು ಈ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಪ್ರತಿ ವರ್ಷ ಆಯವ್ಯಯದ ಕಾಲದಲ್ಲಿ Budgetಅನ್ನು ನಮ್ಮ ಮುಂದೆ ಮಂಡಿಸಿ ಮಾರ್ಚ್ ಏಪ್ರಿಲ್ ತಿಂಗಳಲ್ಲಿ ಪಾಸ್ ಮಾಡಿಸಿಕೊಳ್ಳುತ್ತೀರಿ. ಆದರೆ ಡಿಸೆಂಬರ್ ಜನವರಿ ವರೆಗೆ ಈ ಹಣವನ್ನು Allot ಮಾಡದೆ ಅದು ಹಾಗೆಯೇ ಉಳಿದಿರುತ್ತದೆ. ಈ ರೀತಿ ಆಗುವುದರಿಂದ ನಾವು ಯಾವುದಕ್ಕೋಸ್ಕರ ಹಣವನ್ನು ಒದಗಿಸುತ್ತೇವೋ ಅದು ಸರಿಯಾದ ರೀತಿಯಲ್ಲಿ ಖರ್ಚಾಗದೆ Lapse ಆಗುತ್ತದೆ. Agricultural ಇಲಾಖೆಯಲ್ಲಿ pest, diseases ಮುಂತಾದುವನ್ನು control ಮಾಡುವುದಕ್ಕೆ ಒದಗಿಸಿದ ಹಣವು ಅವರಿಗೆ ಸಕಾಲದಲ್ಲಿ ಒದಗದೆ ಹೋದರೆ ಗಿಡಗಳಿಗೆ ಬರುವ ರೋಗಗಳು ಔಷಧಿಗಳು ಬರುವವರೆಗೆ ಕಾಯುವುದಿಲ್ಲ; ಹಾಳಾಗಿ ಹೋಗುತ್ತವೆ. ಆದ್ದರಿಂದ ನೀವು ಕೊಡುವ ಹಣವನ್ನು ಇಲಾಖೆಯ ಮುಖ್ಯಾಧಿಕಾರಿಗಳು ಒದಗಿಸುವಂತೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸೆಕ್ರೆಟೇರಿಯಟ್ಟಿನ ಅಧಿಕಾರಿಗಳಿಗೆ ಇಲಾಖೆ ಮುಖ್ಯಾಧಿಕಾರಿಗಳಿಗೆ ಗೊತ್ತಿರುವಷ್ಟು ವಿಷಯಗಳು ನಿಜವಾಗಿ ಗೊತ್ತಾಗುವುದಿಲ್ಲ. ಆದ್ದರಿಂದ ಇಂತಹ ವಿಚಾರಗಳಲ್ಲಿ ಹಣವನ್ನು ಒದಗಿಸುವುದಕ್ಕೆ Departmental Headಗೆ ಬಿಡುವುದು ಸೂಕ್ತ. ಇಲ್ಲದಿದ್ದರೆ ಸೆಕ್ರೆಟೇರಿಯಟ್ಟಿನಲ್ಲಿ ಸುಮ್ಮನೆ fileಗಳು ಓಡಾಡುತ್ತವೆ. ಅದರಿಂದ ನಷ್ಟವಾಗುತ್ತದೆಯೇ ವಿನಾ ಏನೂ ಪ್ರಯೋಜನವಾಗುವುದಿಲ್ಲವೆಂದು ಈ ಸಂದರ್ಭದಲ್ಲಿ ಸೂಚಿಸುತ್ತೇನೆ. ಮಾನ್ಯ ಮಂತ್ರಿಗಳು, ಭದ್ರಾವತಿಯಿಂದ ಬೆಂಗಳೂರಿಗೆ ಬರತಕ್ಕಂಥ 50 cycle overload ಆಗಿದೆ, ಬೇರೆ ಲೈನ್ ಹಾಕಿದ ಹೊರತು power ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಿದ್ದಾರೆ. ಇದನ್ನು ಏನಾದರೂ ಮಾಡಿ ಬೇಗನೆ ಮಾಡಿಕೊಡಬೇಕೆಂದು ಹೇಳುತ್ತೇನೆ. ಬೆಂಗಳೂರು ಬಯಲು ಸೀಮೆ. ಇಲ್ಲಿನವರು ಕೇವಲ power ಮೇಲೆ depend ಆಗಿರತಕ್ಕಂಥ ಜನ. ಇವರಿಗೆ ಸಾಕಾದಷ್ಟು power ಒದಗಿಸದೇ ಹೋದರೆ ನಿಜವಾಗಿ ಕಷ್ಟವಾಗುತ್ತದೆ. ದೊಡ್ಡ ದೊಡ್ಡ projectಗಳನ್ನು ಮಾಡುವುದಕ್ಕೆ ಇಂತಹ ಬಯಲು ಸೀಮೆಯಲ್ಲಿ ಸರಿಯಾದ ನದಿಗಳಿಲ್ಲ. ಆದ್ದರಿಂದ ಬಯಲು ಸೀಮೆಯಲ್ಲಿರತಕ್ಕಂಥ ಬಾವಿಗಳಿಗೆ ಸಾಕಷ್ಟು power ಕೊಡದೆ ಹೋದರೆ ನಿಜವಾಗಿ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ. ಇದರಿಂದ ರೈತನ ಸ್ಥಿತಿ ಕೆಡುತ್ತದೆ ಎಂದು ಹೇಳುತ್ತೇನೆ.

ಬೆಂಗಳೂರಿನಲ್ಲಿ ಎರಡು ಸಮಿತಿಗಳನ್ನು ಮಾಡಿದ್ದಾರೆ. ಅದರಲ್ಲಿ ಒಂದು Society for Promotion of Kindness to Animals, ಇನ್ನೊಂದು S.P.C.A. ಇವರು ಹಳ್ಳಿಗಾಡಿನಿಂದ ಬರತಕ್ಕ ಗಾಡಿಗಳಿಗೆ ಲಾಳ ಇಲ್ಲ ಎಂದು ಇತ್ಯಾದಿಯಾಗಿ ಅವರಿಗೆ ಹುಮ್ಮಸ್ಸುಕೊಟ್ಟು ಅವರನ್ನು ಕೋರ್ಟಿಗೆ ತೆಗೆದುಕೊಂಡು ಹೋಗಿ 5-6 ಘಂಟೆ ಸತಾಯಿಸುತ್ತಾರೆ. ಇವರು ಲಂಚ ರುಷುವತ್ತುಗಳ ಜೀವನ ಮಾಡುವ ಪರಿಸ್ಥಿತಿಗೆ ಬಂದಿದ್ದಾರೆ. ಇದನ್ನು ಸಂಬಂಧಪಟ್ಟ ಮಂತ್ರಿಗಳಿಗೂ ಪೋಲೀಸಿನವರಿಗೂ ತಿಳಿಸಿದ್ದೇವೆ. ಆದರೂ ಕೂಡ ಸರಿಯಾದ ಕ್ರಮವನ್ನು ತೆಗೆದುಕೊಂಡಿಲ್ಲ. ಇದರಿಂದ ಬಹಳ ಮಟ್ಟಿಗೆ ತೊಂದರೆಯಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

Anti-corruption ಇಲಾಖೆಯ ವಿಚಾರ ಸ್ವಲ್ಪ ಹೇಳಬೇಕಾಗಿದೆ. ಯಾವುದಾದರೂ ಇಲಾಖೆ ವಿಷಯದಲ್ಲಿ ಅರ್ಜಿಯನ್ನು ಕಳುಹಿಸಿದರೆ ಅದನ್ನು ಪುನಃ ಅದೇ ಇಲಾಖೆಗೆ ಕಳುಹಿಸುತ್ತಾರೆ. ಇದರಿಂದ ಎಷ್ಟರಮಟ್ಟಿಗೆ ಅನುಕೂಲವಾಗುತ್ತೋ ನನಗೆ ಅರ್ಥವಾಗುವುದಿಲ್ಲ.

Sri Kadidal MANJAPPA (Minister for Revenue and Public Works).—That is not the procedure in practice.

ಶ್ರೀ ಕೆ. ವಿ. ಬೈರೇಗೌಡ.—Heads of Departmentಗಳಿಗೆ ಕಳುಹಿಸತಕ್ಕಂಥ ಅರ್ಜಿಗಳನ್ನು ಮತ್ತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸಿ ಅದಕ್ಕೊಂದು ಅವರು ಏನು ಉತ್ತರ ಹೇಳುತ್ತಾರೆ ಎಂದು ಕೇಳಿದರೆ ಅದರಿಂದ ಏನು ಪ್ರಯೋಜನವಾಗುತ್ತೋ ನನಗೆ ಅರ್ಥವಾಗುವುದಿಲ್ಲ. ಇದನ್ನು ಕೂಡಲೇ ಸರಿಪಡಿಸಬೇಕೆಂದು ಹೇಳುತ್ತೇನೆ.

ಇನ್ನು Sericultural ಇಲಾಖೆ ವಿಚಾರ. ಈ ವರ್ಷವೂ ಬಡ್ಜೆಟ್ಟಿನಲ್ಲಿ ಈ ಇಲಾಖೆಗೆ ಆರು ಏಳು ಲಕ್ಷ ರೂಪಾಯಿಗಳನ್ನು ಒದಗಿಸುತ್ತಿದ್ದಾರೆ. ಯಾವ ವರ್ಷವೂ ಪೂರ್ತಿಯಾಗಿ ಹಣವು ಖರ್ಚಾಗಿಲ್ಲ. ಈಗ ಹೊಸದಾಗಿ Administrative ಮತ್ತು Technical ಎಂಬುದಾಗಿ ಎರಡು ಇಲಾಖೆಗಳನ್ನು ಮಾಡಿದ್ದಾರೆ. ಈ ಇಲಾಖೆಯಲ್ಲಿ ಕೈಗೊಳ್ಳಬೇಕಾದ ಕೆಲಸಗಳನ್ನು ಕಾರ್ಯಗತ ಮಾಡದೆ ಹೋದರೆ ಇದರಿಂದ ರೈತನಿಗೆ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಇಲಾಖೆಯು ಕಾರ್ಯಕಲಾಪಗಳಿಗೆ ಸಾಕಷ್ಟು ನಿಗಾ ಕೊಡಬೇಕು. ಹಣವನ್ನು ಸರಿಯಾದ ರೀತಿಯಲ್ಲಿ ಖರ್ಚುಮಾಡಬೇಕು. ಹಾಗೆ ಮಾಡದೆ ಹೋದ ಪಕ್ಷದಲ್ಲಿ ಈ ಹಣವನ್ನು ಬೇರೆ ಇಲಾಖೆಗೆ ಕೊಡಬಹುದು.

ಇನ್ನೊಂದು ವಿಚಾರವನ್ನು ಸರ್ಕಾರದವರಲ್ಲಿ ಸೂಚಿಸಬೇಕೆಂದಿದ್ದೇನೆ. ತಕಾವಿ ಮತ್ತು Land improvement loans ಎಂಬ ಸಾಲಗಳನ್ನು ಸರಕಾರದವರು ಮೊದಲಿನಿಂದಲೂ ಕೊಡುತ್ತಿದ್ದಾರೆ. ಆದರೆ ಒಂದು ವರುಷ ಹಾಕಿದಂಥ ಸಾಲದ ಅರ್ಜಿ ಆ ವರ್ಷವೇ sanction ಆಗಿ ರೈತನು ಹಣ ತೆಗೆದುಕೊಂಡಿರುವ ಉದಾಹರಣೆಯನ್ನು ಇವೊತ್ತಿನವರೆಗೂ ನಾನು ಕೇಳಲಿಲ್ಲ. ಆದರೆ ರೈತರಿಗೆ ಇಂತಹ ಸಾಲಗಳನ್ನು ಕೊಡುವುದಕ್ಕೆ ಏನು ಅನುಕೂಲಗಳನ್ನು ಮಾಡಿದ್ದೀರಿ? ಅದು ಸಕಾಲದಲ್ಲಿ ಸಿಕ್ಕುವ ಹಾಗೆ ಏರ್ಪಾಡು ಮಾಡಿದರೆ ಅದರಿಂದ ರೈತರಿಗೆ ಅನುಕೂಲವಾಗುತ್ತದೆ. ಇದಲ್ಲದೆ ಹಣವನ್ನು ಈ ಬಾಬುಗಳಿಗೆ ಎಂದು ತೋರಿಸಿ ಅದನ್ನು ರೈತರಿಗೆ ಕೊಡದೇ ಇರುವುದು ಚೆನ್ನಾಗಿಲ್ಲವೆಂದು ಹೇಳುತ್ತೇನೆ. ಸೆಕ್ರೆಟೇರಿಯಟ್ ಅಧಿಕಾರಿಗಳಲ್ಲಿ ಮನೋಭಾವನೆಯು ಸ್ವಲ್ಪ ಬದಲಾವಣೆಯಾಗಬೇಕು. ಮಾನ್ಯ ಶ್ರೀ ವೆಂಕಟೇಶ್‌ರವರು ಹೇಳಿದ ಹಾಗೆ, ಪ್ರಜಾಪ್ರಭುತ್ವ ಬರುವ ಮುಂಚೆ ಅಧಿಕಾರಿಗಳಲ್ಲಿ ಯಾವ ಧೋರಣೆಯಿತ್ತೋ ಅದೇ ಇವೊತ್ತು ಪ್ರಜೆಗಳ ಪ್ರತಿನಿಧಿಗಳಾದವರು ಇಂತಹ ಅಧಿಕಾರಿಗಳ ಮುಂದೆ ಹೋದಾಗ ಅವರನ್ನು courtesy ತೋರಿಸಿ ನೋಡದೆ ಹೋದರೆ ಅದು ಚೆನ್ನಾಗಿಲ್ಲವೆಂದು ಕಾಣುತ್ತದೆ. ಹಿಂದಿನಿಂದ ಬಂದ ಮನೋಭಾವನೆಯನ್ನು ಅಧಿಕಾರಿಗಳು ಮುಂದುವರಿಸುತ್ತಾ ಹೋದರೆ ಅವರು ಪ್ರಜಾಪ್ರಭುತ್ವದಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ಹೀಗೆ ಮಾಡಿದರ ಒಳ್ಳೆಯ ಹೆಸರು ಕಾಂಗ್ರೆಸ್ಸು ಸರಕಾರಕ್ಕೆ ಬರುತ್ತದೆ ಎಂದು ನಾನು ತಿಳಿದುಕೊಂಡಿಲ್ಲ. ಇದನ್ನು ಸರ್ಕಾರದವರು ಕೂಡಲೇ ಸರಿಪಡಿಸುತ್ತಾರೆಂದು ನಂಬಿ ಈ ನನ್ನ ನಾಲ್ಕಾರು ಮಾತುಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಸಿ. ಟಿ. ಹನುಮಂತಯ್ಯ (ಮಧುಗಿರಿ-ಪಾವಗಡ—ಅನುಸೂಚಿತ ಜಾತಿಗಳು).—ಅಧ್ಯಕ್ಷರೇ, ನಮ್ಮ ಮುಖ್ಯ ಮಂತ್ರಿಗಳು 1955-56ನೆಯ ಸಾಲಿನ ಆಯವ್ಯಯ ಪಟ್ಟಿಯನ್ನು ನಮ್ಮ ಮುಂದಿಟ್ಟಿದ್ದಾರೆ. ಅದನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ಅವರು ಬಹಳ ಶ್ರಮವಹಿಸಿ ಈ ಕಾರ್ಯವನ್ನು ಬಹಳ ದಕ್ಷತೆಯಿಂದ ಮತ್ತು ಧೈರ್ಯದಿಂದ ನಡೆಸಿ ಬಡ್ಜೆಟ್ಟನ್ನು ನಮ್ಮ ಮುಂದಿಟ್ಟಿದ್ದಾರೆ. ಮೊದಲನೆಯ ಪಾಂಚವಾರ್ಷಿಕ ಯೋಜನೆಯನ್ನು ಯಶಸ್ವಿಯಾಗಿ ಕೆಲಸ ಮಾಡಿ ಇಡೀ ಹಿಂದುಸ್ಥಾನದಲ್ಲಿ ಕೀರ್ತಿಯನ್ನು ಗಳಿಸಿದ್ದಾರೆ. ಅದಾದಮೇಲೆ ಈಗ ಎರಡನೆಯ ಪಾಂಚವಾರ್ಷಿಕ ಯೋಜನೆಯನ್ನು ತಯಾರು ಮಾಡುತ್ತಲಿದ್ದಾರೆ. ಮೊದಲನೆಯ ಐದು ವರ್ಷದ ಯೋಜನೆಯಲ್ಲಿ ಜನಜೀವನವನ್ನು ಉದ್ಧಾರ ಮಾಡಬೇಕಾದರೆ ಏನೇನು ಕೆಲಸಗಳನ್ನು ಮೊದಲು ಮಾಡಬೇಕೆಂಬುದನ್ನು ಆಲೋಚನೆ ಮಾಡಿ, ಹೆಚ್ಚಾಗಿ ವ್ಯವಸಾಯದ ಕೆಲಸಗಳಿಗೆ, ಬಾವಿಯ ಕೆಲಸಗಳಿಗೆ ಮತ್ತು ವಿದ್ಯುಚ್ಛಕ್ತಿ ಉತ್ಪಾದನಾ ಕೆಲಸಗಳಿಗಾಗಿ ಕೆಲಸ ಮಾಡಿ ಮುಗಿಸಿದ್ದಾರೆ. ಆದರೆ, ಇಷ್ಟರಲ್ಲಿ ನಮ್ಮ ಮಧುಗಿರಿ ಸಬ್ ಡಿವಿಜನ್ ಏನಾದರೂ ಸೇರಿದೆಯೋ ಎಂದರೆ, ದುರದೃಷ್ಟವಶಾತ್ ಅದು ಸೇರಿಲ್ಲ. ಅಲ್ಲಿ ಸುತ್ತ ಮುತ್ತ ನಾಲ್ಕು ತಾಲ್ಲೂಕುಗಳೂ ಕ್ಷಾಮ ಪೀಡಿತ ಪ್ರದೇಶಗಳೆಂದು ಪಂಡಿತ್ ಜವಹರಲಾಲ್‌ರವರು ಕೂಡ ಅಲ್ಲಿಗೆ ಬಂದಿದ್ದಾಗ್ಗೆ ಹೇಳಿದ್ದಾರೆ. ಆದರೆ, ಆ ಪ್ರದೇಶದಲ್ಲಿ ಬೇಕಾದಷ್ಟು ಭೂ ಜಲವಿದೆ, ಇದನ್ನು ಮೇಲಕ್ಕೆ ತೆಗೆಯುವುದಕ್ಕೆ ಸರ್ಕಾರದವರು ಹೆಚ್ಚಿನ ಸಹಾಯ ಮಾಡಬೇಕು. ಆ ಬಾವಿಗಳಿಗೆ ವಿದ್ಯುಚ್ಛಕ್ತಿಯ ಸಹಾಯವನ್ನು ಒದಗಿಸಿಕೊಟ್ಟು ನಮ್ಮ ಜನರನ್ನು ಉದ್ಧಾರ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಇನ್ನು ಸಂಸ್ಕೃತಿ ಪ್ರಚಾರದ ವಿಷಯ. ಇದು ದೊಡ್ಡ ವಿಷಯ. ಸರ್ಕಾರದವರು ಇದನ್ನು ತಂದಿರುವುದರ ಉದ್ದೇಶವೇನೋ ಒಳ್ಳೆಯದೇ. ಅನಾಗರಿಕರೂ ಅವಿದ್ಯಾವಂತರೂ ಆದ ಮಂದಿಯನ್ನು ಮುಂದಕ್ಕೆ ತರಬೇಕು, ಸನ್ಮಾರ್ಗದೆಡೆಗೆ ಅವರ ದೃಷ್ಟಿ ತಿರುಗಬೇಕೆಂಬ ಒಂದು ದೊಡ್ಡ ತತ್ವವನ್ನಿಟ್ಟುಕೊಂಡು ನಮ್ಮ ಮಂತ್ರಿವರ್ಯರು ಈ ಯೋಜನೆಯನ್ನು ನಮ್ಮ ಮುಂದಿಟ್ಟಿದ್ದಾರೆ. ಇದಕ್ಕೆ 5 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಆದರೆ ವಾಸ್ತವವಾಗಿ ಎಲ್ಲಿ ಈ ಪ್ರಚಾರ ಕಾರ್ಯ ನಡೆಯಬೇಕು, ಯಾರಿಗೆ ಇದರ ಅವಶ್ಯಕತೆ ಹೆಚ್ಚಾಗಿದೆ ಎಂಬುದನ್ನು ತಿಳಿದು ಕೆಲಸಮಾಡಬೇಡವೇ? ಈಗ ಏನಿದ್ದರೂ ಟೌನ್‌ಗಳಲ್ಲಿ, ವಿದ್ಯಾವಂತರು ಇರುವ ಕಡೆಯೇ ಸಂಸ್ಕೃತಿ ಪ್ರಚಾರ ಹೆಚ್ಚು ಹೆಚ್ಚಾಗಿ ನಡೆಯುತ್ತಿದೆಯೇ ವಿನಾ ಹಳ್ಳಿಗಾಡಿನ ಕಡೆಗೆ ಅನಕ್ಷರಸ್ಥರಿರುವ ಕಡೆ ಕೊರಮರು ಕೊರಚರು ಇರುವ ಕೇರಿಗಳಲ್ಲಿ ನಡೆಯುತ್ತಿಲ್ಲ; ಇದು ಮುಖ್ಯವಾಗಿ ಅಲ್ಲಿ ನಡೆಯಬೇಕು. ಆ ರೀತಿ ಮಾಡದೆ, ಈ ಹೊತ್ತು ಸರ್ಕಾರದವರು ಮಾಡುತ್ತಿರುವ ಹಾಗೆ ಮಾಡಿದರೆ ಇದಕ್ಕೆ ಮನ್ನಣೆ ದೊರೆಯುತ್ತದೆಯೇ ಹೊರತು, ಬೇರೆಯಿಲ್ಲ. ಆದ್ದರಿಂದ ಸಂಸ್ಕೃತಿ ಪ್ರಚಾರ ಕಾರ್ಯವನ್ನು ಕೈಕೊಂಡು ನಮ್ಮ ದೇಶದಲ್ಲಿರುವ 17,000 ಹಳ್ಳಿಗಳಿಗೂ ಹೋಗಿ ಕೆಲಸ ಮಾಡುವುದಾದರೆ ದೇಶಕ್ಕೆ ಕಲ್ಯಾಣವಾಗುತ್ತದೆ. ದೇಶಕ್ಕೆ ಕಲ್ಯಾಣವಾಗಬೇಕಾದರೆ ಅದು ಸಂಸ್ಕೃತಿ ಪ್ರಚಾರದಿಂದಲೇ ಸಾಧ್ಯ, ಜನರ ನೈತಿಕ ಮಟ್ಟ ಉತ್ತಮಗೊಳ್ಳಬೇಕಾದರೆ ಇದು ಅತಿ ಮುಖ್ಯವಾದದ್ದೆಂದು ನಾನು ಭಾವಿಸುತ್ತೇನೆ.

ಸರ್ಕಾರದಲ್ಲಿ ಇನ್ನೊಂದು ಕೆಟ್ಟ ಪದ್ಧತಿಯಿದೆ. ಅದನ್ನು ಖಂಡಿತ ತಪ್ಪಿಸಬೇಕು. ಸರ್ಕಾರದವರು ದೇಶದ ಮಕ್ಕಳು ಸುಖವಾಗಿ ಬೆಳೆದು ಬಾಳಲಿ ಎಂದು ಹೇಳಿ ಅವರಿಗೆ ವಿದ್ಯಾಭ್ಯಾಸಕ್ಕೆ ಎಲ್ಲಾ ಅನುಕೂಲಗಳನ್ನೂ ಮಾಡಿಕೊಡುತ್ತಾರೆ. ಅವರ ಪೋಷಣೆ ಪಾಲನೆಗೆ ಎಲ್ಲಾ ಏರ್ಪಾಡುಗಳನ್ನೂ ಮಾಡಿರುತ್ತಾರೆ. ಹೆಣ್ಣು ಮಕ್ಕಳು ಎಲ್ಲರ ಅಭಿವೃದ್ಧಿ ಸಾಧನೆಯೇ ಅವರ ಗುರಿಯಾಗಿದೆ. ಆದರೆ ಇಷ್ಟೆಲ್ಲ ಹಿತಚಿಂತಕರಾಗಿರುವವರು ಹೆಣ್ಣು ಮಕ್ಕಳು ಗಂಡು ಮಕ್ಕಳು ದೊಡ್ಡವರಾದಮೇಲೆ ಮದುವೆಯಾದರೆ ಸರ್ಕಾರಿ ಕೆಲಸಕ್ಕೆ ಸೇರಿಸುತ್ತಾರೆ; ಹೆಂಡತಿಯನ್ನು ಒಂದು ಕಡೆಗೆ ವರ್ಗಾಯಿಸುತ್ತಾರೆ, ಗಂಡನನ್ನೇ ಬೇರೊಂದು ಕಡೆಗೆ ವರ್ಗಾಯಿಸುತ್ತಾರೆ. ಈ ನೀತಿ ಸರಿಯೇ? ವಿದ್ಯಾಭ್ಯಾಸ ಇಲಾಖೆಯಲ್ಲೇನೋ ಹೆಂಡತಿಯನ್ನೂ

(ಶ್ರೀ ಸಿ. ಟಿ. ಹನುಮಂತಯ್ಯ.)

ಗಂಡನನ್ನೂ ಸಾಧ್ಯವಾದ ಮಟ್ಟಿಗೂ ಒಂದೇ ಕಡೆಯಲ್ಲಿರುವಂತೆ ಒಂದು ಒಳ್ಳೆಯ ಸಂಪ್ರದಾಯವನ್ನಿಟ್ಟುಕೊಂಡಿರುತ್ತಾರೆ. ಬೇರೆ ಇಲಾಖೆಗಳಲ್ಲೇಕೆ ವರ್ಗಾವಣೆಗಳನ್ನು ಮಾಡಿ ಗಂಡ ಹೆಂಡರಿಗೆ ತೊಂದರೆ ಕೊಡುತ್ತಾರೋ ಗೊತ್ತಿಲ್ಲ. ಬರ್ತ್ ಕಂಟ್ರೋಲ್ ಮಾಡಬೇಕೆಂಬುದು ಸರ್ಕಾರದ ಉದ್ದೇಶ್ಯವೇನು? ಸರ್ಕಾರದವರು ಇದನ್ನು ಸರಿಪಡಿಸಬೇಕೆಂದು ನಾನು ಸವಿನಯ ಪೂರ್ವಕವಾಗಿ ಪ್ರಾರ್ಥನೆ ಮಾಡುತ್ತೇನೆ.

ಅಧಿಕಾರ ವರ್ಗದವರು ಜನಗಳು ಕುಂದು ಕೊರತೆಗಳ ವಿಚಾರದಲ್ಲಿ ಹೆಚ್ಚಿನ ಸಹಾನುಭೂತಿಯನ್ನು ತೋರಿಸಬೇಕೆಂದು ಹೇಳುತ್ತೇನೆ. ಈಗಲಾದರೋ, ನಾನು ಅನೇಕವೇಳೆ ನೋಡಿದ್ದೇನೆ, ಅಧಿಕಾರಿಗಳು ಹಳ್ಳಿಗಳ ಕಡೆ ಬಂದಾಗ್ಗೆ ಪ್ರಜೆಗಳು ತಮ್ಮ ಕುಂದು ಕೊರತೆಗಳನ್ನು ನಿವೇದಿಸಿಕೊಂಡು ಏನಾದರೂ ಅರ್ಜಿಗಳನ್ನು ಕೊಟ್ಟರೆ ಅವರು ಸ್ವಲ್ಪ ಸಾವಧಾನದಿಂದ ಆ ಅರ್ಜಿಗಳನ್ನು ಓದಿ ಅವುಗಳನ್ನು ಯಾರಿಗೆ ಕಳುಹಿಸಬೇಕೋ ಅವರಿಗೆ ಕಳುಹಿಸಿಕೊಡುವಷ್ಟು ತಾಳ್ಮೆಯೂ ಅವರಿಗಿರುವುದಿಲ್ಲ. ನಾವು ಒಂದು ಕೇಳಿದರೆ ಅವರೊಂದು ಹೇಳುತ್ತಿರುತ್ತಾರೆ. ಈ ರೀತಿಯಾದರೆ ಅಂಥ ಅಧಿಕಾರಿವರ್ಗದವರಿಂದ ದೇಶಕ್ಕೇನೂ ಒಳ್ಳೆಯದಾಗುವುದಿಲ್ಲ. ಅಧಿಕಾರ ವರ್ಗದವರ ಮನಸ್ಸನ್ನು ಸರಿಯಾದ ರೀತಿಯಲ್ಲಿ ಪರಿವರ್ತನೆ ಮಾಡಬೇಕು. ಕೆಲವು ಅಧಿಕಾರಿಗಳೇನೋ ವಿಶ್ವಾಸದಿಂದ ಏನುಬೇಕು, ಏನು ಮಾಡಿಕೊಡಲಿ ಎಂದು ಕೇಳುತ್ತಾರೆ. ಇನ್ನು ಕೆಲವರು ಮಾತನಾಡುವುದಕ್ಕೇ ಕಷ್ಟವಾಗಿ ಸಿಗರೇಟ್ ಸೇದಿಕೊಂಡು ಕುಳಿತಿರುತ್ತಾರೆ. ಅಧಿಕಾರಿಗಳ ಈ ಉದಾಸೀನ ಭಾವನೆಯನ್ನು ತಪ್ಪಿಸಬೇಕು. ಪ್ರಜಾಪ್ರಭುತ್ವದ ನೀತಿಯಿದಲ್ಲ. ಪ್ರಜೆಯೇ ದೇವರು ಎಂಬುದನ್ನು ಅರಿತುಕೊಳ್ಳುವಂತೆ ಮಾಡುತ್ತೀರೆಂದು ನಂಬಿದ್ದೇನೆ.

ಹರಿಜನರಿಗೆ ಜಮೀನುಗಳನ್ನು ಕೊಡುವ ವಿಷಯ. ಒಂದು ವಿಷಯವನ್ನು ಮಾನ್ಯ ರೆವಿನ್ಯೂ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಒಂದು ದರಖಾಸ್ತು ಅರ್ಜಿಯನ್ನು ಡೆಪ್ಯುಟಿ ಕಮಿಷನರಿಗೆ ಕೊಟ್ಟತೆಂದರೆ, ಅವರು ಮಾಮೂಲಾಗಿ ಸಬ್‌ಡಿವಿಜನ್ ಅಫೀಸರಿಗೆ, ಸಬ್‌ಡಿವಿಜನ್ ಆಫೀಸರು ಅಮಲ್ದಾರರಿಗೆ ಹೀಗೆ ಹೋಗುತ್ತಾ ಕೊನೆಗೆ ತಾಲ್ಲೂಕಾಫೀಸಿನಲ್ಲಿ ನಿಂತುಹೋಗುತ್ತದೆ. ಜಮೀನಿಲ್ಲದಿರುವವರಿಗೆ ಜಮೀನು ಕೊಡಬೇಕೆಂದಿದ್ದರೂ ತಾಲ್ಲೂಕಾಫಿಸಿನಲ್ಲಿ ನೋಡಿದರೆ ಜಮೀನುಗಳಿರುವವರಿಗೇ ಮೊದಲು ಜಮೀನನ್ನು ಕೊಡುವಹಾಗೆ ರಿಕಾರ್ಡ್‌ಗಳನ್ನು ತಯಾರು ಮಾಡುತ್ತಿರುತ್ತಾರೆ. ಇದು ಯಾವ ನೀತಿ? ಉದಾಹರಣೆಗೆ ನಮ್ಮ ಸಿರಾ ತಾಲ್ಲೂಕಿನ ಕುಂಬಾರ ಹಳ್ಳಿಯಲ್ಲಿರುವ ದ್ರಾವಿಡರು ಎಲ್ಲರೂ ಜಮೀನಿಲ್ಲದ ಬಡಜನರು. ಯಾವುದೋ, ಓಬೀರಾಯನ ಕಾಲದಲ್ಲಿ ಆ ಊರಿನ ಹತ್ತಿರ ಒಂದು ಸೇಂದಿ ವನವಿದ್ದರೆ ಅದನ್ನೇ ಇವೊತ್ತಿಗೂ ಸೇಂದಿ ವನವೆಂದಿಟ್ಟುಕೊಂಡಿದ್ದಾರೆ. ಎಷ್ಟು ಅರ್ಜಿಗಳನ್ನು ಕೊಟ್ಟರೂ ಅದನ್ನು ಬಿಡಿಸಿ ಕೊಡುವುದೇ ಇಲ್ಲ. ಹೀಗಾದರೆ ನಮ್ಮ ಜನರಿಗೆ ಜಮೀನು ಸಿಕ್ಕುತ್ತದೆಯೇ? ಆದ್ದರಿಂದ ಮಾನ್ಯ ರೆವಿನ್ಯೂ ಮಂತ್ರಿಗಳಲ್ಲಿ ನನ್ನ ಮನವಿಯೇನೆಂದರೆ, ಈಗಲೂ ರೆವಿನ್ಯೂ ಇಲಾಖೆಯಲ್ಲಿ ಅಮಲ್ದಾರರಿಗೂ ಡೆಪ್ಯುಟೀ ಕಮಿಷನರಿಗೂ ರೆವಿನ್ಯೂ ಇನ್ಸ್‌ಪೆಕ್ಟರುಗಳಿಗೂ ದಯವಿಟ್ಟು ಒಂದು ಆರ್ಡರು ಕಳುಹಿಸಿ ಹರಿಜನರಿಗೇ ಅಲ್ಲ, ಎಲ್ಲ ಜಮೀನಿಲ್ಲದ ಬಡ ಜನರಿಗೂ ಜಮೀನು ಕೊಡುವಂತೆ ಮಾಡಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ಮಾನ್ಯ ಸಚಿವರಲ್ಲಿ ಇನ್ನೊಂದು ಪ್ರಾರ್ಥನೆ. ಸರ್ಕಾರದವರು ಹರಿಜನರ ಅಭಿವೃದ್ಧಿ ಸಾಧನೆಗೆಂದು ಸ್ಪೆಷಲ್ ಆಫೀಸರೆಂದು ನೇಮಕ ಮಾಡಿರುತ್ತೀರಿ. ಸ್ಪೆಷಲ್ ಎಂದರೆ ಅವರ ಎಲ್ಲ ಕಾರ್ಯಭಾರವೂ ಸ್ಪೆಷಲ್ಲೇ ಆಗಿರುತ್ತದೆ. ಬೆಂಗಳೂರಿನಿಂದ ಮೈಸೂರಿಗೆ ಒಂದು ಸ್ಪೆಷಲ್ ರೈಲು ಎಂದರೆ ಅದು ಹೇಗೆ ಎಲ್ಲಿಯೂ ನಿಲ್ಲದೆ ಮೈಸೂರಿಗೆ ಹೋಗುವುದು ಬರುವುದು ಅದರ ಕೆಲಸವೋ ಹಾಗೆಯೇ ಈ ಸ್ಪೆಷಲ್ ಆಫೀಸರಿಗೆ ಬೇರೆ ಯಾವ ಅಧಿಕಾರವೂ ಇಲ್ಲ. ಯಾವುದೊಂದಕ್ಕೂ ಅವರು ಮತ್ತೆ ಅಮಲ್ದಾರರ ಹತ್ತಿರಕ್ಕೇ ಹೋಗಬೇಕು. ಯಾರೋ ಹಿಂದಿನವರು ಈ ಹುದ್ದೆಗಳನ್ನು ಏರ್ಪಡಿಸಿದ್ದರೆಂದು ಈಗಲೂ ಅದನ್ನೇ ಇಟ್ಟುಕೊಂಡಿದ್ದೀರಿ. ಹಿಂದಿನ ಸರ್ಕಾರದವರು ಹರಿಜನರನ್ನು ತಮ್ಮ ಕಡೆಗೆ ಒಲಿಸಿಕೊಳ್ಳಬೇಕೆಂದು ಮಾಡಿದ್ದರು. ವಾಸ್ತವವಾಗಿ ನೋಡಿದರೆ ಈ ಸ್ಪೆಷಲ್ ಆಫೀಸರಿಗೆ ಆಫೀಸೆಲ್ಲಿ? ಅಧಿಕಾರವೇನು? ಇವರಿಗೆ ಏನೆಂದು ಅರ್ಜಿಕೊಡಬೇಕು? ಅವರು ಹೇಗೆ ಕೆಲಸ ಮಾಡಿಕೊಡುತ್ತಾರೆ?—ಒಂದೂ 'ಗೊತ್ತಾಗುವುದಿಲ್ಲ. ಇದನ್ನು ತೆಗೆದುಬಿಟ್ಟು ಅವರನ್ನು ಅಮಲ್ದಾರರನ್ನಾದರೂ ಮಾಡಿ. ಕಾಂಗ್ರೆಸ್ ಸರ್ಕಾರ ಬರುತ್ತದೆ, ಹರಿಜನರ ಉದ್ಧಾರವಾಗುತ್ತದೆ ಎಂದು ನಾವೇನೋ ತಿಳಿದಿದ್ದೆವು. ಆದರೆ ಈಗ ನೋಡಿದರೆ. . . .

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ಈ ಸಾರಿಯ ಬಡ್ಜೆಟ್ಟನ್ನು ಸ್ವಾಗತಿಸುತ್ತಾ ಒಂದೆರಡು ವಿಷಯಗಳನ್ನು ಸಭೆಯ ಮುಂದಿಡಬೇಕೆಂದಿದ್ದೇನೆ. ಪಾಂಚವಾರ್ಷಿಕ ಯೋಜನೆ ಜಯಪ್ರದವಾಗಿ ಮೈಸೂರು ಸಂಸ್ಥಾನದಲ್ಲಿ ನಡೆದಿದೆಯೆಂಬುದರಲ್ಲಿ ಸಂಶಯವಿಲ್ಲ. ವಿದ್ಯಾಭ್ಯಾಸ, ರಸ್ತೆಗಳು, ಸೇತುವೆಗಳು, ನಿರಾವರಿ ಯೋಜನೆಗಳು ಸಮರ್ಪಕವಾಗಿ ನಡೆದು ಅವುಗಳ ಅನುಕೂಲ ಈಗಾಗಲೇ ದೊರೆಯುತ್ತಿರುವುದು ಕಾಣಬರುತ್ತಿದೆ.

ಆದರೆ ಪಂಚವಾರ್ಷಿಕ ಯೋಜನೆಯಲ್ಲಿ ಮಲೆನಾಡಿನ ಅಭಿವೃದ್ಧಿಗೆ 35 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೂ, ಹಣವಿಲ್ಲವೆಂದು ಖೋತಾ ಹಾಕಿರುವುದನ್ನು ನೋಡಿದರೆ ಬಹಳ ವ್ಯಸನವಾಗುತ್ತದೆ. ಸುಮಾರು 50 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವ ಒಂದು ಯೋಜನೆಯಲ್ಲಿ 35 ಲಕ್ಷ ರೂಪಾಯಿಗಳನ್ನು ರಸ್ತೆಗಳಿಗೆ ಮತ್ತು ಸೇತುವೆಗಳಿಗೆಂದು ಹಿಂದಿನ ಸರ್ಕಾರ ಒದಗಿಸಿದ್ದರೂ ಈಗಿನ ಸರ್ಕಾರ ಅದನ್ನು ತಳ್ಳಿಹಾಕಿರುವುದು ಸರಿಯಲ್ಲವೆಂದು ಮಾನ್ಯ ಮಂತ್ರಿಗಳಿಗೆ ನಾನು ಅರಿಕೆ ಮಾಡಿಕೊಳ್ಳುತ್ತೇನೆ.

ಕೈಗಾರಿಕೆಗಳ ಬಾಬಿನಲ್ಲಿ ಲೆಕ್ಕಹಾಕಿದರೆ ಸುಮಾರು 811 ಲಕ್ಷ ರೂಪಾಯಿಗಳನ್ನು ಮೈಸೂರು ಸರ್ಕಾರದವರು ಈ ಹೊತ್ತು invest ಮಾಡಿದ್ದಾರೆ. ಇದರ ಮೇಲೆ ಬರುತ್ತಿರುವ ಬಡ್ಡಿ ನೋಡಿದರೆ ಶೇಕಡ $1\frac{1}{2}$ ಮಾತ್ರ. ಸುಮಾರು ಒಟ್ಟು 11,50,000 ರೂಪಾಯಿಗಳು ಬಡ್ಡಿ ಬಂದಿರುವುದರಲ್ಲಿ, ಶೇಕಡ 5 ರಷ್ಟು ಕೆಲವು ಕೈಗಾರಿಕೆಗಳಲ್ಲಿ ಲಾಭ ಬಂದರೂ ಇನ್ನು ಕೆಲವು ಕೈಗಾರಿಕೆಗಳಲ್ಲಿ ನಷ್ಟವಾಗುತ್ತಿರುವುದರಿಂದ ಒಟ್ಟಿನಲ್ಲಿ ಸರಾಸರಿ ಕೇವಲ ಶೇಕಡ $1\frac{1}{2}$ ಯಷ್ಟು, ಲಾಭ ಮಾತ್ರ ಬರುತ್ತಿದೆ. ಈ ಸಾರಿಯೇನೋ ಡಿಪ್ರಿಸಿಯೇಷನ್ನಿಗೆಂದು ಸ್ವಲ್ಪ ಹಣ ತೆಗೆದಿಟ್ಟಿದ್ದೀರಿ, ಹಿಂದೆ ಅದನ್ನು ಮಾಡುತ್ತಿರಲಿಲ್ಲ. ಮೈಸೂರು ಸಂಸ್ಥಾನದ ಕೈಗಾರಿಕೆಗಳಲ್ಲಿ socialistic pattern of society ರೀತಿಯನ್ನು ಮೈಸೂರು ಸರ್ಕಾರ ಜಾರಿಗೆ ತಂದಿದೆ ಎಂದರೆ ತಪ್ಪಾಗಲಾರದು. ಕಾರಣ, ಬರುವ ಉತ್ಪತ್ತಿಯ ಬಹು ಭಾಗವನ್ನು ಕೈಗಾರಿಕಾ ಸಂಸ್ಥೆಯ

ಆಡಳಿತ ಮತ್ತು ಕೂಲಿಕಾರರಿಗೆ ಖರ್ಚು ಮಾಡುತ್ತಿರು ವರು. ಇನ್ನಾದರೂ Industrial Budget ಎಂದೇ ಪ್ರತ್ಯೇಕವಾಗಿ ಮಾಡಿ ಪ್ರತಿಯೊಂದು ಕೈಗಾರಿಕೆಯಲ್ಲಿ ಲಾಭ ನಷ್ಟ ನೋಡಿಕೊಂಡು ಮಾರಾಟ ಮಾಡುವುದು ಹೇಗೆಂಬುದನ್ನು ಲೆಕ್ಕಾ ಚಾರ ಮಾಡಬೇಕು. ಕೈಗಾರಿಕೆಗಳಿಗೆಂದೇ ಒಂದು ಮೂಲ ಬಂಡವಾಳವನ್ನು ಹಾಕಿ, ಅವಕ್ಕೇ ಒಂದು ಪ್ರತ್ಯೇಕ ಬಡ್ಜೆಟ್ಟನ್ನಿಟ್ಟು ಕೆಲಸ ಮಾಡುವು ದಾದರೆ ಕೈಗಾರಿಕೆಗಳು ಅಭಿವೃದ್ಧಿಯಾಗಲು ಹೆಚ್ಚು ಅವಕಾಶವಿರುತ್ತದೆ. ಕೈಗಾರಿಕೆಗಳಿಗೆ ಮುಖ್ಯವಾಗಿ ಬಂಡವಾಳ ಬೇಕಾದಷ್ಟು ಸಿಕ್ಕುವಂತಿರಬೇಕು. ಈಗಿ ರುವ ಪದ್ಧತಿ ನೋಡಿದರೆ ಈ ಹೊತ್ತು ಒಂದು ಕೈಗಾ ರಿಕೆಗೆ ಒಂದು ಸಾಮಾನು ಬೇಕೆಂದರೆ ಮೂರು ತಿಂಗ ಳಾದರೂ ಅದು ಬರುವುದಿಲ್ಲ. ಸ್ಟೋರ್ ಪರ್ಚೇಸ್ ಕಮಿಟಿಯವರು ಮಾಡಿರುವ restrictionಗಳಿಂದ ಈ ತೊಂದರೆಗಳಿಗೆ ಅವಕಾಶವಾಗಿದೆ. ಆದ್ದರಿಂದ ಭದ್ರಾವತಿ ಕಬ್ಬಿಣದ ಕಾರ್ಖಾನೆಯಲ್ಲಿ ಹೇಗೆ Stores Purchase Committeeಯನ್ನು ಮಾಡಿ independent ಆಗಿ ಕೆಲಸ ನಡೆಸುವ ವ್ಯವಸ್ಥೆ ಮಾಡಿದೆಯೋ ಹಾಗೆ ಎಲ್ಲಾ ಕೈಗಾರಿಕೆಗಳಲ್ಲೂ ಬೇರೆ ಮ್ಯಾನೇಜರು ಗಳನ್ನು ನೇಮಿಸಿಟ್ಟು ಅವರುಗಳಿಗೆ ಕೈಗಾರಿಕೆಗಳಿಗೆ ಬೇಕಾದ ವಸ್ತುಗಳನ್ನು ತರಿಸಿಕೊಳ್ಳುವ discretionary ಅಧಿಕಾರವನ್ನು ಕೊಡಬೇಕೆಂದು ನಾನು ಸೂಚಿಸುತ್ತೇನೆ. ಅನೇಕ ಕೈಗಾರಿಕೆಗಳಲ್ಲಿ ಉತ್ಪನ್ನ ವಾದ ಸಾಮಾನುಗಳು ಮಾರಾಟವಾಗದೇ ಇವೆ. ಉದಾಹರಣೆಗೆ, ಕಬ್ಬಿಣ ಕಾರ್ಖಾನೆಯಲ್ಲಿ $1\frac{1}{2}$ ಕೋಟಿ ಬೆಲೆ ಬಾಳುವ ಕಬ್ಬಿಣ ಮಾರಾಟವಾಗದೇ ಇದೆ.

ಶಿವಮೊಗ್ಗದಲ್ಲಿ ಈಗ ಒಂದು Match Factory ಯಿದೆ. ಸರ್ಕಾರದವರು 10 ವರ್ಷಗಳಕೆಳಗೆ ಅದನ್ನು ಸ್ಥಾಪನೆಮಾಡಿ ಸಾರ್ವಜನಿಕರಿಂದ $4\frac{1}{2}$ ಲಕ್ಷ ರೂಪಾಯಿ ಗಳನ್ನು ಸಂಗ್ರಹಮಾಡಿ ನಡೆಸಿಕೊಂಡು ಬಂದಂಥಾ ದ್ದನ್ನು 1952ನೆಯ ಇಸವಿಯಲ್ಲಿ ಮುಚ್ಚಬೇಕೆಂದು ತೀರ್ಮಾನ ಮಾಡಿದ್ದ ಸಂದರ್ಭದಲ್ಲಿ ಅಲ್ಲಿ ಕೆಲಸದಲ್ಲಿದ್ದ ಕೆಲಸಗಾರರು ತಾವೇ ಕೆಲಸಮಾಡುವ ಮನಸ್ಸುಮಾಡಿ ಮುಚ್ಚಿ ಹೋಗುವಂಥ ಕಾರ್ಖಾನೆಯನ್ನು ತಪ್ಪಿಸಿದ ರಲ್ಲದೆ ಈಗ $3\frac{1}{2}$ ಲಕ್ಷ ರೂಪಾಯಿಗಳ ಲಾಭ ಸಂಪಾ ದನೆ ಮಾಡಿ ಅರ್ಧ ಲಕ್ಷ ರೂಪಾಯಿಗಳ ಸಾಲವನ್ನೂ ತೀರಿಸಿ ಚೆನ್ನಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ. ಸರ್ಕಾರದವರು ಈಗ 10 ಲಕ್ಷ ರೂಪಾಯಿಗಳ ಬಂಡ ವಾಳ ಹಾಕಿ ಅಲ್ಲಿ ಒಂದು ದೊಡ್ಡ ಫ್ಯಾಕ್ಟರಿಯನ್ನು ಸ್ಥಾಪನೆ ಮಾಡಬೇಕೆಂಬ ಅಭಿಪ್ರಾಯವುಳ್ಳವರಾಗಿದ್ದಾ ರೆಂದು ಕೇಳಿದ್ದೇನೆ. ಈ ಸಂದರ್ಭದಲ್ಲಿ ನಾನು ಹೇಳು ವುದು, ಇದನ್ನೊಂದು ಗ್ರಾಮ ಕೈಗಾರಿಕೆಯಾಗಿ ಸ್ಥಾಪನೆ ಮಾಡಬೇಕು ಎಂದು. ಗ್ರಾಮ ಕೈಗಾರಿಕೆ ಯಾಗಿ ಮಾಡುವುದಾದರೆ ಅಲ್ಲಿ ಸುತ್ತಮುತ್ತಲೂ ಇರುವ ಎಲ್ಲಾ ಜನಾಂಗಗಳವರಿಗೂ ಕೆಲಸವನ್ನೊದ ಗಿಸುವುದಕ್ಕನುಕೂಲವಾಗುತ್ತದೆಯಲ್ಲದೆ ಬಳ್ಳಾರಿ ಮುಂತಾದ dry districtಗಳಿಗೂ ಸಹಾಯ ಮಾಡಿ ದಂತಾಗುತ್ತದೆ. ಬಂಗಾಳದಿಂದ ಬಂದಿದ್ದ ಶ್ರೀ ಸತೀಶ್‌ಗುಪ್ತರವರು ಕೂಡ ತಿಳಿಸಿದ್ದಾರೆ ಹೀಗೆ ಮಾಡಿದರೆ ಈ ಕೈಗಾರಿಕೆಯಿಂದ ಲಾಭ ಕೂಡ ಹೊಂದಬಹುದು ಎಂದು. ಆದ್ದರಿಂದ ಸರ್ಕಾರ ದವರು ಇದನ್ನೊಂದು ದೊಡ್ಡ ಕೈಗಾರಿಕೆಯಾಗಿ ಪ್ರಾರಂಭ ಮಾಡುವುದಕ್ಕೆ ಮುಂಚೆ ಅದಕ್ಕೆ ದೇಶದಲ್ಲಿ ಹೆಚ್ಚಿನ demand ಇದೆಯೆ ನೋಡಬೇಕು. ದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಫ್ಯಾಕ್ಟರಿಗಳಿರುವುದು, ಅದಕ್ಕೆ ಸರ್ಕಾರದ ರಕ್ಷಣೆಯಿಲ್ಲದಿರುವುದು ಮುಂದೆ ಕಷ್ಟಕ್ಕೆ ಬರುತ್ತದೆ. ಕೇಂದ್ರ ಸರ್ಕಾರದವರು ಸಣ್ಣ ಫ್ಯಾಕ್ಟರಿ ಗಳಿಗೂ ಕೂಡ tax remission ಮಾಡುತ್ತಿದ್ದಾರೆ. ಆದಕಾರಣ ಇದೇ 10 ಲಕ್ಷ ರೂಪಾಯಿಗಳನ್ನು ಇನ್ನಾವುದಾದರೂ ಕೈಗಾರಿಕೆಗೆ ಹಾಕಿ ಅಭಿವೃದ್ಧಿ ಕಾರ್ಯವನ್ನು ಮಾಡಬಹುದೆಂದು ಹೇಳುತ್ತೇನೆ.

ಇನ್ನೊಂದು ವಿಷಯವೇನೆಂದರೆ, ನಮ್ಮ ಕೈಗಾರಿಕೆ ಗಳಲ್ಲಿ ವಾಸ್ತವವಾಗಿಯೂ ಆಡಳಿತ ವೆಚ್ಚ ಬಹಳ ಹೆಚ್ಚು ಎಂದು ಕಂಡುಬರುತ್ತದೆ. ಇದನ್ನು ಕಡಮೆ ಮಾಡಬೇಕು. ಮೈಸೂರು ಸಂಸ್ಥಾನದಲ್ಲಿ ಉತ್ಪನ್ನ ವಾಗುವ ಸಾಮಾನುಗಳನ್ನು marketing ಮಾಡ ತಕ್ಕ ಕ್ರಮ ಸರಿಯಾಗಿಲ್ಲವೆಂದು ಹೇಳಬೇಕಾಗಿದೆ. ಇದಕ್ಕೊಂದು corporationನ್ನನ್ನೋ ಅಥವಾ ಇನ್ನೇನಾದರೂ ವ್ಯಾಪಾರ ಸಂಸ್ಥೆಯನ್ನೋ ಮಾಡಿ ಅನುಭವಸ್ಥರನ್ನು ಹಾಕಿ ವ್ಯಾಪಾರದ ಕಡೆಗೆ ಗಮನ ಕೊಡುವಹಾಗೆ ಮಾಡಿದರೆ ಒಳ್ಳೆಯದು. 200-300 ರೂಪಾಯಿಗಳ ಸಂಬಳ ಕೊಟ್ಟು ತೆಗೆದುಕೊಳ್ಳುವ ಅಧಿಕಾರಿಗಳಿಗೆ ವ್ಯಾಪಾರದ ಕಡೆ ಅಷ್ಟು ಗಮನವಿರು ವುದಿಲ್ಲ. Competitionನ್ನಿನ ಮೇಲೆ ಕೆಲಸ ಮಾಡುವ ರೀತಿಯಲ್ಲಿ ಈ ಕೈಗಾರಿಕೆಗಳು ನಡೆಯುತ್ತಿಲ್ಲ. ಮಾರ್ಕೆಟ್ಟಿನ demand ಮತ್ತು supply ನೋಡಿ ಕೊಂಡು ಅದಕ್ಕೆ ತಕ್ಕಂತೆ ಅವರು ಹೊಂದಿಕೊಂಡು ಕೆಲಸ ಮಾಡುವುದಿಲ್ಲ. ಈಗ ಕೆಲವು ಕೈಗಾರಿಕೆಗಳಲ್ಲಿ ನೋಡುವುದಾದರೆ ಲಕ್ಷಾಂತರ ರೂಪಾಯಿಗಳ ಸಾಮಾ ನುಗಳು ಹಾಗೆಯೇ ಉಳಿವಿವೆ. ಭದ್ರಾವತಿ ಕಬ್ಬಿಣದ ಕಾರ್ಖಾನೆಯಲ್ಲೇ $1\frac{1}{2}$ ಲಕ್ಷ ರೂಪಾಯಿಗಳ ಸಾಮಗ್ರಿ ಗಳು ಉಳಿದಿವೆ.

9-30 A.M.

Sri H. SIDDAVEERAPPA (Minister for Home and Industries).—I may just intervene for a minute. The statement of the Hon'ble Member is not correct. I may request my Hon'ble friend to disabuse his mind. Actually our production of pig iron has gone up so much that it was found absolutely necessary to request the Government of India to give us export permit. Now they have done this. There is no accumulation as has been made out.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ನನಗೆ ಇನ್ನು ಎರಡು ನಿಮಿಷಕೊಟ್ಟರೆ ಸಾಕು. ಈ ಕೈಗಾರಿಕೆ ಕೇಂದ್ರಗಳ ವಿಚಾರದಲ್ಲಿ ನಾನು ಇನ್ನು ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಆ ಚಿನ್ನದ ಗಣಿ ಯಿಂದ ನಮಗೆ ಈವರೆಗೂ ಹೆಚ್ಚಿನ ಲಾಭ ಬರುತ್ತಿರ ಲಿಲ್ಲ. ಆದುದರಿಂದ ಅದರಿಂದ ಬರತಕ್ಕ ವರಮಾನ ವನ್ನು ಹೆಚ್ಚಿಸಿಕೊಳ್ಳಬೇಕೆಂಬ ಉದ್ದೇಶದಿಂದ ಈಗ ಸರ್ಕಾರದವರು ಒಂದು ಸಮಿತಿಯನ್ನು ನೇಮಿಸಿ ದ್ದಾರೆ. ಈ ಗಣಿಗಳಿಂದ ನಮಗೆ ಇನ್ನುಮುಂದಕ್ಕೆ ಹೆಚ್ಚು ಹಣ ಬರುವಹಾಗೆ ಮಾಡಲು ಆ ಸಮಿತಿಯವರಿಗೆ ಅವಕಾಶವಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಈ ಸಂದರ್ಭದಲ್ಲಿ ನಾನು ಒಂದು ಸಲಹೆಮಾಡು ವುದೇನೆಂದರೆ, ಕೆಲವು ಷೇರುಗಳ ರೀತಿಯಲ್ಲಿ ಹಣವನ್ನು ಚಿನ್ನದ ಗಣಿಯ ಕಂಪನಿಗೆ ಹಾಕಿ partners ಆಗಿ ನಡೆಸಿಕೊಂಡು ಹೋಗುತ್ತಾ ಬಂದರೆ, ನಿಧಾನವಾಗಿ ಚಿನ್ನದ ಗಣಿಯನ್ನು ಸರ್ಕಾರವೇ ವಹಿಸಿಕೊಂಡು ನಡೆ ಸುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ

(ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.)

ಇದನ್ನು ಆರೀತಿ ಮಾಡುವುದಕ್ಕಾಗಿ ತಾವು ಈಗಿನಿಂದಲೇ ಪ್ರಯತ್ನಪಟ್ಟರೆ ಒಳ್ಳೆಯದಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ.

ಈಗ ತಾವು ವಿಶೇಷವಾಗಿ ಹಣವನ್ನು ಈ ಬೆಂಗಳೂರು ಮತ್ತು ಮೈಸೂರ ಈ ಎರಡು ನಗರಗಳನ್ನು ಮಾತ್ರ ಸುಂದರವಾಗಿರುವಂತೆ ಮಾಡಲು ಖರ್ಚು ಮಾಡುತ್ತಿದ್ದೀರಿ; ಮತ್ತು ಅದಕ್ಕೆ ಹಣವನ್ನೂ ಕೂಡ ಒದಗಿಸಿಕೊಳ್ಳುತ್ತಿದ್ದೀರಿ. ಆದರೆ ತಾವು ಇಲ್ಲಿಯವರೆಗೂ ಇದೇರೀತಿ ಜಿಲ್ಲೆಯಲ್ಲಿರುವ ಮುಖ್ಯ ಪಟ್ಟಣಗಳನ್ನು, ಹೋಗಲಿ ಕಡೆಗೆ ಆ ಜಿಲ್ಲಾ ಕಸಬೆಗಳನ್ನಾದರೂ ಅಭಿವೃದ್ಧಿಗೊಳಿಸಲು ಯಾವ ಪ್ರಯತ್ನಗಳನ್ನೂ ಮಾಡಿದಂತೆ ಕಂಡು ಬರುವುದಿಲ್ಲ. ಆದುದರಿಂದ ಇನ್ನು ಮುಂದೆಯಾದರೂ ಈ ಬಾಬಿಗಾಗಿ ಹಣವನ್ನೊದಗಿಸುವುದು ಒಳ್ಳೆಯದೆಂದು ಹೇಳುತ್ತೇನೆ.

ಇನ್ನು ಪಾನನಿರೋಧದ ವಿಚಾರವಾಗಿ ಅನೇಕರು ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಆದರೆ ಈ ಪಾನನಿರೋಧದ ಉಪಯೋಗವೇನೆಂಬುದು ಜನರಿಗೆಲ್ಲಾ ಗೊತ್ತಾಗಿದೆ. ಈಗಾಗಲೇ ವಾಸ್ತವಾಂಶಗಳೇನೆಂಬುದನ್ನು ನೋಡಿದರೆ—ಹಳ್ಳಿಗಳ ಕಡೆ ಈ ಕುಡಿತಕ್ಕೆ ಸಿಕ್ಕಿದ್ದ ಜನರೆಲ್ಲಾ ಅದನ್ನು ಬಿಟ್ಟಮೇಲೆ ಈ ದಿವಸ ಅವರು ಸುಖವಾಗಿ ಮನೆಗಳನ್ನು ಕಟ್ಟಿಕೊಂಡು, ಆಕಳುಗಳನ್ನು ಸಾಕುತ್ತ, ಜಮೀನು ವ್ಯವಸಾಯ ಮಾಡಿಕೊಂಡು ಇದ್ದಾರೆ. ಈ ಪಾನನಿರೋಧದಿಂದ ದೇಶಕ್ಕೆ ತುಂಬ ಅನುಕೂಲವಾಗುತ್ತಿದೆ. ಆದರೆ ಈ ದಿವಸ ಯಾರು ಈ ಕುಡಿತದ ಅಭ್ಯಾಸವನ್ನು ಇನ್ನೂ ಕೈಬಿಟ್ಟಿಲ್ಲವೋ ಅಂಥವರು ಕೆಲವರೂ, ಮತ್ತೆ ಯಾರು ಈ ಮಧ್ಯ-ಸಾರಾಯಿಗಳ ಮಾರಾಟಮಾಡಿ ಲಾಭ ಸಂಪಾದನೆಮಾಡುತ್ತಿದ್ದಾರೋ ಅಂಥವರೂ ಇದು ಜಯಪ್ರದವಾಗುತ್ತಿಲ್ಲವೆಂಬ ಕೂಗನ್ನು ಎಬ್ಬಿಸಿದ್ದಾರೆ. ಆದರೆ ತಾವು ಕುಡುಕರಲ್ಲದ ದಕ್ಷರಾದ ಅಧಿಕಾರಿಗಳನ್ನು ಆ ಪಾನನಿರೋಧ ಜಾರಿಯಲ್ಲಿರತಕ್ಕ ಪ್ರದೇಶಕ್ಕೆ ಹಾಕಿದರೆ ಆಗ ಇಂಥ ಅಪಪ್ರಚಾರ ಮಾಡತಕ್ಕವರನ್ನೆಲ್ಲಾ ಸದೆಬಡಿಯಲು ಅವಕಾಶವಾಗುತ್ತದೆ. ಆದರೆ ಈಗ ಪಾನನಿರೋಧ ಜಾರಿಯಲ್ಲಿರತಕ್ಕ ಕಡೆಗಳಲ್ಲಿ ಕೆಲಸಮಾಡತಕ್ಕ ನೌಕರರುಗಳೆಲ್ಲಾ ಕುಡುಕರೇ ಆಗಿರುವುದರಿಂದ ಅದನ್ನು ಸಂಪೂರ್ಣವಾಗಿ ತಡೆಗಟ್ಟಲು ಅವಕಾಶವಿಲ್ಲ. ಆದುದರಿಂದ ತಾವು ಕುಡಿತದ ಅಭ್ಯಾಸವಿಲ್ಲದಂಥ ಅಧಿಕಾರಿಗಳನ್ನೇ ಆ ಪ್ರದೇಶಗಳಿಗೆ ಹಾಕತಕ್ಕದ್ದು ಅತ್ಯಗತ್ಯ ಎಂದು ಹೇಳುತ್ತೇನೆ.

ಇನ್ನು ವ್ಯವಸಾಯಾಭಿವೃದ್ಧಿಯ ವಿಚಾರದಲ್ಲಿ ಎರಡು ಮಾತುಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಇವೊತ್ತು ದೇಶಾದ್ಯಂತವೂ ಹೆಚ್ಚು ಆಹಾರ ಸಾಮಗ್ರಿಗಳು ಬೆಳೆದಿವೆ, ಆದುದರಿಂದ ಅವುಗಳ ಬೆಲೆ ದಿನದಿನಕ್ಕೂ ಕಡಮೆಯಾಗುತ್ತಿದೆ, ಸರ್ಕಾರ ಇದನ್ನು ತಡೆಗಟ್ಟಬೇಕು ಎಂಬತಕ್ಕ ಕೂಗು ಎಲ್ಲೆಲ್ಲಿಯೂ ಎದ್ದಿರುತ್ತದೆ. ಆದರೆ ಇದರ ವಾಸ್ತವಾಂಶವೇ ಬೇರೆ. ರೈತರ ಕೈಲಿ ಈ ದಿವಸ ಹಣವಿಲ್ಲದೆ—ಅವರು ತಮ್ಮ ಹೊಟ್ಟೆಗೂಕೂಡ ಸಾಕಾಗುವಷ್ಟು ಕಾಳನ್ನು ಮನೆಯಲ್ಲಿ ಇಡದಹಾಗೆ ಎಲ್ಲಾ ದವಸವನ್ನೂ ಎಲ್ಲಾ ರೈತರುಗಳೂ ಏಕಕಾಲದಲ್ಲೇ ಮಾರುವಕಟ್ಟೆಗೆ ತಂದುದರಿಂದ ದವಸಗಳ ಧಾರಣೆ ಇಳಿದಿದೆಯೇ ಹೊರತು ಹಾಗೆ ಬೆಲೆ ಇಳಿಯುವ ಮಟ್ಟಕ್ಕೆ ದೇಶದಲ್ಲಿ ಹೆಚ್ಚು ಆಹಾರ ಸಾಮಗ್ರಿಗಳನ್ನು ಬೆಳೆಯಲಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ಶ್ರೀ ವ್ಯಾಸ್ಕರ್ಹ್ಯಾನರವರು . . . .

Mr. SPEAKER.—Your time is up.

ಶ್ರೀ ಕೆ. ಪಂಚಾಕ್ಷರಯ್ಯ (ಅರಸೀಕೆರೆ).—ಸ್ವಾಮಿ, ನಾನು ಈ 1955-56ನೆಯ ಸಾಲಿನ ಆಯವ್ಯಯದ ಪಟ್ಟಿಯನ್ನು ಸ್ವಾಗತಿಸುತ್ತೇನೆ. ಆದರೆ ನಾನು ಇದನ್ನು ಸ್ವಾಗತಿಸುವಾಗ ಸರ್ಕಾರದವರಿಗೆ ಕೆಲವು ಸೂಚನೆಗಳನ್ನು ಕೊಡಬೇಕೆಂದು ಇಷ್ಟಪಟ್ಟಿದ್ದೇನೆ.

ಈ ಬಡ್ಜೆಟ್ ಮೇಲೆ ಮಾನ್ಯ ಮುಖ್ಯ ಮಂತ್ರಿಗಳು ಭಾಷಣಮಾಡುತ್ತ ಪೋಡಿ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಈಗ ನಡೆದಿರತಕ್ಕ ರೀಸರ್ವೆ ಸೆಟಲ್‌ಮೆಂಟಿನ ಕಾರ್ಯದಲ್ಲಿ ಮೂರು ತಾಲ್ಲೂಕುಗಳು ಪ್ರಗತಿ ಹೊಂದಿರುತ್ತವೆ, ಇನ್ನೂ ಭೂಸರ್ವೆಮಾಡಬೇಕಾದ ತಾಲ್ಲೂಕುಗಳು ಅನೇಕವಾಗಿವೆ; ಈ ಕಾರ್ಯ ನಡೆಯಬೇಕಾದದ್ದು ಬಹಳ ಅಗತ್ಯ ಮತ್ತು ಜರೂರು ಎಂಬುದಾಗಿ ನಾನು ಒತ್ತಾಯವಾಗಿ ಹೇಳುತ್ತೇನೆ, ಏಕೆಂದರೆ ಈ ದಿವಸ ಅನೇಕ ಗ್ರಾಮಗಳಲ್ಲಿ ಈ ರೆವಿನ್ಯೂ ಪೋಡ್ ಆಗದೆ ಇರುವುದರಿಂದ ತಮ್ಮ ತಮ್ಮ ಹಕ್ಕುಬಾಧ್ಯತೆಗಳನ್ನು ಸ್ಥಾಪನೆ ಮಾಡಿಕೊಳ್ಳತಕ್ಕ ಬಗ್ಗೆ ಅನೇಕರು ಕೋರ್ಟಿಗೆ ತಿರುಗಲು ಅವಕಾಶವಾಗಿದೆ. ಇದರಿಂದ ಜನಗಳಿಗೆ ತುಂಬ ಹಣ ವ್ಯಯವಾಗುತ್ತಿದೆ. ಇದರಿಂದ ರೈತನಿಗೂ ನಷ್ಟ—ದೇಶದ ದುಡ್ಡೂ ಹಾಳಾಗುತ್ತದೆ. ಅಲ್ಲದೆ ಸರ್ಕಾರಕ್ಕೂ ಬಹಳ ವರಮಾನ ಬರುತ್ತದೆ. ಆದುದರಿಂದ ಈ ವಿಚಾರದಲ್ಲಿ ಸರ್ಕಾರದವರು ತೀವ್ರ ಗಮನ ಕೊಡಬೇಕೆಂದು ಹೇಳುತ್ತೇನೆ.

ಈಗ ತಾವು ತಯಾರಿಸಿರತಕ್ಕಂಥ 1955-56ನೆಯ ಸಾಲಿನ ಬಡ್ಜೆಟ್ ಜನಸಾಮಾನ್ಯರ ಬಡ್ಜೆಟ್ಟಲ್ಲ. ಏತಕ್ಕೆಂದರೆ ತಮ್ಮ ಗಮನವೆಲ್ಲಾ ಹೆಚ್ಚಿಗೆ ಈ ನಗರಗಳ ಕಡೆಗೇ ಸೆಳೆದು, ಅದಕ್ಕೆ ಅನುಗುಣವಾಗಿ ತಯಾರಿಸಿರತಕ್ಕಂಥ ಬಡ್ಜೆಟ್ಟಾಗಿದೆಯೇ ಹೊರತು ಇದು ಹಳ್ಳಿಯ ಜನರಿಗೆ ಅನುಕೂಲ ಕಲ್ಪಿಸತಕ್ಕಂಥ ಬಡ್ಜೆಟ್ಟಾಗಿಲ್ಲ. ಇದಕ್ಕೆ ಒಂದು ಉದಾಹರಣೆಯನ್ನು ಹೇಳಬೇಕಾಗಿದೆ. ಸರ್ಕಾರದವರು ನಗರಗಳಲ್ಲಿ ನೀರು ಸರಬರಾಯಿನ ವ್ಯವಸ್ಥೆಯ ಬಗ್ಗೆ ಎಷ್ಟು ಹಣವನ್ನೊದಗಿಸಿದ್ದಾರೆ ಎನ್ನುವ ಬಗ್ಗೆ ಮುಖ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೀಗೆ ಹೇಳಿದ್ದಾರೆ:

"Seventy-nine schemes have been administratively sanctioned at a total cost of Rs. 1,78,48,650. The total outlay so far incurred is Rs. 31 lakhs."

ಸ್ವಾಮಿ, ಈ ಹಳ್ಳಿಯಲ್ಲಿರತಕ್ಕವರಿಗಾಗಿ ಅದೇ ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ ಎಷ್ಟು ಹಣವನ್ನು ಕೊಟ್ಟಿದ್ದಾರೆಂಬ ಬಗ್ಗೆ ಮುಖ್ಯ ಮಂತ್ರಿಗಳು ತಮ್ಮ ಬಡ್ಜೆಟ್ ಭಾಷಣದಲ್ಲಿ ಹೀಗೆ ಹೇಳಿದ್ದಾರೆ, ನೋಡಿ:—

"During the year, 854 well works at a total cost of Rs. 16¼ lakhs were sanctioned. Of these, 278 well works have been completed."

ಈ ವ್ಯತ್ಯಾಸವನ್ನು ಸರ್ಕಾರದವರು ಕಣ್ಣಿಟ್ಟು ನೋಡತಕ್ಕದ್ದಾಗಿದೆ ಎಂದು ನಾನು ಹೇಳುತ್ತಿದ್ದೇನೆ. ನಗರಗಳ ಬಗ್ಗೆ 79 ಸ್ಕೀಮುಗಳನ್ನು ಮಾಡಿ ಆ ಬಗ್ಗೆ 31 ಲಕ್ಷ ರೂಗಳನ್ನು ಖರ್ಚುಮಾಡಿದ್ದಾರೆ. 49 ಯೋಜನೆಗಳು ಆಗಲೇ ಕಾರ್ಯರೂಪಕ್ಕೆ ಬಂದಿವೆಯೆಂದು ಹೇಳಿ

ದ್ದಾರೆ. ಈ ಹಳ್ಳಿಗಳ ವಿಚಾರದಲ್ಲಿ 854 ಬಾವಿಗಳ ಕೆಲಸದ ಪೈಕಿ ಕೇವಲ 278 ಮಾತ್ರ ಮುಗಿದಿವೆ. ಈ ಬಾವಿಗಳಿಗೆಲ್ಲಾ 54-55ನೆಯ ಸಾಲಿಗೆ 16½ ಲಕ್ಷ ಮಾತ್ರ ಒದಗಿಸಿದ್ದಾರೆ. ಒದಗಿಸಿದ ಅಲ್ಪ ಹಣವೂ ಕೂಡ ಸರ್ಕಾರದಿಂದ ಖರ್ಚುಮಾಡಲ್ಪಟ್ಟಿಲ್ಲ. ಇದರಿಂದ ಸರ್ಕಾರದ ತಾತ್ಸಾರ ನೀತಿ ಹೇಗಿದೆ ಎಂಬುದನ್ನು ಗಮನಿಸಲಿ.

ಇದರ ಜೊತೆಗೆ ಇನ್ನು ಟ್ರಸ್ಟ್ ಬೋರ್ಡಿಗೆ ಬೇರೆ ಹಣವನ್ನೊದಗಿಸಿದ್ದಾರೆ. 55-56ನೆಯ ಸಾಲಿನಲ್ಲಿ ಇದಕ್ಕಾಗಿ ಸುಮಾರು ಒಂದು ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ ಎಂದು ಹೇಳಿದ್ದಾರೆ. ಆದರೆ ಹಳ್ಳಿಗಳ ಕಡೆ ಈ ಮನೆಗಳನ್ನು ಕಟ್ಟಿಸತಕ್ಕ ಬಗ್ಗೆ ಸರ್ಕಾರದವರು ಒಂದು ಕಾಸನ್ನಾದರೂ ಸಹ ಕೊಟ್ಟಿಲ್ಲ. ಇಷ್ಟೇ ಅಲ್ಲದೆ ಈ ಕೈಗಾರಿಕೆಗಳೆಲ್ಲವನ್ನೂ ಸಹ ಈಗಲೂ ಬೆಂಗಳೂರು ನಗರದಲ್ಲೇ ಪ್ರಾರಂಭಮಾಡುತ್ತಿದ್ದಾರೆ. ಇದರಿಂದ ಗ್ರಾಮಾಂತರ ಪ್ರದೇಶದಲ್ಲಿ ಜನರಿಗೆ ಯಾವ ಸೌಲಭ್ಯವೂ ದೊರೆಯದೆ, ಜೀವನ ನಡೆಸಲು ತೊಂದರೆಯಾಗಿ ಆ ಪ್ರದೇಶದ ಜನರೆಲ್ಲಾ ತಂಡತಂಡವಾಗಿ ಈಗ ಈ ದೊಡ್ಡದೊಡ್ಡ ನಗರಗಳ ಕಡೆಗೆ ಧಾವಿಸುತ್ತಿದ್ದಾರೆ. ಹೀಗೆ ತಾವು ಈ ನಗರಗಳ ಅಭಿವೃದ್ಧಿಗಾಗಿ ಲಕ್ಷಾಂತರ-ಕೋಟ್ಯಾಂತರ ರೂಪಾಯಿಗಳನ್ನು ನಾನಾ ಮುಖವಾಗಿ ಚೆಲ್ಲುತ್ತಿರುವುದರ ಪರಿಣಾಮದಿಂದ ಈ ದಿವಸ ಆ ಗ್ರಾಮಾಂತರ ಪ್ರದೇಶದಲ್ಲಿ ಜನಗಳಾರೂ ನಿಲ್ಲದಂತಾಗಿ ಆ ಹಳ್ಳಿಗಳೆಲ್ಲವೂ ಹಾಳಾಗಿ ಹೋಗುತ್ತಿವೆ. ಈ ಸಾಲಿನಲ್ಲಿ ಈ ಇಡೀ ಸಂಸ್ಥಾನದಲ್ಲಿರತಕ್ಕ ಗ್ರಾಮಗಳಿಗೆಲ್ಲಕ್ಕೂ ಈ ಕುಡಿಯುವ ನೀರಿನ ವ್ಯವಸ್ಥೆಗಾಗಿ ಕೇವಲ 10 ಲಕ್ಷ ಮಂಜೂರು ಮಾಡಿರುವುದು ಸಾಕೇನು ? ಈ ಬಗ್ಗೆ ತಾವು ಈಗ ಖರ್ಚುಮಾಡಬೇಕೆಂದು ಉದ್ದೇಶಿಸಿ ಕೊಟ್ಟಿರತಕ್ಕ ಕೇವಲ 10 ಲಕ್ಷ ರೂಪಾಯಿಗಳಲ್ಲಿ ವರ್ಷಾಂತ್ಯದಲ್ಲಿ 5-6 ಲಕ್ಷ ರೂಪಾಯಿಗಳನ್ನು ಈ ಬಾಬಿಗಾಗಿ ಖರ್ಚು ಮಾಡಬಹುದು. ಇಷ್ಟು ಹಣ ಈ ಬಾಬಿಗೆ ಸಾಕೇ ಎಂದು ನಾನೀಗ ಕೇಳುತ್ತೇನೆ.

ನಾನು ಸರ್ಕಾರದವರ ಗಮನಕ್ಕೆ ತರಬೇಕಾದಂಥ ಬಹು ಮುಖ್ಯವಾದ ವಿಚಾರ ಇನ್ನೂ ಒಂದಿದೆ. ಅದು ಬೆಂಗಳೂರಿನಲ್ಲಿ ಜನರಲ್ ಹಾಸ್ಪಿಟಲ್ಲಿನ ವಿಚಾರ. ಇದಕ್ಕಾಗಿ ಈಗ ಐದು ಲಕ್ಷ ರೂಪಾಯಿಗಳನ್ನು ಇದೇ ಬಡ್ಜೆಟ್ಟಿನಲ್ಲಿ ಒದಗಿಸಲಾಗಿರುತ್ತೆಂದು ಹೇಳಿದ್ದಾರೆ. ಇಡೀ ಸಂಸ್ಥಾನಕ್ಕೆ, ಬಳ್ಳಾರಿ ಸಹಿತ, ಪ್ರೈಮರಿ ಸ್ಕೂಲುಗಳ ಕಟ್ಟಡಕ್ಕೆ 2½ ಲಕ್ಷ ಒದಗಿಸಿದ್ದಾರೆ. ಬೆಂಗಳೂರಿನಲ್ಲಿ ಒಂದು ಹಾಸ್ಪಿಟಲಿಗೆ 5 ಲಕ್ಷ, ಇಡೀ ಸಂಸ್ಥಾನದ ಪ್ರೈಮರಿ ಸ್ಕೂಲುಗಳ ಕಟ್ಟಡಗಳಿಗೆ 2½ ಲಕ್ಷ! ಇದರಿಂದ ಸರ್ಕಾರದವರಿಗೆ ಜನಸಾಮಾನ್ಯರ ವಿಷಯದಲ್ಲಿ ಎಷ್ಟರಮಟ್ಟಿಗೆ ನಿರ್ಲಕ್ಷ್ಯ ಮನೋಭಾವನೆಯಿದೆಯೆಂಬುದು ಎದ್ದು ಕಂಡುಬರುತ್ತಿದೆಯೆಂಬುದನ್ನು ತೋರಿಸಿಕೊಟ್ಟು, ಇದು ಜನಸಾಮಾನ್ಯರ ಬಡ್ಜೆಟ್ಟಲ್ಲ ಎಂದು ಹೇಳುತ್ತೇನೆ.

ಇನ್ನು ಕೈಗಾರಿಕಾ ಹೆಡ್ಡಿನಲ್ಲಿ ಈ ಸಲ 13 ಲಕ್ಷಗಳಷ್ಟು ನಷ್ಟಸಂಭವಿಸಿದೆ. ಇದಕ್ಕೆ ಸರ್ಕಾರದವರು ಜರೂರು ಗಮನಕೊಡಬೇಕು. ಈ ಕೈಗಾರಿಕೆಗಳಿಗೆಲ್ಲಾ ದೇಶದಲ್ಲಿ ಇತರರಿಗೆ ಕೊಡತಕ್ಕ ದರಕ್ಕಿಂತ ಕಮ್ಮಿ ದರದಲ್ಲಿ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡಲಾಗುತ್ತಿದೆ. ಜೊತೆಗೆ ಹಣದ ಸರಬರಾಯಿ ಸಹ ಕಮ್ಮಿ ಬಡ್ಡಿ ದರದಲ್ಲಿ ಒದಗಿಸಲಾಗಿದೆ. ಇಷ್ಟಾದರೂ ಅವು ಲುಕ್ಸಾನಿನಲ್ಲಿ ಕೆಲಸಮಾಡುತ್ತಿವೆ. ಸರ್ಕಾರದವರು ಕೂಡಲೇ ಇದಕ್ಕೆ ನಿಗಾಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಈಗ ತಾವು ಹೇಳುತ್ತಿರುವ ವಿಷಯ ಯಾವ ಪುಸ್ತಕದಲ್ಲಿ—ಎಷ್ಟನೇ ಪುಟದಲ್ಲಿದೆ ?

ಶ್ರೀ ಕೆ. ಪಂಚಾಕ್ಷರಯ್ಯ.—ಇನ್ನು ಈ ಕೈಗಾರಿಕಾ ಇಲಾಖೆಗಳ ಆಡಳಿತ ವಿಚಾರದಲ್ಲಿ ಇದು ಒಂದು ಬಹಳ ಮುಖ್ಯವಾದ ಅಂಶವೆಂದು ನಾನು ಹೇಳುತ್ತೇನೆ. ಈ ವಿಚಾರಕ್ಕೆ ಸರ್ಕಾರದವರು ಕೂಡಲೆ ಗಮನಕೊಡಬೇಕೆಂದು ಹೇಳುತ್ತೇನೆ.

ಜಿಲ್ಲಾ ಬೋರ್ಡುಗಳು ಮತ್ತು ಲೋಕಲ್ ಬೋರ್ಡುಗಳು ಇತ್ಯಾದಿಗಳ ಆಡಳಿತವನ್ನು ಹೋದ ವರ್ಷ ಸರ್ಕಾರ ತಾನೇ ವಹಿಸಿಕೊಂಡಿತು. ಆಗಿನಿಂದಲೂ ಸರ್ಕಾರ ಅಲ್ಲಿಯ ಅಭಿವೃದ್ಧಿ ಕೆಲಸಗಳಿಗೆ ಎಷ್ಟು ದುಡ್ಡನ್ನು ಖರ್ಚುಮಾಡಿದೆ! ಅಲ್ಲಿ ಏನೇನು ಕೆಲಸಗಳು ನಡೆದಿವೆ? ಈ ದಿವಸ ಸರ್ಕಾರದವರು ಕೊಡುತ್ತಿರುವ ಹಣವನ್ನೆಲ್ಲಾ ಈ ಹಿಂದೆ ಏನೇನು ಕೆಲಸಗಳನ್ನು ಜಿಲ್ಲಾ ಬೋರ್ಡುಗಳಿದ್ದಾಗ ನಡೆಸಲಾಗಿತ್ತೋ ಆ ಕೆಲಸಗಳಿಗೇ ಪುನಃ ಈ ದುಡ್ಡನ್ನು ಖರ್ಚು ಹಾಕುತ್ತಿದ್ದಾರೆ ಎಂದು ನಾನು ಕೇಳುತ್ತಿದ್ದೇನೆ. ಈ ಜಿಲ್ಲಾ ಬೋರ್ಡುಗಳ ಖರ್ಚು ವೆಚ್ಚಗಳ ಬಗ್ಗೆ ವಾರ್ಷಿಕ ತನಿಖೆಗಳು ಬೇರೆ ಎಷ್ಟೋ ವರ್ಷಗಳಿಂದ ನಡದೇ ಇಲ್ಲ. ಹಾಗೂ ಅಲ್ಲೋ-ಇಲ್ಲೋ ಒಂದೆರಡು ಕಡೆ ಲೆಕ್ಕಗಳನ್ನು ತನಿಖೆ ಮಾಡಿಸಿದ್ದರೂ ಕೂಡ, ಅದರಲ್ಲಿ ಕಂಡುಬಂದಂಥ ನ್ಯೂನತೆಗಳ ಬಗ್ಗೆ ಸರ್ಕಾರ ಯಾವ ಕಾರ್ಯಕ್ರಮವನ್ನೂ ಸಹ ತೆಗೆದುಕೊಳ್ಳಲು ಧೈರ್ಯಮಾಡಿದಂತೆ ಕಂಡುಬಂದಿಲ್ಲ. ಅನೇಕ ಜಿಲ್ಲಾ ಬೋರ್ಡುಗಳಲ್ಲಿ ಹಣ ವಿಶೇಷವಾಗಿ ದುರುಪಯೋಗವಾಗಿದೆ. ಇದರ ಬಗ್ಗೆ ಈಗಲಾದರೂ ಸರ್ಕಾರ ಕೂಡಲೇ ತೀವ್ರವಾದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದ ಹೇಳುತ್ತೇನೆ.

ಇನ್ನು ಮುನಿಸಿಪಾಲಿಟಿಗಳ ಆಡಳಿತದ ಬಗ್ಗೆ ಹೇಳಬೇಕೆಂದರೆ ಅವುಗಳಲ್ಲಿ ಒಂದು ದೊಡ್ಡ ಗೊಂದಲವೇ ಆಗಿಹೋಗಿದೆ. ಇದಕ್ಕೆ ಕಾರಣವೇನೋ ಗೊತ್ತಾಗುವುದಿಲ್ಲ. ಇವುಗಳ ಆಡಳಿತ ಬಗ್ಗೆ ಸ್ವಲ್ಪವೂ ಸರಿಯಾಗಿರುವುದಿಲ್ಲ, ಸರ್ಕಾರವೇ ಇಲ್ಲ ಎಂಬ ಭಾವನೆ ಸಾರ್ವಜನಿಕರಲ್ಲಿ ಮೂಡಿರುತ್ತದೆ. ಇದರ ವಿಚಾರವಾಗಿ ನಾನು ಸರ್ಕಾರದವರಿಗೆ ಎಷ್ಟು ಹೇಳಿದರೂ ಸಾಲದು. ಸರ್ಕಾರದವರು ಇನ್ನಾದರೂ ಈ ಸ್ಥಳೀಯ ಸಂಸ್ಥೆಗಳು ದಕ್ಷತೆಯಿಂದ ಕೆಲಸಮಾಡುವ ಹಾಗೆ ಮಾಡಬೇಕೆಂದು ಹೇಳುತ್ತೇನೆ.

ರೆವಿನ್ಯೂ ಇಲಾಖೆ ಮತ್ತು ಮರಾಮತ್ ಇಲಾಖೆಗಳ ವಿಚಾರವೂ ಸಹ ಹೀಗೆಯೇ ಇದೆ. ನಾವು ನೇಷನ್ ಬಿಲ್ಡಿಂಗ್ ಆಕ್ಟಿವಿಟೀಸಿಗೆ ಬಹು ಕಷ್ಟದಿಂದ ದುಡ್ಡು ಒದಗಿಸುತ್ತಿದ್ದೇವೆ. ಒದಗಿಸಿದ ಈ ಹಣವನ್ನು D.P.W. ಇಲಾಖೆಯವರು ಪೂರ್ತಿ ಖರ್ಚುಮಾಡದೆ ದೇಶಕ್ಕೆ ಅನ್ಯಾಯವೆಸಗುತ್ತಿದ್ದಾರೆ. ಇದು ಸರಿಯಲ್ಲ. ದೇಶದ ಜನರ ಆಶಯವನ್ನು ಈ ಜನರು ಗ್ರಹಿಸಿಲ್ಲ. ಅಧಿಕಾರಿಗಳು ಜನಗಳ ಆಶಯದ ಮಟ್ಟಕ್ಕೆ ಏರಿಲ್ಲ. ಈ ಅಧಿಕಾರಿಗಳ ಮನೋಭಾವ ಸರಿಯಾಗಿಲ್ಲ. ಈ ವಿಚಾರವಾಗಿ ಈಗಾಗಲೇ ಅನೇಕ ಸದಸ್ಯರು ಈ ಅಂಶವನ್ನು ವ್ಯಕ್ತಪಡಿಸಿದ್ದಾರೆ. ಈ ದಿವಸ ಯಾರು ಸತ್ಯ ಸಂಧತೆಯಿಂದ ಕೆಲಸ ಮಾಡುತ್ತಿದ್ದಾರೋ ಅಂಥವರಿಗೆ ಸರ್ಕಾರದಿಂದ ಯಾವ ಒಂದು ಪುರಸ್ಕಾರವೂ ಸಿಕ್ಕದೆ, ಯಾರು ದಕ್ಷತೆಯಲ್ಲಿ ಹೀನರಾಗಿ, ಹೀನ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದಾರೋ ಅಂಥವರಿಗೇ ಉತ್ತಮ ಸ್ಥಾನ, ಉತ್ತಮ

(ಶ್ರೀ ಕೆ. ಪಂಚಾಕ್ಷರಯ್ಯ.)

ದರ್ಜೆಗಳು ಸಿಕ್ಕುತ್ತಾ ಇವೆ. ಇದು ದೇಶಾದ್ಯಂತವೂ ಜನರಾಡಿಕೊಳ್ಳುತ್ತಿರುವ ಮಾತಾಗಿದೆ. ಇಂಥ ಪರಿಸ್ಥಿತಿಯಿರುವುದರಿಂದಲೇ ಈ ದಿವಸ ಈ ಅಧಿಕಾರ ವರ್ಗದವರಿಂದ ಸಾರ್ವಜನಿಕರಿಗೆ ತುಂಬ ಕಿರುಕುಳವಾಗುತ್ತಿದೆ. ಈ ವಿಷಯಕ್ಕೆ ಸಂಬಂಧಪಟ್ಟ ಮಂತ್ರಿಗಳು ಇದಕ್ಕೆ ತುಂಬ ಗಮನಕೊಡಬೇಕೆಂದ ಅವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಅವರು ಸಾಮಾನ್ಯ ಜನರಲ್ಲಿ ಬೆರೆಯುವುದೇ ಇಲ್ಲ. ಅವರು ಹಿಂದೆ ಯಾವ ಒಂದು ಮನೋಭಾವವನ್ನು ವ್ಯಕ್ತಪಡಿಸುತ್ತಿದ್ದರೋ ಇಂದೂ ಕೂಡ ಅದೇ ಮನೋಭಾವದಿಂದ ಜನರನ್ನು ಕಾಣುತ್ತಿದ್ದಾರೆ. ಈ ತೆರಿಗೆ ವಿಚಾರದಲ್ಲಿ ಒಂದು ಮಾತನ್ನು ತಮಗೀಗ ಹೇಳಲಿಚ್ಛಿಸುತ್ತೇನೆ. ಈಗ ತಾವು ಈ ಆದಾಯ ತೆರಿಗೆ ವಿಷಯದಲ್ಲಿ ಯಾವ ಒಂದು ತತ್ವವನ್ನು ಅಡಕಮಾಡಿದ್ದೀರೋ ಅದು ಖಂಡಿತವಾಗಿಯೂ ಅಗತ್ಯವೂ ಅಲ್ಲ ಮತ್ತು ಪ್ರಾಕ್ಟಿಕಬಲ್ ಅಲ್ಲ ಎಂದು ಹೇಳುತ್ತೇನೆ. ಈ ಸಲ ಸರ್ಕಾರದವರು ತರಬೇಕೆಂದು ಉದ್ದೇಶಿಸಿರತಕ್ಕಂಥ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ (ಕಮರ್ಷಿಯಲ್ ಬೆಳೆಗಳ ಮೇಲೆ ಆದಾಯತೆರಿಗೆ) ಬಿಲ್ಲಿನಿಂದ ಸರ್ಕಾರಕ್ಕೆ 20 ಲಕ್ಷ ರೂಪಾಯಿಗಳು ಬರಬಹುದೆಂದು ಅಂದಾಜು ಮಾಡಿದ್ದಾರೆ. ಈ ಮೊಬಲಗನ್ನು ವಸೂಲ್ಮಾಡಬೇಕಾಗಿದ್ದರೆ ಅಧಿಕಾರಿಗಳು ಮುಗ್ಧ ರೈತರಿಗೆ ತುಂಬ ಕಿರುಕುಳ ಕೊಡುತ್ತಾರೆ. ಇದರಿಂದ ದೇಶದಲ್ಲಿ ತುಂಬ ಗೊಂದಲವೇಳುತ್ತದೆ. ಈಗ ರೈತನು ಬೆಳೆಯತಕ್ಕ ಪೈರುಗಳಲ್ಲಿ ಯಾವುದು ಕಮರ್ಷಿಯಲ್ ಧಾನ್ಯ ಯಾವುದು ಅಲ್ಲ? ಎಳ್ಳೂ ಸಹ ಒಂದು ಕಮರ್ಷಿಯಲ್ ಕ್ರಾಪೇ? ಕೇವಲ 15-20 ಲಕ್ಷ ರೂಪಾಯಿ ವರಮಾನಕ್ಕಾಗಿ ದೇಶದಲ್ಲೇ ಒಂದು ಆಂದೋಳನ ಉಂಟುಮಾಡುವುದು ಉಚಿತವಲ್ಲ. ಈ ಕೇವಲ 15-20 ಲಕ್ಷ ರೂಪಾಯಿ ವರಮಾನವನ್ನು ನಾವು ಮಾಡುವ ಅನಾವಶ್ಯಕವಾದ ಖರ್ಚುಗಳಲ್ಲಿ ಉಳಿತಾಯಮಾಡಿ ಪಡೆಯಬಹುದು. ಆದ್ದರಿಂದ ನಾನು ಈ ಆದಾಯ ತೆರಿಗೆಯನ್ನು ವಿರೋಧಿಸುತ್ತೇನೆ.

ಶ್ರೀ ಟಿ. ಹನುಮಯ್ಯ (ಹಿರಿಯೂರು—ಅನುಸೂಚಿತ ಜಾತಿಗಳು).—ಸ್ವಾಮಿ, ನಮ್ಮ ಮಾನ್ಯ ಹಣಕಾಸಿನ ಸಚಿವರು 1955-56ನೆಯ ಸಾಲಿನ ಬಡ್ಜೆಟ್ಟನ್ನು ಸಭೆಯ ಮುಂದಿಟ್ಟಿದ್ದಾರೆ. ಇದನ್ನು ನಾನು ಪರಿಶೀಲನೆ ಮಾಡಿದ್ದೇನೆ. ಸ್ವಾಮಿ, ನಾವು ಪ್ರತಿ ವರ್ಷವೂ ಒಂದೊಂದು ಬಡ್ಜೆಟ್ಟನ್ನು ನೋಡುತ್ತಲೇ ಇದ್ದೇವೆ. ಆದರೆ ಈ ವರ್ಷದ ಬಡ್ಜೆಟ್ಟೂ ಸಹ ಇಳಿತಾಯದ ಬಡ್ಜೆಟ್ಟೇ ಆಗಿರುವಂತೆ ಕಂಡುಬರುತ್ತಿದೆ. ಇವರಿಂದ ದೇಶದಲ್ಲಿ ನಮ್ಮ ಆಡಳಿತ ವರ್ಗದಲ್ಲಿ ದಕ್ಷತೆಯ ವಿಚಾರವಾಗಿ ನಾನೀಗ ಏನಾಗಿದೆ ಎನ್ನತಕ್ಕ ಬಗ್ಗೆ ಮಾನ್ಯ ಮಂತ್ರಿಗಳಲ್ಲಿ ಒಂದೆರಡು ವಿಷಯಗಳನ್ನು ಅರಿಕೆ ಮಾಡಿಕೊಳ್ಳಬೇಕೆಂದಿದ್ದೇನೆ. ನಾನು ಒಂದೇ ಮಾತಿನಲ್ಲಿ ಹೇಳುವುದಾದರೆ, ಈ ಸರ್ಕಾರಿ ನೌಕರಿ ವರ್ಗದಲ್ಲಿರತಕ್ಕವರೆಲ್ಲರೂ ಎಲ್ಲಿಯ ವರೆಗೆ ಈ ಖಾದಿ ವಸ್ತ್ರಧಾರಣೆಯನ್ನು ಮಾಡಿಕೊಳ್ಳುವುದಿಲ್ಲವೋ ಅಲ್ಲಿಯತನಕ ಅವರ ಮನೋಭಾವನೆಯೂ ಸಹ ಸರಿಹೋಗುವುದಿಲ್ಲವೆಂದು ಹೇಳುತ್ತೇನೆ. ನಮ್ಮ ಹಾಗೆಯೇ ಅವರೂ ಖಾದೀ ಧಾರಿಗಳಾದರೆ ಆಗಲೇ ದೇಶದಲ್ಲಿ ಒಂದು ಶಾಂತಿವಾತಾವರಣ ಉಂಟಾಗುವುದಕ್ಕೆ ಅವಕಾಶವಾಗುತ್ತದೆ. ಜನರಿಗೂ ಮತ್ತು ಈ ಅಧಿಕಾರಿ ವರ್ಗದವರಿಗೂ ಒಂದು ಪರಸ್ಪರ ಪ್ರೀತಿ-ವಿಶ್ವಾಸಗಳು ಬೆಳೆಯುವುದಕ್ಕೆ ಅವಕಾಶವಾಗುತ್ತದೆ: ಮುಖ್ಯವಾಗಿ ಮಂತ್ರಿಗಳು ಖಾದೀ ಹಾಕಿದರೆ ಏನೂ ಆಗುವುದಿಲ್ಲ. ಪ್ರತಿಯೊಬ್ಬ ಅಧಿಕಾರಿಯು ಮೊದಲುಗೊಂಡು-ನೌಕರಿ ವರ್ಗವೆಲ್ಲಾ ಖಾದೀ ಹಾಕುವಂತೆ ತಾವು ಆಜ್ಞೆ ಮಾಡಬೇಕು. ಆಗ ಅವರಿಗೆ ಈ ಖಾದೀ ವಸ್ತ್ರಧಾರಿಗಳ ಬಗ್ಗೆ ಅವರೂ ನಾವೂ ಎಲ್ಲರೂ ಒಂದೇ ಅನ್ನತಕ್ಕಂಥ ಮನೋಭಾವ ಬೆಳೆಯುವುದಕ್ಕೆ ಅವಕಾಶವಿರುತ್ತದೆ. ಈಗ ಆ ರೀತಿ ಇಲ್ಲದೆ ಇರುವುದರಿಂದ ನಾವು ಒಂದು ಹೇಳಿದರೆ—ಈ ಅಧಿಕಾರಿಗಳು ಅವರೇ ಒಂದು ಹೇಳುತ್ತಾರೆ. ಹೀಗಾಗಿ ಈ ದಿವಸ ನಮಗೂ ಈ ಅಧಿಕಾರಿಗಳಿಗೂ ಕೂಡದೆ ಹೋಗಿ ಯಾವ ಕೆಲಸ ಕಾರ್ಯಗಳೂ ಸುಗಮವಾಗಿ ನಡೆಯುತ್ತಿಲ್ಲ. ಆದುದರಿಂದ ಸರ್ಕಾರದವರು ಎಲ್ಲಾ ನೌಕರಿ ವರ್ಗದವರೂ ಕಡ್ಡಾಯವಾಗಿ ಖಾದಿಯನ್ನು ಧರಿಸಲೇಬೇಕೆಂದು ಒಂದು ಆಜ್ಞೆಮಾಡಬೇಕೆಂದು ಹೇಳುತ್ತೇನೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಮಂತ್ರಿಗಳನ್ನು ನೋಡುವುದಕ್ಕಾಗಿ ಬಂದಾಗ ಅಥವಾ ಮಂತ್ರಿಗಳ ಮುಂದೆ ಬರಬೇಕಾದ ಸಂದರ್ಭ ಬಂದಾಗ ಮಾತ್ರ ಅವರು ಖಾದಿ ಧಾರಿಗಳಾಗಿರಬೇಕೋ? ಅಥವಾ. . . .

ಶ್ರೀ ಟಿ. ಹನುಮಯ್ಯ.—ಸ್ವಾಮಿ, ಇನ್ನು ಈ ಮದ್ಯಪಾನ ನಿರೋಧದಿಂದ ದೇಶದಲ್ಲಿ ಬಹಳ ಜನಗಳಿಗೆ ಅನುಕೂಲವಾಗಿದೆ. ಇದನ್ನು ನಾವು ದೇಶಾದ್ಯಂತವೂ ಕೂಡಲೇ ಜಾರಿಗೆ ತರಬೇಕೆಂದು ಪದೇ ಪದೇ ಒತ್ತಾಯಮಾಡುತ್ತಿದ್ದರೂ ತಾವು ಕೆಲವು ಜಿಲ್ಲೆಗಳಲ್ಲಿ ಮಾತ್ರ ಇದನ್ನು ಜಾರಿಗೆ ತಂದಿದ್ದೀರಿ. ಈ ಹಿಂದೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಈ ಪಾನ ನಿರೋಧವನ್ನು ಬಹಳ ಜೋರಿನಿಂದ ಜಾರಿಗೆ ತರುವುದಾಗಿ ಭರವಸೆ ಕೊಟ್ಟಿದ್ದರು. ಆದರೆ ಇಷ್ಟು ವರ್ಷಗಳು ಕಳೆದಿದ್ದಾಗ್ಗೂ ಇದು ಒಂದು ಹೆಜ್ಜೆ ಸಹ ಮುಂದಕ್ಕೆ ಹೋಗಿಲ್ಲ ಅನ್ನತಕ್ಕಂಥ ವಿಚಾರವನ್ನು ತಿಳಿಸಲು ತುಂಬ ವಿಷಾದಪಡುತ್ತೇನೆ; ಮತ್ತು ಇದು ಬಹಳ ಶೋಚನೀಯವಾದಂಥ ವಿಷಯ. ಈಗಲಾದರೂ ಸಹ ತಾವು ಕೂಡಲೇ ಇದನ್ನು ದೇಶಾದ್ಯಂತವೂ ಜಾರಿಗೆ ತರತಕ್ಕದ್ದು ಒಳ್ಳೆಯದೆಂದು ನಾನು ತಮ್ಮಲ್ಲಿ ಬಿನ್ನವಿಸಿಕೊಳ್ಳುತ್ತೇನೆ.

ಮದ್ಯಪಾನ ನಿರೋಧವನ್ನು ಜಾರಿಗೆ ತಂದಿರುವುದರಿಂದ ಜನರಲ್ಲಿ ಏನೂ ಸುಧಾರಣೆಯಾಗಿಲ್ಲವೆಂದು ಕೆಲವರು ಹೇಳುತ್ತಾರೆ. ಆದರೆ ನಾನು ಖಂಡಿತವಾಗಿ ಹೇಳುತ್ತೇನೆ, ಮದ್ಯಪಾನ ಮಾಡದೇಯಿರುವವರು ಸುಖವಾಗಿದ್ದಾರೆ. ಮೊದಲು ಯಾರು ಕುಡಿಯುತ್ತಿದ್ದರೋ ಅವರನ್ನು ಕೇಳಿದರೆ ಖಂಡಿತವಾಗಿಯೂ ಒಪ್ಪಿಕೊಳ್ಳುತ್ತಾರೆ. ಕೆಲವು ಪೋಲೀಸ್ ಅಧಿಕಾರಿಗಳು, ಯಾರು ಕುಡಿಯುವುದಿಲ್ಲವೋ ಅವರನ್ನು ಹಿಡಿಯುತ್ತಾರೆ, ಕೇಸು ಹಾಕುತ್ತಾರೆ, ಕುಡಿಯುವವರನ್ನು ಹಿಡಿಯುವುದಿಲ್ಲ. ಏಕೆಂದರೆ, ಅವರಿಂದ ಮಾಮೂಲು ಬರುತ್ತದೆ. ಇದು ತಪ್ಪಿ ಖಂಡಿತವಾಗಿ ದಕ್ಷತೆಯಿಂದ ಕೆಲಸ ಮಾಡಬೇಕು. ಪೋಲೀಸ್ ಇಲಾಖೆಯಲ್ಲಿ ಸರಿಯಾಗಿ ಕೆಲಸ ನಡೆಯುತ್ತಿಲ್ಲವೆಂದು ಧೈರ್ಯವಾಗಿ ಹೇಳುತ್ತೇನೆ. ಇಡೀ ಮೈಸೂರು ದೇಶದಲ್ಲಿ, ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ಜನರಿಗೆ ಏನು ಆಶ್ವಾಸನ ಕೊಟ್ಟಿದ್ದೆವೋ ಅದನ್ನು ನೆರವೇರಿಸಬೇಕಾದರೆ, ಪಾನನಿರೋಧವನ್ನು ದೇಶದಲ್ಲೆಲ್ಲಾ ಜಾರಿಗೆ ತರಬೇಕು. ಇದರಿಂದ ಬಡವರು ಉದ್ಧಾರವಾಗುತ್ತಾರೆ. ಜಾರಿಗೆ ತಂದಿರುವ ಪ್ರದೇಶಗಳಲ್ಲಿ ಬಡವರು ಬಹಳ ಉತ್ತಮಸ್ಥಿತಿಗೆ ಬಂದಿದ್ದಾರೆ.

ಭೂ ಸುಧಾರಣೆಯ ಸಂಬಂಧವಾಗಿ ಮಾನ್ಯ ರೆವಿನ್ಯೂ ಮಂತ್ರಿಗಳು ಒಂದು ನಿಯಮ ಮಾಡಿದ್ದಾರೆ. ಅದೇನೆಂದರೆ, ಜಮೀನನ್ನು ಹಂಚುವಾಗ ಸಾಮಾನ್ಯ

ವಾಗಿ ಐದೆಕರೆ ಜಮೀನಿರುವವರಿಗೆ ಜಮೀನು ಕೊಡಬಾರದೆಂದು ಮಾಡಿದ್ದಾರೆ. ಹರಿಜನರಿಗೂ ಮತ್ತು ಬಡ ಜನರಿಗೂ ಐದೆಕರೆ ಸಾಕಾಗುವುದಿಲ್ಲ. ಉದಾಹರಣೆಗೆ, ಚಳ್ಳಕೆರೆ ತಾಲ್ಲೂಕಿನಲ್ಲಿ ಐದೆಕರೆಯಲ್ಲಿ ಒಂದು ಸಂಸಾರ ನಡೆಸುವುದಕ್ಕಾಗುವುದಿಲ್ಲ. ಅಲ್ಲಿ ಖುಷ್ಕಿ ಜಮೀನಿನಲ್ಲಿ ಹುರುಳಿಕಾಳು ಬೆಳೆಯುತ್ತಾರೆ. ಅಂಥ ಪ್ರದೇಶದಲ್ಲಿ ಐದೆಕರೆಯಲ್ಲ ಇಪ್ಪತ್ತೈದೆಕರೆ ಕೊಟ್ಟರೂ ಜೀವನ ನಡೆಸುವುದು ಕಷ್ಟವಾಗುತ್ತದೆ. ಅಮಲ್ದಾರರಿಗೆ ಜಮೀನಿಗೆ ಅರ್ಜಿ ಕೊಟ್ಟರೆ, ಅವರೂ ಷೇಕ್‌ದಾರರೂ 'ನಿಮ್ಮ ಮನೆಗೆ ಐದೆಕರೆ ಜಮೀನಿದೆ ಹೇಗೆ ಕೊಡುವುದು?' ಎಂದು ಕೇಳುತ್ತಾರೆ. ಸರ್ಕಾರದವರು ಈ ನಿಯಮ ಮಾಡಿರುವುದರಿಂದ ಒಬ್ಬರ ಮೇಲೆ ಇನ್ನೊಬ್ಬರು ಅರ್ಜಿ ಬರೆದು ತೊಂದರೆಯಾಗುತ್ತದೆ. ಹಳ್ಳಿಗಳಲ್ಲಿ ಜೀವನ ಮಾಡುವುದು ಕಷ್ಟವಾಗುತ್ತದೆ. ಹಳ್ಳಿಗಳಲ್ಲಿ ಜೀವನಕ್ಕೆ ವ್ಯವಸಾಯವಲ್ಲದೆ ಬೇರೆ ಮಾರ್ಗವಿರುವುದಿಲ್ಲ. ಮನೆಯವರೆಲ್ಲರೂ ಇದರಿಂದಲೇ ಜೀವನ ಮಾಡಬೇಕು. ನಮ್ಮ ದೇಶ ವ್ಯವಸಾಯದ ದೇಶ. ಇಂಥಾ ದೇಶದಲ್ಲಿ ನಿಜವಾಗಿ ವ್ಯವಸಾಯ ಮಾಡತಕ್ಕ ಜನರಿಗೆ ಜಮೀನು ಕೊಡುವುದು ಬಹಳ ಅಗತ್ಯ. ಕೇವಲ ಐದೆಕರೆಯಿದ್ದರೆ ಖಂಡಿತವಾಗಿ ಅವನಿಗೆ ಮೂರು ತಿಂಗಳ ಗ್ರಾಸವಾಗುವುದಿಲ್ಲ. ಮಾನ್ಯ ರೆವಿನ್ಯೂ ಮಂತ್ರಿಗಳು ಬಹಳ ಉದಾರ ಮನಸ್ಸಿನಿಂದ ಹಳ್ಳಿಗಾಡಿನಲ್ಲಿರತಕ್ಕ ರೈತರಿಗೆ ಹರಿಜನರಿಗೆ ಸಾಕಾಗುವಷ್ಟು ಜಮೀನು ಕೊಡುವುದಕ್ಕೆ ಮನಸ್ಸು ಮಾಡುತ್ತಾರೆಂದು ನಂಬಿ ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ದೇಶದಲ್ಲಿ ಮುಕ್ಕಾಲುಭಾಗ ವ್ಯವಸಾಯಮಾಡತಕ್ಕ ಜನರಿರುವುದು. ಆದಕಾರಣ ಗ್ರಾಮಾಂತರಗಳಲ್ಲಿ ಹೆಚ್ಚಿನ ಗಮನ ಕೊಡುವುದು ಅಗತ್ಯ.

ನ್ಯಾಷನಲ್ ಎಕ್ಸ್‌ಟೆನ್‌ಷನ್ ಬ್ಲಾಕ್ಸ್ ಎಂದು ಮಾಡುತ್ತಾರೆ. ಯಾವ ತಾಲ್ಲೂಕಿನಲ್ಲಿ ಅಥವಾ ಸ್ಥಳದಲ್ಲಿ ಕೊಡಬೇಕೋ ಅಲ್ಲಿ ಕೊಡುವುದಿಲ್ಲ. ಕೇಂದ್ರ ಪ್ಲಾನಿಂಗ್ ಕಮಿಷನ್ ಕೂಡ ಇಂಥಿಂಥಾ ಅನಾನುಕೂಲವಿದ್ದರೆ ಅಂಥಾ ಸ್ಥಳಕ್ಕೆ ಕೊಡಬೇಕೆಂದು ಮಾಡಿದ್ದಾರೆ. ಆದರೂ ನಮ್ಮ ಸರ್ಕಾರದವರು ಮನಸ್ಸು ಮಾಡಿಲ್ಲ. ಇನ್ನು ಮುಂದಾದರೂ ಮಾಡುತ್ತಾರೆಂದು ಭರವಸೆಯಿಟ್ಟುಕೊಂಡಿದ್ದೇನೆ.

ಸಹಕಾರ ಸಂಘಗಳಿಗೆ, ಆಯಾ ಪ್ರದೇಶಗಳಲ್ಲಿ ಕೆಲಸಮಾಡತಕ್ಕ ಉದ್ಯಮಗಳಿಗೆ ಸರ್ಕಾರದವರು ಸಹಾಯಮಾಡುವುದು ಕರ್ತವ್ಯ; ಈ ವಿಷಯದಲ್ಲಿ ಭರವಸೆಯನ್ನೂ ಕೊಟ್ಟಿದ್ದಾರೆ. ಆದರೆ ಯಾರು ಮುಂದೆಬಂದು ಸಹಕಾರ ತತ್ವದಮೇಲೆ ಕೆಲಸಮಾಡುತ್ತೇವೆಂದು ಬರುತ್ತಾರೋ ಅಂಥವರಿಗೆ ಈಗ ಖಂಡಿತವಾಗಿ ಸಹಾಯ ಮಾಡುತ್ತಿಲ್ಲ. ಉದಾಹರಣೆ, ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಒಂದು ಸಹಕಾರ ಸಂಘವನ್ನು ಹರಿಜನರೇಮಾಡಿ ಆ ಕೈಗಾರಿಕೆಯಿಂದ ನೂರಾರು ಜನರು ಜೀವನ ಮಾಡುತ್ತಿರುವುದನ್ನು ಅನೇಕರು ನೋಡಿದ್ದಾರೆ. ಇಂಥ ಒಂದು ಸಂಘಕ್ಕೆ ಸರ್ಕಾರದಿಂದ ಪ್ರೋತ್ಸಾಹ ಸಿಕ್ಕಿಲ್ಲ. ಈ ಸಾರಿಕೂಡ ಸಿಕ್ಕದೇಯಿರುವುದನ್ನು ನೋಡಿ ತುಂಬ ವ್ಯಸನವಾಗುತ್ತದೆ. ಸರ್ಕಾರದವರು ಯಾವ ಒಳ್ಳೆಯ ಧ್ಯೇಯದಿಂದ ಕೆಲಸ ಮಾಡುವುದಕ್ಕೆ ಹೊರಟರೋ ಆ ಧ್ಯೇಯವನ್ನು ಮುಂದುವರಿಸಿ ನೆರವಾಗಬೇಕಾಗಿದೆ. ಜನರು ಜೀವನವನ್ನು ನಡೆಸುವುದನ್ನು ಯೋಚನೆಮಾಡಬೇಕೇ ಹೊರತು ಹಣದ ದೃಷ್ಟಿಯಿಂದ ಸರ್ಕಾರ ಯೋಚನೆ ಮಾಡಬಾರದು. ಜನರೆಲ್ಲರೂ ಸುಖವಾಗಿದ್ದರೆ ದುಡ್ಡು ಬಂದೇಬರುತ್ತದೆ. ಜನತೆಯ ಬೆಂಬಲವಿದ್ದರೆ ಖಂಡಿತ ಸರ್ಕಾರಕ್ಕೆ ಹಣ ಬರುತ್ತದೆ. ಆದುದರಿಂದ ಗ್ರಾಮಾಂತರಗಳಲ್ಲಿರುವ ಜನರಿಗೆ ಹೆಚ್ಚು ಸಹಕಾರ ಸಹಾಯ ಕೊಡುವುದು ಅಗತ್ಯ.

ಅನೇಕ ಗ್ರಾಮಾಂತರ ಪ್ರದೇಶಗಳಲ್ಲಿ ನೀರಿನ ಅವಶ್ಯಕತೆ ಬಹಳವಾಗಿದೆ. ಹಿಂದಿನ ಸರ್ಕಾರದವರು ಹೆಚ್ಚಿನ ಸಹಾಯ ಮಾಡುತ್ತಿದ್ದರು. ಈ ಸರ್ಕಾರ ಮಾಡುತ್ತಿಲ್ಲವೆಂದು ಹೇಳಲು ಬಹಳ ವ್ಯಸನವಾಗುತ್ತದೆ. ಪಟ್ಟಣಗಳಲ್ಲಿ ಕಾಲುಭಾಗ ಜನಸಂಖ್ಯೆ ಇರುವುದು. ಇನ್ನು ಮುಕ್ಕಾಲುಭಾಗ ಜನರು ಗ್ರಾಮಾಂತರಗಳಲ್ಲಿದ್ದಾರೆ. ಆದರೂ ಕೋಟ್ಯಾಂತರ ರೂಪಾಯಿಗಳಷ್ಟು ಹಣವನ್ನು ಪಟ್ಟಣಗಳಿಗೆ ಹಾಕುತ್ತಾರೆ. ಗ್ರಾಮಾಂತರಗಳಲ್ಲಿ ಕಂದಾಯ ತೆರಿಗೆ ಎಲ್ಲವನ್ನೂ ಹಾಕಿದರೂ ಮುಕ್ಕಾಲು ಭಾಗದಷ್ಟಿರುವ ಜನರಿಗೆ ಕುಡಿಯುವ ನೀರಿನ ಭಾವಿಗಳಿಲ್ಲದೆ ತೊಂದರೆಯಾಗಿದೆ. ಅದರಲ್ಲಿಯೂ ಹರಿಜನರಿಗೆ ಭಾವಿಗಳಿಲ್ಲದೆ ಅನೇಕ ಗಲಾಟೆ ಗೊಂದಲಗಳಾಗುತ್ತವೆ. ಆದುದರಿಂದ ನೀರಿನ ಬಾವಿಗಳ ಆವಶ್ಯಕತೆ ಹೆಚ್ಚು. ಇದನ್ನು ಸಾಕಾದಷ್ಟು ಒದಗಿಸಬೇಕೆಂದು ಹೇಳಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಸಿಂಗಾರಿ ಗೌಡ (ನಾಗಮಂಗಲ).—ಸ್ವಾಮಿ, 1955-56 ನೆಯ ಸಾಲಿನ ಆಯವ್ಯಯದ ತಃಖ್ತೆಯನ್ನು ಸ್ವಾಗತಿಸುತ್ತೇನೆ. ಇದನ್ನು ಮಂಡಿಸುವಾಗ ಸರ್ಕಾರದವರು ಎರಡು ಹೊಸನೀತಿಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಒಂದು ಭೂ ಸುಧಾರಣೆಗೆ ಸಂಬಂಧಪಟ್ಟದ್ದು. ಯಾರಿಗೆ ಜಮೀನಿಲ್ಲವೋ ಅಥವಾ ಯಾರಿಗೆ ಎರಡು ಎಕರೆ ತರಿ, ಎರಡು ಎಕರೆ ಖುಷ್ಕಿ ಜಮೀನಿಗಿಂತ ಕಡಮೆ ಇದೆಯೋ ಅವರಿಗೆ ಅಷ್ಟು ಜಮೀನು ಕೊಡತಕ್ಕದ್ದು ಎಂದು ಒಂದುನೀತಿಯನ್ನು ನಮ್ಮ ಮುಂದಿಟ್ಟಿದ್ದಾರೆ. ಇದು ಬಹಳ ಕಷ್ಟಕರವಾದ ಸಮಸ್ಯೆ. ಒಂದು ದೃಷ್ಟಿಯಿಂದ ಈ ಸುಧಾರಣೆ ಸ್ವಾಗತಾರ್ಹವಾದರೂ ಈಗ ಇಟ್ಟಿರುವ ಪರಿಮಿತಿಯಿಂದ ಹಳ್ಳಿಯ ಜನರಿಗೆ ಬಹಳ ಕಷ್ಟವಾಗಿದೆ. ಎರಡೆಕರೆ ತರಿ, ಅಥವಾ ಐದು ಎಕರೆ ಖುಷ್ಕಿ ಜಮೀನಿನಲ್ಲಿ ಒಂದು ಕುಂಟುಂಬ, ಆ ಕುಟುಂಬ ಭೂಮಿಯನ್ನೇ ಅವಲಂಬಿಸಿಕೊಂಡಿದ್ದರೆ, ಜೀವನ ನಡೆಸುವುದು ಬಹಳಕಷ್ಟ. ಈ ಪರಿಮಿತಿಯನ್ನು ಏನಿಟ್ಟಿದ್ದಾರೋ ಅದನ್ನು ಹೆಚ್ಚುಮಾಡಿ ವ್ಯವಸಾಯವನ್ನೇ ಅವಲಂಬಿಸಿಕೊಂಡಿರುವ ಕುಟುಂಬಗಳಿಗೆ ಸಹಾಯ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಎರಡನೆಯದಾಗಿ, ವಿದ್ಯಾಸುಧಾರಣೆಯ ಅಂಗವಾಗಿ, ಯುವಕರಲ್ಲಿ, ವಿದ್ಯಾರ್ಥಿಗಳಲ್ಲಿ ಆರೋಗ್ಯ ಮತ್ತೂ ಸಹಬಾಳ್ವೆ ಬೆಳೆದು ಮುಂದೆ ಅವರು ಒಳ್ಳೆಯ ನಾಗರಿಕರಾಗಿ ಬಾಳನ್ನು ನಡೆಸಲನುಕೂಲವಾಗುವಂತೆ ಸುಮಾರು ಐದುಲಕ್ಷ ರೂಪಾಯಿಗಳನ್ನು ಸಾರ್ವಜನಿಕ ವಿದ್ಯಾರ್ಥಿನಿಲಯಗಳಿಗೆ ಮೀಸಲಾಗಿಟ್ಟಿರುವುದಕ್ಕಾಗಿ ಸರ್ಕಾರದ ನೀತಿಯನ್ನು ಪ್ರಶಂಸಿಸುತ್ತೇನೆ.

ವಿರೋಧಪಕ್ಷದವರು ಆವಡಿ ಅಧಿವೇಶನದಲ್ಲಾದ socialistic pattern of society ಯ ನಿರ್ಮಾಣಕ್ಕೆ ಸಂಬಂಧಪಟ್ಟ ತೀರ್ಮಾನದ ವಿಷಯವಾಗಿ ಮಾತನಾಡುತ್ತಾ ಇದಕ್ಕೆ ತಮ್ಮದೇ ಆದ ಒಂದು ಅರ್ಥ ವಿವರಣೆಯನ್ನು ಅಥವಾ ವ್ಯಾಖ್ಯಾನವನ್ನು ಕೊಟ್ಟಿದ್ದಾರೆ. ಆದರೆ ನನ್ನ ದೃಷ್ಟಿಯಲ್ಲಿ ಬೇರೆ ದೇಶಗಳಲ್ಲಿ, ಸಮತಾವಾದದ ರಾಷ್ಟ್ರಗಳಲ್ಲಿ ಏನು ನಡೆಯುತ್ತಿದೆಯೋ ಆ ಪರಿಸ್ಥಿತಿಯನ್ನು ತಲೆಯಲ್ಲಿಟ್ಟುಕೊಂಡು ಅನುಕರಿಸುವುದಕ್ಕಿಂತ ನಮ್ಮ ಸಮಾಜದ ಪರಿಸ್ಥಿತಿ ಏನಿದೆಯೋ ಅದಕ್ಕೆ ಹೊಂದಿಸಿಕೊಂಡು ಹೋದರೆ ಸರಿಹೋಗುತ್ತದೆ. ಶ್ರೀಮಾನ್ ಮುಲ್ಕಾ ಗೋವಿಂದರೆಡ್ಡಿಯವರು ಆರ್ಥಿಕ ಸಮಾನತೆಯನ್ನು

(ಶ್ರೀ ಕೆ. ಸಿಂಗಾರಿಗೌಡ.)

ಪ್ರತಿಪಾದಿಸುವಾಗ ಬೇರೆ ದೇಶಗಳ ವಿಚಾರವನ್ನು ತಮ್ಮ ತಲೆಯಲ್ಲಿಟ್ಟುಕೊಂಡಿದ್ದಾರೆಂದು ಕಾಣುತ್ತದೆ. ಅದನ್ನೇ ಇಲ್ಲಿಗೆ ಅನ್ವಯಿಸುವುದು ಸರಿಯಾದ ನೀತಿಯಲ್ಲ. ಪ್ರಜಾಪ್ರಭುತ್ವ ಬಾಳಬೇಕಾದರೆ, ಬೆಳೆಯಬೇಕಾದರೆ, ಆ ದೇಶದಲ್ಲಿ ವಿದ್ಯಾಭ್ಯಾಸ ಮತ್ತು ಆರ್ಥಿಕ ಸಮಾನತೆ ಬಹುಮುಖ್ಯವಾಗಿ ಬೇಕಾಗಿದೆ. ಆದರೆ ತಜ್ಞರ ಅಭಿಪ್ರಾಯದಲ್ಲಿ ಆರ್ಥಿಕ ಸಮಾನತೆ ಎನ್ನುವುದು ಬಿಸಿಲು ಕುದುರೆ, ಎಂದು ಹೇಳುತ್ತಾರೆ. ಇಡೀ ವಿಶ್ವದ ಇತಿಹಾಸದಲ್ಲಿ ಇದನ್ನು ಯಾರೂ ಸಾಧನೆ ಮಾಡಿಲ್ಲ. ಒಟ್ಟಿನಲ್ಲಿ, ನಾವು ಅನುಸರಿಸುತ್ತಿರುವ ನೀತಿ ಸರ್ಕಾರಕ್ಕೆ ಪ್ರತಿವರ್ಷವೂ ಏನು ಉತ್ಪತ್ತಿ ಬರುತ್ತದೆಯೋ ಅದನ್ನು ಯಾವರೀತಿ ವಿನಿಯೋಗ ಮಾಡುತ್ತಿದ್ದಾರೆಂಬುದನ್ನು ನೋಡುವುದು. Socialistic pattern of society ಎಂದು ಆವಡಿಯ ಅಧಿವೇಶನದಲ್ಲಿ ಏನು ಒಂದು ನಿರ್ಣಯವಾಯಿತೋ ಅದಕ್ಕನ್ವಯಿಸಿಕೊಂಡು ಹೋಗುತ್ತಿದ್ದಾರೆಯೋ ಎನ್ನುವುದನ್ನು ನೋಡಬೇಕು. ಮುಖ್ಯವಾಗಿ ಈ ದಿವಸ ನಮ್ಮ ದೇಶದಲ್ಲಿ ಬಡತನವಿದೆ. ಇದು ಹೋಗಿ ಸರಿಸಮಾನತೆ ಬರಬೇಕಾದರೆ ಜನರಲ್ಲಿ ಯಾರು ಯಾರು ಯಾವಯಾವ ಕಸಬುಗಳಲ್ಲಿ ನಿರತರಾಗಿದ್ದರೋ ಅವರ ಉತ್ಪತ್ತಿ ಹಾಗೂ ವರಮಾನ ಹೆಚ್ಚಬೇಕು. ಅವರ ಜೀವನದಲ್ಲಿ ತೃಪ್ತಿ, ಶಾಂತಿ ಸಹನೆ ಇರಬೇಕು. ಇಂಥಾ ಸಮಾಜರಚನೆಯ ಕಡೆ ನಾವು ನೋಡಬೇಕೇ ಹೊರತು, ಬೇರೆ ಯಾವುದೋ ದೇಶದಲ್ಲಿರುವುದು ನಮ್ಮ ಪರಿಸ್ಥಿತಿಗನುಗುಣವಾಗುವುದಿಲ್ಲವೆಂಬುದನ್ನು ನಿವೇದನೆ ಮಾಡುತ್ತೇನೆ.

ಸ್ವಾಮಿ, ಸುಮಾರು ಐದುಕೋಟಿ ರೂಪಾಯಿಗಳನ್ನು ನೀರಾವರಿ ಕಾಮಗಾರಿಗಳಿಗೆ ಒದಗಿಸಿದ್ದಾರೆ. ಈ ಸಂಬಂಧದಲ್ಲಿ ಒಂದು ಸಲಹೆ. ದೊಡ್ಡ ದೊಡ್ಡ ಕಾಮಗಾರಿಗಳಿಗೆ ಹಣವನ್ನೊದಗಿಸುವುದು ಅತ್ಯಗತ್ಯವಾಗಿದ್ದರೂ ಇಂದು ನಮ್ಮ ದೇಶದ ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಳ್ಳಬೇಕಾದುದು ಅಗತ್ಯ. ಸಣ್ಣಪುಟ್ಟ ಕೆರೆಗಳ ಜೀರ್ಣೋದ್ಧಾರವಾಗಬೇಕೆಂದು ಅನೇಕ ವರ್ಷಗಳಿಂದ ಶಾಸನ ಸಭೆಗಳಲ್ಲಿ ಒತ್ತಾಯ ಮಾಡುತ್ತಿದ್ದಾರೆ. ಸುಮಾರು ಹನ್ನೆರಡು ಸಾವಿರಕ್ಕೆ ಮೇಲ್ಪಟ್ಟು ಒಡೆದುಹೋಗಿರುವ ಕೆರೆಗಳಲ್ಲಿ ಸುಮಾರು ಐನೂರು ಕೆರೆಗಳನ್ನು ಜೀರ್ಣೋದ್ಧಾರ ಮಾಡಿದ್ದೇವೆ, ಸುಮಾರು 800 ಕೆರೆಗಳನ್ನು ಡೀಸಿಲ್ಟ್ ಮಾಡಿದ್ದೇವೆಂದು ಹೇಳಿದ್ದಾರೆ. ದೊಡ್ಡ ದೊಡ್ಡ ಕೆರೆಗಳನ್ನು ಜೀರ್ಣೋದ್ಧಾರ ಮಾಡಿ ರೈತರಿಗೆ ಅನುಕೂಲಮಾಡುತ್ತೇವೆ ಎನ್ನುವುದಕ್ಕಿಂತ, ಜನಸಂದಣಿ ಎಲ್ಲಿ ಜಾಸ್ತಿ ಇದೆ, ಎಲ್ಲಿ ಅಭಾವ ಪ್ರದೇಶವಿದೆ, ಅಂಥ ಕಡೆ ಸಣ್ಣಪುಟ್ಟ ಕೆರೆಗಳ ಕೆಲಸಗಳನ್ನು ಮಾಡಿದರೆ ಜನರು ಅದರಿಂದ ಉಪಯೋಗ ಪಡೆದು ಅವರ ಸಂಪತ್ತನ್ನು ಹೆಚ್ಚಿಸುವುದಕ್ಕೂ ಹೆಚ್ಚು ಬೆಳೆ ಬೆಳೆಯುವುದಕ್ಕೂ ಅವಕಾಶ ಕಲ್ಪಿಸಿದ ಹಾಗಾಗುತ್ತದೆ. ಆದುದರಿಂದ ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾಧಾನ್ಯಕೊಟ್ಟು ಸಣ್ಣ ಪುಟ್ಟ ಕೆರೆಗಳ ಜೀರ್ಣೋದ್ಧಾರ ಹೆಚ್ಚು ಮಾಡಬೇಕೆಂದು ಸಲಹೆ ಮಾಡುತ್ತೇನೆ. ಮರಾಮತ್ತು ಇಲಾಖೆಯಲ್ಲಿ ಸುಮಾರು ಆರೇಳು ವರ್ಷಗಳಿಂದ ಕೆಲಸಗಳನ್ನು ತೆಗೆದುಕೊಂಡಿದ್ದು, ಒದಗಿಸಿದ ಹಣ ಪೂರ್ಣವಾಗಿ ವಿನಿಯೋಗವಾಗದೇ ಇದ್ದರೂ, ರಿವೈಸ್ಡ್ ಅಂದಾಜು ಕಳುಹಿಸಿದ ಮೇಲೆ ಎರಡು ಮೂರು ವರ್ಷವಾದರೂ ಮುಗಿಯುವ ಸ್ಥಿತಿಯಲ್ಲಿರುವುದಿಲ್ಲ. ಯಾರಿಗೆ ಅಧಿಕಾರ ಕೊಟ್ಟಿದ್ದಾರೆಂಬುದೂ ಕೂಡ ತಿಳಿಯುವುದಿಲ್ಲ. ಹೀಗೆ ಮಾಡಿದರೆ ಜನತೆಯ ಮನಸ್ಸಿನಲ್ಲಿ ಜಿಗುಪ್ಸೆ ಹುಟ್ಟಲು ಕಾರಣವಾಗುತ್ತದೆ. ಸರ್ಕಾರ ಒದಗಿಸಿದ ಹಣವನ್ನು ಸರಿಯಾಗಿ ವಿನಿಯೋಗ ಮಾಡಿದರೆ ಅದರ ಫಲ ರೈತರಿಗೆ ದೊರೆಯುತ್ತದೆ. ಆದಕಾರಣ ಈಗಿರುವ ಮಾರ್ಗವನ್ನು ತಿದ್ದಿ ಉತ್ತಮಪಡಿಸಬೇಕು. ಎರಡನೆಯದಾಗಿ ಯಾವುದಾದರೂ ಯೋಜನೆಯ ಅಂದಾಜು ಮಾಡಿದರೆ, ಐದಾರು ವರ್ಷವಾದರೂ, ನಾವು ಹಿಂಬಾಲಿಸಿಕೊಂಡು ಹೋದರೂ, ಕಾರಣಾಂತರಗಳಿಂದ ಕೆಳಗೆ ಮೇಲೆ ತಿರುಗಾಡುವುದು ತಪ್ಪಿಲ್ಲ.

ಮೇಲ್ಪಟ್ಟ ಆಫೀಸುಗಳಿಗೆ ಕೆಳಗಿನ ಡಿವಿಜನ್ ಆಫೀಸುಗಳಿಂದ ಏನೇನು ಮಾಹಿತಿಗಳಿವೆಯೋ ಅವುಗಳನ್ನು ಅಲ್ಲಿಯ ನೌಕರರು ತಿಳಿದುಕೊಳ್ಳುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಯಾವುದಾದರೂ ತರಗತಿಗಳನ್ನು ಏರ್ಪಾಡು ಮಾಡಿ ಟ್ರೈನಿಂಗ್ ಕೊಟ್ಟಪಕ್ಷದಲ್ಲಿ ರಿಕಾರ್ಡ್‌ಗಳು ಹಿಂದಕ್ಕೆ ಮುಂದಕ್ಕೆ ಓಡಾಡುವುದು ತಪ್ಪಿ ನಮಗೆ ಶ್ರಮತಪ್ಪಿ ಸರ್ಕಾರಕ್ಕೂ ಒಂದು ಅನುಕೂಲವಾಗುತ್ತದೆ.

ವಿವಿಧೋದ್ದೇಶ ಸಹಕಾರ ಸಂಘಗಳು ಪ್ರಾರಂಭಿಸಿ 5 ವರ್ಷಗಳಾಗಿ 6ನೆ ವರುಷ ನಡೆಯುತ್ತಿದೆ. ಸಹಕಾರ ಸಂಘಗಳು ಈ ತಹಲ್‌ವರೆಗೂ ವ್ಯಾಪಾರ ಉದ್ಯೋಗವನ್ನು ನಡೆಸಿಕೊಂಡು ತಮ್ಮ ಕಾಲಿನಮೇಲೆ ನಿಂತುಕೊಂಡು ಬಂದಿವೆ. ಸರಕಾರದವರು ಯಾವ ಒಂದು ಸೌಲಭ್ಯವನ್ನಾಗಲೀ ಸಲಹೆಯನ್ನಾಗಲೀ ಸಹಕಾರ ಸಂಘಗಳ ಮುಂದೆ ಇಟ್ಟಿಲ್ಲ. ಸಹಕಾರ ಸಂಘಗಳ ಆಡಳಿತ, ರೈತನ ಜೀವನದ ಎಲ್ಲಾ ಅಂಶಗಳನ್ನೂ ಆವರಿಸಿಕೊಂಡ ಪಕ್ಷದಲ್ಲಿ ಅಭಿವೃದ್ಧಿ, ಆದೀತು, ರೈತನ ಜೀವನ ನೆಮ್ಮದಿಯಾಗಿ ಬೆಳೆ ಹಸನಾದೀತು ಎಂದು ಹೇಳುತ್ತೇನೆ. ಎರಡನೆದಾಗಿ ಸಹಕಾರ ಸಂಘಗಳನ್ನು ಬೇರೆ ಬೇರೆ ದೃಷ್ಟಿಯಿಂದ ರೈತರ ಉಪಯೋಗಕ್ಕೆ ಉಪಯೋಗಿಸಿಕೊಳ್ಳಬೇಕು. ಈ ದೃಷ್ಟಿಯಿಂದ ಅನೇಕ ವಿಧದಲ್ಲಿ ಸಹಕಾರ ಸಂಘಗಳ ಕಾರ್ಯ ನಡೆಯುವಂತೆ ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ಪ್ರಾರ್ಥಿಸುತ್ತೇನೆ. ಒಂದೇ ತಾಲ್ಲೂಕಿನಲ್ಲಿ 5-6 ಸಹಕಾರ ಸಂಘಗಳು ನಿರ್ಮಾಣವಾಗುವುದಕ್ಕಿಂತ ಒಂದೇ ಸಹಕಾರ ಸಂಘ ಎಲ್ಲಾ ಆಡಳಿತಗಳನ್ನೂ ನಡೆಸುವುದಕ್ಕೆ ಪ್ರಯತ್ನ ಪಡುವುದಾದರೆ ಖರ್ಚು ಕಮ್ಮಿ ಆದೀತು ಮತ್ತು ರೈತರಿಗೆ ಅನುಕೂಲವಾಗಬಹುದು ಎಂದು ಆಶಿಸುತ್ತೇನೆ.

ಕೊನೆಯದಾಗಿ ಎಲ್ಲಾ ಹಳ್ಳಿಗಾಡಿನ ಪ್ರಾಂತ್ಯದಲ್ಲಿ ಕುಡಿಯುವ ನೀರಿನ ಅಭಾವ ಜಾಸ್ತಿ ಇದೆ ಮತ್ತು ಸಂಚಾರ ಸೌಕರ್ಯಗಳ ಅಡಚಣೆಯಿಂದ ಬಹಳ ಕಷ್ಟವಾಗಿದೆ. Rural Development ಬಾಬಿನಲ್ಲಿ ಹತ್ತು ಲಕ್ಷ ರೂಪಾಯಿಗಳನ್ನು ಕುಡಿಯುವ ನೀರಿಗಾಗಿಯೂ ನಾಲ್ಕು ಲಕ್ಷ ರೂಪಾಯಿಗಳನ್ನು ಸಂಚಾರ ಸೌಕರ್ಯಕ್ಕಾಗಿಯೂ ಮಾತ್ರ ಒದಗಿಸಿದ್ದೀರಿ. ಈ ಹಣ ಸಾಲದು. ಆದರೆ ಅಲ್ಲಿಯ ಜನರು ಮುಂದಕ್ಕೆ ಬರಬೇಕಾದರೆ, ಅವರ ಜೀವನದಲ್ಲಿ ಆಸಕ್ತಿ ಹುಟ್ಟಬೇಕಾದರೆ, ಮತ್ತು ಅವರ ಜೀವನದಲ್ಲಿ ಚೈತನ್ಯ ಮೂಡಬೇಕಾದರೆ ಹಳ್ಳಿಗಾಡಿನವರಿಗೆ ಕುಡಿಯುವ ನೀರಿನ ವ್ಯವಸ್ಥೆ, ಸಂಚಾರ ಮಾರ್ಗಗಳ ಮತ್ತು ನೀರಾವರಿ ಕಾಮಗಾರಿಗಳ ವ್ಯವಸ್ಥೆ ಆದಷ್ಟು ಜಾಗ್ರತೆ ಮಾಡಿಸಬೇಕೆಂದು ಹೇಳಿ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಸಭಾಪತಿಗಳೇ ಸ್ವಾಮಿ, ಈ ವರುಷದ ಈ ಬಜೆಟ್ಟನ್ನು ಬಹಳವಾಗಿ ಸ್ವಾಗತಿಸುತ್ತೇನೆ. ಅಂದರೆ ಹೃತ್ಪೂರ್ವಕವಾಗಿ ಸ್ವಾಗತ ಕೊಡುತ್ತೇನೆ. ಯಾಕೆ ಎಂದು

ಹೇಳಿದರೆ ಇದರಲ್ಲಿ ಅನೇಕ ವ್ಯವಸಾಯ ಕೆಲಸಗಳಿಗೂ ಮತ್ತು ದೊಡ್ಡ ದೊಡ್ಡ ನೀರಾವರಿಗಳ ಅಭಿವೃದ್ಧಿಗೆ ಹೆಚ್ಚಿಗೆ ಹಣ ಒದಗಿಸಿರುವುದರಿಂದ ಖೋತಾ ಬಡ್ಜೆಟ್ ಆಗಿರುವುದು ಸ್ವಾಭಾವಿಕ ಎಂದು ನನ್ನ ಭಾವನೆ. ನಾವು ಯಾವುದಾದರೂ ಉತ್ಪನ್ನ ಮಾಡಬೇಕಾದರೆ ಮೊದಲು ಕಷ್ಟಪಟ್ಟು ದುಡ್ಡು ಖರ್ಚುಮಾಡಬೇಕಾಗು ತ್ತದೆ. ಧೈರ್ಯವಾಗಿ ಸಾಲ ತೆಗೆದುಕೊಳ್ಳಬೇಕು. ಹಾಗೆ ಮಾಡದೇಇದ್ದರೆ ವಿಧಿಯಿಲ್ಲ. ಒಂದು ಗುರಿ ಯನ್ನು ಮುಟ್ಟಬೇಕಾದರೆ ಹೊಣೆಗಾರಿಕೆಯಿಂದ ಒಂದು ಕೆಲಸವನ್ನು ಮಾಡುವುದಕ್ಕೆ ಸಿದ್ಧವಾಗಿದ್ದರೆ ಆ ಗುರಿಯನ್ನು ಮುಟ್ಟುತ್ತೇವೆ. ಇಲ್ಲದಿದ್ದರೆ ಅದನ್ನು ಮುಟ್ಟುವುದಕ್ಕಾಗುವುದಿಲ್ಲ. ಈ ದೃಷ್ಟಿಯಿಂದ ನೋಡಿದರೆ ಅದನ್ನು ಮಾಡಿರುವುದು ಯೋಗ್ಯ ಮತ್ತು ಸರಿಯಾಗಿದೆ ಎಂದು ನಾನು ಹೃತ್ಪೂರ್ವಕವಾಗಿ ಒಪ್ಪಿಕೊಳ್ಳುತ್ತೇನೆ ಮತ್ತು ಸ್ವಾಗತಿಸುತ್ತೇನೆ. ನಮ್ಮ ಶ್ರೀಮನ್ಮಹಾರಾಜರವರು ಅಪ್ಪಣೆಕೊಡಿಸಿದ ಭಾಷ ಣದ ಮೇಲೆ ಮಾತನಾಡಲು ನನಗೆ ಅವಕಾಶ ಸಿಕ್ಕ ಲಿಲ್ಲ. ಅದರ ವಿಚಾರವಾಗಿ ಒಂದು ಮಾತನ್ನು ಹೇಳಲು ಇಷ್ಟಪಡುತ್ತೇನೆ. ಅವರು ಅಪ್ಪಣೆಕೊಡಿ ಸಿರುವುದರಲ್ಲಿ ಇಷ್ಟೇ ಹೇಳಿರುತ್ತಾರೆ: "ದೇಶವು ಬಹಳ ಅಭಿವೃದ್ಧಿಯಾಗಬೇಕು, ದೇಶದ ಜನರು ಸುಖ ವಾಗಿ ಬಾಳಬೇಕು, ಈ ದೃಷ್ಟಿಯನ್ನು ಮುಂದಿಟ್ಟು ಕೊಂಡು ತಾವು ತಮ್ಮ ತೀರ್ಮಾನವನ್ನು ಕೊಡ ಬೇಕೆಂದು ಹೇಳಿದ್ದಾರೆಯೇ ವಿನಾ ಇವೊತ್ತು ದೇಶದಲ್ಲಿ ಒಂದು ದೊಡ್ಡ ಯೋಜನೆ ಏನು ಇದೆ, ಕರ್ಣಾಟಕ ಭವಿಷ್ಯ ಏನು ಇದೆ ಅದು ಆಗಬಾರದು ಎಂದು ಹೇಳ ಲಿಲ್ಲ. ನಮ್ಮದು ಒಂದು ದೊಡ್ಡದಾದಂಥ ದೇಶ. ಅವನ್ನು ನಾಯಕರು ಒಪ್ಪಿಕೊಂಡು ಹಿಂದಿನಿಂದಲೂ ಸಾರಿಕೊಂಡು ಬಂದಿದ್ದಾರೆ. ಆದರಪೂರ್ವಕವಾಗಿ ನಮ್ಮ ಕಾಂಗ್ರೆಸ್ ಸಮಿತಿಗಳಲ್ಲಿ ತೀರ್ಮಾನ ತೆಗೆದು ಕೊಂಡಿದ್ದಾರೆ. ಹೀಗಿರುವಾಗ ಸ್ವರ ಬದಲಾಯಿಸಿ ದರೆ ನಮ್ಮ ದೇಶದ ಜನರು ಏನು ಹೇಳುತ್ತಾರೆ? ನಮ್ಮ ನಾಯಕರು ತಲೆಯೆತ್ತಿ ತಿರುಗಬೇಕಾದರೆ ನಮ್ಮಲ್ಲಿ ನಂಬಿಕೆ ಬೆಳೆಯಬೇಕಾದರೆ ಆಡಿದ ಮಾತನ್ನು ಸಾಧಿಸಲೇಬೇಕು. ಅದು ನಿಜವಾದ ಧ್ಯೇಯ. ಅದನ್ನು ಬಿಟ್ಟು ಬೇರೆ ದಾರಿಯಲ್ಲಿ ಹೋದರೆ ನಮ್ಮನ್ನು ಯಾರೂ ನಂಬುವುದಿಲ್ಲ. ದೇಶದ ಗತಿ ಏನಾಗಬೇಕು! ಇದರಲ್ಲಿ ದೊಡ್ಡ ಜವಾಬ್ದಾರಿ ಹೊತ್ತಂಥ ಜನರ ಕರ್ತವ್ಯವಿದೆ. ಆದ್ದರಿಂದ ಎಲ್ಲಾ ಸರಿಹೋಗುತ್ತದೆ ಎಂದು ನಾನು ಅಂದುಕೊಂಡಿದ್ದೇನೆ.

ಇನ್ನೊಂದು ವಿಷಯ. ಫ್ರೀಯಾಗಿ ಮಹಾರಾಜರ ಕೃಪಾಶ್ರಯದಲ್ಲಿ ನಮ್ಮ ಸಂಸ್ಥಾನದಲ್ಲಿ ಹೆಣ್ಣುಮಕ್ಕ ಳಿಗೆ ವಿದ್ಯಾಭ್ಯಾಸ ನಡೆದುಕೊಂಡು ಬರುತ್ತಿತ್ತು. ಆಗ್ಗೆ ಹಿಂದುಳಿದ ಜನಾಂಗದ ಮಹಿಳೆಯರು ಬೇಕಾ ದಷ್ಟು ವಿದ್ಯಾವಂತರಾಗಿ ಮುಂದುವರಿದು ಬರು ತ್ತಿದ್ದರು. ಈಗ freeships ಇಲ್ಲ. Scholarship ಮಾತ್ರ ಇಟ್ಟಿರುತ್ತಾರೆ. ಹೀಗಾದರೆ ಸ್ವಲ್ಪ ಯೋಚನೆ ಮಾಡಬೇಕು. ಹೆಣ್ಣುಮಕ್ಕಳು ಮುಂದೆ ಬಂದು ವಿದ್ಯೆ ಕಲಿಯುತ್ತಾರೆಯೇ? ಹೀಗಾದರೆ ನಿಜವಾಗಿಯೂ ನೂರಾರು ವರುಷ ಅವರ progress ಹಿಂದಕ್ಕೆ ಹೋಗುತ್ತದೆ. ಆದ್ದರಿಂದ ತಾವು ಹಾಗೆ ಮಾಡ ಬಾರದು. ಕಾಲೇಜಿನಲ್ಲಿರುವ ಹೆಣ್ಣುಮಕ್ಕಳಿಗೆ ಫೀಜ್ ಪಜಾಮಾಡಿ scholarship ಕೊಡುತ್ತೇವೆ ಎಂದು ಹೇಳುತ್ತೀರಿ. ಅದನ್ನು ಹೆಚ್ಚಿಗೆ ಮಾಡಬೇಕು.

ಶ್ರೀ ಕೆ. ಹನುಮಂತಯ್ಯ (ಮುಖ್ಯ ಮಂತ್ರಿಗಳು).—ಇದು ಸಮಾನ ಅವಕಾಶದ ಕಾಲ. ಗಂಡಸರಿಗೆ ಎಷ್ಟು ಹೆಚ್ಚು ಅವಕಾಶವಿದೆಯೋ ಹೆಂಗಸರಿಗೂ ಅಷ್ಟೇ ಅವ ಕಾಶ ಮಾಡೋಣ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಸಮಾನ ಅವ ಕಾಶವಿದ್ದರೆ ಅಲ್ಲಿ ಐದು ಜನ ಸಾಲಾಗಿ ಕೂತಿದ್ದಾರೆ; ಅದರಲ್ಲಿ ಹೆಂಗಸರು ಇಲ್ಲ; ಹೆಂಗಸರು ಇಲ್ಲಿ ಕೂತು ಕೊಂಡಿದ್ದೇವೆ. ಇದರಿಂದ ನಮಗೆ ಸಮಾನ ಅವಕಾಶ ಸಿಕ್ಕಿದೆಯೇ ಎಂದು ಕೇಳುತ್ತೇನೆ.

ಶ್ರೀ ಕೆ. ಹನುಮಂತಯ್ಯ.—ನೀವು ಮಂತ್ರಿಗಳಾಗು ವುದಕ್ಕೆ ತೊಂದರೆಯಿಲ್ಲ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ನನಗೆ ಮಂತ್ರಿ ಆಗುವ ಆಶೆ ಇಲ್ಲ. ಕೊಡಬೇಕಾದವರಿಗೇ ನೀವು ಕೊಟ್ಟಿಲ್ಲ. ಅದಿರಲಿ. ಈ ಸೌಲಭ್ಯವನ್ನು ಒದಗಿಸು ವುದು ತಮ್ಮ ಕರ್ತವ್ಯವೆಂದು ಹೇಳುತ್ತೇನೆ. ಹೆಂಗಸ ರಿಗೆ freeship ಕೊಟ್ಟಿರುವುದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಇದನ್ನು ಉದಾರ ಮನಸ್ಸಿನಿಂದ ಮುಂದುವರಿಸಿಕೊಂಡು ಬರಬೇಕು. ನಮ್ಮದೇ ಜವಾಬ್ದಾರಿ ಸರ್ಕಾರವಿರುವಾಗ ಹೆಂಗಸ ರಿಗೆ ಈ ರೀತಿ ತೊಂದರೆಯಾಗುವುದು ಸರಿಯಲ್ಲ. Scholarship ಕೊಡುವುದನ್ನು ಹೆಚ್ಚಾಗಿ ಮಾಡ ಬೇಕು. ಇಲ್ಲದಿದ್ದರೆ, ಈಗಿರುವಂತೆ scholar-shipನ್ನು ಡಿಸ್ಟ್ರಿಕ್ಟುಗಳಿಗೆ ಹಂಚುತ್ತಾ ಹೋದರೆ, ಅದರಿಂದ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಬಹಳ ತೊಂದರೆಯಾಗುತ್ತದೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಗಂಡಸರು ದುಡಿ ದದ್ದನ್ನೆಲ್ಲಾ ಹೆಣ್ಣುಮಕ್ಕಳ ಕೈಯ್ಯಲ್ಲೇ ಕೊಡುತ್ತಾರೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಸಂಪಾದನೆ ಕೊಡುವ ವಿಷಯ ಬೇರೆ. ನಮ್ಮವರನ್ನೂ ನಮ್ಮ ಅಣ್ಣ ತಮ್ಮಂದಿರನ್ನೂ ಕೇಳಬೇಕಾಗಿದೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಈಗ ಎಲ್ಲಾ ನಿಮ್ಮ ಕೈಕೆಳಗೆ ನಾವು ಇರುವುದು.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಮತ್ತೆ ದೇವ ಸ್ಥಾನಗಳಿಗೆ Grant ಕೊಡಬೇಕೆಂದು ಅರಿಕೆಮಾಡಿ ಕೊಳ್ಳುತ್ತೇನೆ. ಸಂಸ್ಕೃತಿ ಮತ್ತು ಪೂರ್ವಕಾಲದ ಇತಿಹಾಸವನ್ನು ಪ್ರಚಾರಮಾಡಲು ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಾ ಇದ್ದೀರಿ. ಕಟ್ಟಿ ಸಿರುವ ದೊಡ್ಡ ದೊಡ್ಡ ದೇವಸ್ಥಾನಗಳು ಈಗ ಬಿದ್ದು ಹೋಗುತ್ತಿವೆ; ಹಾಳಾಗುತ್ತಿವೆ. ಅವುಗಳ ಕಡೆ ಒಬ್ಬರೂ ಗಮನಕೊಡುತ್ತಿಲ್ಲ. ಉದಾಹರಣೆಗೆ, ನಮ್ಮ ತಾಲ್ಲೂಕಿನಲ್ಲಿ ನೀರುಕಡಿ, ಜೌಗ್ಗಳದಲ್ಲಿ ಈಶ್ವರ ದೇವ ಸ್ಥಾನವಿದೆ. ಅದು ಜಕಣಾಚಾರ್ಯರ ಕಾಲದಲ್ಲಿ ಕಟ್ಟಿದಂಥ ಪುರಾತನ ದೇವಾಲಯ ಈಗ ಹಾಳಾಗು ತ್ತಿದೆ. Minister ಬಂದಾಗ ಇದರ ಅರಿಕೆಮಾಡಿ ಕೊಂಡೆ. ಅವರು ಈ ದೇವಸ್ಥಾನ ಮುಜರಾಯಿಗೆ ಸೇರಿ ದ್ದರೆ ಅದನ್ನು ಜೀರ್ಣೋದ್ಧಾರ ಮಾಡುವುದಕ್ಕೆ ಹಣ ಒದಗಿಸಲು ಏರ್ಪಾಡು ಮಾಡುತ್ತೇನೆ, ಇಲ್ಲದಿದ್ದರೆ ಆಗುವುದಿಲ್ಲ ಎಂದು ಹೇಳಿದರು. ಗ್ರಾಂಟು ರೂಪ ದಲ್ಲಿ ಸುಮಾರು ಎರಡು ಸಾವಿರ ಅಥವಾ ಮೂರು ಸಾವಿರ ರೂಪಾಯಿಗಳನ್ನು ಕೊಟ್ಟರೂ ಊರಿನವರು ಸೇರಿ ರಿಪೇರಿಮಾಡಿ ಊರ್ಜಿತ ವ್ಯವಸ್ಥೆಗೆ ತರುತ್ತೇವೆ. ಅಂತಹ ದೇವಸ್ಥಾನಗಳು ಹುಡುಕಿದರೂ ಸಿಕ್ಕುವುದಿಲ್ಲ. ಆದ್ದರಿಂದ ಈ ರೀತಿ ಶಿಥಿಲವಾಗಿರುವ ದೇವಸ್ಥಾನ ಗಳನ್ನು ಅಭಿವೃದ್ಧಿ ಸ್ಥಿತಿಗೆ ತರಲು ಈ ವರ್ಷದಲ್ಲಿ ಬಡ್ಜೆಟ್‌ನಲ್ಲಿ ಗ್ರಾಂಟು ಒದಗಿಸಿಕೊಡಬೇಕು ಎಂದು ಅರಿಕೆ ಮಾಡಿಕೊಳ್ಳುತ್ತೇನೆ. ಹೆಣ್ಣುಮಕ್ಕಳಿಗೆ ಎಲ್ಲಾ ಕಡೆಯೂ ಸಮಾನವಾದ ಸ್ಥಾನಗಳನ್ನು ಕೊಡುತ್ತೇವೆ

(ಶ್ರೀಮತಿ ಬಳ್ಳಾರಿ ಸಿದ್ದಮ್ಮ.)

ಎಂದು ಹೇಳಿದ್ದೀರಿ. ಆದರೆ ಟೀಚರ್ ಕೆಲಸ, ಡಾಕ್ಟರ್ ಕೆಲಸ, ನರ್ಸ್ ಮತ್ತು Compounder ಕೆಲಸಗಳನ್ನು ಹೆಣ್ಣುಮಕ್ಕಳು ಮಾಡುತ್ತಾರೆ. ಈ ಕೆಲಸಗಳನ್ನು ಮಾಡುವುದಕ್ಕೆ ಅವರಿಗೆ ಯೋಗ್ಯತೆ ಮತ್ತು ದಕ್ಷತೆ ಹೆಚ್ಚಾಗಿ ಇದೆ. ಈ ಕೆಲಸಗಳನ್ನು ಮೀಸಲಾಗಿಟ್ಟು ವಿಧವೆಯರಾದವರಿಗೆ, ಮನೆ ತಪ್ಪಿದಂಥ ಹೆಣ್ಣುಮಕ್ಕಳಿಗೆ ವಿಚಾರಮಾಡಿ ಮೊದಲು ಕೆಲಸ ಕೊಡಿ ಎಂದು ಕೇಳಿಕೊಳ್ಳುತ್ತೇನೆ. ಸಂಸ್ಕೃತಿ ಪ್ರಚಾರಕ್ಕಾಗಿ ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತೀರಿ. ಅದು ಯಶಸ್ವಿಯಾಗುವುದಿಲ್ಲವೆಂದು ಹೇಳುತ್ತೇನೆ. ಹೆಣ್ಣುಮಕ್ಕಳಿಗೆ ಯಾವ ಕಷ್ಟವಿದೆ ಎಂಬುದನ್ನು ತಿಳಿದುಕೊಂಡು ಅದನ್ನು ನಿವಾರಣೆ ಮಾಡಿದರೆ ಅದರಿಂದ ಸಂಸ್ಕೃತಿ ಪ್ರಚಾರಕ್ಕೆ ದೊಡ್ಡ ತಳಹದಿ ಹಾಕಿದಂತಾಗುತ್ತದೆ. ಏತಕ್ಕೋಸ್ಕರ ಅವರು ಅಧೋಗತಿಗೆ ಇಳಿಯುತ್ತಾರೆ ಎಂಬುದನ್ನು ಅರ್ಥಮಾಡಿಕೊಂಡು ಆ ಹೆಣ್ಣುಮಕ್ಕಳಿಗೆ ಕೆಲಸ ಕೊಡದೆ ಇದ್ದರೆ, ಅವರ ಕಷ್ಟ ಹೇಳತೀರದು.

ಶ್ರೀ ಕೆ. ಹನುಮಂತಯ್ಯ.—ಕೆಲಸಗಳನ್ನು ಕೊಡುವವರು Public Service Commission. ಆ Public Service Commissionನವರು ಇಂಥಿಂಥ ಪರೀಕ್ಷೆ ಪಾಸುಮಾಡಿದವರಿಗೆ, ಇಂಥಿಂಥ communityಯವರಿಗೆ, ಗಂಡ ಇಲ್ಲದಿರುವವರಿಗೆ, ಮಕ್ಕಳು ಇರುವವರಿಗೆ ಕೆಲಸ ಕೊಡಬೇಕೆಂದು ಹೊಸದಾಗಿ ರೂಲ್ಸ್‌ಮಾಡಿದರೆ ಆಗ ಅಂಥವರಿಗೆ ಕೆಲಸಗಳನ್ನು ಕೊಡಬಹುದು.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಎಲ್ಲರೂ ಮಕ್ಕಳು ಇದ್ದವರು ಕೆಲಸಕ್ಕೆ ಬರುವುದಿಲ್ಲ. ಅಂಥವರು ಬಂದರೆ ಅಗತ್ಯವಾಗಿ ಕೆಲಸವನ್ನು ಮೊದಲು ಅವರಿಗೆ ಕೊಡಬೇಕು. ರೂಲ್ಸ್ ಬಿಟ್ಟು ಹೋಗಬೇಕಾದುದು ಇಲ್ಲ. I. A. S.ನಲ್ಲಿ ಹೆಂಗಸರಿಗೆ ಕೆಲಸ ಕೊಡಬೇಡಿ ಎಂದು Public Service Commission ಹೇಳಿರುವುದು ತಪ್ಪೆಂದು ತಾವೇ ಜವಾಬು ಕೊಟ್ಟಿದ್ದೀರಿ. ಇದರಲ್ಲಿ ಒಂದು ವಿಚಾರ. ಹೆಂಗಸರಿಗೆ ಕೆಲಸ ಕೊಡಬೇಕೆಂದು ಮನಸ್ಸು ಇದ್ದರೆ, ಈ ರೀತಿಯಾಗಿ ತೊಂದರೆಯಲ್ಲಿರುವವರಿಗೆ ಕೊಟ್ಟೇತೀರಬೇಕು ಎಂದು ಒಂದು ಕಾನೂನು ಮಾಡಿ. ಆಗ ಎಲ್ಲಾ ಸರಿಹೋಗುತ್ತದೆ.

ಇನ್ನು ಭೂಮಿ ಹಂಚಿಕೆಯ ವಿಚಾರ. ಮಾನ್ಯ ಮಂತ್ರಿಗಳು ಬಹಳ ಜನರಿಗೆ ಭೂಮಿ ಹಂಚಿಕೆಯಾಗಿದೆಯೆಂದು ಹೇಳಿದರು. ಇದು ಸಂತೋಷದ ಮತ್ತು ಅಭಿನಂದನೀಯವಾದ ವಿಷಯ. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಅರಿಕೆಮಾಡಿಕೊಳ್ಳಬೇಕೆಂದಿದ್ದೇನೆ. ಹಿಂದೆ, ಕಾಂಗ್ರೆಸ್ಸಿನಲ್ಲಿದ್ದು ಸ್ವಾತಂತ್ರ್ಯ ಹೋರಾಟದಲ್ಲಿ ನೊಂದವರಿಗೆ ಈಗ ಕೆಲಸವಿಲ್ಲದೆ ಇರುವವರಿಗೆ ಭೂಮಿ ಕೊಡಬೇಕೆಂದು ಮೈಸೂರು ದೇಶದಲ್ಲಿ ತೀರ್ಮಾನ ಮಾಡಿದ್ದಾರೆ. ಇತರ ಕಡೆಗಳಲ್ಲಿಯೂ ಇದೇ ರೀತಿ ತೀರ್ಮಾನ ಮಾಡಿದ್ದಾರೆ. ಈ ತೀರ್ಮಾನದ ಪ್ರಕಾರ ಬೇರೆ ಕಡೆ ಬೇಕಾದಷ್ಟು ಜನರಿಗೆ ಜಮೀನು ಕೊಟ್ಟಿದ್ದಾರೆ; ಹಾಗೆಯೇ ಇಲ್ಲಿಯೂ ಎಷ್ಟೋ ಜನರಿಗೆ ಜಮೀನು ಕೊಟ್ಟಿದ್ದಾರೆ. ನಾನು ಹಿಂದೆ ತಮ್ಮಲ್ಲಿ 10-16 ಜನ ರಾಜಕೀಯದಲ್ಲಿ ನೊಂದವರ ವಿಚಾರ ಹೇಳಿದ್ದೆ. ಅವರು 10-20 ವರ್ಷಗಳ ಕಾಲ ತ್ಯಾಗಮಾಡಿ ಈ ಸ್ವಾತಂತ್ರ್ಯ ಹೋರಾಟದಲ್ಲಿ ದುಡಿದು ಅವರಿಗೆ ಮುಪ್ಪಿನ ವಯಸ್ಸು ಬಂದಿದೆ: ಅಂಥ ಅನ್ನಕ್ಕೆ ಅಭಾವವಿರುವ ಬಡತನದಿಂದ ಕೂಡಿರುವ ಜನರ list ಕೊಟ್ಟಿದ್ದೆ. ಅವರಿಗೆ ಇವೊತ್ತಿನವರೆಗೂ ಜಮೀನು ಕೊಟ್ಟಿಲ್ಲ. ಇದಕ್ಕೆ ಕಾರಣವೇನು? ಅಲ್ಲಿ ಒಂದು ಕಮಿಟಿಯನ್ನು ಇದರ ಬಗ್ಗೆ ಮಾಡಿದ್ದಾರೆ. ಆದರೆ ಜಮೀನು ಇಲ್ಲ. ಇದ್ದಿದ್ದರೆ ಕೊಡುತ್ತಿದ್ದರು. ಅಲ್ಲಿಯ ಡೆಪ್ಯುಟಿ ಕಮೀಷನರು ಬಹಳ ಉದಾರಿಗಳು. ಆದರೆ ನಮ್ಮ ತಾಲ್ಲೂಕಿನಲ್ಲಿ ಜಮೀನು ಇದ್ದರೆ ತಾನೇ ಅವರು ಕೊಡುವುದು! ಈಚಲು ಜಮೀನು ಸ್ವಲ್ಪ ಇದೆ. ಅದನ್ನು release ಮಾಡಿಕೊಡಿ ಎಂದು ಎಷ್ಟು ಸಾರಿ ಅರಿಕೆ ಮಾಡಿಕೊಂಡರೂ ಅದನ್ನು ರಿಲೀಜ್ ಮಾಡಿಲ್ಲ. ಆದ್ದರಿಂದ ಕೇಳಿದ ಜನರಿಗೆ ಜಮೀನು ಕೊಡುವ ಹಾಗಿಲ್ಲ. ಅಲ್ಲಿ ಈಚಲು ಗಿಡ ಎಲ್ಲಾ ಹೋಗಿದೆ. 30-40 ಎಕರೆಗಳು ಮಾತ್ರ ಇವೆ. ಆದಷ್ಟು ಬೇಗ ಅದನ್ನು ರಿಲೀಸ್ ಮಾಡಿ ಕೊಟ್ಟರೆ ರಾಜಕೀಯದಲ್ಲಿ ನೊಂದವರಿಗೆ ಸಹಾಯವಾಗಬಹುದು. ಇಲ್ಲದಿದ್ದರೆ ಅಲ್ಲಿ ಸಮಿತಿಯವರು ಮೀಟಿಂಗ್‌ಮಾಡಿ ಸುಮ್ಮನೆ ಸಮಯ ತಳ್ಳುತ್ತಾರೆಯೇ ವಿನಾ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಶ್ರೀ ನಾಗರಾಜ ಮೂರ್ತಿಯವರು ಭೂಮಿ ಕೊಟ್ಟವರು ಯಾರೂ ಭೂಮಿಯನ್ನು ಉಳಿಸಿಕೊಂಡಿಲ್ಲವೆಂದು ಹೇಳಿದರು. ಉಳಿಸಿಕೊಳ್ಳದೆ ಇರುವವರ ಪ್ರಶ್ನೆ ಇಲ್ಲಿ ಬರುವುದಿಲ್ಲ. ನಮ್ಮಲ್ಲಿ ಭಾವಿಯಲ್ಲಿ ನೀರು ಕುಡಿಯಬೇಕಾದರೆ, ಔಷಧಿ ಕುಡಿದ ಹಾಗಾಗಿದೆ. ಹೋದ ವರುಷ ನಮಗೆ ಭಾವಿ ಕೊಡಿಸಬೇಕೆಂದು ಕೇಳಿದೆ. ಪ್ರತಿಯೊಂದು ತಾಲ್ಲೂಕಿಗೂ ಭಾವಿಗಳನ್ನು ಕೊಡಬೇಕು. ಈ ವರ್ಷ ಭಾವಿಗಳನ್ನು sanction ಮಾಡುತ್ತಾರೋ ಏನೋ ಗೊತ್ತಿಲ್ಲ. ಒಂದು ರಸ್ತೆಯನ್ನು ಮಾಗನಹಳ್ಳಿಯಿಂದ ದಾವಣಗೆರೆಗೆ ಮಾಡಿದ್ದಾರೆ. ಆ ರಸ್ತೆ ನಮ್ಮ ತಾಲ್ಲೂಕಿನ ತನಕ ಬಂದಿಲ್ಲ. ಅಲ್ಲಿಯ ಜನರಿಗೆ ಈ ರಸ್ತೆ ಇಲ್ಲದೆ ಇರುವುದರಿಂದ ಬಹಳ ತೊಂದರೆಯಾಗಿದೆ. ಕಡಲೇಬಾಳೆ, ಹುಣಸೆಕಟ್ಟೆ, ತಾಳುಹುಣಸೆ, ಹೆಬ್ಬಳ್ಳು, ಈ ಪ್ರದೇಶದಲ್ಲಿ ಭಾವಿಗಳಿಲ್ಲ. ಅಲ್ಲಿ ಕೊಚ್ಚೆ ನೀರು ಕುಡಿದು ಜನಗಳಿಗೆ ಆರೋಗ್ಯ ಕೆಡುತ್ತಿದೆ. ಆದ್ದರಿಂದ ಆ ಕಡೆಗಳಲ್ಲಿ ಭಾವಿಗಳನ್ನು ಮಾಡಿಸಿಕೊಡಬೇಕು ಎಂದು ಅರಿಕೆ ಮಾಡಿಕೊಳ್ಳುತ್ತೇನೆ. ನಾನು ಹಳ್ಳಿಯಲ್ಲಿರುವುದರಿಂದ ಹಳ್ಳಿಯ ಜೀವನವನ್ನು ತಿಳಿದುಕೊಂಡಿದ್ದೇನೆ. ಓದುವ ಪುಸ್ತಕಗಳನ್ನು ವರ್ಷ ವರ್ಷ ಬದಲಾಯಿಸುತ್ತಿರುತ್ತಾರೆ. ಈ ವರ್ಷ ಇಲ್ಲಿಯವರೆಗೆ ಪುಸ್ತಕಗಳು ಬಂದಿಲ್ಲ. ಹೇಗೆ ಮಕ್ಕಳು ವಿದ್ಯಾಭ್ಯಾಸ ಮಾಡಬೇಕೋ ನನಗೆ ತಿಳಿಯದು. ಯಾವುದಾದರೂ ಒಂದು ಪುಸ್ತಕವಿಟ್ಟರೆ, ಕನಿಷ್ಠ ಪಕ್ಷ 5 ವರ್ಷಗಳವರೆಗಾದರೂ ಬದಲಾಯಿಸುವ ಹಾಗಿರಬಾರದು. ಒಂದು ಮನೆಯಲ್ಲಿ ಓದುವ 10 ಮಕ್ಕಳು ಇದ್ದರೆ, ಓದುವ ಪುಸ್ತಕಗಳನ್ನು ಒಬ್ಬರಿಂದ ಮತ್ತೊಬ್ಬರಿಗೆ ಬದಲಾಯಿಸಿಕೊಂಡು ಹೋಗಬಹುದು. ಆದರೆ ವರ್ಷಕ್ಕೊಮ್ಮೆ ಬದಲಾಯಿಸಿದರೆ, ಪ್ರತಿಯೊಂದು ಮಗುವಿಗೂ ಬೇರೆ ಬೇರೆ ಪುಸ್ತಕ ತೆಗೆದುಕೊಳ್ಳವುದಾದರೆ ಎಷ್ಟು ತೊಂದರೆಯಾಗುತ್ತದೆ ಎಂಬುದನ್ನು ತಾವು ಊಹಿಸಬಹುದು. ಏನೋ ಕಾರಣವಿಟ್ಟುಕೊಂಡು ಯಾರೋ ಮಹರಾಯನ ಹೊಟ್ಟೇ ತುಂಬಿಸಬೇಕೆಂದು ಪುಸ್ತಕಗಳನ್ನು ವರ್ಷ ವರ್ಷ ಬದಲಾಯಿಸಿ ಬಡಜನರಿಗೆ ವಿದ್ಯೆ ಕಲಿಯುವುದಕ್ಕೆ ಹೀಗೆ ತೊಂದರೆಯನ್ನುಂಟುಮಾಡಬಾರದು.

ಶ್ರೀ ಕೆ. ಹನುಮಂತಯ್ಯ.—ತಾವು ಹೇಳಿದ ಸೂಚನೆ ಸರಿಯಾಗಿದೆ. ಸಾಧ್ಯವಾದಷ್ಟು ಸರ್ಕಾರದವರು ಆ ನೀತಿಯನ್ನು ಅನುಸರಿಸುತ್ತಾರೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಐದು ವರ್ಷದವರೆಗಾದರೂ ಪಠ್ಯಪುಸ್ತಕಗಳನ್ನು ಬದಲಾಯಿಸಬಾರದು.

ಶ್ರೀ ಕೆ. ಹನುಮಂತಯ್ಯ.—ತಾವು 5 ವರ್ಷವೆಂದು ಹೇಳುತ್ತೀರಿ. ಸಾಧ್ಯವಾದಷ್ಟು ತಮ್ಮ ಸಲಹೆಯನ್ನು ಕಾರ್ಯರೂಪಕ್ಕೆ ತರಲು ಸರ್ಕಾರದವರು ಪ್ರಯತ್ನ ಮಾಡುತ್ತಾರೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಬಜೆಟ್ ಚೆನ್ನಾಗಿದೆ. ಮತ್ತು ಇದನ್ನು ಎಲ್ಲರೂ ಸಂತೋಷದಿಂದ ಸ್ವಾಗತಿಸಬೇಕೆಂದು ಹೇಳಿ ನನ್ನ ಭಾಷಣವನ್ನು ಪೂರೈಸುತ್ತೇನೆ.

ಶ್ರೀ ಬಿ. ರಾಚಯ್ಯ (ಯಳಂದೂರು—ಅನುಸೂಚಿತ ಜಾತಿಗಳು).—ಸ್ವಾಮಿ, ಈಗ 1955-56 ನೆಯ ಇಸವಿಯ ಆಯವ್ಯಯ ಪಟ್ಟಿಯಮೇಲೆ ವಿಪುಲವಾದ ಚರ್ಚೆ ನಡೆದಿದೆ. ಪರವಾಗಿಯೂ ಮತ್ತು ವಿರುದ್ಧವಾಗಿಯೂ ಈಗಾಗಲೇ ಅನೇಕ ಮಾನ್ಯ ಮಹನೀಯರು ಮಾತನಾಡಿದ್ದಾರೆ. ನಾನಾದರೂ ಈ ಆಯವ್ಯಯದ ಅಂದಾಜನ್ನು ಸ್ವಾಗತಿಸುವಾಗ ಅನೇಕ ಕಾರಣಗಳನ್ನು ಕೊಟ್ಟು ಸ್ವಾಗತಿಸಬೇಕೆಂದಿದ್ದೇನೆ.

ಮೊದಲನೆಯದಾಗಿ ಮುಖ್ಯ ಮಂತ್ರಿಗಳವರು, ಪಂಚವಾರ್ಷಿಕ ಯೋಜನೆಯ ಕೊನೆಯ ವರ್ಷದಲ್ಲಿ ಸರ್ಕಾರದವರು ಯಥೇಷ್ಟವಾಗಿ ಖರ್ಚನ್ನು ಮಾಡಬೇಕಾಗಿದ್ದರೂ, ಆ ದೃಷ್ಟಿಯಿಂದ ಮಿಕ್ಕ ಯಾವ ಬಾಬುಗಳಿಗೂ ಕಡಮೆ ದುಡ್ಡನ್ನು ಒದಗಿಸದೆ ಮೊದಲಿನಂತೆ ಹೆಚ್ಚಾಗಿಯೇ ಒದಗಿಸುತ್ತಾ ಬಂದಿದ್ದಾರೆ. ಈ ಕಾರಣದಿಂದ ನಮ್ಮ ಆದಾಯಕ್ಕಿಂತಲೂ ಖರ್ಚು ಜಾಸ್ತಿಯಾಗುತ್ತಾ ಬಂದಿದೆ. ನಿನ್ನೆ ತಾನೆ ಶ್ರೀಮಾನ್ ಶ್ರೀನಿವಾಸಯ್ಯಂಗಾರ್‌ರವರು ಮಾತನಾಡುವಾಗ ಇತರ ಸಂಸ್ಥಾನಗಳಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಖರ್ಚುಮಾಡತಕ್ಕ ಹಣದ percentagesನ್ನು ಹೇಳಿದರು. ಹಾಗೆ ಹೇಳುವಾಗ ಅವರು ಬಹುಶಃ ಬಜೆಟ್ಟಿನ ಮೊದಲನೆಯ volumeನಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಕೊಟ್ಟಿರತಕ್ಕ ಹಣದ ಕಡೆ ಗಮನ ಕೊಡಲಿಲ್ಲವೆಂದು ಕಾಣುತ್ತದೆ. ಅದನ್ನ ತೆಗೆದುಕೊಂಡರೆ ಎರಡಾಣೆ ಹನ್ನೊಂದು ಕಾಸಿಗೂ ಹೆಚ್ಚಿಗೆ ಖರ್ಚಾಗುತ್ತದೆ. ಮತ್ತು ಹೊರಗಡೆ ಪ್ರಾಂತ್ಯಗಳಲ್ಲಿ ತೆರಿಗೆಯನ್ನು ರೂಪಾಯಿಗೆ ಎಷ್ಟು ಕೊಡುತ್ತಿದ್ದಾರೋ ಅದಕ್ಕಿಂತ ಕಡಮೆ ನಾವು ಇಲ್ಲಿ ತೆರಿಗೆ ಕೊಡುತ್ತಿದ್ದೇವೆ.

ಅಲ್ಲದೆ, ಇದೊಂದು ಪರ್ವಕಾಲವೆಂಬುದನ್ನು ನಾವು ತಿಳಿಯಬೇಕು. ಸಂಸ್ಥಾನದಲ್ಲಿ ಆಗಬೇಕಾದ ಅಭಿವೃದ್ಧಿ ಕಾರ್ಯಗಳಿಗೆ ನಾವು ಖರ್ಚು ಮಾಡಲೇಬೇಕಾಗುತ್ತದೆ. ಆದರೆ, ಮಾನ್ಯ ಸದಸ್ಯರು ಹೇಳಿದರು, ನಮ್ಮ normal expenditureಗೆ borrowed capitalನಿಂದ ಖರ್ಚು ಮಾಡಕೂಡದು ಎಂದು. ಐದು ಕೋಟಿ ರೂಪಾಯಿಗಳು Normal Revenue ಗಿಂತ ಜಾಸ್ತಿ ಖರ್ಚಾಗುತ್ತಿವೆ, ಇದನ್ನು ಸಾಲದ ರೂಪದಲ್ಲಿ ತೆಗೆದುಕೊಳ್ಳುವುದಕ್ಕೆ ಬದಲಾಗಿ ತೆರಿಗೆ ರೂಪದಲ್ಲಿ ಹಾಕಬೇಕಾಗಿತ್ತು ಎಂದು ಹೇಳಿದರು. ನಾವು ಯಾವುದೇ ವಿಧವಾಗಿಯಾಗಲಿ ತೆರಿಗೆಯನ್ನು ಹಾಕಲೇಬೇಕು. ಕಳೆದ ಸಾಲಿನಲ್ಲಿ 3¼ ಕೋಟಿ ರೂಪಾಯಿಗಳು ತೆರಿಗೆಯ ರೂಪದಲ್ಲಿ ಬಂದಿವೆ. ನಮ್ಮ ಅಂದಾಜು ಪ್ರಕಾರ 8 ಕೋಟಿ ರೂಪಾಯಿಗಳು ಬರಬೇಕಾಗಿತ್ತು. ಅದರಂತೆ ಇನ್ನೂ 5 ಕೋಟಿ ರೂಪಾಯಿಗಳನ್ನು ತೆರಿಗೆಯ ರೂಪದಲ್ಲಿ ಎತ್ತಬೇಕಾಗಿದೆ. ಆದ್ದರಿಂದ ಈಗ agricultural income-tax ಹಾಕಿರುವುದು ನ್ಯಾಯವಾಗಿದೆ.

ಪಂಚವಾರ್ಷಿಕ ಯೋಜನೆಯ ವಿಚಾರವಾಗಿ ಮಾತನಾಡುತ್ತಾ, ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಯೋಜನೆಗಳನ್ನು ತಯಾರು ಮಾಡಿದ್ದೆವೋ ಅವೆಲ್ಲಾ ಯಶಸ್ವಿಯಾಗಿ ನಡೆದುಕೊಂಡು ಬಂದಿವೆಯೆಂದು ಹೇಳಿದ್ದಾರೆ. ಈ ಯೋಜನೆಗಳಲ್ಲಿ ಸಂಸ್ಥಾನದ ಸರ್ಕಾರದವರು ತೆಗೆದುಕೊಳ್ಳತಕ್ಕದ್ದು ಕೇಂದ್ರ ಸರ್ಕಾರದವರು ತೆಗೆದುಕೊಳ್ಳತಕ್ಕದು ಮತ್ತು ಕೇಂದ್ರ ಸರ್ಕಾರದವರು ಸಂಸ್ಥಾನದ ಸರ್ಕಾರದವರೂ ಸೇರಿ ಮಾಡತಕ್ಕದು ಎಂದು ಮೂರು ತೆರನಾಗಿವೆ. ಚಾಮರಾಜನಗರ—ಸತ್ಯಮಂಗಲದ ರೈಲ್ವೆ ಕೆಲಸ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿದ್ದು ಆ ಬಗ್ಗೆ preliminary ಕೆಲಸ ಕಾರ್ಯಗಳು ನಡೆದಿದ್ದರೂ ಕೂಡ ಇನ್ನೂ ಆ ಕೆಲಸ ಕಾರ್ಯಗತವಾಗಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಾದರೂ ಇದಕ್ಕೆ priority ಕೊಟ್ಟು ಕೆಲಸ ನಡೆಯಬೇಕೆಂದು ನಾನು ಸೂಚಿಸುತ್ತೇನೆ. ಈ ಎರಡನೆಯ ಪಂಚವಾರ್ಷಿಕ ಯೋಜನೆಯನ್ನು ತಯಾರು ಮಾಡುವಾಗ ಯಾವ ಯಾವ ಭಾಗದಲ್ಲಿ ಯಾವ ಯಾವ ಕೆಲಸ ಮಾಡಬೇಕೆಂದು ಹೇಳಿ ಸರಿಯಾಗಿ ಯೋಚಿಸಿ ಮಾಡಿಲ್ಲವೆಂದು ಕಾಣುತ್ತದೆ. ಬಹುಶಃ ಅಧಿಕಾರಿಗಳು ಏನೇನು ಕಳುಹಿಸಿಕೊಟ್ಟರೋ ಅವುಗಳನ್ನು ಸೇರಿಸಿ ಮಾಡಿಕೊಂಡಿರುವಂತೆ ತೋರುತ್ತದೆ. ಏಕೆಂದರೆ, ಚಾಮರಾಜನಗರ ತಾಲ್ಲೂಕಿನಲ್ಲಿ ಚಿಕ್ಕಹೊಳೆ ಪ್ರಾಜೆಕ್ಟ್ ಎಂದಿದೆ. ಅದನ್ನು ಕೈಕೊಂಡಿದ್ದರೆ ಸಾಧಾರಣವಾಗಿ 22,000 ಎಕರೆಗಳು ಸಾಗುವಳಿಗೆ ಬರುತ್ತಿದ್ದುವು. ಇದಕ್ಕೆ ಖರ್ಚಾಗುವುದು 21 ಲಕ್ಷ ರೂಪಾಯಿಗಳು ಮಾತ್ರ. ಈ ಪ್ರದೇಶವೂ ಬಹಳ ಹಿಂದುಳಿದ ಪ್ರದೇಶ. ಜನರಿಗೆ ಕೆಲಸ ಕಾರ್ಯಗಳೂ ಹೆಚ್ಚಾಗಿಲ್ಲ. ಯಾವ ನೀರಾವರಿ ಯೋಜನೆಗಳೂ ಅತ್ತಕಡೆ ಇಲ್ಲದಿರುವುದರಿಂದ ಇದನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಮಲೆನಾಡಿಗೆ ಹೆಚ್ಚಿಗೆ improvementಗಳು ಆಗಬೇಕೆಂದು ಒಪ್ಪಿದ್ದರೂ, ಮಲೆನಾಡಿನ ತಾಲ್ಲೂಕುಗಳಲ್ಲಿ ಏನೇನು ಕೆಲಸ ಕಾರ್ಯಗಳಾಗಬೇಕೋ ಅವು ಆಗಿಲ್ಲ. ನಂಜನಗೂಡು, ಯಳಂದೂರು, ಚಾಮರಾಜನಗರ ತಾಲ್ಲೂಕಿನಲ್ಲಿ ಸಾಲಾಬಾದು ಕಾಂಗಾರಿಗಳಿಗೆ ಸಾಕಷ್ಟು ಹಣವನ್ನೊದಗಿಸಿಲ್ಲ. ಸರ್ಕಾರದವರು ಇಲ್ಲಿ lump sum ಹಣ ಕೊಟ್ಟಿರುವುದರ ಸಂಬಂಧದಲ್ಲಾದರೂ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನೊಂದು ಅತಿ ಮುಖ್ಯವಾದ ವಿಷಯವೇನೆಂದರೆ, ಪಾನನಿರೋಧದ ವಿಚಾರ. ನಾವು ಇಟ್ಟ ಹೆಜ್ಜೆಯನ್ನು ಹಿಂದಕ್ಕೆ ತೆಗೆಯಬಾರದು ಎಂದು ಹೇಳಿದ್ದಾರೆ. ನನ್ನ ಅನುಭವದಲ್ಲಿ ಅದು ಏಕೆ ನಡೆಯುತ್ತಿಲ್ಲವೆಂದು ಹೇಳುವುದಾದರೆ, ಬಾರ್ಡರ್ ತಾಲ್ಲೂಕುಗಳಾದ ಮದ್ರಾಸ್ ಪ್ರಾಂತ್ಯದ ಭಾಗಗಳಲ್ಲಿ ಪಾನನಿರೋಧವನ್ನು ಜಾರಿಗೆ ತರದಿರುವುದರಿಂದ ಕುಡಿತಕ್ಕೆ ಹೆಚ್ಚಿಗೆ ಅವಕಾಶವಾಯಿತು. ಇಷ್ಟಾದರೂ ಹೆಚ್ಚೇನೂ ಆಗಿಲ್ಲ. ಇದನ್ನು ಮುಂದುವರಿಸಬೇಕೆಂದು ಹೇಳುತ್ತೇನೆ.

ಲ್ಯಾಂಡ್ ರಿಫಾರ್ಮ್ಸ್ ಬಗ್ಗೆ ಬಹಳ ಮುಂದೆ ಹೆಜ್ಜೆಯಿಟ್ಟಿದ್ದೀರಿ. ಸಾಮಾನ್ಯ ಜನರಿಗೆ, ಗೇಣಿದಾರರಿಗೆ, ಇನಾಂದಾರರುಗಳ ಕೈಕೆಳಗಿನ ರೈತರುಗಳಿಗೆ ಬೇಗ ಕಾನೂನು ಪ್ರಕಾರ ಅನುಕೂಲಮಾಡಬೇಕೆಂದು ಮಾಡಿದ್ದು ಕಾಲವಿಳಂಬ ಮಾಡುವುದರಿಂದ ತೊಂದರೆಯಾಗುತ್ತದೆ. ಅದಷ್ಟು ಜಾಗ್ರತೆ ಕಾರ್ಯರೂಪಕ್ಕೆ ತರಬೇಕೆಂದು ಹೇಳುತ್ತೇನೆ. ಅಲ್ಲದೆ, ಜಮೀನುಗಳನ್ನು ಕೊಡುವುದರಲ್ಲಿ ಅಧಿಕಾರವನ್ನು ವಿಕೇಂದ್ರೀಕರಣ ಮಾಡಿ ಡೆಪ್ಯುಟಿ ಕಮಿಷನರು ಮತ್ತು ಸಬ್ ಡಿವಿಜನ್ ಅಫೀಸರ ಪರಿಮಿತಿಯನ್ನು ವಿಸ್ತರಿಸಿ ಸರಿಯಾಗಿ ಎಲ್ಲರಿಗೂ ಜಮೀನು ಕೊಡಬೇಕೆಂದು ಹೇಳುತ್ತೇನೆ.

(ಶ್ರೀ ಬಿ. ರಾಚಯ್ಯ.)

ಶ್ರೀಮಾನ್ ಪಟ್ಟಾಭಿರಾಮನ್‌ರವರು ಆಯಾ ಸ್ಥಳದಲ್ಲೇ ಹೋಗಿ ಜಮೀನುಗಳನ್ನು ವಿಲೇವಾರಿ ಮಾಡಬೇಕೆಂದು ಹೇಳಿದರು, ಹಿಂದೆ ಆ ರೀತಿಯೇ ಮಾಡುತ್ತಿದ್ದರು. ಆಯಾ ಸ್ಥಳದಲ್ಲಿ ಎಷ್ಟು ಜಮೀನಿನಲ್ಲಿ ಎಷ್ಟೆಷ್ಟು ಜಮೀನಿದೆ ಎಂಬುದನ್ನು ಪಟ್ಟಿಮಾಡಿ ಅಲ್ಲಲ್ಲೇ ಅರ್ಜಿ ತರಿಸಿಕೊಂಡು ತಮ್ಮ ಕೈಕೆಳಗಿನ ಅಧಿಕಾರಿಗಳಿಗೆ 'ನೋಟ್' ಮಾಡಿಕೊಳ್ಳಿ ಎಂದು ಹೇಳಿ, spotನಲ್ಲೇ ದರಖಾಸ್ತು ವಿಲೇವಾರಿ ಮಾಡುತ್ತಿದ್ದರು. ಅದೇ ರೀತಿ ನೀವೂ ಜಮೀನು ದರಖಾಸ್ತು ವಿಲೇವಾರಿ ಮಾಡುವ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ. ಆಮೇಲೆ, ಮನೆಗಳನ್ನು ಕಟ್ಟತಕ್ಕವರಿಗೆ ಅಲ್ಪಸ್ವಲ್ಪ ಹಣ ಒದಗಿಸುವುದರಿಂದ ಏನೂ ಪ್ರಯೋಜನವಿಲ್ಲ. ಅದಕ್ಕೆ ಬದಲು ಇದನ್ನು ಹಾಸ್ಟಲುಗಳನ್ನು ಕಟ್ಟಿಸಲಕ್ಕೆ ಉಪಯೋಗಿಸುವುದು ಒಳ್ಳೆಯದು. ಇಲ್ಲದಿದ್ದರೆ, ಇದೇ ಹಣವನ್ನು ಕೊಟ್ಟು ಕಾಲೊನಿ ಕಟ್ಟಿಸಿ, ಅಲ್ಲಿ ಮನೆಗಳನ್ನು ಕಟ್ಟಿಸಿ ಕೊಡುವುದಕ್ಕೆ ಕೊಟ್ಟರೆ ಸಾರ್ಥಕವಾದಂತಾಗುತ್ತದೆ.

ಶ್ರೀ ವಿ. ಮಸಿಯಪ್ಪ (ಹಿರಿಯೂರು).—ಅಧ್ಯಕ್ಷರೇ, ಸರ್ಕಾರದವರು ಮಂಡಿಸಿರತಕ್ಕ 1955-56ನೆಯ ಸಾಲಿನ ಆಯುವ್ಯಯ ಅಂದಾಜನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಈ ಆಯವ್ಯಯ ಪಟ್ಟಿಯನ್ನು ಪರಿಶೀಲನೆ ಮಾಡತಕ್ಕದ್ದರಲ್ಲಿ ಮುಖ್ಯವಾಗಿ ಎರಡು ಮೂರು ದೃಷ್ಟಿ ಕೋಣದಿಂದ ನೋಡಬಹುದೆಂದು ಹೇಳಬಹುದು.

ಅನೇಕ ಮಾನ್ಯ ಸ್ನೇಹಿತರು ಈಗಾಗಲೇ ಮಾತನಾಡಿದ್ದಾರೆ. ಕೆಲವರು ಬಹಳ critical attitude ತೆಗೆದುಕೊಂಡು ನಾಸ್ತಿಕತ್ವದ ದೃಷ್ಟಿಯಿಂದ ಪರಿಶೀಲನೆ ಮಾಡಿದ್ದಾರೆ. ಇನ್ನು ಕೆಲವರು ಇದರಲ್ಲಿರುವ ಒಳ್ಳೆಯ ಅಂಶಗಳನ್ನು ಮಾತ್ರ ತೆಗೆದುಕೊಂಡು ಅವುಗಳ ಬಗ್ಗೆ ಮೆಚ್ಚಿಕೆಯ ಮಾತುಗಳನ್ನಾಡಿದ್ದಾರೆ. ಇನ್ನೂ ಒಂದು ದೃಷ್ಟಿಯಿದೆ. ಇದರಲ್ಲಿರತಕ್ಕ ಒಳ್ಳೆಯ ಅಂಶಗಳನ್ನು ತೆಗೆದುಕೊಂಡು ಸರ್ಕಾರ ದೇಶದ ಆಡಳಿತ ಎಷ್ಟರಮಟ್ಟಿಗೆ ಪ್ರಗತಿದಾಯಕವಾಗಿ ಮತ್ತು ಎಷ್ಟರಮಟ್ಟಿಗೆ ಮುಂದುವರಿಯಬೇಕಾಗಿತ್ತು ಮತ್ತು ಮುಂದಿನ ಸಾಲಿನಲ್ಲಿ ಎಷ್ಟರಮಟ್ಟಿಗೆ ಮುಂದುವರಿಯಬೇಕು ಎಂಬ ಸಮತೂಕದ ದೃಷ್ಟಿಯಿಂದಲೂ ನೋಡುವುದು ಅವಶ್ಯಕವೆಂದು ಕಾಣುತ್ತದೆ. ಈ ದೃಷ್ಟಿಯಿಂದ ನೋಡುವಾಗ, ವಿರೋಧ ಪಕ್ಷದ ಸದಸ್ಯರು ಮಾತನಾಡಿದ್ದನ್ನು ಪರಿಶೀಲಿಸುವುದಾದರೆ, ಶ್ರೀಮಾನ್ ಇಮಾಂ ಸಾಹೇಬರು ಮಾತನಾಡುತ್ತಾ, ಈ ಖೋತಾ ಬಡ್ಜೆಟ್ಟು ಕೈಗಾರಿಕೆಗಳಲ್ಲಿ ಖಾಸಗಿ ಉದ್ಯಮಗಾರರಿಗೆ ಹಣವನ್ನು ಹಾಕುವುದಕ್ಕೆ ನಿರುತ್ಸಾಹಕಾರಕವಾಗಿದೆಯೆಂದು ಹೇಳಿದರು. ಈ ಅಂಶವನ್ನು ಸೂಕ್ಷ್ಮವಾಗಿ ಪರಿಶೀಲಿಸುವುದಾದರೆ, ಅವರೇ ಒಪ್ಪಿರುವ ಹಾಗೆ, ಈ ಖೋತಾ ಬಡ್ಜೆಟ್ಟೇ ಅದಕ್ಕೆ ಕಾರಣವಲ್ಲ. ಅದಕ್ಕಿಂತ ಹೆಚ್ಚಾಗಿ ಕೇಂದ್ರ ಸರ್ಕಾರದವರ income tax ವಸೂಲಿ ನೀತಿ ಎಂದು ಗೊತ್ತಾಗುತ್ತದೆ. ಈಗ income-taxನ್ನು ಕಡ್ಡಾಯವಾಗಿ ಕೊಡುತ್ತಿರತಕ್ಕದ್ದು ಯಾರು? ಯಾರು ಯುದ್ಧ ಕಾಲದಲ್ಲಿ ಬೇರೆ ಬೇರೆ ಮಾರ್ಗಗಳಿಂದ ದುಡ್ಡನ್ನು ದುಡಿದಿದ್ದಾರೋ ಅವರಿಗೆ ಈಗ ಕಷ್ಟವಾಗಿದೆಯೇ ವಿನಾ ಬೇರೆ ಯಾರಿಗೂ ಇಲ್ಲ. ಆದ್ದರಿಂದ ಶ್ರೀಮಾನ್ ಇಮಾಂರವರ ವಾದದಲ್ಲಿ ತಿರುಳಿಲ್ಲ. ಅಲ್ಲದೆ, ಪಂಡಿತ ಜವಹರಲಾಲ್‌ರವರೇ, 'ಖಾಸಗಿ ಉದ್ಯಮಗಳಿಗೆ ಯಾವ ಪ್ರತಿಬಂಧಕವೂ ಇಲ್ಲ, ಖಾಸಗಿ ಉದ್ಯಮಗಳೇ ಬೇರೆ sectionನಲ್ಲಿ ನಡೆಯಬಹುದು; ಸರ್ಕಾರದವರ sectorಏ ಬೇರೆಯಾಗಿದೆ, ಯೆಂದು ಸ್ಪಷ್ಟವಾಗಿ ಹೇಳಿದ್ದಾರೆ.

ಮಾನ್ಯ ಸದಸ್ಯರಾದ ಮ್ಯಾಸ್ಕ್ರಿನ್ಹಾಸ್‌ರವರು ಮಾತನಾಡುತ್ತಾ ಸರ್ಕಾರದವರು ಕೈಕೊಂಡಿರತಕ್ಕ ಪಂಚವಾರ್ಷಿಕ ಯೋಜನೆಯಲ್ಲಿ ಕಾಮಗಾರಿಗಳ ಬಗ್ಗೆ, ನೀರಾವರಿ ಕಾಂಗಾರಿಗಳು, ಕೆರೆ ಕಾಮಗಾರಿಗಳು— ಇವುಗಳ ಬಗ್ಗೆ ಬಹಳವಾಗಿ ಖರ್ಚುಮಾಡುತ್ತಿದೆ, ಕೈಗಾರಿಕೆಗಳ ವಿಷಯದಲ್ಲಿ ಅಲಕ್ಷ್ಯ ಕಾಣಬರುತ್ತಿದೆ ಎಂದು ಅಭಿಪ್ರಾಯಪಟ್ಟು ಒಂದು ಪದವನ್ನು ಹೇಳಿದರು, 'Damn these dams' ಎಂದು ಹೇಳಿದ್ದಾರೆ. ಈ ಮಾನ್ಯ ಸಭೆಯಲ್ಲಿ ಇಂಥ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದು ಅದರಲ್ಲೂ ಈಗಿನ ಕಾಲದಲ್ಲಿ ಹೇಳಿರುವುದು ಬಹಳ ಅನ್ಯಾಯವೆಂದು ಹೇಳಬಹುದು. ಅಣೆಕಟ್ಟುಗಳೂ, ಕೆರೆ ಕಾಮಗಾರಿಗಳು ಇಲ್ಲದೆ ಇದ್ದರೆ, ನಮ್ಮ ದೇಶ ಮಳೆಯನ್ನೇ ಅವಲಂಬಿಸಬೇಕೆಂದಿದ್ದರೆ ನಾವು ಯಾವ ಪ್ರಗತಿಯನ್ನಾದರೂ ಸಾಧಿಸುವುದಕ್ಕಾಗುತ್ತದೆಯೇ? If dams are damned the State is damned ಎಂಬುದನ್ನು ನಾವುಗಳು ಮನಗಾಣಬೇಕು. ಕೈಗಾರಿಕೆಗಳಿಗೆ ಮೂಲಭೂತವಾದದ್ದೇ ವ್ಯವಸಾಯ. ನಮ್ಮ ವ್ಯವಸಾಯ ಹಿಂದೆಬಿದ್ದರೆ ಎಲ್ಲಾ ಕೈಗಾರಿಕೆಗಳೂ ಹಿಂದೆ ಬೀಳುತ್ತವೆ.

ಶ್ರೀಮಾನ್ ಶ್ರೀನಿವಾಸಯ್ಯಂಗಾರ್‌ರವರು ಕೆಲವು ಅಂಕಿ ಅಂಶಗಳನ್ನು ಕೊಡುತ್ತಾ developmental ಯೋಜನೆಗಳಿಗೆ ಕೊಟ್ಟಿರತಕ್ಕ ಹಣ ಬಹಳ ಕಡಮೆ, ನೆರೆಹೊರೆ ಪ್ರಾಂತ್ಯಗಳಿಗೆ ಹೋಲಿಸಿದರೆ ನಾವು ಈ ವಿಷಯದಲ್ಲಿ ಹಿಂದೆ ಬಿದ್ದಿದ್ದೇವೆ ಎಂದು ಹೇಳಿದರು. ಆದರೆ ಒಂದು ವಿಷಯ ಅವರು ಗಮನಿಸಬೇಕಾಗಿತ್ತೆಂದು ಕಾಣುತ್ತದೆ. ಏನೆಂದರೆ, ಅವರು ಕೇವಲ ಒಂದು ಸಾಲಿನ ಅಂಕಿ ಅಂಶಗಳನ್ನು ಸಭೆಯ ಮುಂದಿಟ್ಟರು; ಹಿಂದಿನ ಸಾಲಿನಲ್ಲಿ ಯಾವ ರೀತಿಯಿತ್ತು, ಎಷ್ಟರಮಟ್ಟಿಗೆ ಪ್ರಗತಿ ಹೊಂದಿದ್ದೇವೆ ಎಂಬ comparative statement ಕೊಡದೆ ಒಂದು ಸಾಲಿಗೆ ಮಾತ್ರ ನೋಡಿದ್ದರಲ್ಲಿ, ಏನೂ ಪ್ರಯೋಜನವಾಗಲಾರದು. ಇದರಿಂದ ಸುಮ್ಮನೆ mislead ಮಾಡಿದಂತಾಗುತ್ತದೆಯೇ ಹೊರತು ಸರ್ಕಾರದವರನ್ನು ಸರಿಯಾದ ಮಾರ್ಗಕ್ಕೆ ತರುವಂತೆ constructive ಆಗಿ ಏನೂ ಹೇಳಿದಂತಾಗುವುದಿಲ್ಲವೆಂದು ಹೇಳಬಹುದು. Developmental ಯೋಜನೆಗಳಿಗೆ ಇನ್ನೂ ಹೆಚ್ಚಿಗೆ ಕೊಟ್ಟಿದ್ದಾರೆಂದು ನಾನು ಹೇಳಬಲ್ಲೆ.

ಇನ್ನು Budget properಗೆ ಬರುವುದಾದರೆ, ಮಾನ್ಯ ಹಣಕಾಸಿನ ಸಚಿವರು ವಿವರವಾಗಿ ಎಲ್ಲಾ ಅಂಶಗಳನ್ನೂ ಹೇಳಿದ್ದಾರೆ. ಸರ್ಕಾರದವರು ಕಳೆದ ಸಾಲಿನಲ್ಲಿ ಮತ್ತು ಅದರ ಹಿಂದಿನ ಸಾಲಿನಲ್ಲಿ ಯಾವ ಯಾವ ಬಾಬಿನಲ್ಲಿ ಪ್ರಗತಿ ಹೊಂದಿದ್ದಾರೆ, ಮತ್ತು ಮುಂದಿನ ಸಾಲಿನಲ್ಲಿ ಏನು ಗುರಿಯನ್ನಿಟ್ಟುಕೊಂಡಿದ್ದಾರೆ ಎಂಬುಧನ್ನು ತಿಳಿಸಿದ್ದಾರೆ.

ಇದನ್ನು ತಾವು ಪರಿಶೀಲನೆ ಮಾಡಿದರೆ ಆಗ ಇಲ್ಲಿ ಕೊಟ್ಟಿರತಕ್ಕಂಥ ಅಂಕಿ ಅಂಶಗಳೆಲ್ಲವನ್ನೂ ನೀವೆಲ್ಲರೂ ಮೆಚ್ಚಿಕೊಳ್ಳಲೇ ಬೇಕಾಗುತ್ತದೆ. ಈ ಇರಿಗೇಷನ್ ಬಗ್ಗೆ ಎಷ್ಟೊಂದು ಪಂಪುಗಳನ್ನು ತರಿಸಿಕೊಟ್ಟಿದ್ದಾರೆ, ಎಷ್ಟು ಎಕರೆಗಳಲ್ಲಿ ಇತ್ತೀಚೆಗೆ ಹೊಸದಾಗಿ ಬೆಳೆಯನ್ನು ತೆಗೆಯಲಾಗುತ್ತಿದೆ, ಜನರಿಗೆ ಎಷ್ಟು ಉತ್ಸಾಹದಾಯಕವಾದ ಮಾರ್ಗದಲ್ಲಿ ಕೆಲಸಕಾರ್ಯಗಳನ್ನು ನಡೆಸಿಕೊಂಡು ಹೋಗಲು ಸಹಾಯ ಸೌಲಭ್ಯಗಳನ್ನು ನೀಡಿದ್ದಾರೆ ಅನ್ನತಕ್ಕದ್ದರಲ್ಲಿ ಯಾವ ಅನುಮಾನವೂ ಇಲ್ಲ. ಇದು ನಿರ್ವಿವಾದವಾದ ವಿಚಾರ. ಈಗಿರತಕ್ಕಂಥ ಸರ್ಕಾರ ಈ ವ್ಯವಸಾಯಾಭಿವೃದ್ಧಿಯ ಬಗ್ಗೆ ಕಳೆದ ಮೂರು ವರ್ಷಗಳಿಂದ ನಡೆಸಿರುವಷ್ಟು ನಾನಾ

ಕಾಂಗಾರಿಗಳು ರಿಪೇರಿ ಕೆಲಸಗಳು ಇತ್ಯಾದಿ ಡೆವಲಪ್‌ಮೆಂಟ್ ಬಾಬುಗಳನ್ನು ಹಿಂದೆ ಯಾರೂ ನಡೆಸಿರಲಿಲ್ಲ. ಆದಕಾರಣ ಯಾರೂ ಈ ಬಗ್ಗೆ ಟೀಕೆ ಮಾಡಲು ಸಾಧ್ಯವಿಲ್ಲ. ಆದರೆ ಕೆಲವರು ಈ ಸಂಬಂಧವಾಗಿ ಏನೊಂದು ಟೀಕೆಯನ್ನು ಮಾಡುತ್ತಿದ್ದರೆಂದರೆ ಈ ಇಲಾಖೆಗಳ ಅಡ್ಮಿನಿಸ್ಟ್ರೇಷನ್ ಬಾಬಿಗಾಗಿ ಹೆಚ್ಚು ಹಣ ಖರ್ಚಾಗುತ್ತಿದೆ ಎಂದು. ಆದರೆ ಈ ನಾನ್ ಗೆಜೆಟೆಡ್ ಮತ್ತು ಗೆಜೆಟೆಡ್ ನೌಕರರುಗಳೆಲ್ಲರೂ ಸರಿಯಾಗಿ-ಸತ್ಯಸಂಧತೆಯಿಂದ ಕೆಲಸಮಾಡುತ್ತಿದ್ದಾರೆ ಎಂಬುದನ್ನು ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಿದ್ದಾರೆ. ಒಂದುವೇಳೆ ಅಂಥವರು ಯಾರಾದರೂ ಇದ್ದರೆ ಅದನ್ನು ಸರಿಪಡಿಸಬಹುದು. ಅದನ್ನು ಪರಿಶೀಲನೆ ಮಾಡುವುದಾಗಿ ಹೇಳಿದ್ದಾರೆ.

ಇನ್ನೊಂದು ವಿಚಾರವೇನೆಂದರೆ— ಆಹಾರ ಧಾನ್ಯಗಳ ಉತ್ಪನ್ನ ಜಾಸ್ತಿಯಾಗಿ ಅವುಗಳ ಬೆಲೆಯು ಬಹಳ ಕಡಮೆಯಾಗುತ್ತದೆ ಎನ್ನುವಂಥ ಒಂದು ಮುಖ್ಯ ಸಮಸ್ಯೆ ಈಗ ಎದ್ದು ಕಾಣುತ್ತಿದೆ. ಈ ವಿಚಾರದಲ್ಲಿ ಕೇಂದ್ರ ಸರ್ಕಾರದವರು ಒಂದು ಬಹಳ ಉಚಿತವಾದಂಥ ಪಾಲಿಸಿಯನ್ನು ಅನುಸರಿಸಿಕೊಂಡು ಬರುತ್ತಿದ್ದಾರೆ. ರೈತರಿಗೆ ಸರ್ಕಾರ ಮೂರು ರೂಪವಾಗಿ ಪರಿಹಾರ ನೀಡಬಹುದೆಂದು ನಾನು ಭಾವಿಸಿದ್ದೇನೆ. ಒಂದು ಅವರ ಉತ್ಪಾದನೆಯ ಖರ್ಚನ್ನು ಕಡಮೆಮಾಡುವುದು. ಎರಡನೆಯದು ಅವರ ಉತ್ಪತ್ತಿಯನ್ನು ಹೆಚ್ಚುಮಾಡಿಕೊಳ್ಳುವಂಥ ಮಾರ್ಗಗಳನ್ನು ಕಲ್ಪಿಸಿಕೊಡುವುದು. ಇನ್ನು ಮೂರನೆಯದು ಅವರ ಪದಾರ್ಥಗಳಿಗೊಂದು ಫೇರ್ ಪ್ರೈಜನ್ನು ನಿರ್ಧರಮಾಡುವುದು. ಆದರೆ ಸರ್ಕಾರದವರಿಗೆ ಈ ಫೇರ್ ಪ್ರೈಜನ್ನು ನಿರ್ಧರಿಸಲು ಸಾಧ್ಯವಾಗದೆ ಹೋದರೆ ತಾವು ಈ ಮೊದಲನೆಯ ಮತ್ತು ಎರಡನೆಯ ಸೌಲಭ್ಯಗಳನ್ನಾದರೂ ರೈತರಿಗೆ ಒದಗಿಸಲು ಪ್ರಯತ್ನಪಡಬೇಕೆಂದು ಹೇಳುತ್ತೇನೆ. ಈ ಪಾಂಚವಾರ್ಷಿಕ ಯೋಜನೆಯಿಂದ ಜನರಿಗೆ ಒಂದು ಗೊತ್ತಾದ ಅವಧಿಯಲ್ಲಿ ಎಲ್ಲಾ ಸೌಲಭ್ಯಗಳನ್ನೂ ಒದಗಿಸುವುದಾಗಿ ಮಂತ್ರಿಗಳು ತಿಳಿಸಿದ್ದಾರೆ. ಈ ಯೋಜನೆ ಯಶಸ್ವಿಯಾಗಲು ಕಾರಣರಾದಂಥ ಎಲ್ಲಾ ಅಧಿಕಾರಿಗಳಿಗೂ ಮೆಚ್ಚಿಗೆ ವ್ಯಕ್ತಪಡಿಸುವುದು ಅವಶ್ಯಕವೆಂದು ಅಭಿಪ್ರಾಯಪಡುತ್ತೇನೆ.

ಶ್ರೀ ಟಿ. ಸಿ. ಬಸಪ್ಪ (ತರೀಕೆರೆ).—ಸ್ವಾಮಿ, ನಾನು ಮುಂದಿನ ವರ್ಷದ ಬಡ್ಜೆಟ್ಟನ್ನು ಸ್ವಾಗತಿಸುತ್ತ ಕೆಲವು ವಿಷಯಗಳನ್ನು ಪ್ರಸ್ತಾಪಿಸಬಿಚ್ಛಿಸುತ್ತೇನೆ. ವಿರೋಧಪಕ್ಷದ ಮಾನ್ಯ ಸದಸ್ಯರಾದ ಶ್ರೀಮಾನ್ ಶ್ರೀನಿವಾಸಯ್ಯಂಗಾರ್‌ಅವರು ತಮ್ಮದೇ ಆದಂಥ ಒಂದು ಧೋರಣೆಯಲ್ಲಿ ಅಂಕಿ ಅಂಶಗಳನ್ನು ತಮಗೆ ತೋರಿದರೀತಿಯಲ್ಲಿ ಲೆಕ್ಕಾಚಾರ ಹಾಕಿಕೊಂಡು ನಮ್ಮ ಮೈಸೂರು ಸರ್ಕಾರ ಈ ಡೆವಲಪ್‌ಮೆಂಟ್ ಬಾಬಿನಲ್ಲಿ ಹಣವನ್ನೇನೂ ಸಾಕಾದಷ್ಟು ಖರ್ಚು ಮಾಡಿಲ್ಲ ಆದುದರಿಂದ ಇತರ ಪ್ರಾಂತ್ಯಗಳಿಗಿಂತ ಬಹಳ ಹಿಂದುಳಿದಿದೆ ಎಂದು ಹೇಳಿದ್ದಾರೆ. ಹೀಗೆ ಅವರು ಹೇಳುವಾಗ ಮೈಸೂರು ದೇಶವು ಈ ಬಾಬಿನಲ್ಲಿ ಅವರು ಬಡ್ಜೆಟ್ಟು ವಾಲ್ಯೂಂ ಒಂದರ ಅಂಕಿ ಅಂಶಗಳನ್ನು ಮಾತ್ರ ಹೋಲಿಕೆ ಹಾಕಿಕೊಂಡು ಮಾತನಾಡಿರುತ್ತಾರೆ. ಇದು ಸರಿಯಲ್ಲ. ಆದರೆ ನಾನು ಹಾಕತಕ್ಕಂಥ ಲೆಕ್ಕಾಚಾರದ ಪ್ರಕಾರ ವಿಚಾರಗಳನ್ನು ತೆಗೆದುಕೊಂಡರೆ 1953-54ರಲ್ಲಿ ಅಭಿವೃದ್ಧಿ ಇಲಾಖೆಗಳಿಗೆ 1,414 ಲಕ್ಷ ರೂಪಾಯಿಗಳು ವೆಚ್ಚವಾಗಿವೆ. ಆ ಸಾಲಿನ ಆದಾಯ 2,022 ಲಕ್ಷ. ಇದರ ಪ್ರಕಾರ ಲೆಕ್ಕ ಹಾಕಿದರೆ ನಮ್ಮ ಸರ್ಕಾರ ಪ್ರತಿ ಒಂದು ರೂಪಾಯಿಗೂ ಹನ್ನೊಂದಾಣೆ ಎರಡು ಕಾಸುಗಳಂತೆ ನೇಷನ್ ಬಿಲ್ಡಿಂಗ್ ಕಾರ್ಯಗಳಿಗೆ ಖರ್ಚು ಮಾಡಿದೆಯೆಂಬುದು ಅಂಕಿ ಅಂಶಗಳಿಂದಲೇ ಗೊತ್ತಾಗುತ್ತದೆ. ಹೀಗಿದ್ದರೂ ಆ ಮಾನ್ಯ ಸದಸ್ಯರು ಕೆಲವು ಅಂಕಿ ಅಂಶಗಳನ್ನು ಮಾತ್ರ ತೆಗೆದುಕೊಂಡು ನಮ್ಮ ಸರ್ಕಾರ ಈ ನೇಷನ್ ಬಿಲ್ಡಿಂಗ್ ಆಕ್ಟಿವಿಟೀಸ್‌ಗಳಿಗೆ ಕೇವಲ ಒಂದು ರೂಪಾಯಿಗೆ ಎರಡಾಣೆ ಎರಡು ಕಾಸುಗಳನ್ನು ಮಾತ್ರ ಖರ್ಚು ಮಾಡಿದೆಯೆಂದು ಹೇಳಿದ್ದಾರೆ. ಇದು ಬಹಳ ಆಶ್ಚರ್ಯ. ಆದರೆ ಅವರು ಬಡ್ಜೆಟ್ಟಿನ ವಾಲ್ಯೂಂ ಒಂದನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಂಡು ಹಾಗೆ ಹೇಳಿದ್ದಾರೆ. ಆದರೆ ಅದು ಸರಿಯಲ್ಲ. ಹಾಗೆ ಲೆಕ್ಕ ಹಾಕಬೇಕಾದರೆ ಈ ವಾಲ್ಯೂಂ ಒಂದು ಮತ್ತು ಎರಡು—ಈ ಎರಡು ಭಾಗಗಳನ್ನೂ ಸೇರಿಸಿ ಲೆಕ್ಕ ಹಾಕಿದರೆ ಅದು ಒಂದು ರೂಪಾಯಿಗೆ 0-11-2 ಕಾಸುಗಳು ಖರ್ಚಾಗಿವೆ. ಇದರಿಂದ ಮೈಸೂರು ಸರ್ಕಾರ ಇತರ ಪ್ರಾಂತ್ಯಗಳಿಗಿಂತ ಪ್ರಗತಿಪರವಾಗಿ ಖರ್ಚು ಮಾಡುತ್ತಾ ಇದೆ ಎಂದು ಹೇಳುವುದಕ್ಕೆ ಯಾವ ಭಿನ್ನಾಭಿಪ್ರಾಯವೂ ಇಲ್ಲ. ನಮ್ಮ ಸರ್ಕಾರದವರು ಈ ಡೆವಲಪ್‌ಮೆಂಟ್ ಬಾಬುಗಳಿಗೆಲ್ಲಾ ಆಶಾದಾಯಕವಾದ ರೀತಿಯಲ್ಲಿ ಹಣವನ್ನೊದಗಿಸುತ್ತಿದ್ದಾರೆ. ಇದರಿಂದ ನಮ್ಮ ದೇಶ ಬಹುಬೇಗ ಮುಂದುವರಿಯುತ್ತದೆಂಬ ಭರವಸೆ ನಮಗೆಲ್ಲರಿಗೂ ಇದೆ. ಆದರೆ ನಮ್ಮ ಸರ್ಕಾರದವರು ಬಡ್ಜೆಟ್ಟಿನಲ್ಲಿ ಅಭಿವೃದ್ಧಿ ಇಲಾಖೆಗಳಿಗೆ ಹೆಚ್ಚು ಹಣವನ್ನೇನೋ ಒದಗಿಸುತ್ತಾರೆ. ಆದರೆ ವರ್ಷದ ಆಖೈರಿನಲ್ಲಿ ನೋಡಿದರೆ ಬಹುಭಾಗ ಖರ್ಚಾಗದೆ ಉಳಿಯುತ್ತಿರುವುದು ವಿಷಾದಕರ. ಉದಾಹರಣೆಗೆ—1953-54ರಲ್ಲಿ ವಿದ್ಯಾಭ್ಯಾಸ ಇಲಾಖೆಯಲ್ಲಿ 34 ಲಕ್ಷ ಚಿಲ್ಲರೆ ಖರ್ಚು ಮಾಡಿಲ್ಲ. ಮೆಡಿಕಲ್‌ನಲ್ಲಿ ಆರು ಲಕ್ಷ; ಪಬ್ಲಿಕ್ ಹೆಲ್ತ್‌ನಲ್ಲಿ 13 ಲಕ್ಷ ; ವ್ಯವಸಾಯ ಇಲಾಖೆಯಲ್ಲಿ ಎಂಟು ಲಕ್ಷ; ಇಂಡಸ್ಟ್ರೀಸ್ ಅಂಡ್ ಸಪ್ಲೈಸ್ ಇಲಾಖೆಯಲ್ಲಿ 113 ಲಕ್ಷ ; ಸಿವಿಲ್ ವರ್ಕ್ಸ್‌ನಲ್ಲಿ ಒಂಭತ್ತು ಲಕ್ಷ ; ಕಮ್ಯುನಿಟಿ ಡೆವಲಪ್‌ಮೆಂಟ್ ಪ್ರಾಜೆಕ್ಟುಗಳ ಬಾಬಿನಲ್ಲಿ 11 ಲಕ್ಷ—ಕಡಿಮೆ ಖರ್ಚು ಮಾಡಿದ್ದಾರೆ. ಈ ವರ್ಷದ ಬಡ್ಜೆಟ್ಟಿನಲ್ಲಿ ಈ ಬಾಬುಗಳಿಗೆಲ್ಲಾ ಇನ್ನೂ ವಿಶೇಷವಾಗಿ ಹಣವನ್ನೊದಗಿಸಲಾಗಿದೆ. ಆದರೂ ಒದಗಿಸಿದ ಹಣವನ್ನು ಖರ್ಚು ಮಾಡುವುದು ಮುಖ್ಯ. ಈ ಬಾಬುಗಳಲ್ಲಿ ಖರ್ಚು ಮುಖ್ಯವೇ ಹೊರತು ಒದಗಿಸುವುದು ಮುಖ್ಯವಲ್ಲ. ಹೀಗಿರುವಾಗ ಸರ್ಕಾರದವರು ಯಾವ ಬಾಬಿಗೂ ಹಣವನ್ನು ಕಮ್ಮಿಯಾಗಿ ಒದಗಿಸಿಲ್ಲ ಅನ್ನುವುದು ಅಂಕಿ ಅಂಶಗಳಿಂದಲೇ ಗೊತ್ತಾಗುತ್ತದೆ. ಹೀಗೆ ಹೆಚ್ಚು ಹೆಚ್ಚಾಗಿ ಹಣವನ್ನು ಒದಗಿಸುತ್ತಿರುವುದರಿಂದ ಪ್ರಜೆಗಳ ಆಶೋತ್ತರಗಳೆಲ್ಲ ಬೇಗ ಈಡೇರುತ್ತವೆಂಬ ಭರವಸೆ ಎಲ್ಲರಿಗೂ ಕಂಡುಬರುತ್ತಿದೆ. ಆದುದರಿಂದ ನಮ್ಮ ಸರ್ಕಾರ ಈ ನೇಷನ್ ಬಿಲ್ಡಿಂಗ್ ಆಕ್ಟಿವಿಟೀಸಿಗೆ ಬಡ್ಜೆಟ್ಟಿನಲ್ಲಿ ಕೊಂಚ ಖೋತಾ ಕಂಡುಬಂದಾಗ್ಯೂ ಈ ಅಭಿವೃದ್ಧಿ ಕಾರ್ಯಗಳಿಗೆ ಮಾತ್ರ ಹಣವನ್ನು ಕಡಮೆ ಮಾಡಬಾರದೆಂಬ ಮನೋಭಿಪ್ರಾಯವಿರತಕ್ಕದ್ದು ನ್ಯಾಯವಾಗಿಯೇ ಇದೆ. ಇನ್ನುಮುಂದೆ ನಮ್ಮ ಸರ್ಕಾರದವರು ಈ ಬಾಬುಗಳಲ್ಲಿ ಉಳಿತಾಯ ಆಗುವುದಕ್ಕೂ ಸಹ ಅವಕಾಶ ಕೊಡದಂತೆ ನಡೆದುಕೊಳ್ಳುತ್ತಾರೆಂಬ ಭರವಸೆ ನನಗಿದೆ.

ಆದರೆ ಸ್ವಾಮಿ, ಈ ಸಂದರ್ಭದಲ್ಲಿ ನಾನು ಕೆಲವು ವಿಚಾರಗಳನ್ನು ಸರ್ಕಾರದವರ ಗಮನಕ್ಕೆ ತರಬೇಕಾಗಿದೆ. ಕೆಲವು ಸರ್ಕಾರಿ ಇಲಾಖೆಗಳ ನಡತೆಯ ಬಗ್ಗೆ ನನಗೆ ಕಂಡುಬಂದಿರತಕ್ಕಂಥ ನ್ಯೂನತೆಗಳನ್ನೀಗ ಸರ್ಕಾರದವರ ಗಮನಕ್ಕೆ ತರಲಿಚ್ಛಿಸುತ್ತೇನೆ. ನಾನು

(ಶ್ರೀ ಟಿ. ಸಿ. ಬಸಪ್ಪ.)

ಮೊಟ್ಟಮೊದಲನೆಯದಾಗಿ ಈ ಫಾರೆಸ್ಟ್ ಇಲಾಖೆಯ ವಿಚಾರದಲ್ಲಿ ಎರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಶಿವಮೊಗ್ಗಾ ಸರ್ಕಲ್ ಇಲಾಖೆಯ ವಿಚಾರದಲ್ಲಿ ಹೇಳತಕ್ಕದ್ದು ಬಹಳ ವಿಚಾರಗಳಿವೆ. ಆ ಸರ್ಕಲ್‌ನಲ್ಲಿ ಸೌದೆ ಮತ್ತು ಬಿದಿರು ಬೊಂಬುಗಳನ್ನು ಕತ್ತರಿಸತಕ್ಕ ಕಂಟ್ರಾಕ್ಟರುಗಳಿಗೆ ಹಣವನ್ನು ಮುಂಗಡವಾಗಿ ಕೊಡತಕ್ಕಂಥ ಒಂದು ಪದ್ಧತಿಯಿದೆ. ಹೀಗೆ ಈತಹಲ್‌ವರೆಗೆ ಕೊಟ್ಟಿರತಕ್ಕಂಥ ಮೊಬಲಗು ಒಬ್ಬೊಬ್ಬ ಆಫೀಸರ ಲೆಕ್ಕದಲ್ಲಿ ಒಂದು ಲಕ್ಷ, 40 ಸಾವಿರ, 50 ಸಾವಿರ ಅಡ್ವಾನ್ಸ್ ನಿಂತುಬಂದಿದೆ. ಆದರೆ ಹೀಗೆ ಈ ಅಡ್ವಾನ್ಸ್ ಮೊಬಲಗನ್ನು ಯಾವ ಅಧಿಕಾರಿಗಳು ಕೊಟ್ಟಿರುತ್ತಾರೋ ಅವರನ್ನು ಬೇರೆ ಸ್ಥಳಗಳಿಗೆ ವರ್ಗಾಯಿಸಿದರೆ ಅವರು ಕೊಟ್ಟಿರತಕ್ಕಂಥ ಅಡ್ವಾನ್ಸ್ ಮೊಬಲನ್ನು ವಸೂಲ್ಮಾಡುವುದು ಬಹಳ ಕಷ್ಟವಾಗುತ್ತದೆಂಬ ನೆಪದಮೇಲೆ ಅವರನ್ನು ಒಂದೇ ಸ್ಥಳದಲ್ಲಿ ಅನೇಕ ವರ್ಷಗಳಿಂದಲೂ ಇಡಲಾಗಿದೆ. ಇದಕ್ಕೆ ನಿದರ್ಶನವಾಗಿ ಕೆಲವು ವಿಷಯಗಳನ್ನು ತಿಳಿಸಬೇಕೆಂದಿರುತ್ತೇನೆ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಆ ಮೊಬಲಗನ್ನೆಲ್ಲಾ ರೈಟ್ ಆಫ್ ಮಾಡಿದರಾಯಿತು!

ಶ್ರೀ ಟಿ. ಸಿ. ಬಸಪ್ಪ.—ಈವರೆಗೆ ಅವರು ಕೊಟ್ಟಿರುವಂಥ ಮೊಬಲಗೆಲ್ಲಾ ಸುಮಾರು ಕೆಲವು ಲಕ್ಷಗಳವರೆಗೂ ಇದೆಯೆಂದು ಕೇಳುತ್ತೇನೆ. ಈಗ ಈ ಮೊಬಲಗೆಲ್ಲಾ ವಸೂಲ್ಮಾಡಲು ಸಾಕಷ್ಟುರಹವಿಲ್ಲವೆಂಬ ಕಾರಣದಮೇಲೆ ಹಾಗೆ ಅವರಿಗೆ ಅಡ್ವಾನ್ಸ್ ಕೊಡಲಾಗಿದ್ದ ಮೊಬಲಗಿನಲ್ಲಿ ಸೇಕಡ ಐದರಂತೆ ಹಣವನ್ನು ತೆಗೆದುಕೊಂಡು ಉಳಿದುದನ್ನು ರೈಟ್ ಆಫ್ ಮಾಡಬೇಕೆಂದಿದ್ದಾರೆಂದು ನಾನು ಕೇಳುತ್ತಿದ್ದೇನೆ. ಹೀಗೆ ಅವರಿಗೆ ಕೊಡಲಾಗಿದ್ದಂಥ ಅಡ್ವಾನ್ಸ್ ಮೊಬಲಗಿನಲ್ಲಿ ಶೇಕಡ ಐದರಷ್ಟನ್ನು ಫೈನ್ ಮಾದರಿಯಲ್ಲಿ ಒಂದು ಟೋಕನ್ ಶಿಕ್ಷೆಯ ಮಾದರಿಯಲ್ಲಿ ಮಾತ್ರ ವಸೂಲ್ಮಾಡಬೇಕೆಂದು ಸರ್ಕಾರಕ್ಕೆ ಶಿಫಾರ್ಸು ಆಗಿದೆಯಂತೆ ತಿಳಿಸಿದ್ದಾರಂತೆ. ಹೀಗೆಲ್ಲಾ ಮಾಡುವುದು ಬಹಳ ತಪ್ಪು. ಹಾಗೆ ಆ ಅಧಿಕಾರಿಗಳು ಅಡ್ವಾನ್ಸ್ ಮೊಬಲಗನ್ನು ಪೂರ್ತಿ ವಸೂಲ್ಮಾಡದಿರುವುದಕ್ಕೆ ಅನೇಕ ಕಾರಣಗಳಿವೆಯೆಂದು ನಾನು ಹೇಳುತ್ತೇನೆ. 1954-55ರಲ್ಲಿ ಬಿದಿರು ಕಡಿದು ಸಪ್ಲೈ ಮಾಡಲು ಟೆಂಡರುಗಳನ್ನು ಕರೆದಾಗ ಕಡಮೆ ದರದಲ್ಲಿ ಕತ್ತರಿಸುವುದಾಗಿ ಟೆಂಡರ್ ಕೊಟ್ಟಿದ್ದರೂ ಸಹ ಹಿಂದೆ ಯಾರಿಗೆ ಅಡ್ವಾನ್ಸು ಕೊಡಲಾಗಿದ್ದಿತೋ ಅವರದು ಜಾಸ್ತಿ ರೇಟಿಗೆ ಟೆಂಡರಿದ್ದಾಗ್ಯೂ—ಕಡಿಮೆ ಟೆಂಡರ್‌ನವರಿಗೆ ಕೊಡದೆ ಮೊದಲು ಕೊಟ್ಟಿದ್ದ ಅಡ್ವಾನ್ಸ್ ವಸೂಲಾಗುವುದಿಲ್ಲವೆಂಬ ನೆಪದಮೇಲೆ ಆ ಜಾಸ್ತಿ ಟೆಂಡರ್‌ನವರಿಗೇ ಪುನಃ ಅವಕಾಶ ಕೊಟ್ಟಿದ್ದಾರೆ. ಹೀಗೆ ಈ ಒಂದು ಸಂದರ್ಭದಲ್ಲೇ ಕಡಮೆ ಟೆಂಡರುಗಳನ್ನು ತಿರಸ್ಕರಿಸಿ ಈ ಹೆಚ್ಚಿನ ರೇಟಿನ ಟೆಂಡರ್‌ದಾರರಿಗೆ ಅವಕಾಶಕೊಟ್ಟಿದ್ದರಿಂದ ಸರ್ಕಾರಕ್ಕೆ ಸುಮಾರು 50 ಸಾವಿರ ರೂಪಾಯಿಗಳ ಲುಕ್ಸಾನಾಗಿರುತ್ತದೆಯೆಂದು ಕೇಳುತ್ತಿದ್ದೇನೆ. ಆದುದರಿಂದ ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಇದೆಲ್ಲವನ್ನೂ ಕೂಲಂಕಷವಾಗಿ ಕೂಡಲೆ ವಿಚಾರ ಮಾಡಬೇಕೆಂದು ಹೇಳುತ್ತೇನೆ—ರೈಲ್ವೆ ಇಲಾಖೆಗೆ ಬೇಕಾದಂಥ ಸ್ಲೀಪರ್ಸ್‌ಗಳನ್ನು ಕತ್ತರಿಸಿ ಕೊಡುವ ಕೆಲಸವನ್ನೂ ಸಹ ಈ ಫಾರೆಸ್ಟ್ ಇಲಾಖೆಗೆ ವಹಿಸಲಾಗಿತ್ತು. ಆ ಸಂದರ್ಭದಲ್ಲಿ ಮೀಟರ್ ಗೇಜ್ ಸೈಜಿನ ಸ್ಲೀಪರ್ಸ್‌ಗಳು ಸೆಲೆಕ್ಷನ್ ಆಗದೆ ಉಳಿದಲ್ಲಿ ಅವನ್ನು ನ್ಯಾರೋಗೇಜ್ ಸ್ಲೀಪರ್ಸ್ ಆಗಿ ಮಾಡಬೇಕಾಗುತ್ತದೆ ಆ ಒಂದೊಂದು ಸ್ಲೀಪರ್ ಅನ್ನೂ ತುಂಡು ಹಾಕಿಕೊಡುವುದಕ್ಕೆ ಇಲಾಖೆಯವರು ಒಂದೊಂದು ರೂಪಾಯಿನಂತೆ ಕೊಡುತ್ತಿದ್ದಾರೆ. ಒಂದು ಸ್ಲೀಪರಿಗೆಲ್ಲಾ ತುಂಡುಹಾಕಿಕೊಡಲು 2-3 ಆಣೆಗಳಿಗೆ ಮೇಲೆ ಆಗುವುದಿಲ್ಲ. ಹೀಗೆಲ್ಲಾ ಸರ್ಕಾರದ ಹಣವನ್ನು ದುಂದು ವೆಚ್ಚ ಮಾಡುತ್ತಿದ್ದಾರೆ. ಇದೆಲ್ಲವನ್ನೂ ನಾನು ಬಹಳ ವಿಷಾದದಿಂದ ತಮ್ಮಲ್ಲಿ ತಿಳಿಸುತ್ತಿದ್ದೇನೆ.

ಈ ಅಡ್ವಾನ್ಸುಗಳು ಬಹುಭಾಗ ವಸೂಲಾಗದೆ ನಿಲ್ಲುವುದು, ಟೆಂಡರ್‌ಗಳ ವಿಲೇವಾರಿಯಲ್ಲಿ ಅಕ್ರಮ ಅನೀತಿ, ಸರ್ಕಾರದ ಹಣ ತಮಗೆ ತೋರಿದ ರೀತಿ ಕೆಲವರಿಗೆ ಅನುಕೂಲಮಾಡುವುದಕ್ಕೋಸ್ಕರ ದುಂದು ವೆಚ್ಚಮಾಡುತ್ತಿರುವುದು ಇವುಗಳಿಗೆಲ್ಲಾ ಈ ಇಲಾಖೆಯ ಕೆಲವು ಅಧಿಕಾರಿಗಳು ಕಾರಣ ಮತ್ತು ಈ ಬಗ್ಗೆ ಸರಿಯಾದ ಮೇಲ್ವಿಚಾರಣೆಯಿಲ್ಲದಿರುವುದು ಕಾರಣ.

ಇನ್ನೂ ಒಂದು ವಿಚಾರವಿದೆ. ಕಾಡಿನೊಳಗಿನಿಂದ ಈ ನಾಟಾಗಳನ್ನು ಈಚೆಗೆ ಸಾಗಿಸಲು 36 ಮೈಲಿ ಫಾಸಲೆ ಇರುವಂಥ ಕಡೆ ಮೈಲಿಗೆ ಒಂದು ಅಡಿಗೆ 11 ಆಣೆ ಟೆಂಡರ್ ರೇಟ್ ಇದ್ದು—ಅದೇ ಕಡೆ 20 ಮೈಲಿ ಫಾಸಲೆಯಿಂದ ಸಾಗಿಸುವುದಕ್ಕೆ ಮೈಲಿಗೆ ಒಂದು ಅಡಿಗೆ ಒಂದು ರೂಪಾಯಿ, ಒಂದೂಕಾಲು ರೂಪಾಯಿನಂತೆ ಅಮಾನಿ ರೇಟ್ ಹಾಕಿಕೊಟ್ಟಿದ್ದಾರೆ. ಇದನ್ನೆಲ್ಲಾ ಸಂಬಂಧಪಟ್ಟ ಮಂತ್ರಿಗಳು ಕೂಡಲೆ ವಿಚಾರಣೆ ಮಾಡಬೇಕು. ಈ ಹಿಂದೆ ಈ ಇಲಾಖೆಯ ಆಡಳಿತದ ಬಗ್ಗೆ ನಾನೇ ಎಷ್ಟೋವೇಳೆ ಪ್ರಶ್ನೆಗಳ ಮತ್ತು ಬೋತಾ ಸೂಚನೆಗಳ ಮೂಲಕ ಅನೇಕ ವಿಚಾರಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಈ ಕೆಲಸಗಳೆಲ್ಲವೂ ಆ ಕಂಟ್ರಾಕ್ಟರ್ಸ್‌ಗಳೂ ಮತ್ತು ಈ ಇಲಾಖೆಯ ಅಧಿಕಾರಿಗಳೂ ಒಂದಾಗಿರುವುದರಿಂದ ನಡೆಯುತ್ತಿವೆ. ಇದರಿಂದ ಸರ್ಕಾರಕ್ಕೆ ಅಪಾರವಾದ ನಷ್ಟ ಉಂಟಾಗುತ್ತಿದೆ. ಇದರ ಬಗ್ಗೆ ತನಿಖೆ ನಡೆಸಲು ತಾವು ತಜ್ಞರುಗಳನ್ನೊಳಗೊಂಡ ಒಂದು ಸಮಿತಿಯನ್ನು ನೇಮಕ ಮಾಡತಕ್ಕದ್ದೂ ಸಹ ಬಹಳ ಅಗತ್ಯವಾದದ್ದು.

ಇಂಜಿನಿಯರಿಂಗ್ ಇಲಾಖೆಯ ವಿಷಯವೂ ಹೀಗೆಯೇ ಇದೆ. ರಸ್ತೆಗೆ ಕಾನ್‌ಕ್ರೀಟ್ ಮಾಡುವುದರ ಬಗ್ಗೆ ದರಗಳು ಎಲ್ಲಾ ಕಡೆಯಲ್ಲೂ ಒಂದೇ ರೀತಿಯಾಗಿದ್ದರೂ ಇವರು ಮೈಲಿಯೊಂದಕ್ಕೆ 75 ಸಾವಿರದತನಕ ಖರ್ಚು ಮಾಡಲು ಪ್ರಾರಂಭಮಾಡಿದ್ದಾರೆ. ನಾನು ಈ ರಸ್ತೆ ಮಾಡಿಸಿರುವುದನ್ನು ಸ್ವಂತ ನೋಡಿ ಲೆಖ್ಖ ಹಾಕಿರುವುದರಲ್ಲಿ ಒಂದು ಮೈಲಿಗೆ 48 ಸಾವಿರದ ಮೇಲೆ ಆಗುವುದಿಲ್ಲವೆಂದು ಹೇಳುತ್ತೇನೆ. ಇದರ ಬಗ್ಗೆ ತಮಗೆ ಬೇಕೆಂದರೆ ನಾನು ವಿಶಿಷ್ಟ ತಪಶೀಲುಗಳನ್ನೂ ಕೂಡ ಕೊಡಬಲ್ಲೆ.

ತರೀಕೆರೆಗೆ 13 ಮೈಲಿಯಿರುವ ಭದ್ರಾವತಿಯಿಂದ ಮರಳು ತರಬೇಕು. ಕಡೂರಿನಲ್ಲಿ ಮರಳು ಅಲ್ಲೇ ದೊರೆಯುತ್ತದೆ. ಆದರೂ ಎರಡು ಕಡೆಗೂ ಒಂದೇ ದರ. ಜಲ್ಲಿ ತರೀಕೆರೆಗೂ ಕಡೂರಿನಿಂದ ಅಂದರೆ 18 ಮೈಲಿ ದೂರದಿಂದ ಬರಬೇಕು. ಕಡೂರಿನಲ್ಲಿ ಜಲ್ಲಿ ಅಲ್ಲೇ ದೊರೆಯುತ್ತದೆ. ಹೀಗಿದ್ದರೂ ತರೀಕೆರೆಯಲ್ಲಿ ಕೊಟ್ಟಿರುವ ದರವನ್ನೇ ಕಡೂರಿನಲ್ಲೂ ಕೊಟ್ಟಿದ್ದಾರೆ. ಇದು ವಿಚಾರ ಮತ್ತು ವಿಮರ್ಶಾರ್ಹ. ಈ ರೀತಿ ದುಬಾರಿ ದರ ಕೊಡುವುದರಿಂದ ಮೊಬಲಗು ಜಾಸ್ತಿಯಾಗುವುದರಲ್ಲಿ ಸಂದೇಹವಿಲ್ಲ. ಈ ಬಗ್ಗೆ ವಿಮರ್ಶೆಮಾಡಿ ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕಾದುದು ಅಗತ್ಯ.

11 A.M.

ಶ್ರೀ ಡಿ. ಆರ್. ಕರಿಗೌಡ (ಹಾಸನ).—ಮಾನ್ಯ ಅಧ್ಯಕ್ಷರೆ, 1955-56ನೆಯ ಸಾಲಿನ ಆಯವ್ಯಯದ ಪಟ್ಟಿಯನ್ನು ಸಮರ್ಥನೆ ಮಾಡುತ್ತಾ ಸರ್ಕಾರದ ಗಮನಕ್ಕೆ ಕೆಲವು ಅಂಶಗಳನ್ನು ತರಬೇಕೆಂದಿಚ್ಛಿಸುತ್ತೇನೆ. ಪಾನ ನಿರೋಧ ವಿಚಾರದಲ್ಲಿ ಕೆಲವರು ಹೇಳಿದ್ದಾರೆ. ಮೈಸೂರು ಕಾಂಗ್ರೆಸ್ ಆಡಳಿತಕ್ಕೆ ಬಂದಮೇಲೆ ಕೆಲವು ಜಿಲ್ಲೆಗಳಲ್ಲಿ ಪಾನನಿರೋಧವನ್ನು ಜಾರಿಗೆ ತಂದು, ಹಾಸನ ಜಿಲ್ಲೆಯಲ್ಲಿಯೂ ಕೆಲವು ತಾಲ್ಲೂಕುಗಳಲ್ಲಿ ಜಾರಿಗೆ ತಂದು ಇನ್ನು ಕೆಲವುಕಡೆ ಹಾಗೆಯೇ ಇಟ್ಟಿರುವುದು ಬಹಳ ಅನ್ಯಾಯ. ಚಿಕ್ಕಮಗಳೂರು, ತುಮಕೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಪಾನನಿರೋಧವನ್ನು ಜಾರಿಗೆ ತಂದು ಅರಸೀಕೆರೆ ಮತ್ತು ಹಾಸನ ತಾಲ್ಲೂಕುಗಳಲ್ಲಿ ಜಾರಿಗೆ ತರದೇ ಇರುವುದರಿಂದ ಬೇರೆ ಕಡೆಗಳಿಂದ ಅಲ್ಲಿಗೆ ಬಂದು ಜನರು ಕುಡಿಯುತ್ತಾರಲ್ಲದೆ ಕೆಲವರು ಅಲ್ಲಿಗೆ ಬಂದು ಹಣ ಮಾಡಿಕೊಂಡು ಅಲ್ಲೇ ಬಿಡಾರ ಮಾಡಿಕೊಂಡಿದ್ದಾರೆ. ಯಮಗನೂರು ಹಾವೇರಿ ಕಡೆಯಿಂದ ಅಲ್ಲಿಗೆ ಬಂದು ಕುಡಿಯುತ್ತಾರೆ. ಹಾಸನ ಜಿಲ್ಲೆಯಲ್ಲೇ ಸಕಲೇಶಪುರ ಮತ್ತು ಬೇಲೂರು ತಾಲ್ಲೂಕುಗಳಲ್ಲಿ ಪಾನನಿರೋಧವನ್ನು ಜಾರಿಗೆ ತಂದು ಹಾಸನ ಮತ್ತು ಇನ್ನೂ ಕೆಲವು ತಾಲ್ಲೂಕುಗಳನ್ನು ಹಾಗೆಯೇ ಬಿಟ್ಟಿರುವುದು ಬಹಳ ಅನ್ಯಾಯ. ಮುಖ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ, ಇಂಡಿಯಾ ದೇಶದಲ್ಲಿ ಓಟು ತೆಗೆದುಕೊಂಡರೆ ಮುಕ್ಕಾಲು ಭಾಗದಷ್ಟು ಜನರು ಪಾನ ನಿರೋಧಕ್ಕೆ ಓಟು ಕೊಡುತ್ತಾರೆಂದು ಹೇಳಿದ್ದಾರೆ. ಹೀಗಿರುವಾಗ ಖಂಡಿತವಾಗಿ ಪೂರ್ತಿಯಾಗಿ ಹಾಸನ ಜಿಲ್ಲೆಯಲ್ಲಿ ಪಾನನಿರೋಧವನ್ನು ಜಾರಿಗೆ ತರಬೇಕು.

ವಿದ್ಯಾಭ್ಯಾಸದ ಇಲಾಖೆಗೆ ಹಣವನ್ನೇನೋ ಒದಗಿಸಿದ್ದಾರೆ. ಆಧರೆ ಅದನ್ನು ಸರಿಯಾಗಿ ಖರ್ಚು ಮಾಡುತ್ತಿಲ್ಲ. ಮಂತ್ರಿಗಳು ಪ್ರವಾಸಹೋದಾಗ ಅನೇಕ ಕಡೆಗಳಲ್ಲಿ ಫಸ್ಟ್ ಗ್ರೇಡ್ ಕಾಲೇಜುಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಇದಕ್ಕಾಗಿ ಬಡ್ಜೆಟ್ಟಿನಲ್ಲಿ ಒಂದು ಕಾಸೂ ಒದಗಿಸಿಲ್ಲ. ಉದಾಹರಣೆಗೆ ಹಾಸನದಲ್ಲಿ ಇಂಟರ್‌ಮೀಡಿಯೆಟ್ ಕಾಲೇಜನ್ನು ಫಸ್ಟ್ ಗ್ರೇಡ್ ಕಾಲೇಜು ಮಾಡುತ್ತೇವೆಂದು ಹೇಳಿದ್ದರು. ಆದರೆ ಅದಕ್ಕಾಗಿ ಒಂದು ಕಾಸೂ ಒದಗಿಸದೇಯಿರುವುದನ್ನು ನೋಡಿದರೆ ವ್ಯಸನವಾಗುತ್ತದೆ. ಈಗಲಾದರೂ ಜಿಲ್ಲಾ ಹೆಡ್ ಕ್ವಾರ್ಟರುಗಳಲ್ಲಿ ಫಸ್ಟ್ ಗ್ರೇಡ್ ಕಾಲೇಜುಗಳನ್ನೊದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಟ್ರೈನಿಂಗ್ ಕಾಲೇಜುಗಳನ್ನು ಎಲ್ಲಾ ಜಿಲ್ಲೆಗಳಲ್ಲಿಯೂ ಪ್ರಾರಂಭ ಮಾಡದಿದ್ದರೆ ಶಿಕ್ಷಣ ಪಡೆದ ಉಪಾಧ್ಯಾಯರಿಲ್ಲದೆ ಸರಿಯಾದ ಶಿಕ್ಷಣ ಕೊಡುವುದಕ್ಕಾಗುವುದಿಲ್ಲ. ಈ ವಿಷಯವನ್ನು ಅವರು ಹೇಳಿದ್ದರೂ ಕೂಡ ಇನ್ನೂ ಪ್ರಾರಂಭ ಮಾಡಿಲ್ಲ. ಚಿಕ್ಕಮಗಳೂರಿನಲ್ಲಿ ಪ್ರಾರಂಭ ಮಾಡಿದ್ದೇವೆಂದು ಭಾಷಣದಲ್ಲಿ ಹೇಳಿದ್ದಾರೆ, ಆದರೆ ಚಿತ್ರದುರ್ಗ ಜಿಲ್ಲೆಯಲ್ಲಿದೆ, ಬಹುಶಃ ಇದರಲ್ಲಿ ತಪ್ಪಿರಬಹುದೆಂದು ಕಾಣುತ್ತದೆ. ಭಾಷಣದಲ್ಲಿ ಚಿಕ್ಕಮಗಳೂರಿನಲ್ಲಿ ಎಂದು ಹೇಳಿದರು, ಆದರೆ ಬಡ್ಜೆಟ್ಟಿನಲ್ಲಿ ಚಿತ್ರದುರ್ಗ ಎಂದಿದೆ. ಚಿಕ್ಕಮಗಳೂರು ಮತ್ತು ಹಾಸನದಲ್ಲಿ ಟ್ರೈನಿಂಗ್ ಕಾಲೇಜುಗಳನ್ನೊದಗಿಸಬೇಕು. ಮಲೆನಾಡಿನ ರಸ್ತೆಗಳ ಸ್ಥಿತಿ ಹೇಗಿದೆಯೆಂಬುದು ಎಲ್ಲರಿಗೂ ಗೊತ್ತೇ ಇದೆ. ಐ. ಪಿ. ಸಿ. ರಸ್ತೆಗಳಿಗೆ maintenance grant ವರ್ಷಕ್ಕೆ 100 ರೂಪಾಯಿ ಕೊಟ್ಟರೆ ಹೇಗೆ ಸರಿಯಾದ ಸ್ಥಿತಿಯಲ್ಲಿಡುವುದು ? ಕೆಲವು ಕಡೆ ಬೇರೆ-ಬೇರೆ ಕೆಲಸಗಳಿಗೆ ಖರ್ಚಾಗಿ ಅಲ್ಲಿಗೆ ಬೇಕಾದ ಸೇತುವೆ ಚರಂಡಿ ಕೂಡ ಮಾಡಿಲ್ಲ. ಆ ರಸ್ತೆಗಳಲ್ಲಿ ಹೋದರೆ ಸೈಕಲ್, ಎತ್ತಿನ ಗಾಡಿ ಕೂಡ ಬೀಳುವ ಸ್ಥಿತಿಯಲ್ಲಿವೆ. ಆದುದರಿಂದ ಆ ಹಳ್ಳಿಯ ರಸ್ತೆಗಳಿಗೆ ಹೆಚ್ಚು ಗ್ರ್ಯಾಂಟು ಕೊಡಬೇಕು.

ಬಡವರಿಗೆ ಮನೆಗಳನ್ನು ಕಟ್ಟಿಸುವುದಕ್ಕಾಗಿ ಒಂದು ಕೋಟಿ ರೂಪಾಯಿ ಒದಗಿಸಿದ್ದಾರೆ. ಹಳ್ಳಿಗಾಡಿನಲ್ಲಿ ಮನೆಗಳಿಗೆ ಬಹಳ ಕಷ್ಟವಾಗಿದೆ. ಸಹಕಾರ ಸಂಘ ಅಥವಾ ಬೇರೆ ಯಾವುದಾದರೂ ಸಂಘಗಳ ಮೂಲಕ ಹಳ್ಳಿಗಳಲ್ಲಿಯೂ ತಾಲ್ಲೂಕುಗಳಲ್ಲಿಯೂ ಮನೆಗಳನ್ನು ಕಟ್ಟಿಸಲು ಹಣವನ್ನೊದಗಿಸಬೇಕು. ಅಗತ್ಯವಾದರೆ ಇದಕ್ಕವಕಾಶವಾಗುವಂತೆ ಸಹಕಾರ ಸಂಘಗಳ ಬೈಲಾಗಳನ್ನು ತಿದ್ದುಪಡಿ ಮಾಡಬೇಕು.

ರಿಜರ್ವ್ ಬ್ಯಾಂಕಿನಿಂದ ಹಣವನ್ನು ಪಡೆದು ವ್ಯವಸಾಯಗಾರರಿಗೆ ಅಲ್ಪ ಕಾಲಾವಧಿಯ ಸಾಲ ಕೊಡುವುದಕ್ಕೆ ಏರ್ಪಾಡು ಮಾಡಿದ್ದಾರೆ. ಇದರ ನಿಯಮದ ಮೇರೆಗೆ ಒಂದು ವರ್ಷದಲ್ಲಿ ಸಾಲವನ್ನು ವಾಪಸು ಕೊಡಬೇಕು. ಆದರೆ ಸೆಪ್ಟೆಂಬರ್, ಅಕ್ಟೋಬರ್ ತಿಂಗಳಲ್ಲಿ ತೆಗೆದುಕೊಂಡರೂ ಅದನ್ನು ಫೆಬ್ರುವರಿ ಒಳಗಾಗಿ ವಾಪಸು ಕೊಡಬೇಕೆಂದು ಹೇಳುತ್ತಾರೆ. ಹೀಗೆ ಮಾಡುವುದರಿಂದ ರೈತನಿಗೆ ಬಹಳ ಕಷ್ಟವಾಗುತ್ತದೆ. ಮೈಸೂರು ದೇಶದಲ್ಲಿ ಹೋಬಳಿಗೆ ಒಂದೊಂದು ಸಂಘವಿರಬೇಕೆಂದು ಸರ್ಕಾರದವರು ಏರ್ಪಾಡು ಮಾಡಿದ್ದಾರೆ. ಗ್ರ್ಯಾಜುಯೇಟ್ ಇನ್‌ಸ್ಪೆಕ್ಟರುಗಳನ್ನು ನೇಮಿಸಿದ್ದಾರೆ. ಇವರಿಗೆ ಲೆಕ್ಕಗಳನ್ನು ಹೇಗೆ ಇಡಬೇಕೆಂಬುದೂ ಗೊತ್ತಿಲ್ಲ. ರಿಜರ್ವ್ ಬ್ಯಾಂಕಿನಿಂದ ಹಣವನ್ನು ಬೇರೆ ಒದಗಿಸುತ್ತಿರುವಾಗ book keeping ಮತ್ತು accountancy ನಿಯಮಗಳು ತಿಳಿಯದೇಯಿರುವ ಇನ್‌ಸ್ಪೆಕ್ಟರುಗಳನ್ನು ನೇಮಿಸಿದರೆ ಹೇಗೆ ! ಗ್ರ್ಯಾಜುಯೇಟ್ ಇನ್‌ಸ್ಪೆಕ್ಟರುಗಳನ್ನು ನೇಮಿಸಿದರೂ ಕೂಡ ಅವರಿಗೆ ಟ್ರೈನಿಂಗ್ ಅತ್ಯಗತ್ಯ. ಇಲ್ಲದಿದ್ದರೆ, ಹೇಗೆ ಹಣವನ್ನು ಕೊಡಬೇಕು, ಹೇಗೆ ವಸೂಲು ಮಾಡಬೇಕು, ಹೇಗೆ ಖರ್ಚಾಗುತ್ತದೆ ಎಂಬುದು ಗೊತ್ತಾಗುವುದಿಲ್ಲ. ಆದುದರಿಂದ ಟ್ರೈನಿಂಗ್ ಕೇಂದ್ರಗಳನ್ನು ಜಿಲ್ಲಾ ಹೆಡ್‌ಕ್ವಾರ್ಟರುಗಳಲ್ಲಿ ಏರ್ಪಾಡು ಮಾಡಿ, ಅವರಿಗೆ ಶಿಕ್ಷಣ ಕೊಟ್ಟು ಆಮೇಲೆ ಅವರನ್ನು ನೇಮಕ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಲ್ಯಾಂಡ್ ಇಂಪ್ರೂವ್‌ಮೆಂಟ್ ಮತ್ತು ತಕಾವಿ ಲೋನ್ ಬಾಬತು ಬಡ್ಜೆಟ್ಟಿನಲ್ಲಿ ಹಣವನ್ನೊದಗಿಸಿದ್ದಾರೆ. ಇವುಗಳನ್ನೂ ರೆವಿನ್ಯೂ ಇನ್‌ಸ್ಪೆಕ್ಟರು ಅಮಲ್ದಾರರ ಮೂಲಕ ತೆಗೆದುಕೊಳ್ಳಬೇಕು. ಇದಕ್ಕೆ ಒಂದೊಂದು ಫಾರಂ \ ತೆಗೆದುಕೊಳ್ಳಬೇಕಾದರೆ ತಾಲ್ಲೂಕ್ ಆಫೀಸಿನಲ್ಲಿ ಗುಮಾಸ್ತರಿಗೋ ಹೆಡ್ ಗುಮಾಸ್ತರಿಗೋ ಲಂಚ ಕೊಟ್ಟು ತೆಗೆದುಕೊಳ್ಳಬೇಕಾಗಿದೆ. ಇದನ್ನು ತಪ್ಪಿಸಲು ಈ ಹಣವನ್ನು ಸಹಕಾರ ಸಂಘಗಳ ಇನ್‌ಸ್ಪೆಕ್ಟರ್ ಮೂಲಕ ತೆಗೆದುಕೊಳ್ಳುವಂತೆ ಏರ್ಪಾಡು ಮಾಡಬೇಕು.

ಹಳ್ಳಿಗಳ ಕಡೆ ಸ್ಕೂಲು ಕಟ್ಟಡಗಳಿಲ್ಲದೆ ಬಹಳ ತೊಂದರೆಯಾಗುತ್ತಿದೆ. ಹಳ್ಳಿಗಳವರು ಹತ್ತಾರು ವರ್ಷಗಳ ಹಿಂದೆ ಡಿಪಾಜಿಟ್ ಮಾಡಿದ ಹಣ ಖಜಾನೆಯಲ್ಲಿ ಕೊಳೆಯುತ್ತಿದೆ. ಕೂಡಲೇ ಕಟ್ಟಡಗಳನ್ನು ಕಟ್ಟಿಸಬೇಕು.

ಪಬ್ಲಿಕ್ ವರ್ಕ್ಸ್ ಇಲಾಖೆಗೆ ಸಂಬಂಧಪಟ್ಟ ಹಾಗೆ ಒಂದು ಆಶ್ಚರ್ಯದ ಸಂಗತಿ. ಸುಮಾರು ಹದಿನೈದು ವರ್ಷಗಳಹಿಂದೆ ಶಾಂತಿಗ್ರಾಮದಲ್ಲಿ ಒಂದು ಆಸ್ಪತ್ರೆ ಕಟ್ಟಡ ಕಟ್ಟಿಸಲು ಒಬ್ಬರು ಹಣ ಕೊಟ್ಟರು. ಅವರು

(ಶ್ರೀ ಡಿ. ಆರ್. ಕರಿಗೌಡ.)

ಸತ್ತುಹೋದರೂ, ಕಟ್ಟಡಮಾತ್ರ ಇನ್ನೂ ಆಗಿಲ್ಲ. ಮಂತ್ರಿಗಳಾಗಿದ್ದ ಷರೀಫ್ ಸಾಹೇಬರು ಅಸ್ತಿಭಾರ ಶಿಲೆ ಹಾಕಿ ಎಂಟು ವರ್ಷವಾಯಿತು. ಈ ಹೊತ್ತಿನ ವರಗೂ ಕಟ್ಟಡ ಆಗಿಲ್ಲ. ಡಾಕ್ಟರಿಗೆ ವಾಸಕ್ಕೆ ಒಂದು ಕಟ್ಟಡ ಆಗಿದೆ. ಬಚ್ಚಲ ಮನೆಯಲ್ಲಿ ಹಂಡೆಯನ್ನು ಇಡುವುದಕ್ಕಾಗುವುದಿಲ್ಲ. ಅಷ್ಟು ಸಣ್ಣ ಬಾಗಿಲು! ಹದಿಮೂರು ವರ್ಷಗಳಿಂದ ಹದಿಮೂರು ಸಾವಿರ ರೂಪಾಯಿ ಖರ್ಚಾಗಿಲ್ಲ. ಹೀಗೆ ಕೆಲಸ ಮಾಡುತ್ತಾರೆ.

Sri P. M. SWAMIDURAI (Kolar Gold Fields—Scheduled Castes).—Sir, the budget proposals envisage many good schemes under the three heads—Second Five Year Plan, Industries and Cottage Industries. I would like to read three sentences namely: "The Industrial development will be the main feature of the Second Plan and several new industries have to be started." That is one. Another is "Heavy and large-scale industries are the foundation for speedy industrial progress." The third one is "Cottage and rural industries also deserve encouragement." Because they provide appointment to very many people of our country, Sir, I welcome this scheme and at the same time point out to the Government—let them not have the idea of scattering all their capital at Bangalore City and locate all the industries at Bangalore. I request that the Government may kindly spread these industries all over our State and especially in Kolar Gold Fields. Why I mention Kolar Gold Fields is for this reason. In the private sector, there is only one big industry—the Kolar Gold Mining Industry. There is no Government industry at all. In recent years, one mine was closed and a mass retrenchment of 2,500 workers was effetecd. If there had been a Government industry, I am sure, many of those workers would have been absorbed in that industry. I am glad, Sir, that the Government have recently constituted a committee to go into the feasibility of establishing large scale or small scale industries in this area. I request that, at any cost, there must be a large-scale industry at Kolar Gold Fields to give employment to those who habe been retrenched and are still there without employment. When I see the encouragement assured by the Government with regard to industries, I say that the private sector deserves every encouragement. Government is committed to the policy of affording adequate aid to private sector in different enterprises. I really appreciate and welcome this idea. But the Government must take sincere steps to give adequate help to the private sector. In Kolar Gold Fields Messrs John Taylor & Sons are going to start a new shaft which requires financial aid from the Government. This aid has been assured by our President when he recently visited Kolar Gold Fields and I request the Government of Mysore to give very good financial help to that Company so that they may be able to start it earnestly and provide work for those employees who have lost employment very recently.

When I look into the revenue account, an Hon'ble Member suggested that we may get 25 lakhs from Kolar Gold Fields. That will be discussed later on. But I would like to point here that if you demand 25 lakhs from Kolar Gold Fields, certainly it will not be an encouragement at all. Instead of encouraging, Government on the other hand will be discouraging private sector if they were to demand another 20 lakhs. The President has assured the central Government aid and encouragement. So, Sir, in one simple sentence I would like to say—please don't try to kill the goose that lays the golden eggs.

Sri N. HUCHMASTHY GOWDA (Huliyurdurga).—It lays gold itself.

Sri P. M. SWAMIDURAI.—When I think of the amelioration grant, of course it is a decent sum. 35 lakhs and odd is a very encouraging sum. But I feel that the education of the Scheduled castes is more important. Therefore, I request that a considerable amount of this grant, about two to three lakhs, may kindly be diverted to the Schedule Castes for the grant of scholarships. I have been seeing for the past three years that the sum granted for scholarships has remained the same. It does not correspond with the progress and the increasing strength of the student population from the Scheduled Castes. Therefore, I

request that this may be kindly done. Under the same demand, a major portion of the money—of course Government is already taking up that work, but I still emphasise—may be spent for the building up of hostels of the Schedule Castes. Instead of providing them with houses which are inadequate the Government may be pleased to divert a portion of the amount for the construction of the hostels.

When I come to local bodies, I really welcome the reconstitution of village panchayets and the district boards. But I am astounded to note that no amount has been set apart in the Budget for the formation of the municipality of Kolar Gold Field. Though the Chief Minister has assured the early formation of the Kolar Gold Field Municipality when he recently visited that place, it does not find a place in his Budget speech. It is a disappointment. There was no dissenting voice from Kolar Gold Field people. All of them wanted a municipality instead of the present Sanitary Board. I request that this may be kindly attended to.

With regard to prohibition, I am of the firm opinion that it is a failure. Of course, many members say that it is a success. In my constituency Kolar Gold Field, it is a failure. To say it is a success is to stand on prestige. I request that in Kolar Gold Field at least, it may be repealed and the revenue obtained thereby could be made use of to meet the deficit.

Mr. SPEAKER.—Sri Govindaraju; Those Hon'ble Members who have already spoken on the Rajpramukh's Address may please give chances to others to speak.

ಶ್ರೀ ಡಿ. ಎಂ. ಗೋವಿಂದರಾಜು (ನೆಲಮಂಗಲ).—ಮಾನ್ಯ ಅಧ್ಯಕ್ಷರೇ, 1955-56ನೇ ಸಾಲಿನ ಆಯ ವ್ಯಯ ಬಡ್ಜೆಟ್ ಅಂದಾಜನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. Finance Ministerರವರು ಬಹಳ ಚೆನ್ನಾಗಿಯೂ ನಮ್ಮ ಜನಗಳಿಗೆ ಅನುಕೂಲ ವಾಗಿಯೂ ಈ ಬಡ್ಜೆಟ್ಟನ್ನು ಮಂಡಿಸಿರುವುದು ಬಹಳ ಶ್ಲಾಘನೀಯವಾದುದು. ಈಗ ಮೊದಲನ ಪಾಂಚ ವಾರ್ಷಿಕ ಯೋಜನೆಯಲ್ಲಿ ಯಾವ ಯಾವ ಕೆಲಸಗಳನ್ನು ಮಾಡಬೇಕೆಂದು ಯೋಚಿಸಿದ್ದರೋ ಅವೆಲ್ಲವನ್ನೂ ಕೂಡ ಸುಲಲಿತವಾಗಿ ಮಾಡಿರುವುದು ಖಂಡಿತವಾಗಿಯೂ ನಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರನ್ನೇ ತರತಕ್ಕ ದ್ದಾಗಿದೆ. ಮತ್ತು ಅದರಿಂದ ನಮ್ಮ ದೇಶದ ಜನಗಳಿಗೆ ಬಹಳ ಅನುಕೂಲವೂ ಉಂಟಾಗುತ್ತದೆ. ಪಾಂಚವಾರ್ಷಿಕ ಯೋಜನೆಯು ಯಶಸ್ವಿಯಾಗಿ ನಡೆಯುವಂತೆ ಮಾಡುವುದು ನಮ್ಮೆಲ್ಲರ ಏಳಿಗೆಗೆ ಮುಖ್ಯವಾಗಿರುವುದರಿಂದ, ಇದು ಖೋತಾ ಬಡ್ಜೆಟ್ ಆದರೂ ಕೂಡ, ಎಲ್ಲ ವಿಷಯಗಳಲ್ಲಿಯೂ ಇದು ಬಹಳ ವಾಗಿ ಮುಂದುವರಿದು ಹೋಗುತ್ತಿರುವ ವಿಚಾರ ಖಂಡಿತವಾಗಿಯೂ ನಾವು ಅನುಮೋದಿಸತಕ್ಕ ವಿಷಯ ವಾಗಿದೆ. ಆಡಳಿತ ವಿಷಯದಲ್ಲಿ ಮಾನ್ಯ ಸದಸ್ಯರು ಮೈಸೂರು ದೇಶದ ಆಡಳಿತದ ದಕ್ಷತೆ ಬಹಳ ಚೆನ್ನಾಗಿದೆಯೆಂದು ಹೇಳಿದ್ದಾರೆ. ಅವರ ದಕ್ಷತೆ, ಅವರ ಆದರ್ಶಭಾವನೆ, ಮತ್ತು ಬರುಬರತ್ತಾ ಸೇವಾ ಮನೋಭಾವನೆ ಆಡಳಿತ ವರ್ಗದಲ್ಲಿ ಹುಟ್ಟಿರುವುದು ಸಂತೋಷದ ಸಂಗತಿ. ಇಂತಹ ಆಡಳಿತ ವರ್ಗದವರು ಇನ್ನು ಮುಂದೆಯೂ ಕೂಡ ದೇಶಸೇವೆ ಮಾಡತಕ್ಕದ್ದು ಅವರ ಮುಖ್ಯ ಗುರಿಯಾಗಬೇಕು ಮತ್ತು ಅವರೂ ನಮ್ಮ ದೇಶವನ್ನು ಉನ್ನತಸ್ಥಿತಿಗೆ ತರಬೇಕು ಎಂಬ ಭಾವನೆಯಿಂದ ಕೆಲಸಮಾಡಿ ದೇಶದ ಉನ್ನತಿಗೆ ಸಹಾಯಕವಾಗಲೆಂದು ಅವರನ್ನು ನಾನು ಪ್ರಾರ್ಥಿಸುತ್ತೇನೆ.

ಮಾನ್ಯ ಸಚಿವರು ಭೂಸುಧಾರಣೆ ವಿಷಯದಲ್ಲಿ ಹೆಚ್ಚಿನ ಕೆಲಸಮಾಡಿರುವುದು ಬಹಳ ಶ್ಲಾಘನೀಯ ವಾದುದು. ಇವೊತ್ತಿನ ದಿವಸ ಅನೇಕ ಜನಗಳಿಗೆ ಜಮೀನು ಇಲ್ಲದೇ ಇರುವುದು ಗೊತ್ತೇ ಇದೆ. ಆದ್ದರಿಂದ ಎಲ್ಲರಿಗೂ ಕೂಡ ನಮ್ಮ ದೇಶದಲ್ಲಿ ಜಮೀನು ಕೊಡುವುದಕ್ಕೆ ಏನು ಏರ್ಪಾಡನ್ನು ಮಾಡಬೇಕೋ ಅದನ್ನು ಮಾಡಬೇಕಾದುದು ನಮ್ಮೆಲ್ಲರ ಕರ್ತವ್ಯವಾಗಿದೆ. ಇವೊತ್ತಿನ ದಿವಸ ನಮ್ಮ ದೇಶದಲ್ಲಿ ಅನೇಕ ಕಾಡುಗಳು ಹೆಸರಿಗೆ ಮಾತ್ರ ಕಾಡುಗಳಾಗಿವೆ. ಯಾವ ಕಾಡಿನಲ್ಲಿ ಲಂಟಾನಾ ಬೆಳೆದಿದೆಯೋ ಅಂತಹ forest ನಲ್ಲಿರತಕ್ಕ ಜಮೀನನ್ನು ರಿಲೀಜ್ ಮಾಡಿ ಬಡ ರೈತರಿಗೆ ಕೊಟ್ಟಿದ್ದೇ ಆದರೆ ಅದರಿಂದ ಬಡ ರೈತರಿಗೆ ಬಹಳ ಅನುಕೂಲವಾಗುತ್ತದೆ. ಮದ್ಯಪಾನನಿರೋಧ ವಿಷಯದಲ್ಲಿ ಯಾವ ಧೋರಣೆಯನ್ನು ತಾಳಿ ಮದ್ಯಪಾನ ನಿರೋಧವನ್ನು ಮೈಸೂರು ಸಂಸ್ಥಾನಾದ್ಯಂತ ಜಾರಿಗೆ ತರಬೇಕೆಂದು ಯೋಚನೆ ಮಾಡಿದ್ದೀರೋ ಅದನ್ನು ಜಾರಿಗೆ ತರುವಾಗ ಒಂದೊಂದುಕಡೆ ಮಾತ್ರ ತರುತ್ತಾ ಇರುವುದು ಬಹಳ ಶೋಚನೀಯವಾದ ವಿಷಯ. ಮದ್ಯಪಾನ ನಿರೋಧವನ್ನು ಜಾರಿಗೆ ತರಬೇಕೆಂಬ ಧ್ಯೇಯವನ್ನು ಇಟ್ಟುಕೊಂಡಿರುವಾಗ ಮೈಸೂರು ದೇಶದಲ್ಲೆಲ್ಲಾ ಈ ವರ್ಷವೇ ಮದ್ಯಪಾನ ನಿರೋಧವನ್ನು ಜಾರಿಗೆ ತಂದರೆ ನಮ್ಮ ಕಾಂಗ್ರೆಸ್ಸಿನ ಧ್ಯೇಯವು ಸಾರ್ಥಕವಾಗುತ್ತದೆಯೆಂದು ಕಾಣುತ್ತದೆ. ನೀರಾವರಿ ಕಾಮಗಾರಿಗಳ ವ್ಯವಸ್ಥೆ ಈ ದಿವಸ ಯಶಸ್ವಿಯಾಗಿ ನಡೆಯುತ್ತಿದೆ. ಆದರೆ ನಮ್ಮ ದೇಶದಲ್ಲಿ ದೊಡ್ಡದೊಡ್ಡ ನೀರಾವರಿ Project ಗಳು ಇಲ್ಲ. ನಮ್ಮಲ್ಲಿ ಮಾಡಬೇಕಾಗಿರುವುದು desilt ಮಾಡುವುದು ಮತ್ತು ಸಣ್ಣಸಣ್ಣ ಕೆರೆಗಳ ರಿಪೇರಿ ಮಾಡುವುದು ಇಂತಹ ಕೆಲಸಗಳಿಗೆ ಗಮನ ಕೊಡುವುದು ಮುಖ್ಯವಾಗಿದೆ. ವಿದ್ಯುಚ್ಛಕ್ತಿ ಇಲಾಖೆಯವರು ನಮಗೆ ಹಿಂದಿನಿಂದಲೂ ವಿದ್ಯುಚ್ಛಕ್ತಿಯನ್ನು ಯಾರು ಕೇಳಿದರೂ ಕೊಡುತ್ತೇವೆಂದು ಭರವಸೆ ಕೊಡುತ್ತಿದ್ದರು. ಆದರೆ ಈಗ ವಿದ್ಯುಚ್ಛಕ್ತಿ ಕಡಿಮೆ ಉತ್ಪತ್ತಿ ಆಗುತ್ತಿದೆಯೆಂದು ಧೋರಣೆ ತಾಳಿದ್ದಾರೆ. ಆದ್ದರಿಂದ ನಮ್ಮ ದೇಶಕ್ಕೆ ಎಷ್ಟು ವಿದ್ಯುಚ್ಛಕ್ತಿಬೇಕೋ ಅಷ್ಟು ಉತ್ಪತ್ತಿ ಸಾಕಾಗಿ ನಮಗೆ ಉಳಿತಾಯವಾದರೆ ಬೇರೆ ಪ್ರಾಂತ್ಯಗಳಿಗೆ ಕೊಡುವುದಕ್ಕೆ ಮನಸ್ಸು ಮಾಡಬೇಕಾಗಿದೆಯೇ ವಿನಾ ಸುಮ್ಮನೆ ಬೇರೆ ಪ್ರಾಂತ್ಯಗಳಿಗೆ ಕೊಟ್ಟು ವಿದ್ಯುಚ್ಛಕ್ತಿ ಕಡಿಮೆ ಮಾಡಿರುವುದರಿಂದ ನಮಗೆ ಕಷ್ಟವಾಗುತ್ತದೆ.

(ಶ್ರೀ ಡಿ. ಎಂ. ಗೋವಿಂದರಾಜು.)

ಆದ್ದರಿಂದ ಹೊನ್ನೇಮರಡು ಯೋಜನೆಯನ್ನು ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿ ಜಾಗ್ರತೆಯಾಗಿ ಕಾರ್ಯಗತವಾಗುವಂತೆ ಮಾಡಿದರೆ ಆಗ ನಮ್ಮ ದೇಶಕ್ಕೆಲ್ಲಾ ವಿದ್ಯುಚ್ಛಕ್ತಿ ಸಹಾಯ ದೊರೆತು ಆಹಾರ ಸಾಮಾಗ್ರಿಗಳನ್ನು ಬೆಳೆಸುವುದಕ್ಕೂ ಮತ್ತು ಎಲ್ಲಾ ಕೈಗಾರಿಕೆಗಳಿಗೂ ಅನುಕೂಲವಾಗುತ್ತದೆ. ನಮ್ಮ ದೇಶದಲ್ಲಿ ಮುಖ್ಯವಾಗಿ 100ಕ್ಕೆ 90 ಜನ ವ್ಯವಸಾಯದಿಂದ ಜೀವನ ಮಾಡುವವರಾಗಿದ್ದಾರೆ. ಈಗ ಆಹಾರ ಪದಾರ್ಥಗಳ ಧಾರಣೆ ಇಳಿಮುಖವಾದರೆ ದೇಶದಲ್ಲಿ ಎಷ್ಟುಮಟ್ಟಿಗೆ ರೈತನ ಆರ್ಥಿಕ ಸ್ಥಿತಿ ಕುಂಠಿತವಾಗುತ್ತದೆಂಬುದನ್ನು ಯೋಚಿಸಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಆಹಾರದ ವಿಷಯದಲ್ಲಿ ಒಂದು ಬೆಲೆಯನ್ನು ನಿಗದಿಮಾಡುತ್ತೇವೆ ಎಂದು ಅವರ ಭಾಷಣದಲ್ಲಿ ಹೇಳಿರುವುದು ಖಂಡಿತವಾಗಿ ಸ್ವಾಗತಾರ್ಹವಾಗಿದೆ. ಮತ್ತು ವ್ಯವಸಾಯಗಾರರ ಪರವಾಗಿ ಅವರನ್ನು ಹೃತ್ಪೂರ್ವಕವಾಗಿ ವಂದಿಸುತ್ತೇನೆ. ಇವೊತ್ತಿನ ದಿವಸ ಸಹಕಾರ ಸಂಘಗಳು ನಮ್ಮ ದೇಶದಲ್ಲಿ ಬಹಳವಾಗಿವೆ. ನಮ್ಮ ದೇಶ ಉದ್ಧಾರವಾಗಬೇಕಾದರೆ ಸಹಕಾರ ಸಂಘಗಳೇ ಮುಖ್ಯ ಕಾರಣವೆಂದು ನಾನು ಒಪ್ಪುವುದಾದರೂ ಕೂಡ ಈಗ ಹಿಂದೆ ಪ್ರಾರಂಭಮಾಡಿರುವ ಅನೇಕ Multi-Purpose Co-operative Societyಗಳು ಯಾವ ಕೆಲಸವನ್ನೂ ಮಾಡುತ್ತಾ ಇಲ್ಲವೆಂದು ಹೇಳಬೇಕಾಗಿದೆ. Audit ವಗೈರೆ ನಡೆಯದೆ Multi-Purpose Co-operative Societyಗಳ ಷೇರುದಾರರು ಹಣವನ್ನು ವಾಪಸ್ಸು ಕೊಡಿ ಎಂದು ಕೇಳಿದರೂ ಇದುವರೆಗೆ ವಾಪಸ್ಸು ಕೊಡದಿರುವುದು ಬಹಳ ಶೋಚನೀಯವಾಗಿದೆ. ಆದ್ದರಿಂದ ಕೂಢಲೆ Audit ಮಾಡಿ ಕನಿಷ್ಠ ಪಕ್ಷ ಷೇರು ಹಣವನ್ನು ಷೇರುದಾರರಿಗೆ ವಾಪಸ್ಸು ಕೊಟ್ಟರೆ ಆದರಿಂದ ಸಹಕಾರ ಸಂಘಗಳಲ್ಲಿ ಜನರಿಗೆ ನಂಬಿಕೆಯುಂಟಾಗುವುದಕ್ಕೆ ಅವಕಾಶವಾಗುತ್ತದೆ ಕೈಗಾರಿಕೆಗಳು ನಮ್ಮ ದೇಶದಲ್ಲಿ ಚೆನ್ನಾಗಿ ಬೆಳೆಯಬೇಕು. ಎಲ್ಲವೂ ಒಂದು ಕಡೆ ಕೇಂದ್ರೀಕೃತವಾಗಿರಬಾರದು, ಯಾವ ಕೈಗಾರಿಕೆಯನ್ನು ಮಾಡಿದರೂ ಕೂಡ ಬೆಂಗಳೂರಿನಲ್ಲಿ ಮಾಡುವುದು ಒಳ್ಳೆಯ ನೀತಿಯಲ್ಲ. ಎಲ್ಲಾ ತಾಲ್ಲೂಕ್ ಹೆಡ್ ಕ್ವಾರ್ಟರುಗಳಲ್ಲಿಯೂ ಒಂದೊಂದು ಕೈಗಾರಿಕೆಯನ್ನು ತೆರೆದು ಅಲ್ಲಿನ ಜನಗಳಿಗೆ ಉದ್ಯೋಗಗಳು ದೊರಕುವಂತೆ ಉಂಟುಮಾಡಬೇಕಾದುದು ನಮ್ಮ ಸರ್ಕಾರದವರ ಕರ್ತವ್ಯವಾಗಿದೆ. ಈಗ ನಮ್ಮ ಮಾನ್ಯ ಮುಖ್ಯಮಂತ್ರಿಗಳು election ನಡೆಯುವುದಕ್ಕೆ ಮುಂಚೆ ದೇಶದಲ್ಲಿ control ತೆಗೆಯುತ್ತೇವೆ, ವಿದ್ಯಾಭ್ಯಾಸ ಸುಧಾರಣೆ ಜಾರಿಗೆ ತರುತ್ತೇವೆ ಎಂದು ಯಾವ ಒಂದು ಮನೋಭಾವನೆಯನ್ನು ವ್ಯಕ್ತಪಡಿಸಿದ್ದರೋ ಅದನ್ನು ಈಗ ನೆರವೇರಿಸುವುದು ಖಂಡಿತವಾಗಿ ಬಹಳ ಸ್ವಾಗತಾರ್ಹವಾಗಿದೆ. ವಿದ್ಯಾಭ್ಯಾಸ ಸುಧಾರಣೆಯಿಂದ ನಮ್ಮ ದೇಶಕ್ಕೆ ಒಳ್ಳೆಯದಾಗುತ್ತದೆ. ನಮ್ಮ ದೇಶಕ್ಕೆ ಇದರಿಂದ ಕಲ್ಯಾಣವಾಗುತ್ತದೆ. ಗುಮಾಸ್ತರ ಕೆಲಸಕ್ಕೆ ಲಾಯಕ್ಕಾಗಿರುವ ವಿದ್ಯಾಭ್ಯಾಸ ಪದ್ಧತಿಯನ್ನು ಬದಲಾವಣೆ ಮಾಡುವುದರಿಂದ ನಮ್ಮ ದೇಶಕ್ಕೆ ಒಳ್ಳೆಯದಾಗುತ್ತದೆ. ಸಂಸ್ಕೃತಿ ಪ್ರಚಾರ, ವಯಸ್ಕರ ಶಿಕ್ಷಣ ಸಮಿತಿ, ಸೇವಾದಳ ಇವೆಲ್ಲವನ್ನೂ ಕೂಡ ವಿದ್ಯಾಭ್ಯಾಸದ ಇಲಾಖೆಗೆ ಏತಕ್ಕೆ ಸೇರಿಸಬಾರದು ಎಂದು ಅರಿಕೆಮಾಡಿಕೊಳ್ಳುತ್ತೇನೆ. ಅದನ್ನು ವಿದ್ಯಾಭ್ಯಾಸದ ಇಲಾಖೆಗೆ ಸೇರಿಸಿದರೆ ಖಂಡಿತವಾಗಿಯೂ ಆ ಇಲಾಖೆಗಳ ಖರ್ಚೂ ಕೂಡ ಕಡಿಮೆಯಾಗುತ್ತದೆ. National Extension Service ಸ್ಕೀಮು ಅನೇಕ ತಾಲ್ಲೂಕ್‌ಗಳಲ್ಲಿ ಕೊಟ್ಟಿದ್ದೀರಿ. ನಮ್ಮ ತಾಲ್ಲೂಕ್ ಸಹ ಬಹಳ ಹಿಂದುಳಿದಿರುವುದರಿಂದ ಈ ವರುಷ ಮಾನ್ಯ ಸಚಿವರು National Extension Service ಸ್ಕೀಮನ್ನು ನಮ್ಮ ತಾಲ್ಲೂಕಿಗೂ ಕೊಡುತ್ತಾರೆ ಎಂದು ಖಂಡಿತವಾಗಿ ನಂಬಿರುತ್ತೇನೆ. ಹರಿಜನರ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಹರಿಜನರಿಗಾಗಿ ಇವೊತ್ತಿನ ದಿವಸ ಅನೇಕ ಲಕ್ಷಾಂತರ ರೂಪಾಯಿ ಖರ್ಚು ಅವರ ಮನೆಗಳನ್ನು ಕಟ್ಟಿಸುವುದಕ್ಕೆ ಆಗುತ್ತಾ ಇದೆ. ಗಳಗಳಿಂದ ಕಟ್ಟಿದ ಮನೆ 10 ವರ್ಷಗಳವರೆಗೆ ಉಳಿಯುವುದಿಲ್ಲ. ಆದಕ್ಕೋಸ್ಕರವಾಗಿ ಸರ್ಕಾರಧವರು ಮನೆಗಳನ್ನು ಕಟ್ಟುವುದಕ್ಕೆ stone slabsಗಳನ್ನು ಕೊಡಬೇಕು. ಹಾಗೆ ಕಟ್ಟಿಸಿದರೆ ಖಂಡಿತವಾಗಿ ಅದು ಶಾಶ್ವತವಾಗಿರುತ್ತದೆ. ಇದರಿಂದ ಹರಿಜನರಿಗೆ ಪ್ರಯೋಜನವಾಗುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ನೀರಿನ ಸರಬರಾಯಿಗಾಗಿ ಹೆಚ್ಚಿಗೆ ಗಮನ ಕೊಟ್ಟಿದ್ದಾರೆ. ಅದೂ ಕೂಡ ಸಾಲದು. ಇನ್ನೂ ಹೆಚ್ಚಿಗೆ ಗಮನ ಕೊಡಬೇಕು. ದೊಡ್ಡದೊಡ್ಡ ಪಟ್ಟಣಗಳಲ್ಲಿ ಕೋಟ್ಯಾಂತರ ರೂಪಾಯಿ ಸುರಿದು ನೀರು ಮತ್ತು ವಸತಿ ಸೌಕರ್ಯವನ್ನು ಕಲ್ಪಿಸುವಾಗ ನಮ್ಮ ಗ್ರಾಮಾಂತರಗಳಿಗೆ ಕೇವಲ 10 ಲಕ್ಷ ರೂಪಾಯಿಗಳನ್ನು ನೀರಿನ ಸೌಕರ್ಯಕ್ಕಾಗಿ ಕೊಟ್ಟರೆ ಖಂಡಿತವಾಗಿ ಸಾಲುವುದಿಲ್ಲ. ಆದ್ದರಿಂದ ಈ ಬಜೆಟ್ಟಿನಲ್ಲಿ ನೀರಿನ ಸೌಕರ್ಯಕ್ಕಾಗಿ 50 ಲಕ್ಷ ರೂಪಾಯಿಗಳನ್ನು ಒದಗಿಸಬೇಕು ಎಂದು ಸರ್ಕಾರದವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Sri M. PALANIYAPPAN (Ulsoor).—I rise to welcome the Budget placed before us for the year 1955-56. Sir, instead of going through the figures, I will straightaway deal with some of the important policies of the Government.

The Public Service Commission is gaining importance nowadays and I see from the answer furnished by the Government to the interpellation tabled by me, that the Public Service Commission takes years to dispose of any file referred to them. Regarding appointments also, we were seeing unnecessary discrimination. The Constitution gives more power to the Commission. We see that the files referred to them for disciplinary action and other things are unnecessarily delayed. If a clerk is to be punished or if an officer is to be punished and if a file is referred to the Public Service Commission for opinion, they keep files for years together and then send them back agreeing, or disagreeing with the view expressed there. The Government cannot overrule the objection raised by the Public Service Commission nor can they just agree with it. Such is the predicament now in which the Government are placed. In view

of the fact that the Public Service Commission is gaining importance, I would request the Government just to pull up this Department and see that efficiency is increased.

There is a fear expressed by my friends on the opposite side that there is huge deficit of 4 crores in the present Budget. But I should congratulate the Finance Minister for having given us a correct picture before us that the Mysore State is deficit to that extent, because, Sir, the Finance Commission is now going into the financial aspect of every State and it is but fair that the Chief Minister has given the true picture as to the deficit of our State. Had he not given the true picture and shown the deficit to that extent as shown now, then he wowld have done greatest disservice to our State. When we are able to give a correct picture of our position, we can expect more help from the Centre and from the Finance Commission. So, Sir, I just thank the Chief Minister for having done this service to the State by placing the correct picture before us. Secondly, Sir, regarding the first Five-Year Plan, most of the amounts have been spent in the Northern India. Now we are in the stage when the Second Five-Year Plan is to be drawn up. It is stated that the Second Five-Year Plan mostly concentrates on industries. The Bakra and Nangal Projects in the First Five-Year Plan exceeded nearly Rs. 150 crores whereas the amount allotted for Mysore State is only about Rs. 48 crores. This kind of discrimination, in spending more money in the North and very little moneyi n the South, is a thing which should have come to the notice of the Government and so, I draw the attention of the Government to see that at least in the Second Five-Year Plan they put more pressure on the Central Government and get a major share for our Mysore State in improving the industries. While improving the industries, I request the Government that they should concentrate more on cottage industries and small-scale industries than on large-scale industries, because, Sir, as you see, unemployment problem is today threatening the country and I therefore feel that these small-scale industries would help us to eradicate this unemployment problem.

Sir, another important problem to which I would like to draw the attention of the Government is the appointment of officials to non-official places. Sir, you were the President of the Community Project and now that place has been taken away by the Minister; an official has been appointed to the place of Chairman, City Improvement Trust Board, Bangalore; the Kolar Gold Fields directorship has been occupied by the Deputy Commissioner; another Deputy Commissioner has been appointed as the Chairman of the Sugar Company, Mandya; The presidentship of the Labour Housing Corporation has been occupied by the Commissioner for Local Self-Government. Somehow, the Government have been taking up the chairmanship of these non-officical places or nominating their own officials. In democracy, I feel, private individuals should be given more chances to learn things and serve the people. I feel strongly that the Government should change their policy because more opportunities ought to be created for non-officials than for officials. My friend Sri Venkatesh has already suggested that all the appointments of Heads of Departments, which technically qualified men should occupy are being filled up yb I.A.S. Officers. I suppose because I.A.S. Officers in the Revenue Department have got key positions, they have usurped these places and get in there. I think Sri Appajappa who is an officer of the Revenue Department is the Head of the Agricultural Department; in Bhadravathi Iron Works, an I.A.S. Officer is the head; formerly the Director of Industries and Commerce used to be a technically qualified man but now it is filled up by an I.A.S. Officer. In that way, I am afraid, the Director of Medical Services may be an I.A.S. Officer; the Chief Engineer's place may also in due course be occupied by na I.A.S. Officer. In that case, I think work will suffer to a great extent.

11-30 A.M.

You can just create the cadres of I.A.S. and I.P.S. in Public Works

(SRI M. PALANIYAPPAN.)

Department, and such other Departments. But let us not try to see that because they are I.A.S. Officers they should be posted in those places. To that extent, I feel the Government will suffer a lot.

Since the inception of our present Government, I think, no improvement has been done to the Civil Station; no schools have been given, no hostels have been opened, and I strongly request the Government to give at least one High School for boys and another High School for girls and half a dozen primary schools and two Hostels for Civil Station. Thank you.

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು ಉತ್ತರ—ಅನುಸೂಚಿತ ಜಾತಿಗಳು).—ಅಧ್ಯಕ್ಷರೇ, ಸರ್ಕಾರದವರು ಮಂಡಿಸಿರತಕ್ಕ ಬಡ್ಜೆಟ್ಟನ್ನು ಸ್ವಾಗತಿಸುತ್ತೇನೆ. ಈ ವರ್ಷದ ಬಡ್ಜೆಟ್ಟಿನಲ್ಲಿ ನಾಲ್ಕು ಕೋಟಿ ರೂಪಾಯಿಗಳು ಖೋತಾ ಬಿದ್ದಿರುವುದಾಗಿ ತೋರಿಸಿದ್ದಾರೆ. ಇದರಿಂದೇನೂ ನಾವು ನಿರಾಶೆ ಹೊಂದಬೇಕಾಗಿಲ್ಲ. ಏಕೆಂದರೆ ಇಲ್ಲಿರತಕ್ಕ ಸದಸ್ಯರುಗಳು ಸರ್ಕಾರದವರಿಗೆ ಸಲಹೆಗಳನ್ನು ಕೊಟ್ಟು ಯಾವ ರೀತಿ ಹಣವನ್ನು ಒದಗಿಸಿಕೊಳ್ಳಬೇಕೆಂದು ಹೇಳಬಲ್ಲೆವು.

ವಿದ್ಯಾಭ್ಯಾಸಕ್ಕೆ, ಹಿಂದೆ ಎಂದೂ ಒದಗಿಸದಿರುವಷ್ಟು ಹೆಚ್ಚಾಗಿ ಹಣ ಒದಗಿಸಿದ್ದಾರೆ. ಈಗ ವಿದ್ಯಾಭ್ಯಾಸ ಸುಧಾರಣೆಗಳನ್ನು ಜಾರಿಗೆ ತರುತ್ತಿರುವ ಸಂದರ್ಭದಲ್ಲಿ ಇನ್ನೂ ಹೆಚ್ಚಿನ ಹಣವನ್ನು ಒದಗಿಸಿದ್ದರೂ ನಮಗೆ ಸಂತೋಷವಾಗುತ್ತಿತ್ತು. ಈಗ ಕೊಟ್ಟಿರುವುದು ಸಾಲದೆಂದೇ ಹೇಳಬೇಕು. ಇನ್ನೂ ಹೆಚ್ಚಿಗೆ ಪಾಠಶಾಲೆಗಳನ್ನು ಮಂಜೂರು ಮಾಡಿ ಮಾಧ್ಯಮಿಕ ಶಾಲೆಗಳನ್ನು ಹೆಚ್ಚಿಸಿದ್ದರೆ ಚೆನ್ನಾಗಿತ್ತು. ಇನ್ನೂ ದೇಶದಲ್ಲಿ ಅನೇಕ ಜನರಿಗೆ ಈಗಿನ ಸುಧಾರಣೆಗಳಿಂದ ಬಂದಿರತಕ್ಕ ಅನುಕೂಲತೆಗಳೇನೆಂಬುದು ಗೊತ್ತಾಗಿಲ್ಲ. ಸಾಮಾನ್ಯ ಜನರಿಗೆ ತಿಳಿಯುವ ರೀತಿಯಲ್ಲಿ ಪ್ರಚಾರ ಕಾರ್ಯವನ್ನೇನೂ ಕೈಕೊಂಡಿಲ್ಲವೆಂದು ಕಾಣುತ್ತದೆ. ಶ್ರೀಮಾನ್ ಮಲ್ಲಾರಾಧ್ಯರೇನೋ ಒಂದೊಂದು ವಿಶೇಷ ಸಮ್ಮೇಳನಗಳನ್ನು ನಡೆಸಿ ವಿದ್ಯಾಭ್ಯಾಸ ಸುಧಾರಣೆಗಳನ್ನು ಸ್ವಲ್ಪ ಮಟ್ಟಿಗೆ ತಿಳಿಸಿದ್ದಾರೆ. ಆದರೂ ವಿದ್ಯಾಭ್ಯಾಸ ಇಲಾಖೆಯಲ್ಲಿ ಇನ್ನೂ ಅಲ್ಲಿನ ಅಧಿಕಾರಿಗಳು ಈ ಸುಧಾರಣೆಗಳ ವಿಷಯವನ್ನು ಸರಿಯಾಗಿ ಅರ್ಥ ಮಾಡಿಕೊಂಡಂತೆ ಕಾಣಬರುವುದಿಲ್ಲ. ಆದ್ದರಿಂದ ವಿದ್ಯಾ ಇಲಾಖೆಯ ಡೈರೆಕ್ಟರವರು ಸರ್ಕಾರದಿಂದ ಇನ್ನೂ ಹೆಚ್ಚಿಗೆ ಹಣವನ್ನು ಪಡೆದು ಎಲ್ಲಾ ಕಡೆಯಲ್ಲೂ ಸಂಚಾರ ಮಾಡಿ ಎಲ್ಲಾ ಅಧಿಕಾರಿಗಳಿಗೂ ಮತ್ತು ಜನಸಾಮಾನ್ಯರಿಗೂ ಹೆಚ್ಚು ಹೆಚ್ಚಾಗಿ ತಿಳಿವಳಿಕೆ ಕೊಟ್ಟು ಸುಧಾರಣೆಗಳ ಅವಶ್ಯಕತೆಯನ್ನೂ, ಇದರಿಂದ ಒದಗತಕ್ಕ ಅನುಕೂಲತೆಗಳನ್ನೂ ಮನದಟ್ಟುಮಾಡಿಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಆಮೇಲೆ, ಸರ್ಕಾರದವರು ವಿದ್ಯಾಭ್ಯಾಸವನ್ನು ಒತ್ತಾಯವಾಗಿ ಒದಗಿಸಬೇಕೆಂದು ಹೇಳಿರುವುದನ್ನು ನಾನು ಸ್ವಾಗತಿಸುತ್ತೇನೆ. ಆದರೆ ಈಗ ಒತ್ತಾಯದ ಶಿಕ್ಷಣವನ್ನು ಒದಗಿಸುವುದಕ್ಕೆ ಸಾಕಷ್ಟು ಅನುಕೂಲಗಳಿಲ್ಲ. ಹಾಲಿ ಏನು ಮಾಡುತ್ತಿದ್ದಾರೆಂದರೆ, ವಿದ್ಯಾಭ್ಯಾಸದ ಇಲಾಖೆಯ ಆಫೀಸರುಗಳು ಯಾವ ತಂದೆ ತಾಯಿಗಳು ತಮ್ಮ ಹುಡುಗರನ್ನು ವಯಸ್ಸಿಗೆ ಬಂದ ಮೇಲೂ ಸ್ಕೂಲಿಗೆ ಕಳುಹಿಸುವುದಿಲ್ಲವೋ ಅವರ ಮೇಲೆ ಅಮಲ್ದಾರರಿಗೆ ಫಿರ್ಯಾದು ಕಳುಹಿಸಿಕೊಡುತ್ತಾರೆ. ಅಮಲ್ದಾರರಿಗೆ ಇರತಕ್ಕ ಅನೇಕ ಕೆಲಸಗಳ ಮಧ್ಯೆ ಈ ಕೇಸುಗಳನ್ನು ತೆಗೆದುಕೊಂಡು ಸಕಾಲದಲ್ಲಿ ವಿಚಾರಣೆ ನಡೆಸಿ, ಅಂಥ ತಂದೆ ತಾಯಿಗಳಿಗೆ ಶಿಕ್ಷೆ ಕೊಡುವುದಕ್ಕಾಗಲಿ ಅಥವಾ ತಿಳಿವಳಿಕೆ ಕೊಡುವುದಕ್ಕಾಗಲಿ ಅವಕಾಶವಿರುವುದಿಲ್ಲ. ಆದ್ದರಿಂದ, ಇಂಥ ಕೇಸುಗಳನ್ನು ಅಮಲ್ದಾರರುಗಳಿಗೆ ಒಪ್ಪಿಸುವುದಕ್ಕೆ ಬದಲು, ಇನ್ನು ಮುಂದೆ ವಿದ್ಯಾಭ್ಯಾಸದ ಇಲಾಖಾ ಆಫೀಸರುಗಳಿಗೇ ವಹಿಸಿ ಅವರನ್ನು ಗೌರವ ನ್ಯಾಯಾಧೀಶರುಗಳಾಗಿ ಮಾಡಬೇಕೆಂದು ಹೇಳುತ್ತೇನೆ.

ವಯಸ್ಕರ ವಿದ್ಯಾಭ್ಯಾಸಕ್ಕಾಗಿ ಈ ಸಲ ಹೆಚ್ಚಿಗೆ ಹಣವನ್ನೊದಗಿಸಿದ್ದೀರಿ. ಆದರೆ ವಯಸ್ಕರ ವಿದ್ಯಾಭ್ಯಾಸ ಪ್ರಗತಿ ಪರವಾಗಿ ನಡೆಯುತ್ತಿಲ್ಲ. ಇದಕ್ಕೆ ಕಾರಣ, ಈಗ ವಿದ್ಯಾಭ್ಯಾಸವನ್ನು ಹೊಂದಿರತಕ್ಕ ವಯಸ್ಕರಲ್ಲಿ ನಿರಾಶೆಯನ್ನು ಕಾಣುತ್ತಿದ್ದೇವೆ. ಈ ನಿರಾಶೆಯನ್ನು ಪರಿಹಾರ ಮಾಡುವುದಕ್ಕೆ ಸಾಕಷ್ಟು ಪ್ರಚಾರಕಾರ್ಯ ನಡೆಯಬೇಕಾಗಿದೆ. ಅಲ್ಲದೆ ಇನ್ನೊಂದು ಏರ್ಪಾಡು ಮಾಡಬೇಕಾಗಿದೆ. ಮುಂದಿನ ಸುಧಾರಣೆಗಳಲ್ಲಿ, S.S.L.C. ಪಾಸು ಮಾಡಿದವನಿಗೇ ಆಗಲಿ, ಇಂಟರ್ ಮೀಡಿಯಟ್ ಅಥವಾ ಬಿ. ಎ. ಮಾಡಿದವನಿಗೇ ಆಗಲಿ ಸೋಷಿಯಲ್ ಸರ್ವೀಸ್ ಮಾಡಬೇಕೆಂದು ಒಂದು ನಿರೂಪ ಇದೆ. ಅದರಂತೆ ಈ ವರ್ಷದಿಂದಲೇ ಒಬ್ಬನು 50 ಜನ ಅನಕ್ಷರಸ್ಥ ವಯಸ್ಕರಿಗೆ ವಿದ್ಯಾಭ್ಯಾಸ ಮಾಡಿಸುವವರೆಗೂ ಅವನಿಗೆ ಡಿಗ್ರಿ ಕೊಡಕೂಡದೆಂದು ಮಾಡಬೇಕೆಂದು ಹೇಳುತ್ತೇನೆ. ಈ ಪದ್ಧತಿಯನ್ನು ಈ ವರ್ಷದಿಂಪಲೇ ಪ್ರಾರಂಭ ಮಾಡಿದರೆ ಇನ್ನು 5-6 ವರ್ಷಗಳಲ್ಲೇ ನಮ್ಮಲ್ಲಿ ನಿರಕ್ಷರತೆಯನ್ನು ಹೋಗಲಾಡಿಸಬಹುದೆಂದು ಹೇಳುತ್ತೇನೆ. ನಿರಾವರೀ ಯೋಜನೆಗಳಿಗೆ ಹಣವನ್ನು ಕೊಟ್ಟಿರುವುನ್ನೆಲ್ಲಾ ದೊಡ್ಡ ದೊಡ್ಡ ಕಾಮಗಾರಿಗಳಿಗೇ ಹೆಚ್ಚಿಗೆ ಆಗಿದೆ. ಆದರೆ, ನಮ್ಮ ಕೋಲಾರ ಡಿಸ್ಟ್ರಿಕ್ಟು ಮತ್ತು ಬೆಂಗಳೂರು ಡಿಸ್ಟ್ರಿಕ್ಟುಗಳಲ್ಲಾದರೋ ಮಳೆಯ ನೀರಿನಿಂದಲೇ ಬಹುಮಟ್ಟಿಗೆ ಜನ ಜೀವನ ನಡೆಸುತ್ತಿದ್ದಾರೆ. ಈ ಪ್ರದೇಶಗಳಿಗೆ ನಿರಾವರಿ ಸೌಕರ್ಯ ಕಲ್ಪಿಸುವುದಕ್ಕಾಗಿ ಹೆಚ್ಚಿಗೆ ಹಣ ಕೊಟ್ಟಿಲ್ಲ. ನುಗು ಪ್ರಾಜೆಕ್ಟು, ತುಂಗಾ ಪ್ರಾಜೆಕ್ಟು ಮುಂತಾದುವುಗಳನ್ನು ನಿರ್ಮಿಸಿ ಬೇಕಾದಷ್ಟು ಬೆಳೆ ಬೆಳೆಯಬಹುದೆಂಬ ತೃಪ್ತಿಪಟ್ಟುಕೊಳ್ಳಬಹುದು ನಿಜ. ಆದರೆ ನಮ್ಮ ಕಡೆಯ ಜನರು ಯಾವ ರೀತಿ ಜೀವನ ನಡೆಸಬೇಕು, ಯಾವ ರೀತಿ ತಮ್ಮ ವ್ಯವಸಾಯವನ್ನು ಉತ್ತಮಪಡಿಸಿಕೊಳ್ಳಬೇಕು ಎಂಬ ವಿಷಯದ ಕಡೆ ತಾವು ಸ್ವಲ್ಪ ಮಟ್ಟಿಗೆ ತಾತ್ಸಾರ ಮನೋಭಾವನೆಯನ್ನು ತೋರಿದಂತೆ ಕಾಣುತ್ತದೆ. ಆದ್ದರಿಂದ ಈ ಕಡೆ ಹೆಚ್ಚು ಹೆಚ್ಚಾಗಿ ಹಣವನ್ನು ಒದಗಿಸಿ ಸಣ್ಣ ಸಣ್ಣ ಕೆರೆಗಳ ಜೀರ್ಣೋದ್ಧಾರ ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ.

ಮರಾಮತ್ತು ಇಲಾಖೆಯಲ್ಲಿ ಸಪ್ಲೆ ಮಾಡುವುದಕ್ಕೆ, ಎಸ್ಟಿಮೇಟು ಪ್ಲಾನುಗಳನ್ನು ತಯಾರಿಸುವುದಕ್ಕೆ ವರ್ಷಗಟ್ಲೆ ತೆಗೆದುಕೊಳ್ಳುತ್ತಿದ್ದಾರೆ. ಜಾಗ್ರತೆ ಜಾಗ್ರತೆ ಮಾಡುವುದಕ್ಕೆ ಎಲ್ಲಿ ಅಡ್ಡಿ ಆತಂಕಗಳಿವೆಯೆಂಬುದನ್ನು ಕಂಡು ಹಿಡಿಯಬೇಕು. ಈ ಬಗ್ಗೆ ಒಂದೊಂದು ತಾಲ್ಲೂಕಿಗೆ ಒಂದು ಕಮಿಟಿಯನ್ನೋ, ಒಂದೊಂದು ಡಿಸ್ಟ್ರಿಕ್ಟಿಗೆ ಒಂದು ಕಮಿಟಿಯನ್ನೋ ನೇಮಿಸಿ ಜನರ

ಸಹಕಾರವನ್ನೂ ಪಡೆದು ಕೆಲಸವನ್ನು ಮಾಡಬೇಕೆಂದು ಹೇಳುತ್ತೇನೆ.

ಎಲೆಕ್ಟ್ರಿಸಿಟಿ ವಿಚಾರದಲ್ಲಿ ನಾನಾಗಲೇ ಹೇಳಿದಂತೆ ಎಷ್ಟೋ ಶಕ್ತಿ ಉತ್ಪತ್ತಿಯಾಗುತ್ತಿದ್ದರೂ ಮುಗಿದು ಹೋಗುತ್ತಿದೆ. ನಮಗೆ ಅಲ್ಪ ಸಲ್ಪ ಇರುವುದನ್ನೂ ಬೊಂಬಾಯಿ ಮದ್ರಾಸು ಆಂಧ್ರ ದೇಶಗಳಿಗೆ ಕೊಡುತ್ತಿದ್ದೀರಿ.

ಡಾ॥ ಆರ್. ನಾಗನಗೌಡ (ವ್ಯವಸಾಯ ಶಾಖೆಯ ಮಂತ್ರಿಗಳು).—ಎಲೆಕ್ಟ್ರಿಸಿಟಿಯನ್ನು ಆಂಧ್ರ ದೇಶ, ಮದ್ರಾಸ್ ಬೊಂಬಾಯಿಗಳಿಗೆ ಸರಬರಾಯಿ ಮಾಡುತ್ತಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳಿದರು. ನಾವೇನಿದ್ದರೂ ಹಳೆಯ Commitment ಗಳನ್ನು ಪೂರೈಸುವುದಕ್ಕೆ ಸರಬರಾಯಿ ಮಾಡುತ್ತಿದ್ದೇವೆಯೇ ಹೊರತು ಹೊಸ Commitment ಯಾವುದನ್ನೂ ಮಾಡಿಕೊಂಡಿಲ್ಲ.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ—ಅನುಸೂಚಿತ ಜಾತಿಗಳು).—ಮಡಕಶಿರಕ್ಕೆ ತಾವು ವಿದ್ಯುಚ್ಛಕ್ತಿ ಕೊಡುವುದಕ್ಕೆ ಯೋಚನೆ ಮಾಡಿದ್ದು ಹಿಂದಿನದೇ ಅಥವಾ ಇಂದಿನದೇ ?

ಶ್ರೀ ಆರ್. ಮುನಿಸ್ವಾಮಯ್ಯ.—ನಮ್ಮ ಕಡೆ 25 ಸೈಕಲ್ಲುಗಳ ಕರೆಂಟನ್ನು 50 ಸೈಕಲ್ಲುಗಳಿಗೆ ಪರಿವರ್ತನೆ ಮಾಡಬೇಕೆಂದು ಈಗ ನಾಲ್ಕೈದು ವರ್ಷಗಳಿಂದಲೂ ಪ್ಲಾನ್‌ಗಳು ಎಸ್ಟಿಮೇಟುಗಳು ನಡೆಯುತ್ತಿದ್ದರೂ ಇನ್ನೂ ಮುಗಿದಿಲ್ಲ. ಎಲ್ಲಿ ನಿಧಾನವಾಗಿರುತ್ತದೆಯೋ ಗೊತ್ತಿಲ್ಲ. ಯಾವಾಗ ಕೇಳಿದರೂ ಜೋಗಿನಿಂದ ಬೆಂಗಳೂರಿನವರೆಗೆ 50 ಸೈಕಲ್ ಕರೆಂಟ್ ಲೈನನ್ನು ಹಾಕುತ್ತಿದ್ದೇವೆ, ಎಲ್ಲಾ ನಿರಾವರಿ ಯೋಜನೆಗಳಿಗೂ ಒದಗಿಸುತ್ತೇವೆ ಎಂದು ಸಾಮಾನ್ಯ ರೀತಿಯಲ್ಲಿ ಲಘುವಾಗಿ ಹೇಳುತ್ತಿರುತ್ತಾರೆ. ಮಂತ್ರಿಗಳು ಈ ವಿಷಯದಲ್ಲಿ ಇನ್ನೂ ಸ್ವಲ್ಪ ಚಟುವಟಿಕೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಏಕೆಂದರೆ ಮಂತ್ರಿಗಳು ಚಟುವಟಿಕೆಯಾಗಿದ್ದರೆ ಕೆಲಸ ಕಾರ್ಯಗಳೂ ಚಟುವಟಿಕೆಯಿಂದ ನಡೆಯುತ್ತವೆ. ಈ ಇಲಾಖೆಯಲ್ಲಿ ಕೆಲಸ ಕಾರ್ಯಗಳು ಹೆಚ್ಚಾಗಿವೆ ಎಂಬುದೇನೋ ಗೊತ್ತು; ಆದರೂ ವಿದ್ಯುಚ್ಛಕ್ತಿಗೆ ಸಂಬಂಧಪಟ್ಟ ಕಾಗದ ಪತ್ರಗಳು ಜಾಗ್ರತೆಯಾಗಿ ಮಂತ್ರಿಗಳಿಂದ ಒಪ್ಪಿಗೆ ಪಡೆದು ಹೋಗುತ್ತಿಲ್ಲ. ನಾವು ಅಸಿಸ್ಟೆಂಟ್ ಎಂಜಿನಿಯರ್, ಸೂಪರಿಂಟೆಂಡಿಂಗ್ ಎಂಜಿನಿಯರು ಮೊದಲಾದವರ ಆಫೀಸಿನಲ್ಲಿ ನೋಡಿದರೆ, ಅಲ್ಲಿಂದ ಸರ್ಕಾರಕ್ಕೆ ಬಂದಂಥ ಪ್ರಪೋಸಲ್‌ಗಳೆಲ್ಲವೂ ಬೇಗ ತೀರ್ಮಾನವಾಗದೆ ಕುಳಿತಿವೆಯೆಂದು ಗೊತ್ತಾಗುತ್ತದೆ. ಇದನ್ನು ನೋಡಿದರೆ ಸರ್ಕಾರದಲ್ಲಿ technical efficiency ಕಡಮೆಯಾಗಿದೆಯೆಂದು ಗೊತ್ತಾಗುತ್ತದೆ. ಆದ್ದರಿಂದ ಈ ಇಲಾಖೆಗೆ ಸಂಬಂಧಪಟ್ಟ ವಿಷಯಗಳು ಜಾಗ್ರತೆಯಾಗಿ ತೀರ್ಮಾನವಾಗುವಂತೆ ಮಾಡಿ, ಜೋಗಿನಿಂದ ಬೆಂಗಳೂರಿಗೆ 50 ಸೈಕಲ್ಲುಗಳ ಲೈನ್ ಹಾಕುವುದನ್ನು ಒಂದೆರಡು ತಿಂಗಳುಗಳಲ್ಲೇ ಮುಗಿಯುವಂತೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ವಿದ್ಯುಚ್ಛಕ್ತಿಯ ದರದ ವಿಚಾರದಲ್ಲಿ, ತಾವೀಗ ಬಿನ್ನಿಮಿಲ್ಲು ಮುಂತಾದ ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಕೇವಲ 4½ ಕಾಸಿನಂತೆ ಒದಗಿಸುತ್ತಿದ್ದೀರಿ. ದೊಡ್ಡ ಕೈಗಾರಿಕೆಗಳವರು ಕೋಟ್ಯಂತರ ರೂಪಾಯಿಗಳನ್ನು ಸುಲಭ ರೀತಿಯಲ್ಲಿ ಸಂಪಾದಿಸಿಕೊಳ್ಳಲು ಹೀಗೆ ಕಡಿಮೆ ದರಗಳಲ್ಲಿ ಕೊಡುವುದರಿಂದ ಅತ್ತಕಡೆ ಕೈಯಿಂದ ಕೆಲಸ ಮಾಡುವವರಿಗೂ, ವ್ಯವಸಾಯ ಕಾರ್ಯಗಳಿಗೂ ಬಹಳ ನಷ್ಟವೂ ತೊಂದರೆಯೂ ಉಂಟಾಗುತ್ತಿದೆ. ಗ್ರಾಮ ಕೈಗಾರಿಕೆಗಳಿಗೆ ಉತ್ತೇಜನ ಕೊಡುವುದಾಗಿ ಬಾಯಲ್ಲಿ ಹೇಳುತ್ತಿರುತ್ತೀರಿ. ಆದರೆ ವಾಸ್ತವವಾಗಿ ನೋಡಿದರೆ ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಎಷ್ಟು ಕೊಡಬೇಕೋ ಅದಕ್ಕಿಂತಲೂ ಹೆಚ್ಚಿಗೆ ಪ್ರೋತ್ಸಾಹ ಕೊಡುತ್ತಾ ಸರ್ಕಾರಕ್ಕೂ ನಷ್ಟ ಮಾಡಿಕೊಂಡು ವಿದ್ಯುಚ್ಛಕ್ತಿ ಕೊಡುತ್ತಿರುವುದು ಸರಿಯಲ್ಲ. ಈ ಬಗ್ಗೆ ಸರಿಯಾದ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ.

Mr. SPEAKER.—The House will now rise and meet again at 2 O'clock to-day.

The House adjourned at Forty-five Minutes past Eleven of the Clock and reassembled at Two of the Clock.

[MR. SPEAKER in the Chair.]

QUESTIONS AND ANSWERS

Irrigation Projects in Second Five-Year Plan.

Q.—568. **Sri C. H. LINGADEVARU** (Chiknaikanahalli).—

Will the Government be pleased to state :—

(*a*) the big and small irrigation projects of the State intended to be included in the Second Five-Year Plan ;

(*b*) the estimated cost of each of them ;

(*c*) whether any such projects of Chiknaikanahalli Taluk are included ?

A.—**Sri K. HANUMANTHAIYA** (Chief Minister).—

(*a*) and (*b*) Please see statement appended below.

(*c*) Some minor Irrigation Projects of Chiknaikanahalli Taluk are also being considered for inclusion.

STATEMENT

Sl. No.	*Name of the Project*			*Estimated Cost* (Rs. in lakhs)
1	Bhadra Reservoir	...	...	1,775·00 *
2	Tunga Anicut	...	...	230·00
3	Nugu Reservoir	...	...	243·00
4	Ambligola Reservoir	...	...	56·00